ಒಲವಿನ ಹಾದಿಯಲ್ಲಿ

ಪದ್ಮಾಶ್ರೀಧರ್



ಒಲವಿನ ಹಾದಿಯಲ್ಲಿ

ಪದ್ಮಾ ಶ್ರೀಧರ್

ಧೃತಿ ಪ್ರಕಾಶನ
ಸಂ.191/22, G-2 ರಾಜ್ ಆರ್ಕಿಡ್
ವಿದ್ಯಾನಗರ, 2ನೇ ಕ್ರಾಸ್, ಕುರುಬರಹಳ್ಳಿ
P&T ಎಂಪ್ಲಾಯಿಸ್ ಸೊಸೈಟಿ ಲೇಔಟ್
ಬೆಂಗಳೂರು - 86

OLAVINA HADIYALLI
- A novel by Padma Sridhar, Published by Dhruthi Prakashana,
No. 191/22, G2 Raj Arcade, Kurubarahalli Main Road,
2nd Cross, Vidyanagara P & T Employees Co-Operative Colony,
Bangalore - 560 086

ಪುಟಗಳು : 206

ಪ್ರಥಮ ಮುದ್ರಣ : 2005

ಹಕ್ಕುಗಳು : ಲೇಖಕರವು

ಬೆಲೆ : ರೂ. 110

ಮುಖಪುಟ ವಿನ್ಯಾಸ :

ಅಕ್ಷರ ಜೋಡಣೆ : ಶ್ರೀನಿವಾಸ್ ಗ್ರಾಫಿಕ್ಸ್
ಮೊಬೈಲ್ : 9945235936

ಮುದ್ರಕರು
ಅಶ್ವಿನಿ ಪ್ರಿಂಟರ್ಸ್
ಬೆಂಗಳೂರು – 560 053

ಎರಡು ನುಡಿ

ನಲುಮೆಯ ಓದುಗರೇ,

ಒಲವಿನ ನಮಸ್ಕಾರಗಳು. ನಿಮಗಾಗಿ ಈ ಕಾದಂಬರಿಯನ್ನು ಓದಲು ಕೊಡುತ್ತಿರುವ ನನಗೆ ಖುಷಿಯಾಗುತ್ತಿದೆ. "ಯಾರು ಹಿತವರು ಮೂವರೊಳಗೆ" ಎಂಬ ಕಾದಂಬರಿಯ ಮುಂದಿನ ಭಾಗವೇ "ಒಲವಿನ ಹಾದಿಯಲ್ಲಿ" ಅಹಿತಕರ ಘಟನೆಗಳ ನಡುವೆ 'ತನ್ನ ಹಿತವರು ಯಾರು' ಎಂದು ನಿರ್ಣಯಿಸಲಾಗದೇ ಕಥಾನಾಯಕಿ ಅಸಹಾಯಕತೆಯ ಸುರುಳಿಯಲ್ಲಿ ಸುತ್ತಿಕೊಳ್ಳುತ್ತಾಳೆ. ಕೆಲವು ಸನ್ನಿವೇಶಗಳಲ್ಲಿ ಮುಂದೆ ಏನಾಯಿತು ಎಂಬ ಸಂದೇಹಗಳೂ ಉದಿಸುತ್ತವೆ. ಆ ಸಂದೇಹಗಳನ್ನು ಈ ಮುಂದಿನ ಭಾಗ ಕಳೆಯುತ್ತದೆ.

ಹಿಂದಿನ ಭಾಗದ ಕಾದಂಬರಿಯಲ್ಲಿ ಬರುವ ಪಾತ್ರಗಳ ಜೊತೆಗೆ ಕೆಲವು ಪಾತ್ರಗಳೂ, ಸನ್ನಿವೇಶಗಳೂ ಇಲ್ಲಿಯ ಕತೆಗೆ ಪೋಷಕವಾಗಿ, ಪೂರಕವಾಗಿ ಬರುತ್ತವೆ. ಆದರೂ ಈ ಕಾದಂಬರಿ ಒಂದನ್ನೇ ಬಿಡಿಯಾಗಿ ಓದುವಾಗ, ಅಸ್ವತಂತ್ರ ಕೃತಿ ಎನಿಸುವುದಿಲ್ಲ. ಕೃತಿ ತನ್ನ ಸ್ವಾರಸ್ಯವನ್ನು ಉಳಿಸಿಕೊಳ್ಳುತ್ತದೆ. ಎಲ್ಲಾ ಕೃತಿಗಳಂತೆ, ನನ್ನ ಈ ಕಾದಂಬರಿಯೂ ಓದುಗರನ್ನು ಮೆಚ್ಚಿಸುತ್ತದೆ ಎಂಬ ನಂಬಿಕೆ ನನಗಿದೆ.

ಈ ಕಾದಂಬರಿಯ ಪ್ರಕಟಣೆಯ ಜವಾಬ್ದಾರಿಯನ್ನು ಹೊತ್ತ ಪ್ರಕಾಶನದ ವರ್ಗದವರಿಗೆ, ಮುಖಪುಟವನ್ನು ಆಸಕ್ತಿಯಿಂದ ಚಿತ್ರಿಸಿಕೊಟ್ಟವರಿಗೆ ನನ್ನ ಕೃತಜ್ಞತೆಗಳು.

ವಂದನೆಗಳೊಂದಿಗೆ

ತಮ್ಮ ವಿಶ್ವಾಸಿ
ಪದ್ಮಾ ಶ್ರೀಧರ್

ಮತ್ತೊಂದು ನುಡಿ

ವಿಚಿತ್ರ ಎನಿಸುವ, ದಿಟ್ಟ ಪ್ರವೃತ್ತಿಯ ಮಾಲಾ ಸ್ವತಂತ್ರವಾಗಿ ವರ್ತಿಸಿ, ತನಗೆ ಬೇಕಾದುದನ್ನು ಪಡೆದರೂ, ದುಡುಕಿನಿಂದ ಅಸಹಾಯಕತೆಗಳ ಗೋಜಲುಗಳಲ್ಲಿ ಸಿಕ್ಕಿ ಬೀಳುತ್ತಾಳೆ. ತನ್ನ ಸ್ವಂತದವರಿಂದಲೇ, ಅಪಹರಿಸಲ್ಪಟ್ಟು ಅತ್ಯಾಚಾರಕ್ಕೊಳಗಾಗಿ, ಅಸಹಾಯಕತೆಯನ್ನು ತಾನೇ ಸೃಷ್ಟಿಸಿಕೊಳ್ಳುತ್ತಾಳೆ. ಮಾಲಾಳನ್ನು ಬಿಟ್ಟುಕೊಡಲಾಗದ ವಿಕೃತ ಆಸೆ ಧ್ರುವನ ಮನೆಯವರಿಗೆ... ಈ ಕೂಪದಿಂದ ಬಿಡುಗಡೆಯಾದರೆ ಸಾಕು ಎಂದು ಪರದಾಡುವ ಮಾಲಾಳಿಗೆ ಗೆಲುವು ಸಿಗುತ್ತದೆಯೇ ?.... ಅವಳ ಸಹಾಯಕರಾಗಿರುವವರು ಯಾರು ?... ದುಷ್ಕರ್ಮಿಗಳಿಗೆ ಶಿಕ್ಷೆ ಸಿಗುತ್ತದೆಯೇ ? ಅವಳ ಅಂತಿಮ ನಿರ್ಧಾರ ಏನು... ಇವೆಲ್ಲವನ್ನೂ ಓದಿ ತಿಳಿಯಿರಿ.

ನಿಮ್ಮ ಸಹಕಾರಕ್ಕೆ, ಪ್ರೋತ್ಸಾಹಕ್ಕೆ ಮತ್ತೊಮ್ಮೆ ವಂದನೆಗಳು.

ತಮ್ಮ ವಿಶ್ವಾಸಿ
ಪದ್ಮಾ ಶ್ರೀಧರ್

"ನಿಮಗೆ 'ಜ್ವಾಲಾ' ಅನ್ನೋ ಹೆಸರು ಒಂದು ಚೂರೂ ಒಪ್ಪಿಲ್ಲ. ನೀವು ಯಾಕೆ ಹೆಸರನ್ನು ಬದಲಾಯಿಸಿಕೊಳ್ಳಬಾರದು ?" ಅವನ ಅಧಿಕ ಪ್ರಸಂಗಿತನಕ್ಕೆ ಬೇಸರವಾದರೂ ತೋರ್ಪಡಿಸಿಕೊಳ್ಳದೆ ಮುಗುಳ್ನಕ್ಕಳು.

"ನೋಡಿ... ನೋಡಿ... ಎಷ್ಟು ಚೆನ್ನಾಗಿ ನಗ್ತೀರಿ. ಮಂದಾರ, ಮೃದುಲಾ ಇಂತಹ ಸುಂದರವಾದ ಹೆಸರನ್ನು ಇಟ್ಟುಕೊಳ್ಳಬೇಕಾಗಿತ್ತು ನೀವು."

"ಪರವಾಗಿಲ್ಲ ಬಿಡಿ. ಗುರುತಿಸೋಕೆ ಒಂದು ಹೆಸರು ಅಷ್ಟೇ... ನೀವು ಯಾಕೆ, ಹೊಸ ಕಾಲದ ಹೆಸರನ್ನು ಇಟ್ಟುಕೊಂಡಿಲ್ಲ ಅಂತ ನಾನೂ ಕೇಳಿದರೆ ?"

"ಕೇಳಿ, ಕೇಳಿ ಧಾರಾಳವಾಗಿ ಕೇಳಿ. ನೀವು ಮಾತನಾಡೋದೇ ಕಡಿಮೆ. ನೀವು ಕೇಳಿದ್ರೆ ಇಲ್ಲ ಅಂತೀನಾ ?" ಸದರದಿಂದ ಹಲ್ಲುಕಿರಿದ ರಘು.

"ನನಗೇನೂ ಇಂಟರೆಸ್ಟ್ ಇಲ್ಲ ಬಿಡಿ."

"ಪರವಾಗಿಲ್ಲ ಹೇಳಿ. ನನಗೂ ಈ ರಘು ಅನ್ನೋ ಹೆಸರು ಇಷ್ಟವಿಲ್ಲ. ಹೊಸ ಹೆಸರು ಯಾವುದು ಸರಿ ಹೋಗಬಹುದು ?" ರಾಹುಲ್... ಅಕ್ಷಯ್... ಗೌತಮ್... ಆಕಾಶ್... ಪ್ರದೀಪ್... ಪ್ರವೀಣ್..." ಅವನು ತನಗೆ ಗೊತ್ತಿರುವ ಹೆಸರನ್ನು ಹೇಳುತ್ತಲೇ ಇದ್ದ. ಇವಳ ಧ್ಯಾನ ಅಲ್ಲಿರಲಿಲ್ಲ.

"ಏನ್ರೀ ಮೇಡಂ... ನಾನು ಹೇಳ್ತಾನೇ ಇದೀನಿ. ನಿಮಗೆ ನನ್ನ ಮಾತಿನ ಮೇಲೆ ಗಮನವಿಲ್ಲ."

"ಯಾವುದೋ ಅರ್ಜೆಂಟ್ ವಿಷಯ ನೆನಪಿಗೆ ಬಂತು. ಅದನ್ನೇ ಯೋಚಿಸ್ತಿದ್ದೆ. ಇನ್ನೊಂದು ದಿನ ನಿಮ್ಮ ಹೆಸರಿನ ಮೇಲೆ ಡಿಸ್ಕಸ್ ಮಾಡೋಣ. ರೈಟ್ ?"

ಅವನು ಪೆಚ್ಚಾಗಿ ನಕ್ಕ. ರಘು ಆ ಆಫೀಸಿಗೆ, ಹೊಸದಾಗಿ ಬಂದು ಸೇರಿಕೊಂಡಿದ್ದ. ಇವಳು ಸಹ ಈ ಆಫೀಸಿನಲ್ಲಿ ಕೆಲಸ ಮಾಡಲು ಪ್ರಾರಂಭಿಸಿ ಕೆಲವೇ ತಿಂಗಳುಗಳು ಕಳೆದಿದ್ದವು. ಹೊಸ ಪರಿಚಯದಲ್ಲೇ ರಘು ಜ್ವಾಲಾಳ ಅಂದ ಚೆಂದಕ್ಕೆ ಮಾರು ಹೋಗಿದ್ದ. ದಿನಕ್ಕೊಂದು ಬಗೆಯ ಬಣ್ಣ ಬಣ್ಣದ ಚೂಡಿದಾರ್ ಧರಿಸಿ, ಹೈ ಹೀಲ್ಡ್ ಚಪ್ಪಲಿ ಧರಿಸಿ ಬರುತ್ತಿದ್ದ ಜ್ವಾಲಾ ಚಿಕ್ಕ ಹುಡುಗಿಯಂತೆ ಕಾಣುತ್ತಿದ್ದಳು. ಅವಳ ನಡಿಗೆಗೆ ತಕ್ಕಂತೆ, ಕತ್ತಿನ ಮೇಲೆ ಓಲಾಡುವ ಪೋನೀಟೈಲನ್ನೇ ಗಮನಿಸಿ ಅಸೂಯೆಗೊಳ್ಳುತ್ತಿದ್ದ. ಮುಖದ ಮೇಲೆ ಹರಿದಾಡುವ ಮುಂಗುರುಳುಗಳನ್ನು ಸರಿಪಡಿಸಿಕೊಳ್ಳುವಾಗ, ಅವಳ ಕೈ ಬೆರಳುಗಳ ಪಾಲೀಷನ್ನು ಕಾಣುತ್ತಿದ್ದ. ಹಣೆಯ ಮೇಲೆ ಕಂಡೂ

ಕಾಣದಂತೆ ಇಟ್ಟುಕೊಂಡಿರುತ್ತಿದ್ದ ಬಿಂದಿ, ಇನ್ನೂ ಸ್ವಲ್ಪ ದೊಡ್ಡದಿದ್ದರೆ, ಅವಳ ಮುಖದ ಅಂದ ಇನ್ನೂ ಹೆಚ್ಚುತ್ತಿತ್ತು ಎಂದೆನಿಸುತ್ತಿತ್ತು. ಇದನ್ನೆಲ್ಲ ಅವಳೊಡನೆ ಮಾತನಾಡಿ, ಅವಳ ಮೆಚ್ಚುಗೆಯನ್ನು ಗಳಿಸಲು ಆಸೆ ಅವನಿಗೆ. ಆದರೆ ಅವಳಿಗೆ ಅವನ ಮೇಲೆ ಯಾವ ಆಸಕ್ತಿಯೂ ಇರಲಿಲ್ಲ.

ತನ್ನ ಷೋಕಿ ಜೋಕಿಗೆ, ರೂಪಕ್ಕೆ ಯೌವನಕ್ಕೆ ಮರುಳಾಗಿ ಎಷ್ಟು ಜನ ಹುಡುಗಿಯರು ಹಿಂದೆ ಬೀಳುತ್ತಿದ್ದರು. ಇವಳು ಯಾಕೋ ನನ್ನ ಬಗ್ಗೆ ಉದಾಸೀನಳಾಗಿದ್ದಾಳೆ. ನನ್ನ ಯೌವನ ಕಡಿಮೆಯಾಗಿದೆಯೇ ? ರೂಪ ಬದಲಾಗಿದೆಯೇ ಎಂದುಕೊಂಡು ನಿಲುವುಗನ್ನಡಿಯ ಮುಂದೆ ನಿಂತು ತನ್ನನ್ನು ತಾನೇ ಕೇಳಿಕೊಳ್ಳುತ್ತಿದ್ದ. ಹೇಗಾದರೂ ಸರಿ ಜ್ವಾಲಾಳ ಒಲವನ್ನು ಗಳಿಸಬೇಕೆಂದು ಪ್ರಯತ್ನಿಸುತ್ತಿದ್ದ. ಏನಾದರೂ ನೆವ ಮಾಡಿಕೊಂಡು ಅವಳೊಂದಿಗೆ ಮಾತುಕತೆ ಪ್ರಾರಂಭಿಸುತ್ತಿದ್ದ. ಆದರೆ ಅವಳು ಯಾವ ಆಸಕ್ತಿಯನ್ನೂ ತೋರದೆ ಇದ್ದುದು ಅವನ ಸಹನೆಯನ್ನು ಪರೀಕ್ಷಿಸುತ್ತಿತ್ತು. ತಾನೇ ಚೆಲುವೆ ಅಂತ ಜಂಭ ಎಂದು ಭಾವಿಸಿದ್ದ. ಒಮ್ಮೆ ಅವಳ ಡ್ರೆಸ್ಸಿನ ಬಗ್ಗೆ ಕಾಮೆಂಟ್ ಮಾಡಿದರೆ, ಮಗದೊಮ್ಮೆ ಅವಳ ಹೇರ್‌ಸ್ಟೈಲ್ ಬಗ್ಗೆ ತಮಾಷೆ ಮಾಡುತ್ತಿದ್ದ. ಈ ಯಾವುದೇ ಮಾತುಗಳು ಅವಳ ಮೇಲೆ ಪರಿಣಾಮ ಬೀರಿರಲಿಲ್ಲ. ಅವಳು ಬಹಳ ಜಾಗರೂಕಳಾಗಿದ್ದಳು. ಅವಳ ಯಾವುದೇ ರಹಸ್ಯ ಹೊರ ಬೀಳಲಾರದೆಂದು ಎಚ್ಚರದಿಂದಿರುತ್ತಿದ್ದಳು.

○ ○ ○

'ಜ್ವಾಲಾ' ಎಂದು ಮಾಲಾ ತನ್ನ ಹೆಸರನ್ನು ಬದಲಾಯಿಸಿಕೊಂಡಿದ್ದಳು. ಉದ್ದನೆಯ ತಲೆ ಕೂದಲನ್ನು ಕತ್ತರಿಸಿ ಮೊಟಕು ಮಾಡಿಸಿಕೊಂಡಿದ್ದಳು. ಹೆಸರು ಬದಲಾಯಿಸಿಕೊಂಡು, ಮೇಕಪ್ ಬದಲಾಯಿಸಿಕೊಂಡರೆ, ರೂಪ, ಗುಣ ಬದಲಾಗಲು ಸಾಧ್ಯವೇ ? ಆಲೋಚನೆಗಳು ಮರೆಯಾಗಲು ಸಾಧ್ಯವೇ ? ನಡೆದ ಘಟನೆಗಳನ್ನು ಮರೆಯಲಾಗುತ್ತದೆಯೇ ? ಒಂದೊಂದೂ, ದಿನ ದಿನವೂ ನೆನಪಾಗುತ್ತಲೇ ಇತ್ತು. ಆದರೆ ಧ್ರುವನ, ಪ್ರತಾಪನ ಭಯದಿಂದಾಗಿ, ಅಜ್ಞಾತವಾಗಿಯೇ ಇರಲು ಬಯಸಿದ್ದಳು.

ಒಂಭತ್ತು ತಿಂಗಳುಗಳ ಕಾಲ, ತನ್ನ ಒಡಲಲ್ಲಿದ್ದ ಮಗುವಿನ ಬೆಳವಣಿಗೆಯನ್ನೆಲ್ಲಾ ಹಂತ ಹಂತವಾಗಿ ಅನುಭವಿಸಿದ್ದಳು. ಒಡಲೊಳಗೆ ಮಗು ಚಲಿಸಿದಾಗ, ಆಗುವ ಆನಂದವನ್ನು ಅನುಭವಿಸಿದ್ದಳು. ಆದರೆ ಅದನ್ನು

ಹಂಚಿಕೊಳ್ಳಲು ಸಮೀಪದಲ್ಲಿ ಭಾಸ್ಕರನು ಇಲ್ಲದುದು ಅವಳಿಗೆ ಬೇಸರವನ್ನು ಉಂಟುಮಾಡುತ್ತಿತ್ತು. 'ಭಾಸ್ಕರ ನಿನ್ನ ಬಗ್ಗೆ ವಿಚಾರಿಸುತ್ತಾನೆ' ಎಂದು ವಸುಧಾ ಹೇಳಿದ್ದರೂ, ಅವನನ್ನೊಮ್ಮೆ ನೋಡಬೇಕು, ಅವನ ತೊಡೆಯ ಮೇಲೆ ತಲೆಯನ್ನಿರಿಸಿ ತನ್ನ ಬಸಿರಿನ ಅನುಭವಗಳನ್ನು ಹೇಳಿಕೊಳ್ಳಬೇಕೆಂಬ ಆಸೆಯಾಗುತ್ತಿತ್ತು. ತನ್ನ ಭಾಸ್ಕರನ, ಸ್ನೇಹ, ಪ್ರೀತಿ ಎಲ್ಲಾ ಅತಿಮಧುರವಾಗಿತ್ತು. ಅದರ ಫಲವೇ ಈ ಬಸಿರು. ಇದನ್ನು ಕಾಪಾಡಿಕೊಂಡು ಆರೋಗ್ಯವಂತ ಮಗುವನ್ನು ಹೆತ್ತು ತಾಯ್ತನದ ಆನಂದವನ್ನು ಸವಿಯಬೇಕು. ಅದಕ್ಕಾಗಿ ತಾನು ಭಾಸ್ಕರನಿಂದ ದೂರವಿರಬೇಕಾಗಿ ಬಂದಿದೆ. ಅದನ್ನು ಸಹಿಸಿ ಕೊಳ್ಳುತ್ತೇನೆಂದುಕೊಂಡು ತನ್ನ ಅನುಭವಗಳನ್ನು ಒಂದು ಡೈರಿಯಲ್ಲಿ ಬರೆದಿಡುತ್ತಿದ್ದಳು. ಆಗ ಮನಸ್ಸಿಗೆ ಸ್ವಲ್ಪ ಸಮಾಧಾನವೆನಿಸುತ್ತಿತ್ತು.

ಹೆರಿಗೆಯ ನೋವನ್ನು ಸಹಿಸಿ, ಮುದ್ದಾದ ಗಂಡು ಮಗುವಿಗೆ ಜನ್ಮಕೊಟ್ಟು ತಾಯ್ತನದ ಪಟ್ಟವನ್ನೇರಿದಳು. ಮಗುವಿನ ಸುಂದರವಾದ ಮುಖವನ್ನು ನೋಡಿದ ಕೂಡಲೇ ಭಾಸ್ಕರನೇ ಎದುರಿಗೆ ಬಂದು ನಿಂತಂತಾಗಿತ್ತು. 'ಭಾಸ್ಕರ್ ಐ ಲವ್ ಯು. ಐ ಥ್ಯಾಂಕ್ ಯು, ಒಂದು ಸುಂದರ ಮಗುವನ್ನು ಕಾಣಿಕೆಯನ್ನಾಗಿ ಕೊಟ್ಟಿದೀರಿ. ಒಂದಲ್ಲ ಒಂದು ದಿನ ನಿಮಗೆ ಈ ಮಗುವನ್ನು ತೋರಿಸಿ, ನನ್ನ ಅನುಭವಗಳನ್ನು ನಿಮ್ಮೊಡನೆ ಹಂಚಿಕೊಳ್ಳುತ್ತೇನೆ' ಎಂದು ತನ್ನಲ್ಲಿಯೇ ಹೇಳಿಕೊಂಡಿದ್ದಳು.

ಇದರೊಂದಿಗೆ ಧ್ರುವನ ಭಯ. ತಾನು ಇರುವ ನೆಲೆಯನ್ನು ಪತ್ತೆ ಹಚ್ಚಿ, ಮಗುವನ್ನು ಎತ್ತಿಕೊಂಡು ಹೋದರೆ ತಾನು ಏನು ಮಾಡಲು ಸಾಧ್ಯ? ಆಗ ಬಲವಂತವಾಗಿ ತಾನು ಅವನ ಬಳಿಗೆ ಹೋಗಬೇಕಾಗುತ್ತದೆ. ಇದಕ್ಕೆಲ್ಲ ಒಂದೇ ಉಪಾಯ ಮಗು ಅವನ ಕೈಗೆ ಸಿಗದಿರಬೇಕಾದರೆ, ಮಗುವನ್ನು ವಸುಧಾಳಿಗೆ ಕೊಟ್ಟು ಬಿಡುವುದೇ ಸರಿ ಎಂಬ ತೀರ್ಮಾನಕ್ಕೆ ಬಂದಳು. ಹೇಗೂ ವಸುಧಾ ತನ್ನ ಮಗುವನ್ನು ಬಸಿರಿನಲ್ಲೇ ಕಳೆದುಕೊಂಡಿದ್ದಾಳೆ. ಮಧೂಗೆ ಈಗ ಪಶ್ಚಾತ್ತಾಪವಾಗಿದೆ. ಅವರಿಬ್ಬರೂ ತನ್ನ ಮಗುವನ್ನು ಚೆನ್ನಾಗಿ ಪೋಷಿಸಿ, ಬೆಳೆಸುತ್ತಾರೆ ಎಂಬ ನಂಬಿಕೆ ನನಗಿದೆ ಎಂದುಕೊಂಡು ಮಗುವನ್ನು ವಸುಧಾಳ ಮಡಿಲಿಗೆ ತುಂಬಿದಳು.

ಮಗುವಿಗೆ ಮೂರು ತಿಂಗಳು ತುಂಬುವರೆಗೂ, ವಸುಧಾ ಅವಳ ಜೊತೆಯಲ್ಲಿದ್ದುಕೊಂಡು, ಬಾಣಂತನ ಮಾಡಿದಳು. ಎದೆ ಹಾಲಿನ ಜೊತೆ

ಜೊತೆಗೆ, ಫೀಡಿಂಗ್ ಬಾಟಲಿಯ ಅಭ್ಯಾಸವನ್ನು ಮಾಡಿಸಿದರು. ತುಂಬು ಕೆನ್ನೆಯಲ್ಲಿ ಗುಳಿಯನ್ನು ಮೂಡಿಸಿಕೊಂಡು ನಗುವ ಮಗು, ವಸುಧಾಳ ಮಡಿಲಲ್ಲಿ ಬೆಳೆವಾಗ, ಮಾಲಾಳಿಗೆ ಒಮ್ಮೊಮ್ಮೆ ಖೇದವೆನಿಸುತ್ತಿತ್ತು. ಇವನು ಬೆಳೆದು ಮಾತನ್ನು ಕಲಿತು, ಅಮ್ಮಾ ಎಂದು ವಸುಧಾಳನ್ನು ಕರೆಯುತ್ತಾನೆ. ಮಧುವನ್ನು ಅಪ್ಪಾ ಎನ್ನುತ್ತಾನೆ. ತನಗೆ ಆ ಭಾಗ್ಯವಿಲ್ಲದಾಯಿತಲ್ಲ. ಭಾಸ್ಕರನಿಗೂ ಆ ಭಾಗ್ಯವಿಲ್ಲ.

ಮದುವೆಯಾಗಿ ಎರಡು ವರ್ಷಗಳಾದರೂ, ಅವನು ಅವನ ಹೆಂಡತಿಯನ್ನು ಬಳಿಗೆ ಕರೆದಿರಲಿಲ್ಲವಂತೆ. ಅದರಿಂದ ನನಗೆ ಒಳ್ಳೆಯದೇ ಆಯಿತು. ಅವನಿಂದ ತಾಯಿಯಾಗುವ ಈ ಭಾಗ್ಯ ನನಗೆ ಸಿಕ್ಕಿತು. ಆದರೆ ಈ ಮಗುವಿಗೆ, ನಾನು ತಾಯಿಯೆಂದಾಗಲೀ, ಭಾಸ್ಕರ ತಂದೆ ಎಂದಾಗಲೀ ತಿಳಿಯುವುದಿಲ್ಲ. ಮುಂದೆ ಎಂದಾದರೂ, ಭಾಸ್ಕರ ಬಂದು, ನನ್ನ ಮಗು ಎಲ್ಲಿ ? ನನಗೆ ಕೊಡು ಅಂತ ಕೇಳಿದರೆ... ಏನು ಹೇಳಲಿ ಹಾಗೆ ಮಾಡಲಾರ... ಅಲ್ಲದೇ ಅವನಿಗೆ ತಾನು ಗರ್ಭಿಣಿಯಾಗಿದ ವಿಷಯವೇ ತಿಳಿಯದು. ಆ ಬಗ್ಗೆ ವಸುಧಾಳನ್ನು ಕೇಳಬೇಕು. ತಾನೊಮ್ಮೆ ಭಾಸ್ಕರನನ್ನು ಕಾಣಬೇಕು. ಅವನು ಒಪ್ಪುವುದಾದರೆ, ಅವನನ್ನು ತನ್ನ ಬಳಿ ಇಲ್ಲಿಯೇ ಇಟ್ಟುಕೊಳ್ಳಬೇಕು. ಅವನು ನನ್ನ ಜೊತೆಗೆ ಇರುವುದಾದರೆ ನನಗೆ ಯಾರ ಭಯವೂ ಇಲ್ಲ. ಅವನನ್ನು ಕಂಡು, ಅವನೊಡನೆ ಮಾತನಾಡಬೇಕು ಎಂಬ ಹಂಬಲ ಬಲವಾಗತೊಡಗಿತು.

"ಏನು ಯೋಚಿಸ್ತಿದೀಯ ಮಾಲಾ ?" ವಸುಧಾ ಪ್ರಶ್ನಿಸಿದ್ದಳು.

"ಭಾಸ್ಕರನ ಬಗ್ಗೆ ಯೋಚಿಸ್ತಾ ಇದೀನಿ... ನಾನು ಒಂದು ಸಲ ಅವರನ್ನು ಭೇಟಿಯಾಗಬೇಕು."

"ಅದು ಮುಗಿದ ಅಧ್ಯಾಯ. ಈಗ ಭಾಸ್ಕರ, ಧ್ರುವನ ಕೈಕೆಳಗೆ ಕೆಲಸ ಮಾಡ್ತಾನೆ. ಅವನಿಗೆ ತಿಳಿದರೇ...?"

"ತಿಳಿದರೆ ತಿಳಿಯಲಿ ಬಿಡು. ಈಗ ಮಗು ಹೇಗೂ ನಿಮ್ಮದು. ಧ್ರುವನಿಗೆ ನನ್ನ ಮೇಲೆ ಯಾವ ಆಸಕ್ತಿಯೂ ಇಲ್ಲ."

"ಮಗು ಎಲ್ಲಿ ಅಂತ ಕೇಳಿ ಹಿಂಸೆ ಮಾಡಿದರೆ ಏನು ಮಾಡ್ತೀಯ ?"

"ನನಗೆ ಮಗು ಹುಟ್ಟಲೇ ಇಲ್ಲ. ಇದೆಲ್ಲಾ ನಿನ್ನನ್ನು ದೂರ ಇಡಲು ಆಡಿದ ನಾಟಕ ಅಂತ ಹೇಳ್ತೀನಿ."

"ಅದು ಅಷ್ಟು ಸುಲಭವಲ್ಲ. ಭಾಸ್ಕರನೂ ನಿನ್ನನ್ನು ಮೊದಲಿನಷ್ಟೇ ಪ್ರೀತಿಸಬಹುದು ಅಂತ ನನಗನ್ನಿಸುಲ್ಲ."

"ಯಾಕೆ ಪ್ರೀತಿಸುಲ್ಲ! ಒಂದು ಮಗುವಾದ ಮಾತ್ರಕ್ಕೆ ನಾನೇನು ಮುದುಕಿಯಾಗಲಿಲ್ಲ. ಇನ್ನೂ ನಾಲ್ಕು ಮಕ್ಕಳನ್ನು ಹೆರುವಷ್ಟು ಯೌವನ ನನಗಿದೆ" ನಕ್ಕಳು.

"ಹಾಗೆಲ್ಲಾ ಮತ್ತೆ ಮತ್ತೆ ಅವಿವೇಕಕ್ಕೆ ಹೋಗಬೇಡ ಮಾಲಾ. ಭಾಸ್ಕರ ಒಳ್ಳೆಯವರು. ಸಂಸಾರಸ್ಥ. ಆದ್ದುದರಿಂದ ನಿನಗೆ ತೊಂದರೆಯಾಗಲಿಲ್ಲ..."

"ಏನು ತೊಂದರೆಯಾಗುತ್ತಿತ್ತು? ಏನೂ ಇಲ್ಲ. ಅವರ ಮನೆಯವರಿಗೆ ನಮ್ಮಿಬ್ಬರ ಸಂಬಂಧ ತಿಳಿಯಲೇ ಇಲ್ಲ."

"ಒಳ್ಳೆಯದೇ ಆಯ್ತು. ಭಾಸ್ಕರನಿಗೂ ಇವೆಲ್ಲಾ ಒಂದು ಮುಗಿದ ಅಧ್ಯಾಯ. ಈಗ ಅವರು ಹೊಸ ಜೀವನವನ್ನು ಪ್ರಾರಂಭಿಸಿದ್ದಾರೆ. ನೀನು ಅವರನ್ನು ಮರೆತು ಬಿಡುವುದೇ ವಾಸಿ."

"ಇದೇನು ವಸುಧಾ ಹೀಗೆ ಮಾತನಾಡ್ತಿದ್ದೀಯ? ಇವತ್ತು ನಿನ್ನ ಮಡಿಲು ತುಂಬಿರುವುದಕ್ಕೆ ಭಾಸ್ಕರನೇ ಕಾರಣ. ಅವರನ್ನು ಮರೆಯೋಕೆ ಆಗುತ್ತಾ?"

"ನಾನು ಆ ಅರ್ಥದಲ್ಲಿ ಹೇಳಲಿಲ್ಲ. ಹೋಗಲಿ ಬಿಡು. ಈಗ ದೂರ ಬಾಂಬೇಲಿದಾರಲ್ಲ... ಅವರ ಪಾಡು ಅವರಿಗೆ. ನಮ್ಮ ಪಾಡು ನಮಗೆ..."

"ನಿನಗೆ ಹಾಗೆನ್ನಿಸಬಹುದು ವಸುಧಾ. ಆದರೆ ನಾನು ಅವರನ್ನು ಈ ಜನ್ಮದಲ್ಲಿ ಮರೆಯಲು ಸಾಧ್ಯವಿಲ್ಲ. ಅವರು ನನ್ನನ್ನೂ ಮದುವೆಯಾಗಲಿ ಎಂಬ ಆಸೆ ನನಗಿಲ್ಲ. ಆದರೆ ಹಿಂದಿನಂತೆಯೇ ನಮ್ಮ ಜೀವನ ಮುಂದುವರೆದರೆ ತಪ್ಪೇನು?"

"ಹಿಂದಿನಂತೆ ಮುಂದುವರೆಯಲು ಸಾಧ್ಯವಿಲ್ಲ... ನಿನಗೆ ಅರ್ಥವಾಗುಲ್ಲ. ನಿನ್ನ ಮೇಲೆ ಆ ಧ್ರುವನ ಕಣ್ಣು ಇದ್ದೇ ಇದೆ. ಅವನು ನಿನ್ನನ್ನು ಹುಡುಕಿಸಿ, ನಿನ್ನನ್ನು ಅಪಹರಿಸಿಕೊಂಡು ಹೋಗಬಹುದು. ಆಗ ಭಾಸ್ಕರನೂ ಅಪಾಯಕ್ಕೆ ಸಿಕ್ಕಿ ಬೀಳುವ ಸಾಧ್ಯತೆ ಇರುತ್ತದೆ. ನಿನ್ನಿಂದ ಅವನಿಗೆ ತೊಂದರೆಯಾದರೆ ಅದು ತಪ್ಪಲ್ವಾ?" ಎಂದು ಕೇಳುತ್ತಿದ್ದಳು. ಮಾಲಾ ಅದಕ್ಕೆ ಉತ್ತರಿಸುತ್ತಿರಲಿಲ್ಲ.

ಮೂರು ತಿಂಗಳ ಬಾಣಂತನದ ನಂತರ, ವಸುಧಾ ಮಗುವಿನೊಂದಿಗೆ ಬೆಂಗಳೂರಿಗೆ ಹೊರಟುಹೋದಳು. ಹೊರಡುವ ಮುನ್ನ ಮತ್ತೆ ಹೇಳಿದ್ದಳು. "ಈಗಲೂ ಇವನು ನಿನ್ನ ಮಗನೇ. ನಿನ್ನ ನಿರ್ಧಾರವನ್ನು ಬದಲಾಯಿಸುವು

ದಾದರೆ. ಈಗಲೇ ನಿರ್ಧರಿಸು. ಮುಂದೆ ಪಶ್ಚಾತ್ತಾಪ ಪಡಬೇಡ."

"ಇಲ್ಲ ವಸುಧಾ. ಇವನು ನಿನ್ನ ಮಗನೇ. ಅದೇ ಸರಿ. ನನಗೆ ಯಾವ ಅಸ್ತಿತ್ವವಿಲ್ಲ. ಇವನನ್ನು ಹೇಗೆ ಸಾಕಬಲ್ಲೆ? ಅಲ್ಲದೇ ಧ್ರುವನ ಭಯವಿದ್ದೇ ಇದೆ ನನಗೆ ಏನೇ ಆದರೂ ಪರವಾಗಿಲ್ಲ. ಇವನು ಮಾತ್ರ ಸುರಕ್ಷಿತವಾಗಿರಬೇಕು. ನನಗೆ ನಿನ್ನ ಮೇಲೆ ನಂಬಿಕೆ ಇದೆ."

"ಇದೆಂತಹ ಸ್ಥಿತಿ ಒದಗಿತು ನೋಡಿದೆಯಾ? ನಿನಗೆ ಭಾರ್ಗವ ದಕ್ಕಲಿಲ್ಲ. ಧ್ರುವ ಬೇಕಿಲ್ಲ. ಭಾಸ್ಕರ ಎಲ್ಲವನ್ನೂ ಬಿಟ್ಟು ನಿನ್ನ ಬಳಿಗೆ ಬರಲು ಸಾಧ್ಯವಿಲ್ಲ. ಮೂರು ದಳದ ಹೂವಿನಂತೆ, ಒಂದೊಂದಕ್ಕೂ ಒಂದೊಂದು ತುದಿ. ಒಂದೊಂದು ದಿಕ್ಕಿಗೆ. ನೋಡಲು ಸ್ವಲ್ಪ ವಿಚಿತ್ರವಾಗಿರುತ್ತದೆ. ಎಲ್ಲಾ ಹೂವಿನಂತಿರುವುದಿಲ್ಲ...

"ಅಪರೂಪದ ಹೂವು ನಾನು ಆಗಿರುವುದರಿಂದಲೇ, ಮೂರು ದಳಗಳು. ತೊಟ್ಟು ಮಾತ್ರ ಒಂದೇ. ಮೂರು ದಳವಾದರೂ ಇದೆಯಲ್ಲ. ಇಲ್ಲದಿದ್ದರೆ ನಾನು ಬರೀ ತೊಟ್ಟಾಗಿ ಉಳಿಯುತ್ತಿದ್ದೆ. ಭಾರ್ಗವನನ್ನೂ ಉಳಿಸಿಕೊಳ್ಳಲು ಧ್ರುವನನ್ನು ಮದುವೆಯಾದೆ. ಧ್ರುವನಿಂದ ದೂರವಾಗಲು, ಭಾಸ್ಕರನನ್ನು ನಾನೇ ಆರಿಸಿಕೊಂಡೆ. ಇದು ವಿಚಿತ್ರವೇ ತಾನೇ... ಹೋಗಲಿ ಬಿಡು. ಅನುಭವಿಸುತ್ತಿರುವವಳು ನಾನು ತಾನೇ?"

"ನೀನು ದುಡುಕಿಬಿಟ್ಟೆ. ಮಾಲಾ ಭಾರ್ಗವನಿಗಾಗಿ ನೀನು ಮಾಡಿದ ತ್ಯಾಗವೂ ಸರಿಯಲ್ಲ. ಭಾಸ್ಕರನನ್ನು ನೀನು ಆರಿಸಿಕೊಂಡದ್ದೂ ಸರಿಯಲ್ಲ."

"ಇನ್ನೇನು? ಧ್ರುವನ ಜೊತೆ ಬಾಳಬೇಕಾಗಿತ್ತಾ? ಇಷ್ಟು ಹೊತ್ತಿಗೆ ನನಗೂ ತನ್ನ ರೋಗವನ್ನು ಅಂಟಿಸಿರುತ್ತಿದ್ದ."

"ಹಾಗೆಲ್ಲಿ ಹೇಳಿದೆ ನಾನು? ಉಪಾಯವಾಗಿ ಡೈವೋರ್ಸ್ ತೆಗೆದುಕೊಂಡ ನಂತರ ಭಾರ್ಗವನನ್ನು ಒಲಿಸಿಕೊಂಡು ಮದುವೆಯಾಗಿದ್ದಿದ್ದರೆ... ನಿಮ್ಮಿಬ್ಬರಿಗೆ ಹುಟ್ಟುವ ಮಗು ನಿನ್ನ ಮಡಿಲಿನಲ್ಲೇ ಬೆಳೆಯುತ್ತಿತ್ತು.

"ಇದೆಲ್ಲ ನನ್ನ ಹಣೆಯಲ್ಲಿ ಬರೆದಿರಲಿಲ್ಲವೇನೋ... ಈ ತುಂಟನಿಗೆ ನೀನೇ ತಾಯಿ ಅಂತ ಇವನ ಹಣೆಯಲ್ಲಿ ಬರೆದಿದೆ. ದೇವಕಿ ಹೆತ್ತ ಮಗುವನ್ನು ಯಶೋದೆ ಬೆಳೆಸಲಿಲ್ಲವೇ? ಹಾಗೆ. ದೇವಕಿಗೆ ಬಂಧನ. ಈ ಬಂಧನದಲ್ಲಿ ಕೃಷ್ಣ ಬೆಳೆದು ದೊಡ್ಡವನಾಗಲು ಸಾಧ್ಯವಿಲ್ಲ. ಅಂದ್ಹಾಗೆ ಏನು ಹೆಸರಿನಿಂದ ಕರೆಯೋಣ?"

"ನಿನಗೆ ಯಾವ ಹೆಸರು ಇಷ್ಟವೋ ಅದೇ ಇರಲಿ..."

"ಆಕಾಶ್ ಅಂತ ಇಡೋಣ. ಆಕಾಶದಷ್ಟು ವಿಶಾಲನಾಗಿ ಬೆಳೆಯಲಿ ಅಂತ ನನಗೆ ಆಸೆ."

"ಸರಿ. ಆಕಾಶ್ ಅಂತಲೇ ಕರೆಯೋಣ. ಹೆಸರು ತುಂಬಾ ಚೆನ್ನಾಗಿದೆ."

ಮಧುಕರನಿಗೂ ಆ ಹೆಸರು ಹಿಡಿಸಿತು. "ನೀನೇನೂ ಚಿಂತಿಸಬೇಡ ಜ್ವಾಲಾ. ವಸುಧಾ, ನಿನ್ನ ಮಗುವಿಗೆ ಯಾವ ಕೊರತೆಯೂ ಉಂಟಾಗದಂತೆ ಸಾಕುತ್ತಾಳೆ. ನನಗ ನಿನ್ನದೇ ಚಿಂತೆ... ಇಲ್ಲಿ ಒಬ್ಬಳೇ ಇರುವುದಾದರೂ ಹೇಗೆ? ನಿನ್ನನ್ನು ಸಿಂಗಪೂರ್‌ಗೆ ಕಳಿಸುವ ವ್ಯವಸ್ಥೆ ಮಾಡ್ತೀನಿ. ಅಲ್ಲಿ ಯಾರಿಗೂ ಏನೂ ಗೊತ್ತಿರುವುದಿಲ್ಲ. ನೀನು ಹೊಸದಾಗಿ ಜೀವನವನ್ನು ಪ್ರಾರಂಭಿಸಬಹುದು."

"ನನ್ನ ಜೀವನ ಪ್ರಾರಂಭವಾಗುವ ಮೊದಲೇ ಅದಕ್ಕೆ ಮುಕ್ತಾಯ ಹಾಡಿದವನು ನೀನು. ಈಗ ಮತ್ತೆ ಯಾವುದು ಹೊಸ ಜೀವನ? ಏನೂ ಬೇಡ. ನಾನು ಇಲ್ಲೇ ಇರುತ್ತೀನಿ. ನನಗೆ ಒಂದು ಕೆಲಸ ಕೊಡಿಸಿಕೊಡು. ನನ್ನ ಜೀವನವನ್ನು ನಾನೇ ನೋಡಿಕೊಳ್ಳುತ್ತೀನಿ."

ಏನೋ ಹೇಳಲು ಹೊರಟವನನ್ನು ವಸುಧಾ ತಡೆದಳು. ಮಧು ಅಲ್ಲಿ ಇಲ್ಲಿ ಓಡಾಡಿ ತಂಗಿಗೆ ಕೆಲಸ ಕೊಡಿಸಿದ್ದ. ಜ್ವಾಲಾ ಅಂತ ಹೆಸರನ್ನು ಬದಲಾಯಿಸಿ ಕೊಂಡಳು. ಉದ್ದನೆಯ ಜಡೆಯನ್ನು ಕತ್ತರಿಸಿದ್ದಳು. ಆಗ ಭಾಸ್ಕರನ ನೆನಪು ಒತ್ತರಿಸಿಕೊಂಡು ಬಂದಿತ್ತು. ಭಾಸ್ಕರನಿಗೆ ಪ್ರಿಯವಾದ ಜಡೆ. ಇದನ್ನು ಕತ್ತರಿಸಿ ತಾನಾಗಿಯೇ ಭಾಸ್ಕರನಿಂದ ದೂರವಾಗುತ್ತಿರುವಂತೆ ಭಾಸವಾಗುತ್ತಿದೆ ಎಂದುಕೊಂಡಿದ್ದಳು.

○ ○ ○

ಆಟೋ ರಿಕ್ಷಾಗಾಗಿ ಕಾಯುತ್ತಾ ನಿಂತಿದ್ದವಳ ಬಳಿ ಒಂದು ಕಾರು ಬಂದು ನಿಂತಿತು. ಏನು ನಡೆಯುತ್ತಿದೆ ಎಂದು ತಿಳಿಯುವುದರೊಳಗೆ, ಅವಳನ್ನು ಕಾರಿನ ಒಳಕ್ಕೆ ಎಳೆದುಕೊಂಡಿದ್ದರು. 'ಹೆಲ್ಪ್... ಹೆಲ್ಪ್' ಎಂದು ಅವಳು ಕಿರುಚುವುದಕ್ಕೆ ಆಸ್ಪದ ಕೊಡದಂತೆ, ಅವಳ ಬಾಯಿಗೆ ಕೈ ಹಿಡಿದು, ಮೂಗಿಗೆ ಏನೋ ಹಿಡಿದು ಮೂಸಿದರು. ಕ್ಷಣ ಮಾತ್ರದಲ್ಲಿ ಅವಳಿಗೆ ಜ್ಞಾನ ಹೋಗಿತ್ತು.

ಅವಳಿಗೆ ಎಚ್ಚರವಾದಾಗ, ಅವಳು ಯಾವುದೋ ಒಂದು ರೂಮಿನ ಹಾಸಿಗೆಯ ಮೇಲೆ ಮಲಗಿದ್ದಳು. ಯಾವುದೋ ಕೆಟ್ಟ ವಾಸನೆಯಿಂದ ವಾಕರಿಕೆ ಬರುವಂತಾಗಿತ್ತು. ಏಳಲು ನೋಡಿದಳು. ಏಳಲಾಗದಂತೆ ಕೈ

ಕಾಲುಗಳನ್ನು ಬಂಧಿಸಿದ್ದರು. ಇದೆಲ್ಲ ಆ ಧ್ರುವನದ್ದೇ ಕೆಲಸ. ತನ್ನನ್ನು ಅಪಹರಿಸಿದ್ದಾನೆ... ಇದು ಅವನ ಮನೆ ಇರಬಹುದೇ? ಸುತ್ತಲೂ ಕಣ್ಣಾಡಿಸಿದಳು. ಆದರೆ ಯಾವುದೋ ಒಂದು ಹೋಟೆಲಿನ ರೂಮಿನಂತಿತ್ತು. ಮಂದವಾದ ಬೆಳಕಿನಲ್ಲಿ. ತಾನು ಯಾವುದೋ ಒಂದು ಹೋಟೆಲಿನ ರೂಮಿನಲ್ಲಿ ನಗ್ನವಾಗಿ ಮಲಗಿದ್ದೇನೆಂದು ತಿಳಿಯಿತು. ಕ್ಷಣಮಾತ್ರದಲ್ಲಿ ಎಲ್ಲಾ ಅರ್ಥವಾಗಿತ್ತು. ಧ್ರುವ ತನ್ನನ್ನು ಅಪಹರಿಸಿ, ತನ್ನ ಮೇಲೆ ಬಲಾತ್ಕಾರ ವೆಸಗಿದ್ದಾನೆ. ಛೀ... ಅಂತೂ ಯಾವುದು ನಡೆಯಬಾರದಿತ್ತೋ ಅದು ನಡೆದು ಹೋಗಿದೆ. ಎಷ್ಟು ಸಾರಿ ತನ್ನ ಮೇಲೆ ಅತ್ಯಾಚಾರ ಮಾಡಿದ್ದಾನೋ... ಅಂತೂ ಮಾಡಬಾರದ್ದನ್ನು ಮಾಡಿದ್ದಾನೆ ಪಾಪಿ... ಈಗ ನನ್ನ ಸಹಾಯಕ್ಕೆ ಯಾರು ಬರ್ತಾರೆ? ತನ್ನ ಮಾತನ್ನು ಯಾರು ನಂಬ್ತಾರೆ? ಆದರೂ ಇವನನ್ನು ಬಿಡಬಾರದು. ಜೀವಮಾನವೆಲ್ಲಾ ಜೈಲಿನಲ್ಲಿ ಕೊಳೆಯುವಂತೆ ಮಾಡಬೇಕು. ಹಲ್ಲು ಕಚ್ಚಿದಳು.

ರೂಮಿನ ಬಾಗಿಲನ್ನು ತೆರೆದ ಸದ್ದು ಕೇಳಿದಾಗ, ಬಲವಂತವಾಗಿ ಕಣ್ಣುಗಳನ್ನು ಮುಚ್ಚಿಕೊಂಡಳು. ಕತ್ತಲೆಯಲ್ಲಿ ಒಳಗೆ ಬಂದ ವ್ಯಕ್ತಿ ಅವಳ ಸಮೀಪಕ್ಕೆ ಬಂದು ಅವಳ ಮುಖದ ಬಳಿ ಬಾಗಿ, ಮೂಗಿಗೆ ಏನನ್ನೋ ಹಿಡಿಯಿತು. ಅವಳು ಕಣ್ಣು ಬಿಟ್ಟಳು. ಮುಖಕ್ಕೆ ಮಾಸ್ಕ್ ಹಾಕಿಕೊಂಡಿರುವ ವ್ಯಕ್ತಿ ಯಾರೆಂದು ತಿಳಿಯಲಿಲ್ಲ. ಕ್ಷಣದಲ್ಲಿ ಪ್ರಜ್ಞೆ ತಪ್ಪಿದಳು. ಆ ವ್ಯಕ್ತಿ ಮಾಸ್ಕನ್ನು ತೆಗೆದು, ತನ್ನ ಬಳಿ ಇದ್ದ ಟಾರ್ಚ್ ಲೈಟನ್ನು ಹಚ್ಚಿ ಅವಳ ನಗ್ನದೇಹದ ಮೇಲೆ ಬೆಳಕನ್ನು ಚೆಲ್ಲಿತು. ಹೊಳೆವ ದಂತದ ಮೈ ಬಣ್ಣದ ಕಾಂತಿ ಅವನನ್ನು ಹುಚ್ಚನನ್ನಾಗಿ ಮಾಡಿತು. ಎಂತಹ ಸುಂದರ ದೇಹ! ಈಗ ನನ್ನದು. ಈಗಾಗಲೇ ನಾಲ್ಕೈದು ಬಾರಿ ನಿನ್ನನ್ನು ಅನುಭವಿಸಿಯೂ ನನ್ನ ಆಸೆ ತಣಿಯದಾಗಿದೆ. ಏನು ಮಾಡಲಿ ಡಿಯರ್... ಇದೊಂದು ಸಲ... ನನ್ನ ಆಸೆಯನ್ನು ಪೂರೈಸಿಕೊಳ್ಳುತ್ತೇನೆ ಎನ್ನುತ್ತಾ ಅವಳಿಗೆ ಕಟ್ಟಿದ್ದ ಕಟ್ಟುಗಳನ್ನು ಬಿಚ್ಚಿ ಅವಳ ಮೇಲೆ ಎರಗಿದ. ಮಾನಾಪಹರಣವಾಗುತ್ತಿರುವ ಅನುಭವವೇ ಇಲ್ಲದೆ ಬಿದ್ದುಕೊಂಡಿದ್ದವಳನ್ನು ಬಲಾತ್ಕಾರದಿಂದ ತನ್ನವಳನ್ನಾಗಿ ಮಾಡಿಕೊಂಡಿದ್ದ ರಘು!

"ಡಿಯರ್ ಜ್ವಾಲಾ... ನಿನ್ನ ಮೈಯ ಕಾವು ನನ್ನನ್ನು ಕಾಮಿಯನ್ನಾಗಿ ಮಾಡಿಬಿಟ್ಟಿದೆ. ನೀನಾಗಿಯೇ ಒಪ್ಪಿ ನನ್ನ ಬಳಿಗೆ ಬರುವುದಿಲ್ಲ ಅಂತ ನನಗೆ ಗೊತ್ತಿತ್ತು. ಅದಕ್ಕೇ ಹೀಗೆ ಮಾಡಬೇಕಾಯ್ತು... ನೀನೇ ಒಪ್ಪಿದ್ದರೆ ಆ ಮಜವೇ

ಬೇರೆಯಾಗಿರುತ್ತಿತ್ತು... ಹೋಗಲಿ ಬಿಡು. ಇಷ್ಟಕ್ಕೆ ತೃಪ್ತಿ ಪಟ್ಟುಕೊಳ್ಳುತ್ತೇನೆ" ಎನ್ನುತ್ತಾ ತನ್ನ ಕಾಮತೃಷೆಯನ್ನು ತೀರಿಸಿಕೊಂಡು, ಅವಳನ್ನು ಹಾಗೆಯೇ ನಗ್ನಾವಸ್ಥೆಯಲ್ಲೇ ಬಿಟ್ಟು ರೂಮಿನ ಬಾಗಿಲಿಗೆ ಬೀಗ ಹಾಕಿಕೊಂಡು ಹೊರಟುಹೋದ.

ಮತ್ತೆ ಅವಳಿಗೆ ಎಚ್ಚರವಾದಾಗ, ಅವಳು ಯಾವುದೋ ಆಸ್ಪತ್ರೆಯ ಬೆಡ್ ಮೇಲೆ ಮಲಗಿರುವ ಅನುಭವವಾಗಿತ್ತು. ಸಮೀಪದಲ್ಲಿ ಬಿಳಿಯ ಸೀರೆಯನ್ನುಟ್ಟ ಹೆಂಗಸು ಅವಳೆಡೆ ನೋಡಿ ಮುಗುಳ್ನಕ್ಕಳು.

"ನಾನು ಎಲ್ಲಿದೀನಿ ?" ಇದು ಯಾವ ಊರು ?" ಕ್ಷೀಣವಾಗಿ ಕೇಳಿದಳು.

"ನಿಧಾನವಾಗಿ ಮಾತನಾಡೋಣ. ಪೊಲೀಸರಿಗೆ ತಿಳಿದರೆ ಕಷ್ಟವಾಗುತ್ತದೆ" ಎಂದು ಅವಳು ಇಂಗ್ಲಿಷ್‌ನಲ್ಲಿ ನುಡಿದಾಗ, ತಾನು ಯಾವುದೋ ಪರಸ್ಥಳದಲ್ಲಿ ಇದ್ದೇನೆಂದು ತಿಳಿಯಿತು. ಅದೇ ದಿನ, ರಾತ್ರಿಯ ಹೊತ್ತಿಗೆ, ಅವಳನ್ನು ಡಿಸ್ಚಾರ್ಜ್ ಮಾಡಿಸಿಕೊಂಡು ತನ್ನ ಮನೆಗೆ ಕರೆದುಕೊಂಡು ಹೋಗಿದ್ದಳು ಆ ಹೆಂಗಸು.

"ನೀನು ಯಾರು ? ಎಲ್ಲಿಂದ ಬಂದೆ ? ನಿನ್ನ ಜೊತೆ ಇದ್ದ ಗಂಡಸು ಯಾರು ? ನಿನ್ನ ಮೇಲೆ ಅನೇಕ ಬಾರಿ ಬಲಾತ್ಕಾರ ನಡೆದಿದೆ. ವಿವರ ತಿಳಿದರೆ. ಪೊಲೀಸ್ ಕಂಪ್ಲೆಂಟ್ ಕೊಡಬಹುದು. ನಿನ್ನನ್ನು ನೋಡಿದರೆ ಸುಸಂಸ್ಕೃತರ ಮನೆಯವಳಂತೆ ಕಾಣುತ್ತೀಯ" ಆ ಹೆಂಗಸು ಆತ್ಮೀಯತೆಯನ್ನು ತೋರಿದಳು. ಮಾಲಾ ಸ್ವಲ್ಪ ಸಮಾಧಾನ ಮಾಡಿಕೊಂಡಳು. ತನ್ನ ಕತೆಯನ್ನೆಲ್ಲ ಈ ಹೆಂಗಸಿಗೆ ಹೇಳುವುದು ಬೇಡ... ಎಂದುಕೊಂಡು, ತನ್ನ ಹೆಸರನ್ನು, ಊರನ್ನು ಮರೆ ಮಾಚಿ, ತನ್ನನ್ನು ಯಾರೋ ಅಪಹರಿಸಿ ಕರೆತಂದುದನ್ನು ಮಾತ್ರ ಹೇಳಿದಳು.

"ನೀನೇನೂ ಹೆದರಬೇಡ. ನಾನು ಮಹಿಳಾ ಆಶ್ರಮದ ಸೆಕ್ರೆಟರಿ. ನೀನು ಚೆನ್ನಾಗಿ ಸುಧಾರಿಸಿಕೊಳ್ಳುವವರೆಗೂ ಇಲ್ಲಿರಬಹುದು. ಆಮೇಲೆ ನಾನು ನಿನ್ನನ್ನು ನಿನ್ನ ಮನೆಗೆ ತಲುಪಿಸುತ್ತೇನೆ. ನಿನ್ನ ಮನೆಯವರ ಅಡ್ರೆಸ್ಸು ಕೊಡು" ಎಂದಳು.

"ನನಗೆ ಯಾರೂ ಇಲ್ಲ. ನಾನು ತಬ್ಬಲಿ. ನನ್ನನ್ನು ಸಾಕಿ ಬೆಳೆಸಿದವರು ಈಗ ಬದುಕಿಲ್ಲ. ಕೆಲಸ ಹುಡುಕುತ್ತಿದ್ದೆ. ಆ ಸಮಯದಲ್ಲಿ ಯಾರೋ ನನ್ನನ್ನು ಅಪಹರಿಸಿ ಇಲ್ಲಿಗೆ ಕರೆತಂದಿದಾರೆ... ನಾನು ಎಲ್ಲಿಗೆ ಹೋಗಲಿ ?" ಕಷ್ಟಪಟ್ಟು ಸುಳ್ಳನ್ನು ಹೇಳಿದಳು.

ಒಂದೆರಡು ದಿನಗಳಲ್ಲಿ ಮಾಲಾ ಸುಧಾರಿಸಿಕೊಂಡಳು. ಸಧ್ಯ ನನ್ನ ಜೊತೆ ನನ್ನ ಮಗು ಇಲ್ಲದುದು ಒಳ್ಳೆಯದೇ ಆಯಿತು. ಇಲ್ಲದಿದ್ದರೆ ಅವನನ್ನು ಅಪಹರಿಸಿರುತ್ತಿದ್ದ ಈ ಧ್ರುವ ಈಗಾಗಲೇ ನಾನು ನಾಪತ್ತೆಯಾಗಿ ನಾಲ್ಕಾರು ದಿನಗಳು ಕಳೆದಿವೆ. ಮಧು ನನ್ನನ್ನು ಹುಡುಕಿಸುವ ಪ್ರಯತ್ನ ಮಾಡುತ್ತಿರ ಬಹುದೇ? ನಾನು ಇಲ್ಲಿ ಇರುವ ವಿಷಯವನ್ನು ತಿಳಿಸುವುದೋ ಬೇಡವೋ... ಧ್ರುವ ಅವನ ಆಪ್ತ ಸ್ನೇಹಿತ, ಬಿಸಿನೆಸ್ ಪಾರ್ಟನರ್... ಎಲ್ಲಾ ಆಗಿದ್ದವನು. ಈ ಬೆದರಿಕೆಯನ್ನೂ ಹಾಕಿದ್ದ... ಮಧೂಗೆ ಏನನ್ನಿಸಬಹುದು? ಇದೇ ನೆವದಲ್ಲಿ ಧ್ರುವ – ನಾನು ಒಟ್ಟಿಗೇ ಇರುವಂತಾಯಿತಲ್ಲ ಅಂತಂದುಕೊಂಡು ಸುಮ್ಮನಾಗಿಬಿಟ್ಟರೇ... ಏನೇ ಆಗಲೀ, ತಾನು ಧ್ರುವನ ಕೈಗೆ ಸಿಕ್ಕಿ ಬೀಳ ಬಾರದು. ಮೊದಲು ಇಲ್ಲಿಂದ ಹೋಗುವ ಪ್ಲಾನ್ ಮಾಡಬೇಕೆಂದುಕೊಂಡಳು.

ಮಹಿಳಾ ಆಶ್ರಮದ ಸೆಕ್ರೆಟರಿ ನುಡಿದಳು. "ಈ ದಿನ ಭಗಿನಿಯರ ದಿನಾಚರಣೆ. ನಾವು ಒಂದು ಸಣ್ಣ ಕಾರ್ಯಕ್ರಮವನ್ನು ಇಟ್ಟುಕೊಂಡಿದ್ದೇವೆ. ಅಲ್ಲಿಗೆ ನಮ್ಮ ಅಧ್ಯಕ್ಷರೂ ಬರುತ್ತಾರೆ. ನಿನ್ನನ್ನೂ ಅಲ್ಲಿಗೆ ಕರೆದುಕೊಂಡು ಹೋಗ್ತೀನಿ. ಆಕೆ ತುಂಬಾ ಒಳ್ಳೆಯವರು. ನಿನಗೆ ಖಂಡಿತಾ ಸಹಾಯ ಮಾಡ್ತಾರೆ" ಮಾಲಾ ತಲೆಯಾಡಿಸಿದಳು.

○ ○ ○

ವೇದಿಕೆಯ ಮೇಲೆ ಕುಳಿತಿದ್ದ ಅಧ್ಯಕ್ಷೆ ಸುಮಿತ್ರಾ ದೇವಿ, ಮಾಲಾಳನ್ನು ಗುರುತಿಸಿದಳು. ಮಾಲಾ ತಲೆ ಎತ್ತಿದ್ದರೂ ಎತ್ತಲೋ ನೋಡುತ್ತಿದ್ದಳು. ಸುಮಿತ್ರಾ ದೇವಿಗೆ ಎಲ್ಲರೆದುರಿನಲ್ಲಿ ಮಾಲಾಳನ್ನು ಮಾತನಾಡಿಸುವುದು ಕಷ್ಟವೆನಿಸಿತ್ತು. ಸೆಕ್ರೆಟರಿಯನ್ನು ಕರೆದು ಕಿವಿಯಲ್ಲಿ ಏನನ್ನೋ ಉಸುರಿದಳು. ತಾನು ಎದ್ದು ಹೊರಟು ಹೋಗಿದ್ದಳು. ಸ್ವಲ್ಪ ಹೊತ್ತಿನ ನಂತರ ಸೆಕ್ರೆಟರಿ, ಮಾಲಾಳನ್ನು ಸುಮಿತ್ರಾ ದೇವಿಯ ಮನೆಗೆ ಕರೆತಂದುಬಿಟ್ಟಳು.

"ನಮ್ಮ ಅಧ್ಯಕ್ಷೆ ನಿಮ್ಮ ಹತ್ತಿರ ಪರ್ಸನಲ್ ಆಗಿ ಮಾತನಾಡಬೇಕಂತೆ. ನಾನು ಅವರಿಗೆ ಎಲ್ಲಾ ವಿಷಯವನ್ನೂ ಹೇಳಿದೀನಿ. ನಾನು ಆಮೇಲೆ ಬಂದು ಕರೆದುಕೊಂಡು ಹೋಗ್ತೀನಿ" ಎಂದು ಹೇಳಿ ಹೊರಟುಹೋಗಿದ್ದಳು. ಅಷ್ಟರಲ್ಲಿ ಸುಮಿತ್ರಾ ದೇವಿ ಪ್ರತ್ಯಕ್ಷಳಾಗಿದ್ದಳು.

"ಕೂತ್ಕೋ ಮಾಲಾ... ಯಾವಾಗ ಬಂದೆ" ಎಂದು ಆಕೆ ಮಾತನಾಡಿಸಿದಾಗ ಮಾಲಾ ಬೆಚ್ಚಿಬಿದ್ದು ಕತ್ತೆತ್ತಿ ನೋಡಿದಳು.

ಗಲಿಬಿಲಿಗೊಂಡಿದ್ದಳು ಧ್ರುವನ ತಾಯಿ!

"ನಾನು ನಿನ್ನನ್ನು ಗುರುತಿಸಿದೆ. ಅಲ್ಲಿ ಮಾತು ಬೇಡ ಅಂತ ಮನೆಗೆ ಕರೆಸಿದೆ. ಸೆಕ್ರೆಟರಿ ಏನೇನೋ ಹೇಳಿದ್ರು ಅದೆಲ್ಲಾ ನಿಜಾನಾ!" ಮಾಲಾ ಮಾತನಾಡಲಿಲ್ಲ.

"ನಿನ್ನ ಆರೋಗ್ಯ ಇನ್ನೂ ಸರಿ ಹೋಗಿಲ್ಲ ಅಂತ ಕಾಣತ್ತೆ. ನೀನು ಇಲ್ಲಿ ಧೈರ್ಯವಾಗಿರು. ಇಲ್ಲಿ ನಿನಗೆ ಯಾವ ತೊಂದರೆಯೂ ಇಲ್ಲ."

"ನಾನು ಮೊದಲು ಧ್ರುವನ ಹತ್ತಿರ ಮಾತನ್ನಾಡಬೇಕು" ಉಗುಳು ನುಂಗಿದಳು.

"ಅವನು ಊರಿನಲ್ಲಿಲ್ಲ. ಸಿಂಗಪೂರ್‌ಗೆ ಹೋಗಿದಾನೆ. ವಾರದ ಮೇಲಾಯ್ತು. ನಾನು ಅವನಿಗೆ ಫೋನು ಮಾಡ್ತೀನಿ. ನೀನು ಬಂದಿರುವ ವಿಷಯ ತಿಳಿದರೆ, ತಕ್ಷಣವೇ ಎಲ್ಲಾ ಕೆಲಸಗಳನ್ನು ಬಿಟ್ಟು ಬಂದುಬಿಡ್ತಾನೆ."

"ಈಕೆ ನಿಜ ಹೇಳುತ್ತಿರಬಹುದೇ? ಧ್ರುವ ಊರಿನಲ್ಲಿಲ್ಲವಾದರೆ ಇದು ಯಾರ ಕೆಲಸ? ಈಕೆಗೆ ನನ್ನ ಬಗ್ಗೆ ಏನನ್ನಿಸಬಹುದು?"

"ಕೂತ್ಕೋ ನಿಂತೇ ಇದ್ದೀಯಲ್ಲ. ಏನು ನಡೀತು ಅಂತ ವಿವರವಾಗಿ ಹೇಳು. ನಾನು ನಿನಗೆ ಸಹಾಯ ಮಾಡ್ತೀನಿ. ಅಂದ್ಹಾಗೆ ನನ್ನ ಮೊಮ್ಮಗ ಎಲ್ಲಿ? ನಿನ್ನ ಜೊತೆ ಬರಲಿಲ್ವಾ?... ಮಾಲಾ ಮತ್ತೊಮ್ಮೆ ಬೆಚ್ಚಿದಳು. ಆದರೂ ಸಾವರಿಸಿಕೊಂಡಳು.

"ಯಾವ ಮಗು? ನನಗೆ ಗೊತ್ತಾಗಲಿಲ್ಲ..."

"ಇನ್ಯಾವ ಮಗು? ನಮ್ಮ ಧ್ರುವನ ಮಗು... ನೀನು ಪ್ರೆಗ್ನೆಂಟ್ ಆಗಿದ್ದಾಗಲೂ ನಿನ್ನ ಹೆಲ್ತ್ ಸರಿಯಾಗಿರಲಿಲ್ಲ. ಅದಕ್ಕೆ ಯಾವುದೋ ಆಶ್ರಮದಲ್ಲಿದೀಯ ಅಂತ ಹೇಳಿದ್ದ."

"ಇಲ್ಲ. ನನಗೆ ಯಾವ ಮಗುವೂ ಇಲ್ಲ. ಸುಳ್ಳು ಹೇಳಿದ್ದೆ ನಾನು ಪ್ರೆಗ್ನೆಂಟ್ ಅಂತ."

"ಯಾಕೆ? ಸುಳ್ಳು ಹೇಳುವಂತಹ ಪ್ರಮೇಯ ಏನಿತ್ತು?"

"ನಿಮಗೆ ಗೊತ್ತು... ನನಗೂ ಧ್ರುವನಿಗೂ ಯಾವ ಸಂಬಂಧವಿರಲಿಲ್ಲ. ನನಗೆ ಡೈವೋರ್ಸ್ ಬೇಕಾಗಿತ್ತು. ಅದಕ್ಕೇ ಸುಳ್ಳು ಹೇಳಿದೆ."

"ಧ್ರುವ ನಿನ್ನನ್ನು ಮನಸಾರೆ ಮೆಚ್ಚಿ ಮದುವೆಯಾದ. ಅವನಿಗೆ ನಿರಾಸೆಯಾಗಿದೆ. ಈಗ ಈ ವಿಷಯ ತಿಳಿದರಂತೂ ಅವನ ಹೃದಯ ಒಡೆದು ಹೋಗುತ್ತೆ. ನೀನು ಅವನಿಗೆ ಸುಳ್ಳು ಹೇಳಬಾರದಾಗಿತ್ತು. ಅದಕ್ಕೇ

ಹೀಗೆಲ್ಲಾ ಆದದ್ದು..."

"ಈಗ ನಡೆಯಬಾರದ್ದು ನಡೆದುಹೋಯಿತು. ನಾನು ಇದನ್ನೆಲ್ಲಾ ಧ್ರುವನೇ ಮಾಡಿದ್ದು ಅಂತ ಅಂದುಕೊಂಡಿದ್ದೆ. ಈಗ ಧ್ರುವನಿಗೆ ಡೈವೋರ್ಸ್ ಕೊಡದೆ ವಿಧಿಯಿಲ್ಲ."

"ಧ್ರುವ ಇಂತಹ ನೀಚ ಮಟ್ಟಕ್ಕೆ ಇಳಿಯಬಹುದು ಅಂತ ಹೇಗೆ ಅಂದು ಕೊಂಡೆ. ಅವನು ಸಭ್ಯ. ನನ್ನ ಮಗ ಅಂಥೋನಲ್ಲ... ಈಗ ಅವನು ನಿನ್ನ ಮೇಲೆ ಯಾವ ಭರವಸೆಯನ್ನು ಇಟ್ಟುಕೊಳ್ಳಲಾರ. ಡೈವೋರ್ಸ್ ಕೊಟ್ಟೇ ಕೊಡ್ತಾನೆ. ಆದರೆ ಡೈವೋರ್ಸ್ ತೆಗೆದುಕೊಂಡು ಏನ್ಮಾಡ್ತೀಯ ? ನಿನ್ನನ್ನ ಮದುವೆಯಾಗೊಕೆ ಯಾರು ಸಿದ್ಧರಾಗ್ತಾರೆ!" ಮಾಲಾಳ ಮುಖ ಕಪ್ಪಾಯಿತು. ತನ್ನ ಮೇಲೆ ಆರೋಪವನ್ನು ಹೊರಿಸಲು ಇವರಿಗೆ ಒಂದು ಅವಕಾಶ ಸಿಕ್ಕಿತಲ್ಲ ಎಂದು ಬೇಸರವಾಗಿತ್ತು. ಎದ್ದು ನಿಂತಳು.

"ನಾನಿನ್ನು ಹೋಗ್ತೀನಿ" ಎಂದಳು.

"ಎಲ್ಲಿಗೆ ಹೋಗ್ತೀಯ ? ಇಲ್ಲಿ ನಿನಗೆ ಯಾರು ಪರಿಚಯಸ್ಥರಿದ್ದಾರೆ ? ಇದು ಬಾಂಬೆ. ನಿನ್ನನ್ನು ಯಾರೂ ಏನೂ ಕೇಳುವುದಿಲ್ಲ. ನಾವು ಆಶ್ರಮವನ್ನು ನಡೆಸುತ್ತಿರುವುದು ನಿನ್ನಂತಹ ಅಬಲೆಯರಿಗೆ ಸಹಾಯ ಮಾಡಲೆಂದೇ. ನನ್ನ ಸೊಸೆಯಾಗಿ ನೀನು ಅಶ್ರಮದಲ್ಲಿರುವುದು ನನಗೆ ಇಷ್ಟವಿಲ್ಲ. ನೀನು ಇಲ್ಲೇ ನಮ್ಮ ಮನೆಯಲ್ಲೇ ಇರಬಹುದು. ನಾನು ಮಧುಕರನಿಗೆ ಫೋನು ಮಾಡ್ತೀನಿ. ಅವನೇ ಬಂದು ಕರೆದುಕೊಂಡು ಹೋಗಲಿ. ಇಲ್ಲಿ ನಿನಗೆ ಯಾವ ತೊಂದರೆಯೂ ಇಲ್ಲ. ಧೈರ್ಯವಾಗಿರು."

ಆಕೆಯ ಮಾತುಗಳು ಅವಳಿಗೆ ಹಿಡಿಸಲಿಲ್ಲವಾದರೂ, ತಾನು ಉಪಾಯವಾಗಿ ಇಲ್ಲಿಂದ ಹೊರಗೆ ಹೋಗಬೇಕು. ಅಲ್ಲಿಯವರೆಗೂ ತಾನು ಇಲ್ಲಿರುವುದೇ ಕ್ಷೇಮ ಎಂದುಕೊಂಡು ಸುಮ್ಮನಾದಳು.

"ಹೋಗು. ಈ ರೂಮಿನಲ್ಲಿ ನೀನು ರೆಸ್ಟ್ ತಗೋ. ನಾನು ನಿನಗೆ ಬೇಕಾದ ಬಟ್ಟೆಗಳನ್ನು ತರಿಸ್ತೀನಿ" ಎಂದು ಹೇಳಿ ರೂಮಿನ ಕಡೆ ಕೈ ಮಾಡಿ ತೋರಿದಳು. ಮಾಲಾ ವಿಧಿಯಿಲ್ಲದೆ ರೂಮಿಗೆ ನಡೆದಳು. ಸುಮಿತ್ರಾ ಬಾಯಿಯ ತುಟಿಯಂಚಿನಲ್ಲಿ ಮೂಡಿದ ಕೊಂಕು ನಗೆಯನ್ನು ಅವಳು ಕಾಣಲಿಲ್ಲ.

✉ ✉ ✉

ವಸುಧಾ ಕಳಿಸಿದ್ದ ಈ-ಮೇಲ್‌ಗೆ ಮಾಲಾಳಿಂದ ಪ್ರತ್ಯುತ್ತರ ಬರದಿದ್ದಾಗ,

ವಸುಧಾ ಆತಂಕದಿಂದ ತನ್ನ ಚಿಕ್ಕಮ್ಮನಿಗೆ ಫೋನು ಮಾಡಿದ್ದಳು. ನಾಲ್ಕು ದಿನಗಳಿಂದ ಅವಳು ಊರಿನಲ್ಲಿಲ್ಲವೆಂದು ತಿಳಿದಾಗ ಗಾಬರಿಯಾಗಿತ್ತು. ಯಾರಿಗೂ ಹೇಳದೇ ಅವಳು ಎಲ್ಲಿಗೆ ಹೋದಳು ? ಭಾಸ್ಕರನನ್ನು ನೋಡಲು ಹೊರಟು ಹೋಗಿರಬಹುದೇ ಎಂದುಕೊಂಡು ಅವನಿಗೆ ಫೋನು ಮಾಡಿದ್ದಳು. ಆದರೆ ಅವನು ರಜದ ಮೇಲೆ ನಂಜನಗೂಡಿಗೆ ಹೋಗಿದ್ದಾನೆಂದು ತಿಳಿಯಿತು. ಆಫೀಸಿನಲ್ಲಿ ವಿಚಾರಿಸಿದಾಗ ರಘು ಸಹ ಊರಲ್ಲಿಲ್ಲವೆಂದು. ಅದು ಅವನ ಕೈವಾಡವೇ ಇರಬಹುದು ಎಂದು ಊಹಿಸಿ, ಅವನ ಬಗ್ಗೆ ವಿಚಾರಿಸಿದಾಗ, ಅವನ ಹಿನ್ನೆಲೆ ಯಾರಿಗೂ ತಿಳಿದೇ ಇರಲಿಲ್ಲ. ಆ ಸಮಯದಲ್ಲಿ ಇದ್ದಕ್ಕಿದ್ದಂತೆ ನೆನಪಿಗೆ ಬಂದವನು ಪ್ರತಾಪ. ಪ್ರತಾಪನೊಡನೆ ಮಾತನಾಡಬೇಕೆಂದು ಕೊಂಡು ಫೋನು ಮಾಡಿದಾಗ ಲೈನಿಗೆ ಬಂದವಳು ಸುಮಿತ್ರಾದೇವಿ. ಧ್ರುವ, ಪ್ರತಾಪ ಇಬ್ಬರೂ ಊರಲ್ಲಿಲ್ಲವೆಂದು ಆಕೆ ಹೇಳಿದಾಗ, ದಿಕ್ಕು ತೋಚ ದಂತಾಗಿತ್ತು. ಮಧುಕರನೊಡನೆ ಹೇಳಿದಾಗ, ಅವನು ಇವಳ ಮೇಲೇ ರೇಗಿದ್ದ.

"ನಿನ್ನ ಸ್ನೇಹಿತೆಗೆ ಬುದ್ಧಿ ಸರಿಯಿಲ್ಲ. ಮತ್ತೆ ಯಾರ ಹಿಂದೆ ಎಲ್ಲಿ ತಿರುಗುತ್ತಿದ್ದಾಳೋ... ಒಂದು ಸಾರಿ ಹತ್ತಿದ ಚಾಳಿ ಅಷ್ಟು ಸುಲಭವಾಗಿ ಬಿಡುಲ್ಲ" ಎಂದಿದ್ದ. ವಸುಧಾ ಪೆಚ್ಚಾದಳು.

"ದಯವಿಟ್ಟು ಹೀಗೆಲ್ಲಾ ಮಾತನಾಡಬೇಡಿ. ಅವಳೂ ಹೆಣ್ಣು. ಇನ್ನೂ ಚಿಕ್ಕವಳು. ಒಂದು ಸಲದ ಅನುಭವವೇ ಸಾಕು ಅವಳಿಗೆ. ರಘು ಅನ್ನುವ ಅವಳ ಕಲೀಗ್ ಮೇಲೆ ನನಗೆ ಅನುಮಾನ. ಅವನು ಎಲ್ಲಿಗಾದರೂ ಕರೆದು ಕೊಂಡು ಹೋಗಿರಬಹುದಾ ಅಂತ..."

"ನಾನು ಪೊಲೀಸ್ ಕಂಪ್ಲೆಂಟ್ ಕೊಡ್ತೀನಿ. ರಘೂನ ಎಲ್ಲೇ ಇದ್ದರೂ ಒದ್ದು ಎಳೆತಂದು ಜೈಲಿಗೆ ಹಾಕಿಸ್ತೀನಿ. ಅದಕ್ಕೇ ನಾನು ಹೇಳಿದ್ದು. ಗಂಭೀರವಾಗಿ ಧ್ರುವನ ಜೊತೆ ಇದ್ದಿದ್ರೆ...? ಇಂಥಾ ಹಲ್ಕಾಗಳು ಕಾಯುತ್ತಿರುತ್ತವೆ, ಮಾಲಾಳಂಥೋರು ಸಿಗ್ತಾರಾ ಅಂತ..."

"ಏನೇನೋ ಮಾತ್ನಾಡಬೇಡಿ. ಅವಳೀಗ ಮಾಲಾ ಅಲ್ಲ. ಜ್ವಾಲಾ. ಅವಳ ವೇಷ ಭೂಷಣ ಎಲ್ಲಾ ಬದಲಾಗಿದೆಯಲ್ಲ."

"ವೇಷ ಭೂಷಣ ಬದಲಾದ್ರೆ... ಹೆಸರನ್ನು ಬದಲಾಯಿಸಿಕೊಂಡು ಬಿಟ್ರೆ? ಗುಣ ಎಲ್ಲಿ ಹೋಗುತ್ತೆ? ಹುಟ್ಟುಗುಣ ಸುಟ್ಟರೂ ಹೋಗದು ಅಂತ... ಆ ಹಾಳಾದೋನು ಭಾರ್ಗವನಿಂದ ಇವಳು ಕೆಟ್ಟಳು. ಅವನೇ ಹೇಳಿ

ಕೊಟ್ಟದ್ದು..." ಹ್ಞಾಂ ಅಂದ್ಹಾಗೇ ಭಾರ್ಗವನ ಹತ್ತಿರಕ್ಕೆ ಯಾಕೆ ಹೋಗಬಾರದು? ಮೊದಲು ಅವನು ಎಲ್ಲಿದಾನೆ ಅಂತ ಹುಡುಕಿಸಬೇಕು. ನನಗೆ ಅವನ ಮೇಲೇ ಬಹಳ ಅನುಮಾನ."

"ಹಾಗೇನಾದರೂ ಇದ್ದರೆ ಒಳ್ಳೆಯದೇ. ಆದಷ್ಟೂ ಬೇಗ ಅವರಿಬ್ಬರ ಮದುವೆ ಮಾಡಿಸಿಬಿಡೋಣ. ಆಮೇಲೆ ಎಲ್ಲರಿಗೂ ನೆಮ್ಮದಿ."

"ಇವಳಿಗೆ ಸ್ವಲ್ಪಸಾದ್ರೂ ಬುದ್ಧಿ ಬೇಡವಾ? ಈವರೆಗೆ ಆಗಿರುವ ಹಗರಣವೇ ಸಾಕಾಗಿದೆ. ಎತ್ಲಾಗಾದ್ರೂ ಹಾಳಾಗ್ಲೀ... ನಾನು ಹುಡುಕಿಸುಲ್ಲ. ಓಡಿ ಹೋದೋಳು ಮತ್ತೆ ಮನೆಗೆ ವಾಪಸ್ಸು ಬಂದರೆ, ನಾನಂತೂ ಖಂಡಿತಾ ಸೇರಿಸುಲ್ಲ.

ಹೀಗೆಲ್ಲಾ ಮಾತನಾಡಿದರೆ ಏನೂ ಉಪಯೋಗವಿಲ್ಲ. ಒಂದು ವೇಳೆ ಏನಾದ್ರೂ ಅಪಾಯ ಒದಗಿದ್ದರೆ?... ಪೇಪರ್ರಿನಲ್ಲಿ ಕಾಣೆಯಾಗಿದ್ದಾಳೆ ಅಂತ ಪ್ರಕಟಿಸಿದರೆ, ಪತ್ತೆಯಾಗುವುದು ಖಂಡಿತಾ..."

"ನಮ್ಮ ಮಾನ ಮರ್ಯಾದೇನ ನಾವೇ ಹರಾಜು ಹಾಕಿಕೊಂಡ ಹಾಗಾಗುತ್ತೆ."

"ಇರೋಳು ಒಬ್ಬಳು ತಂಗಿ. ನಿಮಗೂ ಜವಾಬ್ದಾರಿ ಇರಬೇಕು. ಕೈ ಕಟ್ಟಿ ಕುಳಿತರೆ ಹೇಗೆ? ನಾಳೆ ಅವಳೇ ನಮ್ಮನ್ನ ಹಂಗಿಸಿ ಅನ್ನುತ್ತಾಳೆ."

"ಸರಿ. ಇನ್ನೊಂದೆರಡು ದಿನ ಕಾಯೋಣ. ಅವಳ ಸುಳಿವು ಸಿಗದಿದ್ದರೆ, ಪೇಪರ್ರಿನಲ್ಲಿ ಹಾಕಿಸೋಣ. ಕಾವೇರಮ್ಮ ಸತ್ತು ಹೋದಾಗ, ಹೀಗೇ ಹೇಳದೇ ಕೇಳದೇ ನಿಮ್ಮ ಮನೇಲಿ ನಾಲ್ಕೈದು ದಿನಗಳು ಇದ್ದಳಲ್ಲ. ಮರೆತು ಬಿಟ್ಯಾ?"

"ಆಗಿನ ಪರಿಸ್ಥಿತಿಯೇ ಬೇರೆ. ಇದೇ ಬೇರೆ. ನನಗೆ ಧ್ರುವನ ಮೇಲೇ ಅನುಮಾನ. ಅದೇನಾದ್ರೂ ನಿಜವಾದರೆ, ಅವನು ನಮ್ಮ ಮಗುವನ್ನು ನಮ್ಮಿಂದ ದೂರ ಮಾಡುವುದು ಖಂಡಿತಾ... ನೆನೆಸಿಕೊಂಡರೇ ಭಯ ಆಗುತ್ತೆ."

"ಹಾಗೇನೂ ಆಗುಲ್ಲ. ಧೈರ್ಯವಾಗಿರು. ಆಕಾಶ್ ನಮ್ಮ ಮಗ. ಧ್ರುವನಿಂದ ದೂರ ಇರೋಕೆ ಪ್ರೆಗ್ನೆಂಟ್ ಅಂತ ಸುಳ್ಳು ಹೇಳಿದಾಳೆ ಅಂತ ಗೊತ್ತಾದ್ರೆ, ಅವನೇ ಅವಳನ್ನು ಕರೆತಂದು ಮನೆಗೆ ಬಿಡ್ತಾನೆ. ಬೇಕಾದ್ರೆ ನೋಡ್ತಿರು." ಮಧು ಅವಳಿಗೆ ಸಮಾಧಾನ ಹೇಳಿದ. ವಸುಧಾ ಮಗನನ್ನು ಬಲವಂತವಾಗಿ ತಬ್ಬಿಕೊಂಡಳು.

○ ○ ○

ಎರಡು ದಿನಗಳು ಕಳೆಯುವಷ್ಟರಲ್ಲಿ ಮಾಲಾಳಿಗೆ ಅಲ್ಲಿ ಇರಲು ಬೇಸರ ವಾಗತೊಡಗಿತ್ತು. "ಮಧುಗೆ ಫೋನು ಮಾಡಿ ತಿಳಿಸಿದೀನಿ. ಅವನು ಬಂದು ಕರೆದುಕೊಂಡುಹೋಗ್ತಾನೆ" ಅಂತ ಆಕೆ ಹೇಳಿದ್ದರೂ, ಅವಳಿಗೆ ನಂಬಿಕೆ ಬಂದಿರಲಿಲ್ಲ. ಮಧುವಾಗಲೀ, ವಸುಧಳಾಗಲೀ ಫೋನು ಮಾಡಿರಲಿಲ್ಲ. ವಸುಧಾ ಫೋನು ಮಾಡಿದುದನ್ನು ತಿಳಿಸಲಿಲ್ಲ.

ಅದೇ ರಾತ್ರಿ ಧ್ರುವ, ಪ್ರತಾಪ ಇಬ್ಬರೂ ವಾಪಸ್ಸಾಗಿದ್ದರು. ಸುಮಿತ್ರಾದೇವಿ, ಮಾಲಾ ಅಲ್ಲಿಗೆ ಬಂದು ಸೇರಿರುವ ವಿಷಯವನ್ನು ತಿಳಿಸಿದಳು. ಪ್ರತಾಪ ನಗೆಯಾಡಿದ್ದ.

"ನೋಡಿದ್ರಾ ಆಂಟೀ ? ಇದನ್ನೇ ಮಿರಾಕಲ್ ಅನ್ನೋದು. ಈ ಮನೆಗೆ ಬರೋಕೆ ಇಷ್ಟವಿಲ್ಲ ಅಂತ ತಲೆ ಹರಟೆ ಆಡುತ್ತಿದ್ದಳು ನಿಮ್ಮ ಸೊಸೆ. ಈಗ ನೋಡಿ ಎಲ್ಲಿಂದಲೋ ಬಂದು ಸೇರಿದ್ದು ಇಲ್ಲಿಗೇ."

"ಷ್. ಪ್ರತಾಪ್, ಹಾಗೆಲ್ಲಾ ಹಗುರವಾಗಿ ಮಾತನಾಡಬೇಡ. ಆಫ್ಟರ್ ಆಲ್ ಷೀ ಈಸ್ ಮೈ ವೈಫ್... ನನಗೆ ಇಷ್ಟವಾಗುಲ್ಲ."

"ಹೆಂಡ್ತೀ ಮುಖಾನ ಸರಿಯಾಗಿ ನೋಡಿಲ್ಲ. ಅವಳ ಹೆಸರನ್ನು ಕೇಳಿದ ಕೂಡಲೇ ನಾನು ಬೇಡವಾದ್ನಾ ?"

"ಹಾಗಲ್ಲ ಪ್ರತಾಪ್. ನೀನೊಂದು ತರಹ ಒರಟ. ಅವಳು ಹೆಂಡತಿಯಾಗಿ ಈ ಮನೆಗೆ ಬಂದಿಲ್ಲ ಅಂತ ನನಗೂ ಗೊತ್ತು. ಅವಳು ಈಗ ಅಮ್ಮನ ಗೆಸ್ಟ್. ಅವಳನ್ನು ಕ್ಷೇಮವಾಗಿ ಅವಳ ಮನೆ ತಲುಪಿಸುವುದು ನಮ್ಮ ಡ್ಯೂಟಿ. ಮಧು ಯಾವಾಗ ಬರ್ತೀನಿ ಅಂತಂದ ?"

"ಆದಷ್ಟೂ ಬೇಗ ಬರ್ತೀನಿ ಅಂತ ಹೇಳಿದ. ಈಗ ನೀನೇ ಬಂದಿದ್ದೀಯಲ್ಲ. ನೀನೇ ಏಕೆ ಕರೆದುಕೊಂಡು ಹೋಗಿ ಬಿಡಬಾರದು ?

"ಹೂಂ ನೋಡೋಣ. ಬೆಳಗಾಗಲಿ. ನಾನು ಮೊದಲು ಅವಳ ಹತ್ತಿರ ಮಾತನಾಡಿ ಕೇಳ್ತೀನಿ. ಅವಳು ನನ್ನ ಜೊತೆ ಬರೋದಾದ್ರೆ.. ಹೋಗಿ ಬಿಟ್ಟು ಬರ್ತೀನಿ"

ಈ ಮಾತು ಕತೆಗಳೆಲ್ಲ ಮಾಲಾಳಿಗೆ ಕೇಳಿಸಿತ್ತು. ಇದೆಲ್ಲ ಅವರುಗಳು ಆಡುತ್ತಿರುವ ನಾಟಕ ಎಂದು ಅವಳಿಗೆ ಗೊತ್ತಾಗಲಿಲ್ಲ. ಸಧ್ಯ ಇಲ್ಲಿಂದ ಆದಷ್ಟು ಬೇಗ ತೊಲಗಿದರೆ ಸಾಕು ಎಂದುಕೊಂಡು, ಮುಸುಕೆಳೆದು ಮಲಗಿದಳು.

"ಧ್ರುವ ನಿನ್ನ ಹತ್ತಿರ ಮಾತನಾಡಬೇಕಂತೆ..." ಸುಮಿತ್ರಾದೇವಿ ಹೇಳಿದಾಗ

ಮಾಲಾ ಎದ್ದಳು.

"ಬೇಡ. ನೀನೇನೂ ಹೊರಕ್ಕೆ ಹೋಗಬೇಡ. ಅವನನ್ನೇ ಇಲ್ಲಿಗೆ ಕಳಿಸ್ತೀನಿ" ಧ್ರುವ ಕೆಲವೇ ನಿಮಿಷಗಳಲ್ಲಿ ರೂಮಿನ ಬಾಗಿಲ ಬಳಿಗೆ ಬಂದ.

"ನಾನು ಒಳಗೆ ಬರ್ಲಾ" ಎಂದು ಕೇಳಿದ. ಅವಳು ತಲೆಯಾಡಿಸಿದಳು.

"ಹೇಗಿದೀಯ ಮಾಲಾ ?" ಇದೆಲ್ಲಾ ಏನು ?"

"ನಂಗೇನೂ ಗೊತ್ತಿಲ್ಲ. ನಾನು ಇಲ್ಲಿಂದ ಹೋದಮೇಲೆ ಅವನು ಯಾರೇ ಆಗಿರಲಿ. ಅವನಿಗೆ ಶಿಕ್ಷೆ ಕೊಡಿಸ್ತೀನಿ."

"ಹೌದು. ಅವನಿಗೆ ಶಿಕ್ಷೆ ಆಗಲೇಬೇಕು. ನಾನು ನಿನಗೆ ಸಹಾಯ ಮಾಡ್ತೀನಿ. ನೀನು ಧೈರ್ಯವಾಗಿರು."

"ನನಗೆ ಯಾರ ಸಹಾಯವೂ ಬೇಡ."

"ನಾನು ಯಾರೋ ಹೊರಗಿನವನಲ್ಲ. ನಾನು ನಿನ್ನ ಪತಿ..."

"ಪತಿ ಪತ್ನಿಯರ ಸಂಬಂಧ ಎಂದೂ ಇರಲಿಲ್ಲ."

"ಅದಕ್ಕೆ ನೀನೇ ಕಾರಣ. ಹೋಗಲಿ ಬಿಡು. ನಿನಗೆ ಇಷ್ಟವಿಲ್ಲ ಅಂತ ಗೊತ್ತು. ನಾನು ಬಲವಂತ ಮಾಡುವುದಿಲ್ಲ. ಆದರೆ, ನನ್ನ ಸಹಾಯವೂ ಬೇಡ ಅಂತ ಮೊಂಡುತನ ಮಾಡಬೇಡ."

"ನನ್ನನ್ನು ಮೊದಲು ಇಲ್ಲಿಂದ ಕಳಿಸಿಕೊಡಿ. ಅಷ್ಟು ಸಾಕು."

"ಹೋಗುವಂತೆ. ಹೇಗೂ ಬಂದಿದೀಯ. ನನ್ನ ಪತ್ನಿಯಾಗಿ, ಈ ಮನೆಗೆ ಸೊಸೆಯಾಗಿ ನೀನೆಂದೂ ಬರಲಿಲ್ಲ. ಈಗ ಅತಿಥಿಯ ತರಹ ಬಂದಿದೀಯ. ನಾಲ್ಕು ದಿನ ಇದ್ದು ಹೋಗು."

"ನನಗೆ ಇಲ್ಲಿ ಇರುವ ಮೂಡ್ ಇಲ್ಲ."

"ಸರಿ ಬಿಡು. ಮೊದಲೇ ನಿನ್ನ ಮೂಡ್ ಗಳಿಗೆಗೊಮ್ಮೆ ಬದಲಾಗುತ್ತಿತ್ತು. ಈಗ ಈ ಆಘಾತ ಬೇರೆ. ಅಂದ್ಹಾಗೆ ನಿನಗೆ ಯಾರ ಮೇಲಾದ್ರೂ ಅನುಮಾನ..."

"ನಿಜ ಹೇಳಲಾ ಧ್ರುವ... ನನಗೆ ನಿಮ್ಮ ಮೇಲೇ ಅನುಮಾನ..."

"ಓ, ಕಮಾನ್ ಮಾಲಾ. ತಮಾಷೆ ಮಾಡಬೇಡ."

"ಮತ್ತೆ? ನಿಮ್ಮ ಪತ್ನಿಯಾಗಿದ್ದವಳ ಮೇಲೆ ಯಾರೋ ರೇಪ್ ಮಾಡಿದ್ದರೂ ಇಷ್ಟು ಕೂಲ್ ಆಗಿದೀರಲ್ಲ."

"ಮತ್ತಿನ್ನೇನು ಮಾಡಲಿ ? ಪತ್ನಿಯೋ, ತಂಗಿಯೋ ಆಗಿದ್ದಿದ್ರೆ ನನಗೂ

ನಾಲ್ಕಾರು ಮಾತುಗಳನ್ನಾಡಲು ಅಧಿಕಾರವಿರುತ್ತಿತ್ತು. ನೀನು ಆ ಅಧಿಕಾರವನ್ನು ನನಗೆ ಕೊಡಲೇ ಇಲ್ಲ. ಆದರೂ ನಾನು ನಿನ್ನ ಹಿತೈಷಿ. ನಿನಗೆ ಯಾವ ಸಹಾಯ ಬೇಕಾದ್ರೂ ಕೇಳು. ನಾನು ಮಾಡ್ತೀನಿ."

"ಥ್ಯಾಂಕ್ಸ್" ಎಂದಷ್ಟೇ ಹೇಳಿದಳು. ಒಂದು ನಿಮಿಷ ತಡೆದು ಮತ್ತೆ ಕೇಳಿದ.

"ಈಗ ಭಾರ್ಗವ ಎಲ್ಲಿದ್ದಾನೆ ?"... ಅವಳನ್ನೇ ಗಮನಿಸುತ್ತಿದ್ದ.

"ನಂಗೊತ್ತಿಲ್ಲ" ಒರಟಾಗಿ ಹೇಳಿದಳು.

"ಪರವಾಗಿಲ್ಲ ಹೇಳು, ಭಾರ್ಗವ ನಿನ್ನನ್ನು ಮೊದಲಿನಿಂದ ಕಂಡವನು. ಅವನು ಅಷ್ಟು ಸುಲಭವಾಗಿ ನಿಮ್ಮನ್ನೆಲ್ಲಾ ಬಿಟ್ಟು ಹೋಗ್ತಾನಾ ? ಅವನು ಎಲ್ಲಿದ್ದಾನೆ ಅಂತ ಹೇಳು. ನಾನು ಅವನ ಹತ್ತಿರ ಮಾತನಾಡಿ ನಿಮ್ಮಿಬ್ಬರ ಮದುವೆ ಮಾಡಿಸ್ತೀನಿ."

"ಅದರ ಅಗತ್ಯವಿಲ್ಲ. ನಾನು ಹೀಗೆ ಒಂಟಿಯಾಗಿ ಇರುತ್ತೀನಿ."

"ಒಂಟಿಯಾಗಿದ್ರೆ ಏನು ಪರಿಣಾಮ ಅಂತ ತಿಳೀತಲ್ಲ. ನಿನ್ನಂತಹ ಸುಂದರ ಹೆಣ್ಣನ್ನು ಸುಮ್ಮನೆ ಬಿಟ್ಟು ಬಿಡ್ತಾರಾ ? ಒಂಟಿಯಾಗಿದ್ರೆ ? ಭಾರ್ಗವ ಒಪ್ಪದೇ ಇದ್ದರೆ ಬೇಡ. ಈಗಲೂ ಕಾಲ ಮಿಂಚಿಲ್ಲ. ನೀನು ಇಲ್ಲಿ ನನ್ನ ಪತ್ನಿಯಾಗಿ ಇರಬಹುದು. ನಾನು ನಿನ್ನನ್ನು ಖಂಡಿತಾ ಮುಟ್ಟೊಲ್ಲ."

"ಏನೂ ಬೇಕಿಲ್ಲ... ನಿಮ್ಮ ದೊಡ್ಡ ಬುದ್ಧಿಗೆ ಥ್ಯಾಂಕ್ಸ್."

"ದೊಡ್ಡ ಬುದ್ಧಿ ಏನಲ್ಲ. ಸ್ವಾರ್ಥ ಅಂತ ತಿಳ್ಕೋ. ಈಗಲೂ ನನಗೆ ಅನೇಕ ಕಡೆಯಿಂದ ಹೆಣ್ಣುಗಳು ಬರುತ್ತಿವೆಯಂತೆ. ಈಗ ನಾನು ಯಾರಿಗೂ ಮೋಸ ಮಾಡಲಾರೆ. ನಿನ್ನನ್ನು ಮೆಚ್ಚಿ ಮದುವೆ ಆದೆ. ಆದರೆ ನೀನು ನನಗೆ ಮೋಸ ಮಾಡಿದೆ. ನಾನು ನಿನ್ನನ್ನು ಕ್ಷಮಿಸಿದೆ. ಈಗ ನಿನ್ನ ತಪ್ಪು ಏನೂ ಇಲ್ಲ ಅಂತ ನನಗೆ ಗೊತ್ತು. ನಾನು ನಿನಗೆ ಬಾಳನ್ನು ಕೊಡುತ್ತೇನೆ."

"ಪ್ಲೀಸ್... ಏನೂ ಬೇಡ. ನನಗೆ ಯಾವುದೂ ಬೇಡ."

"ಸರಿ. ನಿನ್ನಿಷ್ಟ, ಒಂದೇ ಒಂದು ರಿಕ್ವೆಸ್ಟ್, ಸಧ್ಯದಲ್ಲೇ ನಂಜನಗೂಡಿಗೆ ಹೋಗುವ ಪ್ರೋಗ್ರಾಂ ಇದೆ. ಅಲ್ಲೀವರೆಗೂ ನಿನಗೆ ಇಷ್ಟವಿದ್ದರೆ ಇಲ್ಲಿ ಇರಬಹುದು. ಇಲ್ಲದೆ ಇದ್ದರೆ ಹೇಳಿಬಿಡು. ನಾನು ನಿನ್ನನ್ನು ಕಳಿಸುವ ಏರ್ಪಾಟು ಮಾಡ್ತೀನಿ."

"ಮಧೂಗೆ ಫೋನು ಮಾಡಿ. ಅವನು ಬಂದು ಕರೆದುಕೊಂಡು ಹೋಗ್ತಾನೆ."

"ಅವನು ನೀನ್ಯಾಕೆ ಇಲ್ಲಿಗೆ ಬಂದಿದೀಯ ಅಂತ ಕೇಳಿದ್ರೆ ಏನು ಹೇಳ್ತೀಯ? ಯಾವನೋ ಕಿಡ್ನಾಪ್ ಮಾಡಿ, ರೇಪ್ ಮಾಡಿದಾನೆ ಅಂತ ತಿಳಿದ್ರೆ ಅವನ ಮನಃಸ್ಥಿತಿ ಏನಾಗಬಹುದು? ಅವನೀಗ ಸಂಸಾರಸ್ಥ. ಹೆಂಡತಿ, ಮಗು ಎಲ್ಲಾ ಇದಾರೆ. ನಿನ್ನಂಥೋಳನ್ನ ಮನೇಲಿ ಇಟ್ಟುಕೊಳ್ಳೋಕೆ ಹಿಂದು ಮುಂದು ಯೋಚಿಸುಲ್ವಾ?"

"ವಸುಧಾ ಅಂಥೋಳಲ್ಲ. ಮಧು ನನಗೆ ಸ್ವಂತ ಅಣ್ಣ."

"ನಿನ್ನ ಸ್ವಂತ ಅಣ್ಣನೇ ನಿನಗೆ ಎಂತೆಂತಹ ಮೋಸ ಮಾಡಿದಾನೆ ಅಂತ ನನಗೆ ಗೊತ್ತಿಲ್ವಾ? ಆಗ ನೀನು ಪವಿತ್ರವಾಗಿದ್ದೆ. ಧೈರ್ಯದಿಂದ ಕತ್ತೆತ್ತಿ ಮಾತನಾಡುತ್ತಿದ್ದೆ. ಈಗ ಈ ಅಪವಿತ್ರ ದೇಹವನ್ನು ಇಟ್ಟುಕೊಂಡು, ಅವನ ಎದುರಿಗೆ ನಿಲ್ಲಲೂ ಸಹ ನಿನಗೆ ನಾಚಿಕೆಯಾಗುತ್ತೆ."

"ಮಿ. ಧ್ರುವ. ನಾನು ಸುಮ್ಮನಿದೀನಿ ಅಂತ ಏನೇನೋ ಮಾತನಾಡಬೇಡಿ. ಇದರಲ್ಲಿ ನನ್ನ ತಪ್ಪು ಏನೂ ಇಲ್ಲ. ಅದು ನಿಮಗೂ ಗೊತ್ತು, ಅವನಿಗೂ ಗೊತ್ತು. ಪತಿಯ ಸಂಬಂಧವನ್ನು ಹೇಳಿಕೊಂಡು, ನೀವೇ ನನಗೆ ಬಾಳನ್ನು ಕೊಡಲು ಸಿದ್ಧರಿರುವಾಗ, ಅವನು ನನ್ನ ರಕ್ತವನ್ನು ಹಂಚಿಕೊಂಡು ಹುಟ್ಟಿರುವವನು... ನನಗೆ ಮತ್ತೆ ಅನ್ಯಾಯ ಮಾಡಲಾರ."

"ನಿನ್ನ ನಂಬಿಕೆಗೆ ಖುಷಿಯಾಗುತ್ತದೆ. ಆದರೆ ನಿನ್ನ ಮಧು ಯಾಕೆ ಬರುವ ವಿಷಯವನ್ನು ತಿಳಿಸಿಲ್ಲ. ಮಮ್ಮಿ ಫೋನು ಮಾಡಿದ್ದಳಂತಲ್ಲ. ಇದುವರೆಗೂ ನೀನು ನಾಪತ್ತೆಯಾಗಿರುವ ವಿಷಯ ಎಲ್ಲರಿಗೂ ತಿಳಿದಿರುತ್ತೆ. ಅದಕ್ಕೇ ಅವನು ಸುಮ್ಮನಿದ್ದು ಬಿಟ್ಟಿದ್ದಾನೆ. ಹೇಗೂ ನೀನು ನಿನ್ನ ಗಂಡನ ಮನೇಲಿದ್ದೀಯಲ್ಲ ಅಂತ ಅವನಿಗೂ ಧೈರ್ಯ.

ಮಾಲಾಳ ತಲೆ ಗೊಂದಲಗಳಿಂದ ತುಂಬಿಹೋಯಿತು. ಧ್ರುವನ ಮಾತುಗಳಲ್ಲೂ ಅರ್ಥವಿದೆ. ಮಧು ಯಾಕೆ ಫೋನು ಮಾಡಿಲ್ಲ? ಮಧು ಹಿಂದಿನಂತೆಯೇ ಮೋಸ ಮಾಡಲು ಹವಣಿಸಿದರೆ? ನನಗೆ ಸಹಾಯ ಮಾಡುವವರು ಯಾರು? ಆಗ ಅವಳಿಗೆ ಭಾಸ್ಕರ ನೆನಪಿಗೆ ಬಂದ. ಆದರೆ ಧ್ರುವನನ್ನು ಕೇಳಲು ಇಷ್ಟವಾಗಲಿಲ್ಲ. ಭಾಸ್ಕರ ಇದೇ ಊರಿನಲ್ಲಿದಾನೆ. ಅವನನ್ನೊಮ್ಮೆ ಭೇಟಿಯಾದರೆ... ಅವನು ತನಗೆ ಖಂಡಿತಾ ಸಹಾಯ ಮಾಡುತ್ತಾನೆಂದುಕೊಂಡಳು. ಅವಳು ಮೌನದಿಂದ ಏನೋ ಆಲೋಚನೆ ಮಾಡುತ್ತಿರುವುದನ್ನು ಕಂಡು ಧ್ರುವ ಎದ್ದು ಹೋಗಿದ್ದ.

ಮತ್ತೆ, ಅವಳು ಹೊರಡುವ ಸುದ್ದಿಯನ್ನು ಎತ್ತದೆ ಇದ್ದಾಗ, ಧ್ರುವ ತನ್ನ ಪ್ಲಾನ್ ಫಲಿಸಿತು ಅಂತಂದುಕೊಂಡ. ಆದರೆ ಸುಮಿತ್ರಾದೇವಿ, ಮಾಲಾಳ ಮೇಲೆ ನಿಗವನ್ನು ಇಟ್ಟಿದ್ದಳು. ಅವಳು ಯಾರಿಗೂ ಫೋನು ಮಾಡಲಾಗದಂತೆ, ಸದಾ ಲಾಕ್ ಆಗಿರುತ್ತಿತ್ತು. ಧ್ರುವ ತನ್ನ ಮೊಬೈಲ್ ಫೋನನ್ನು ಸದಾ ತನ್ನ ಬಳಿಯೇ ಇಟ್ಟುಕೊಂಡಿರುತ್ತಿದ್ದನು. ಕೆಲಸದವಳು, ಅವಳೊಡನೆ ಮಾತನಾಡುವಂತಿರಲಿಲ್ಲ. ಆ ಸಮಯದಲ್ಲಿ ಇದ್ದಕ್ಕಿದ್ದಂತೆಯೇ ರಘು ಪ್ರತ್ಯಕ್ಷನಾದ. ಅವಳಿಗೂ ಆಶ್ಚರ್ಯವಾಗಿತ್ತು.

ಮಾಲಾಳನ್ನು ಕಂಡು ಆಶ್ಚರ್ಯವನ್ನು ನಟಿಸಿದ. "ಅರೇ ಜ್ವಾಲಾ... ನೀವು ಇಲ್ಲಿ ? ನೀವು ನಿಮ್ಮ ಊರಿಗೆ ಹೋಗಿದೀರಿ ಅಂತ ಅಂದುಕೊಂಡಿದ್ದೆ."

"ನಮ್ಮ ಮನೆಯವರು ಯಾರಾದ್ರೂ ನಮ್ಮ ಅಫೀಸಿಗೆ ಹುಡುಕಿಕೊಂಡು ಬಂದಿದ್ರಾ ?"

"ಏನೋ ನನಗೆ ಗೊತ್ತಿಲ್ಲ. ನಿಮ್ಮ ಮನೆಯವರು ಯಾರೂ ನನಗೆ ಪರಿಚಯವಿಲ್ಲವಲ್ಲ."

"ಹೌದು. ಅದ್ಸರಿ. ಅದೇನು ನೀವು ಇಲ್ಲಿ ? ಅಥವಾ ನನ್ನನ್ನು ಹುಡುಕಿಕೊಂಡು ಬಂದ್ರೋ ?"

"ಹಾಗೇನಿಲ್ಲ. ನಾನು ಈ ಮನೆಯ ಮಗ. ಸುಮಿತ್ರಾದೇವಿಯವರ ಎರಡನೇ ಮಗ. ಧ್ರುವನ ಒಬ್ಬನೇ ತಮ್ಮ."

"ಓ... ನಾನು ಈ ಮುಂಚೆ ನಿಮ್ಮನ್ನು ನೋಡಿರಲೇ ಇಲ್ಲ."

"ಅದಿರಲಿ. ನೀವು ಹೇಗೆ ಈ ಮನೆಗೆ.... ಐ ಮೀನ್ ಸಂಬಂಧಿಯೋ.. ಫ್ರೆಂಡೋ ಅಂತ ನನಗೆ ತಿಳಿಯಲಿಲ್ಲ" ಅಷ್ಟರಲ್ಲಿ ಸುಮಿತ್ರಾದೇವಿ ಅಲ್ಲಿಗೆ ಬಂದಳು.

"ನಾನು ಹೇಳ್ತೀನಿ. ಇವಳು ನಿನ್ನ ಅತ್ತಿಗೆ. ಮಾಲಾ..."

"ಮಾಲಾ ? ಮಾಲಾ ಅಲ್ಲ. ಇವರ ಹೆಸರು ಜ್ವಾಲಾ"

"ಜ್ವಾಲಾ... ಅದೆಂತಹ ಹೆಸರು ? ಇವಳ ಹೆಸರು ವನಮಾಲಾ ಅಂತ. ಮಾಲಾ ಅಂತ ಚಿಕ್ಕದಾಗಿ ಎಲ್ಲರೂ ಕರೀತಾರೆ... ಹೌದೋ ಅಲ್ಲವೋ ನೀನೇ ಹೇಳು." ಮಾಲಾಳನ್ನು ಕೇಳಿದಳು, ಅವಳು ಮಾತನಾಡಲಿಲ್ಲ.

"ಇಲ್ಲ ಮಮ್ಮೀ. ಇವರು ನನ್ನ ಕಲೀಗ್ ಜ್ವಾಲಾನೇ. ನೀವು ಎಲ್ಲೋ ಮಿಸ್ಟೇಕ್ ಮಾಡಿಕೊಂಡಿದ್ದೀರಿ."

"ಇಲ್ಲ. ನೀನು ಮಿಸ್ಟೇಕ್ ಮಾಡಿಕೊಂಡಿದೀಯ. ಇವಳು ಮಾಲಾ.. ನಿನಗೆ ಗೊತ್ತಿಲ್ಲ. ಏನೇನು ನಡೆದಿದೆ ಅಂತ. ಯಾರೋ ಕಿಡ್ನಾಪ್ ಮಾಡಿ, ಬಲಾತ್ಕಾರ ಮಾಡಿಬಿಟ್ಟಿದ್ದರು. ನಮ್ಮ ಸಂಸ್ಥೆಗೆ ಬಂದವಳನ್ನು ನಾನು ಗುರುತು ಹಿಡಿದು ನಮ್ಮ ಮನೆಗೆ ಕರೆದುಕೊಂಡು ಬಂದೆ. ಎಷ್ಟಾಗಲೀ ಈ ಮನೆಯ ಸೊಸೆ. ಅವಳ ರಕ್ಷಣೆ ನಮಗೆ ಸೇರಿದ್ದು."

"ನೀವು ಒಳ್ಳೆಯ ಕೆಲಸ ಮಾಡಿದ್ರೀ ಮಮ್ಮೀ... ಆ ಕಿಡ್ನಾಪರ್ ಯಾರೂಂತ ಪತ್ತೆಹಚ್ಚಿ ಅವನಿಗೆ ಶಿಕ್ಷೆ ಕೊಡಿಸಬೇಕು."

"ನಮ್ಮ ಮನೆಯ ಮರ್ಯಾದೆ ಹೋಗುತ್ತಲ್ಲೋ. ನಾವಾಗಿಯೇ ಪ್ರಚಾರ ಮಾಡಿದಂತಾಗುತ್ತದಲ್ಲ."

"ಹಾಗಂತ ಅನ್ಯಾಯದ ಮೇಲೆ ಪರದೆ ಎಳೆಯೋಕೆ ಆಗುತ್ತಾ? ಇವತ್ತಿನಿಂದ ಅತ್ತಿಗೆ ಜವಾಬ್ದಾರಿ ನನ್ನದು. ನನಗೆ ಪೊಲೀಸ್ ಕಮೀಷನರ್ ತನಕ ಪರಿಚಯವಿದೆ. ನೋಡ್ತಿರಿ. ಇನ್ನು ಕೆಲವೇ ದಿನಗಳಲ್ಲಿ ಅವನು ಯಾರು ಅಂತ ಪತ್ತೆಯಾಗುತ್ತದೆ. ಅವನು ಹೇಗಿದ್ದ ಅಂತ ನೀವೇನಾದ್ರೂ ನೋಡಿದ್ರಾ?"

"ಇಲ್ಲ. ನನಗೆ ಏನೂ ಗೊತ್ತಾಗ್ಲೇ ಇಲ್ಲ..." ತಲೆ ತಗ್ಗಿಸಿದಳು.

"ಮತ್ತೇನು ಉಪಯೋಗ ಜ್ವಾಲಾ ಅಂತ ಹೆಸರನ್ನಿಟ್ಟುಕೊಂಡು? ಸ್ವಲ್ಪ ಕೇರ್ ಫುಲ್ ಆಗಿರಬೇಕು! ನಿಮಗೆ ಯಾರ ಮೇಲಾದ್ರೂ ಅನುಮಾನವಿದೆಯಾ?"

"ಹೂಂ ಇದೆ. ನನಗೆ ನಿಮ್ಮ ಮೇಲೇ ಅನುಮಾನ. ನೀವು ಯಾಕೆ ಇಷ್ಟು ಎಕ್ಸೈಟ್ ಆಗಿದೀರಿ?"

"ಅಬ್ಬಾ! ಏನ್ರೀ ನೀವು ಹೀಗೆ ಹೆದರಿಸ್ತೀರಿ? ನನ್ನ ಎದೆ ಒಡೆದು ಹೋಗಿತ್ತು. ಅದ್ಸರಿ. ನೀವು ಯಾಕೆ ಇಷ್ಟು ಕೂಲ್ ಆಗಿದೀರಿ ಏನೂ ನಡೆದೇ ಇಲ್ಲ ಎಂಬಂತೆ."

"ಸಮಯ ಬರಲಿ ಅಂತ ಕಾಯ್ತಾ ಇದ್ದೀನಿ. ಇಂದಲ್ಲ ನಾಳೆ ಯಾರು ಅಂತ ಪತ್ತೆ ಆಗೇ ಆಗ್ತಾರೆ. ಆಗ ನನಗೆ ನಿಮ್ಮ ಸಹಾಯ ಬೇಕಾಗಬಹುದು."

"ಓ... ಷೂರ್" ಅವನು ಹಾಗೆ ಹೇಳುವಾಗ, ಬೆವೆತು ಹೋಗಿದ್ದ. ಕಣ್ಣಿನಲ್ಲಿ ಏನೋ ಭೀತಿ ಮಾಲಾಳ ಕಡೆ ಕತ್ತೆತ್ತಿ ನೋಡುವ ಧೈರ್ಯ ಸಾಲದೆ ಕಿಟಕಿಯ ಬಳಿಗೆ ಹೋಗಿ ನಿಂತ. ಇವಳಿಗೆ ನನ್ನ ಮೇಲೆ ಅನುಮಾನ ಬಂದಿರಬಹುದೇ? ಆ ಅನಿಸಿಕೆಯೇ ಅವನನ್ನು ತತ್ತರಿಸುವಂತೆ ಮಾಡಿತ್ತು.

ಇನ್ನೂ ಇಲ್ಲಿಯೇ ಇದ್ದರೆ ಅಪಾಯ ಎಂದುಕೊಂಡು ತನ್ನ ಪ್ರಯಾಣಕ್ಕೆ ರೆಡಿ ಮಾಡಿಕೊಂಡ.

ಂ ಂ ಂ

ಭಾಸ್ಕರನನ್ನೊಮ್ಮೆ ಭೇಟಿಯಾಗಿ ಮಾತನಾಡಬೇಕು. ಇದಕ್ಕೆ ರಘು ತನಗೆ ಸಹಾಯ ಮಾಡಬಹುದು ಎಂದುಕೊಂಡು ಅವನನ್ನು ಕೇಳಿದಳು.

"ಧ್ರುವನ ಆಫೀಸಿನಲ್ಲಿ ಭಾಸ್ಕರ ಅಂತ ಒಬ್ಬರಿದಾರೆ. ಅವರು ನನ್ನ ಕಲೀಗ್ ಆಗಿದ್ದರು. ಅವರನ್ನೊಮ್ಮೆ ನಾನು ನೋಡಬೇಕು."

"ಏನು ವಿಶೇಷ ? ಧ್ರುವ ಏನಂತಾನೋ..."

"ವಿಶೇಷ ಏನಿಲ್ಲ. ಒಟ್ಟಿಗೆ ಕೆಲಸ ಮಾಡಿದ್ದೆವು. ನನಗೆ ಗೈಡ್ ಆಗಿದ್ದರು. ಹೇಗೂ ಇಲ್ಲಿ ಇದೀನಲ್ಲ. ನೋಡಿ ಮಾತನಾಡಿಸೋಣ ಅಂತ."

"ಆಗಲಿ ನಾನು ಪ್ರಯತ್ನ ಮಾಡ್ತೀನಿ" ಎಂದು ಹೇಳಿದವನು, ಧ್ರುವನಿಗೆ ಈ ವಿಷಯ ತಿಳಿಸಿದ. "ಭಾಸ್ಕರ ಈಗ ಇಲ್ಲಿಲ್ಲ. ಅವನಿಗೆ ಈ ಊರು ಹಿಡಿಸಲಿಲ್ಲ. ಕೆಲಸಕ್ಕೆ ರಾಜೀನಾಮೆ ಕೊಟ್ಟು ಹೊರಟುಹೋದ" ಎಂದು ತಿಳಿಸಿದ. ರಘು ಇದನ್ನೇ ಮಾಲಾಳಿಗೆ ತಿಳಿಸಿದ. ಅವಳು ಬೇಸರಗೊಂಡಳು. ಅವನ ಮಾತನ್ನು ನಂಬಲಿಲ್ಲ.

ಅವಳು ಈಗ ಈ ಮನೆಯಲ್ಲಿ ಬಂಧಿಯಾಗಿದ್ದಳು. ವಾರ ಕಳೆದರೂ, ಮಧುವಾಗಲೀ, ವಸುಧಾಳಾಗಲೀ ಫೋನು ಮಾಡದಿದ್ದಾಗ, ಏನೋ ಅನುಮಾನ ಕಾಡತೊಡಗಿತ್ತು. ಇಲ್ಲಿಂದ ಹೋಗುವ ಬಗೆ ಹೇಗೆ ಎಂದು ಚಿಂತಿಸುತ್ತಿದ್ದಳು. ಬಾಗಿಲನ್ನು ಸರಿಸಿ, ರಘು ಒಳಗೆ ಬಂದಿದ್ದ.

"ಹೇಗಿದೀರಿ ಜ್ವಾಲಾ... ಅಲ್ಲ ಮಾಲಾ...." ನಗುತ್ತಾ ಪ್ರಶ್ನಿಸಿದ.

"ರಘು, ನನಗೊಂದು ಸಹಾಯ ಮಾಡ್ತೀರಾ ?"

"ಓ ಹೇಳಿ... ಒಂದಲ್ಲ ನೂರು ಸಹಾಯ ಮಾಡ್ತೀನಿ. ಆದರೆ ಬದಲಿಗೆ ನನಗೇನು ಕೊಡ್ತೀರಿ ?"

"ನೀವು ಏನು ಕೇಳ್ತೀರೋ ಅದು ?"

"ರಿಯಲೀ... ಓ...ಕೇ... ಹೇಳಿ" ಎನ್ನುತ್ತಾ ಅವಳ ಪಕ್ಕ ಬಂದು ಕುಳಿತಾಗ ಅವಳು ಸರಿದಳು.

"ನನ್ನನ್ನ ಇಲ್ಲಿಂದ್ದ ಕರೆದುಕೊಂಡು ಹೋಗಿ ನಮ್ಮೂರಿಗೆ ತಲುಪಿಸ್ತೀರಾ ?"

"ಯಾಕೆ ಇಷ್ಟು ಜೀಗ ಬೇಸರವಾಯ್ತಾ ನಿಮ್ಮ ಪತಿಯ ಮನೆ."

"ಇದು ಜೋಕ್ ಮಾಡುವ ವಿಷಯ ಅಲ್ಲ. ನಾನು ಧ್ರುವನ ಪತ್ನಿ ಅಲ್ಲ. ನನಗೆ ಇಲ್ಲಿರಲು ಇಷ್ಟವಿಲ್ಲ."

"ಈಗಲಾದ್ರೂ ಕಾಂಪ್ರಮೈಸ್ ಮಾಡ್ಕೊಳ್ಳಿ... ಇನ್ನು ಮುಂದೆ ನಿಮ್ಮ ಲೈಫ್ ಇನ್ನೂ ಕಷ್ಟವಾಗಬಹುದು ಅಲ್ವಾ?"

"ಹಾಗಂತ. ಇಷ್ಟವಿಲ್ಲದವನ ಜೊತೆ, ಅದೂ ಏಡ್ಸ್ ರೋಗಿಯ ಜೊತೆ ನಾನು ಇರುಲ್ಲ... ನೀವು ಸಹಾಯ ಮಾಡ್ತೀರೋ ಮಾಡುಲ್ವೋ?"

"ಮಾಡ್ತೀನಿ. ಆದರೆ ಒಂದು ಕಂಡೀಷನ್ನು. ನಿಮಗೆ ಧ್ರುವ ಹೇಗೂ ಇಷ್ಟವಿಲ್ಲವಲ್ಲ. ನಾನು ನಿಮ್ಮನ್ನು ಮದುವೆಯಾಗ್ತೀನಿ... ಐ ಲವ್ ಯು..."

"ಷಾಲಾ ಅವನನ್ನೇ ಬೆರಗಾಗಿ ನೋಡಿದಳು. ಇಲ್ಲ ನಾನು ಯಾರನ್ನೂ ಮದುವೆಯಾಗಲು ಇಷ್ಟವಿಲ್ಲ. ಮದುವೆ ಅಂದರೇ ಬೇಸರ ಬರುತ್ತೆ."

"ಏನೋ ನಡೆಯಬಾರದ್ದು ನಡೆದುಹೋಯಿತು. ಅದರಲ್ಲಿ ನಿಮ್ಮ ತಪ್ಪು ಏನೂ ಇಲ್ಲ ಅಂತ ನನಗೂ ಗೊತ್ತು. ನೀವು ಒಪ್ಪಿಕೊಂಡರೆ, ನಾನು ನಿಮ್ಮನ್ನು ಮಹಾರಾಣಿಯ ತರಹ ಇಟ್ಟುಕೊಳ್ತೀನಿ" ಎನ್ನುತ್ತಾ ಅವಳ ಸೊಂಟಕ್ಕೆ ಕೈ ಹಾಕಿದ. ಅವಳು ಸಿಡಿದೆದ್ದು ನಿಂತಳು.

"ನಾಚಿಕೆಯಾಗೊಲ್ವಾ ನಿಮಗೆ? ಹೀಗೆಲ್ಲಾ ಮಾತಾಡ್ತೀರಲ್ಲ. ನಾನು ನಿಮ್ಮ ಅತ್ತಿಗೆ ಸಮಾನ. ಸಂಬಂಧಗಳ ಬೆಲೆಯೇ ಗೊತ್ತಿಲ್ವಾ ನಿಮಗೆ...?"

"ನೀವು ಧ್ರುವನ ಪತ್ನಿಯೇ ಅಲ್ಲದಿದ್ದ ಮೇಲೆ ಅತ್ತಿಗೆ ಅನ್ನೋ ಸಂಬಂಧ ಹೇಗೆ? ಅದೂ ಅಲ್ಲದೆ ಈಗ. ನಿಮ್ಮಲ್ಲಿ ಯಾವ ಪವಿತ್ರತೆಯೂ ಇಲ್ಲ... ನಿಮ್ಮನ್ನು ಮದುವೆಯಾಗ್ತೀನಿ ಅಂತ ಅಂದಿದ್ದಕ್ಕೆ ನನ್ನನ್ನು ಮೆಚ್ಚಿಕೊಳ್ಳಿ..."

"ಪ್ಲೀಸ್ ರಘು, ಹೀಗೆಲ್ಲಾ ಮಾತನಾಡಬೇಡಿ. ನನ್ನಿಂದ ನಡೆದ ವಿಷಯಗಳನ್ನೆಲ್ಲಾ ಮರೆಯಲಾಗುವುದಿಲ್ಲ. ನನ್ನಿಂದ ಯಾರಿಗೂ ಸುಖ ಸಿಗುವುದಿಲ್ಲ..."

"ನಾನು ಅದನ್ನೆಲ್ಲಾ ಮರೆಯುವಂತೆ ಮಾಡ್ತೀನಿ" ಎನ್ನುತ್ತಾ ಅವಳನ್ನು ಬಲವಾಗಿ ತಬ್ಬಿಕೊಂಡ. ಅವಳು ಕೊಸರಾಡಿದಳು. ಅವನು ಬಿಡದೇ ಅವಳನ್ನು ಚುಂಬಿಸಲು ಪ್ರಯತ್ನಿಸುತ್ತಿದ್ದ. "ಐ ಲವ್ ಯು... ಐ ಲವ್ ಯೂ..." ಅವನು ಉದ್ವೇಗದಿಂದ ಹೇಳುತ್ತಿದ್ದ. ಅದೇ ಸಮಯಕ್ಕೆ ಒಳಬಂದ ಧ್ರುವ ಈ ದೃಶ್ಯವನ್ನು ನೋಡಿ "ಸ್ಟಾಪ್ ಇಟ್" ಎಂದು ಕೂಗಿ ಹೇಳಿದಾಗ, ರಘು ಅವಳಿಂದ ದೂರ ಸರಿದ.

"ಏನಿದೆಲ್ಲಾ.... ನನ್ನ ಮನೆಯಲ್ಲಿ... ನಾಚಿಕೆ ಆಗೋಲ್ಲ ನಿಮ್ಮಿಬ್ಬರಿಗೆ...

ಮಾಲಾ.... ಯಾಕೆ ಹೀಗೆ ಮಾಡ್ತಾ ಇದೀಯ ?"

"ನಾನೇನೂ ಮಾಡಲಿಲ್ಲ ಧ್ರುವ. ನಿಮ್ಮ ಈ ತಮ್ಮ ಒಳ್ಳೆಯವನಲ್ಲ.. ಅವನು ನನ್ನ ಮೇಲೆ ಬಲಾತ್ಕಾರ ಮಾಡೋಕೆ ಪ್ರಯತ್ನಿಸಿದ."

"ನಾನು ನಿನ್ನ ಮಾತನ್ನು ಹೇಗೆ ನಂಬಲಿ? ನೀವಿಬ್ರೂ ಸ್ನೇಹಿತರು... ನಿಮ್ಮಿಬ್ಬರ ಮಧ್ಯೆ ಏನೇನು ಸಂಬಂಧವಿದೆಯೋ...? ಅದರೆ ನನ್ನ ಎದುರಿಗೆ.... ಹೀಗೆಲ್ಲಾ... ಛೀ"

"ನನ್ನನ್ನು ತಪ್ಪು ತಿಳಿದುಕೊಂಡಿದೀರಿ. ಅಂಥದ್ದೇನೂ ನಡೆದಿಲ್ಲ..."

"ಇನ್ನೇನು ಬಾಕಿ ಇದೆ ಮಾಲಾ? ನನ್ನ ಮೇಲೆ ನಿನಗೆ ಪ್ರೀತಿಯಿಲ್ಲ ಅನ್ನೋದನ್ನ ಈ ರೀತಿ ತೋರಿಸ್ತಾ ಇದೀಯ. ಭಾರ್ಗವ ಸಿಗಲಿಲ್ಲ. ಈಗ ನನ್ನ ತಮ್ಮ ಬೇಕಾಯ್ತಾ ನಿನಗೆ? ಮಮ್ಮಿಗೆ ತಿಳಿದರೆ ಏನೆಂದುಕೊಳ್ತಾಳೆ ?"

"ಸಾರಿ ಧ್ರುವ. ಈ ಜ್ವಾಲಾ ನಿನ್ನ ಪತ್ನಿ ಅಂತ ನನಗೆ ಗೊತ್ತಿರ್ಲಿಲ್ಲ. ಐ ಲವ್ ಹರ್... ನಿಮ್ಮಿಬ್ಬರಿಗೂ ಯಾವ ಸಂಬಂಧವೂ ಇಲ್ಲ ಅಂತ ತಿಳಿದಾಗ, ನಾನು ಮದುವೆಗೆ ಪ್ರಪೋಸ್ ಮಾಡಿದೆ. ಒಪ್ಪಲಿಲ್ಲ. ಅದಕ್ಕೆ ಬಲವಂತ ಮಾಡಿದರೆ ಒಪ್ಪಬಹುದು ಅಂತ ಅನ್ನಿಸ್ತು..."

"ಬಲವಂತ ಮಾಡಿದ್ರೆ ಹೆಣ್ಣು ಒಪ್ಪಿಕೊಂಡು ಬಿಡ್ತಾಳಾ ?... ಹಾಗಾಗುವು ದಿದ್ದರೆ ನಾನು ಎಂದೋ ಬಲಾತ್ಕಾರ ಮಾಡಿರುತ್ತಿದ್ದೆ. ನಾನು ಇವಳಿಗೆ ಮರ್ಯಾದೆಯನ್ನು ಕೊಟ್ಟು ಅದರಿಸಿದೀನಿ. ಒಂದಲ್ಲ ಒಂದು ದಿನ ಇವಳಿಗೆ ನನ್ನ ಪ್ರೀತಿ ಅರ್ಥವಾಗುತ್ತೆ ಅಂತ ಕಾಯ್ತಾ ಇದೀನಿ. ಮನುಷ್ಯನಿಗೆ ಸಹನೆ ಬೇಕು. ದುಡುಕಬಾರದು."

"ಸಾಕು ನಿಲ್ಲಿಸಿ ನಿಮ್ಮ ಮಾತುಗಳನ್ನು" ಮಾಲಾ ಕಿರುಚಿದಳು. ಇಬ್ಬರೂ ತೀಕ್ಷ್ಣವಾಗಿ ಅವಳನ್ನೇ ನೋಡಿ ಅಲ್ಲಿಂದ ಸರಿದರು. ಆ ರಾತ್ರಿ ಕಳೆಯಿತು.

○ ○ ○

ಇದ್ದಕ್ಕಿದ್ದಂತೆಯೇ ಮಧು ಪ್ರತ್ಯಕ್ಷನಾದಾಗ, ಮಾಲಾಳಿಗೆ ಸಂತೋಷವೂ ಆಶ್ಚರ್ಯವೂ ಆಗಿತ್ತು. ಭಯ, ಸಂಕೋಚದಿಂದ ಅವನನ್ನು ನೇರವಾಗಿ ನೋಡಿ ಮಾತನಾಡಲು ಅಂಜಿದಳು.

"ಇದೆಲ್ಲಾ ಏನು ಮಾಲಾ? ಇಲ್ಲಿದೀನಿ ಅಂತ ಫೋನು ಮಾಡಿ ತಿಳಿಸಬಾರದಿತ್ತಾ ? ದಿಢೀರನೆ ಇಲ್ಲಿಗೆ ಬಂದುದಾದರೂ ಹೇಗೆ ?"

"ಮೊದಲು ನನ್ನನ್ನು ಇಲ್ಲಿಂದ ಹೊರಗೆ ಕರೆದುಕೊಂಡು ಹೋಗು. ಏನು

ನಡೀತು ಅಂತ ಆಮೇಲೆ ಹೇಳ್ತೀನಿ."

"ಧ್ರುವ ಎಲ್ಲಾ ಹೇಳಿದ. ಅಂತೂ ನನ್ನ ಗ್ರಹಚಾರ ಚೆನ್ನಾಗಿಲ್ಲ. ಇಲ್ಲಿ ಧ್ರುವನ ಮನೆಗೆ ಬಂದು ಸೇರದೇ ಇದ್ದಿದ್ದರೆ ನಿನ್ನ ಗತಿ ಏನಾಗುತ್ತಿತ್ತೋ...?"

"ಏನಾಗುತ್ತಿತ್ತು? ಯಾವುದಾದರೂ ಕೆಂಪು ದೀಪದ ಮನೆಗೆ ಸೇರುತ್ತಿದ್ದಳು. ಪ್ರತಾಪ ವ್ಯಂಗ್ಯವಾಗಿ ನುಡಿದಾಗ, ಮಧು ತೀಕ್ಷ್ಣವಾಗಿ ಅವನನ್ನೇ ನೋಡಿದ.

"ಥ್ಯಾಂಕ್ಸ್ ಧ್ರುವ. ನಿಮಗೆಲ್ಲಾ ಎಷ್ಟು ಥ್ಯಾಂಕ್ಸ್ ಹೇಳಿದರೂ ಸಾಲದು."

"ಎಷ್ಟು ಥ್ಯಾಂಕ್ಸ್ ಹೇಳಿದರೂ ಏನು ಪ್ರಯೋಜನ? ಕಳೆದು ಹೋದ ಶೀಲ ಮತ್ತೆ ವಾಪಸ್ಸು ಬರುತ್ತೇನಪ್ಪಾ!" ಸುಮಿತ್ರಾದೇವಿ ನುಡಿದಾಗ, ಮಧು ತಲೆ ತಗ್ಗಿಸಿದ. ಮಾಲಾ ಸುಮಿತ್ರಾದೇವಿಯನ್ನು ನೋಡಿದಳು. ಆಕೆ ನಕ್ಕಂತೆ ಅನ್ನಿಸಿತು.

"ನಡೀ ಮಧು – ಹೋಗೋಣ: ಇವರೆಲ್ಲ ಮಾತಿನಲ್ಲೇ ನನ್ನನ್ನು ಕೊಂದು ಹಾಕಿಬಿಡ್ತಾರೆ."

"ಸಾವು ಕೊಲ್ಲುವುದಕ್ಕೆ ಬಾಕಿ ಇನ್ನೇನಿದೆ? ನೀನಾಗಲೇ ಅರ್ಧ ಸತ್ತು ಹೋಗಿದೀಯ" ಪ್ರತಾಪ ಕರ್ಕಶವಾಗಿ ನುಡಿದಾಗ, ಮಧು ಮುಷ್ಠಿ ಬಿಗಿ ಮಾಡಿದ.

"ಏನಾಗಿದೆ ನಿಮಗೆ? ಮಾಲಾ ಇವತ್ತಿಗೂ ನನ್ನ ಪತ್ನಿ. ನಮ್ಮಿಬ್ಬರಿಗೆ ಇನ್ನೂ ಡೈವೋರ್ಸ್ ಆಗಿಲ್ಲ. ನೀನು ಅವಳಿಗೆ ಅವಮಾನ ಮಾಡಿದರೆ ನಾನು ಸಹಿಸುಲ್ಲ."

"ಸುಮ್ಮನಿರು ಧ್ರುವ. ನೀನು ಬಹಳ ಸದರ ಬಿಟ್ಟುಬಿಟ್ಟೀದೀಯ. ಪತ್ನಿ ಪತ್ನಿ ಅಂತ ಮರ್ಯಾದೆ ಕೊಡ್ತಾನೇ ಇರು. ಧರ್ಮರಾಯನ ತರಹ. ಅವಳು ಪಾಪಗಳನ್ನು ಮಾಡ್ತಾನೇ ಇರ್ತಾಳೆ. ಇದೆಂತಹ ಸಂಬಂಧ ನಿನ್ನದು?"

"ಸ್ಸಾರಿ. ಮಧು ನಾನು ಇವನ ಪರವಾಗಿ ಕ್ಷಮೆ ಕೇಳ್ತೇನೆ. ನೀನು ಆದಷ್ಟೂ ಬೇಗ ಇವಳನ್ನು ಇಲ್ಲಿಂದ ಕರೆದುಕೊಂಡು ಹೋಗು. ಈಗಲೂ ಭಾರ್ಗವ ಇವಳನ್ನು ಸ್ವೀಕರಿಸುವುದಾದರೆ ಅವನಿಗೇ ಕೊಟ್ಟು ಮದುವೆ ಮಾಡು."

"ಹೌದು ಮಧುಕರ. ಧ್ರುವ ಹೇಳೋದು ಸರಿ. ಪ್ರೀತಿಯೇ ಇಲ್ಲದಿದ್ದ ಮೇಲೆ ಸಂಬಂಧವನ್ನು ಬಲವಂತವದಿಂದ ಕೂಡಿಸುಕ್ಕೆ ಆಗುಲ್ಲ. ಮಾಲಾ ಈ ಮನೆಗೆ ಸೊಸೆಯಾಗಿ ಬರಲು ಒಪ್ಪದಿದ್ದ ಮೇಲೆ, ಹೋಗಲಿ ನಾಲ್ಕು ದಿನ ಅತಿಥಿ

ಯಾಗಿಯೂ ಇಲ್ಲಿ ಇರಲು ಇಷ್ಟಪಡದಿದ್ದ ಮೇಲೆ... ಏನು ಹೇಳೋದು ?"

"ಹಾಗಲ್ಲ ಆಂಟಿ. ಅವಳ ಮೂಡ್ ಈಗ ಚೆನ್ನಾಗಿಲ್ಲ."

"ನಿನ್ನ ತಂಗಿಯ ಮೂಡ್ ಯಾವಾಗಲೂ ಚೆನ್ನಾಗಿರುಲ್ಲ ಮಧು. ಆದಷ್ಟು ಬೇಗ ಅವಳನ್ನು ಯಾರಾದರೂ ಸೈಕಿಯಾಟ್ರಿಸ್ಟ್‌ಗೆ ತೋರಿಸು. ಅದರ ಅಗತ್ಯವಿದೆ ಇವಳಿಗೆ" ಎಂದು ಪ್ರತಾಪ ಮತ್ತೆ ನುಡಿದಾಗ ಧ್ರುವನೂ ಮತ್ತೆ ಆ ಮಾತನ್ನು ಖಂಡಿಸಿದ.

"ಬೇಡ ಪ್ರತಾಪ ಹೀಗೆಲ್ಲಾ ಮಾತನ್ನಾಡಿ ನನ್ನ ಮನಸ್ಸನ್ನು ನೋಯಿಸ ಬೇಡ. ಅವಳೇನೂ ಮನೋರೋಗಿಯಲ್ಲ. ಸೈಕಿಯಾಟ್ರಿಸ್ಟ್‌ಗೆ ತೋರಿಸಲು."

"ಇನ್ನು ಒಂದು ಕ್ಷಣ ಇಲ್ಲಿದ್ದರೆ ಇವರೆಲ್ಲಾ ಸೇರಿ ನನಗೆ ಹುಚ್ಚಿಯ ಪಟ್ಟವನ್ನು ಕಟ್ಟಿಬಿಡ್ತಾರೆ. ಪ್ಲೀಸ್.... ನಡೀ ಹೋಗೋಣ" ಅವಳು ಎತ್ತರದ ಧ್ವನಿಯಲ್ಲಿ ನುಡದಾಗ ಪ್ರತಾಪ ನಕ್ಕ.

"ನೋಡು. ಎಷ್ಟು ಬೇಗ ಉದ್ರೇಕಗೊಳ್ಳುತ್ತಾಳೆ. ಹುಚ್ಚಿಯಲ್ಲದೆ ಇನ್ನೇನು ?" ಟೇಬಲ್ ಮೇಲಿದ್ದ ಪೇಪರ್ ವೈಟ್ಟನ್ನು ತೆಗೆದು ಪ್ರತಾಪನ ಹಣೆಗೆ ತಗಲುವಂತೆ ಸರಿಯಾಗಿ ಬೀಸಿ ಹೊಡೆದಳು. ಹ್ಹಾಂ ಎಂದು ಚೀರಿ ಅವನು ಕೆಳಕ್ಕೆ ಬಿದ್ದುಬಿಟ್ಟ. ಪೆಟ್ಟಾದ ಜಾಗದಿಂದ ರಕ್ತ ಒಸರಲು ಪ್ರಾರಂಭವಾಯಿತು. ಮಧು ಹೆದರಿದ. ಮಾಲಾ ಪೆಚ್ಚಾದಳು. ಧ್ರುವ ಡಾಕ್ಟರಿಗೆ ಫೋನು ಮಾಡಿದ. ಅವರು ಬಂದು ಚೆಕ್ ಮಾಡಿ, ರಕ್ತ ಬರುವುದು ನಿಲ್ಲುತ್ತಿಲ್ಲ. ಯಾವುದಾದರೂ ನರ್ಸಿಂಗ್ ಹೋಂಗೆ ಕರೆದುಕೊಂಡು ಹೋಗಿ ಸೇರಿಸಿ..." ಎಂದು ಸಲಹೆಯನ್ನಿತ್ತಾಗ ಅಲ್ಲಿಯ ವಾತಾವರಣ ಕೋಲಾಹಲದಲ್ಲಿ ಬದಲಾಯಿತು.

"ನಾನು ಇವಳನ್ನು ಸುಮ್ಮನೆ ಬಿಡುಲ್ಲ. ನನ್ನನ್ನು ಸಾಯಿಸಲು ಪ್ರಯತ್ನ ಪಟ್ಟಿದ್ದಾಳೆ. ಜೈಲಿಗೆ ಕಳಿಸ್ತೀನಿ" ಅಂತ ಪ್ರತಾಪ ಕಿರುಚಾಡಲು ಪ್ರಾರಂಭಿಸಿದ.

"ಯಾಕೆ ಇಂಥ ಕೆಲಸ ಮಾಡಿದೆ ಮಾಲಾ... ಅವನಿಗೆ ಮೊದಲೇ ನಿನ್ನನ್ನು ಕಂಡರೆ ಆಗುಲ್ಲ.. ಈಗ ಅವನು ಖಂಡಿತಾ ಸುಮ್ಮನಿರೋಲ್ಲ" ಧ್ರುವ ಹೇಳಿದ.

"ನಾನೇನು ಮಾಡಲೀ ? ನನ್ನನ್ನು ಕೆರಳಿಸ್ತಾ ಇದ್ರಲ್ಲ.."

"ನಾನು ವಿಚಾರಿಸಿಕೊಳ್ತಿದ್ದೆ. ನೀನು ಸುಮ್ಮನಿರಬೇಕಾಗಿತ್ತು ಅವನು ಹುಷಾರಾಗಿ ಬಂದ ಮೇಲೆ ಅವನನ್ನು ಸಾರಿ ಕೇಳು. ಅವನು ಸುಮ್ಮನಿರುವ ಮನುಷ್ಯನಲ್ಲ."

"ನೀವೆಲ್ಲಾ ಅವರಿಗ್ಯಾಕೆ ಹೆದರುತ್ತೀರಿ ?"

"ಆ ವಿಷಯ ಈಗ ಬೇಡ... ನಾನು ಅವನನ್ನು ಹಾಸ್ಪಟಲ್‌ಗೆ ಕರೆದು ಕೊಂಡು ಹೋಗಿ ಬರ್ತೀನಿ. ನೀನು ಅಲ್ಲಿಯವರೆಗೂ ಇಲ್ಲೇ ಇರಬೇಕು. ಮಧು ಪ್ಲೀಸ್... ನಿನಗೇ ಗೊತ್ತು ಪ್ರತಾಪ ಎಂತಹವನು ಅಂತ" ಮಧು ತಲೆಯಾಡಿಸಿದ.

ಸುಮಿತ್ರಾದೇವಿ ಜೊತೆಯಲ್ಲಿ ಮಾಲಾಳನ್ನು ಬಿಟ್ಟು ಉಳಿದವರು ಕಾರಿನಲ್ಲಿ ಪ್ರತಾಪನನ್ನು ಕರೆದುಕೊಂಡು ಬಂದು ಹಾಸ್ಪಿಟಲ್‌ಗೆ ಸೇರಿಸಿದರು. ಮೊದಲಿಗೆ ರಕ್ತ ನಿಲ್ಲುವಂತೆ ಇಂಜೆಕ್ಷನ್ ಕೊಟ್ಟು, ಉಳಿದ ಟೆಸ್ಟ್‌ಗಳನ್ನು ಪ್ರಾರಂಭಿಸಿದರು. ಪ್ರತಾಪ ನಡುಗಲಾರಂಭಿಸಿದ್ದ. ಭಯದಿಂದ ಬಡಬಡಿಸಲಾರಂಭಿಸಿದ. "ನಾನು ಅವಳನ್ನು ಸುಮ್ಮನೇ ಬಿಡುಲ್ಲ. ಅವಳ ಮೇಲೆ ಕಂಪ್ಲೇಂಟ್ ಕೊಡ್ತೀನಿ. ಕೇಸ್ ಹಾಕ್ತೀನಿ. ಜೈಲಿಗೆ ಕಳಿಸ್ತೀನಿ" ಮಧು ಧ್ರುವ ಮುಖ ಮುಖ ನೋಡಿಕೊಂಡರು.

"ಏನಯ್ಯಾ ಇವನ್ಯಾಕೆ ಹೀಗಾಡ್ತಾನೆ ?" ಮಧು ನಂತರ ಕೇಳಿದ.

"ಮಾಲಾ, ಅವಮಾನ ಮಾಡಿದ್ದನ್ನು ಅವನು ಮರೆತಿಲ್ಲ."

"ಮದುವೆಯಾದರೆ ಎಲ್ಲಾ ಸರಿ ಹೋಗುತ್ತೆ ಅಂತ ಅಂದ್ಕೊಂಡಿದ್ದೆ. ಅವಳು ಬದಲಾಗೇ ಇಲ್ಲ."

"ಈಗಲೂ ಅವಳಿಗೆ ಏನೋ ದ್ವೇಷ. ಏನೋ ದುಗುಡ. ಜೀವಮಾನವೆಲ್ಲಾ ಹೀಗೇ ಇರ್ತಾಳಾ ? ನೀನು ಅವಳನ್ನು ಹೇಗೆ ನೋಡ್ಕೋತೀಯ ?"

"ನನಗೂ ಅದೇ ಚಿಂತೆ ಧ್ರುವ. ನಮ್ಮ ಮನೇಲೂ ಬಂದು ಇರದೇ, ಯಾರಿಗೂ ತಿಳಿಯದಂತೆ ಎಲ್ಲೋ ಇರ್ತೀನಿ ಅಂತಂದ್ಲು. ಇವಳಿಗೆ ಸಪೋರ್ಟ್ ವಸುಧಂದು. ಈಗ ನೋಡು. ಎಂಥಾ ಅವಮಾನ..."

"ಅವಳು ನಿನ್ನ ಮಾತನ್ನಂತೂ ಕೇಳುಲ್ಲ. ಭಾರ್ಗವನ ಮಾತನ್ನು ಕೇಳ್ತಾಳೆ ಅಲ್ವಾ ? ಅವನನ್ನು ಹುಡುಕಿಸಿ, ಅವನ ಕೈಯಿಂದ ತಿಳುವಳಿಕೆ ಹೇಳಿಸಿದರೇ ?"

"ಅವನು ಎಲ್ಲಿದಾನೋ ನನಗೆ ಗೊತ್ತಿಲ್ಲ..." ಆ ಕ್ಷಣದಲ್ಲಿ ಅವನಿಗೆ ಭಾಸ್ಕರ ನೆನಪಿಗೆ ಬಂದ. ಭಾಸ್ಕರ ಏನಾದ್ರೂ ಕಿಡ್ನಾಪ್ ಮಾಡಿ, ರೇಪ್ ಮಾಡಿರಬಹುದೇ ಅಂತ ಸಹ ಅನ್ನಿಸದೇ ಇರಲಿಲ್ಲ. ಅವನನ್ನು ಕಂಡು ಮಾತನಾಡ ಬೇಕೆಂದುಕೊಂಡ.

"ನನಗೆ ಸ್ವಲ್ಪ ಕೆಲಸವಿದೆ. ಹೋಗಿ ಬರ್ತೀನಿ" ಎಂದು ಹೇಳಿ, ಭಾಸ್ಕರ ಕೊಟ್ಟಿದ್ದ ವಿಳಾಸವನ್ನು ಹುಡುಕಿಕೊಂಡು ಅವರ ಮನೆಗೆ ಬಂದ. ಬಾಗಿಲನ್ನು ತೆಗೆದವಳು ಭಾಸ್ಕರನ ಅಕ್ಕ. ಅವಳ ಕೈಯಲ್ಲಿದ್ದ ಮಗುವನ್ನು ನೋಡಿ ಮಧು

ದಂಗಾದ. ತನ್ನ ಮಗು ಆಕಾಶನಂತೆಯೇ ಇದೆ. ಅದೇ ವಯಸ್ಸು. ಅದೇ ರೂಪ.. ಎಂಥ ಆಶ್ಚರ್ಯ ! ಎಷ್ಟು ವಿಸ್ಮಯ !

"ಯಾರು ಬೇಕಾಗಿತ್ತು" ಅವಳು ಹರಕು ಮುರುಕು ಹಿಂದಿಯಲ್ಲಿ ಕೇಳಿದಾಗ ಇವನು ಕನ್ನಡದಲ್ಲಿ ಪ್ರಶ್ನಿಸಿದ.

"ಭಾಸ್ಕರ ಇದಾರಾ ?" ಮಗುವನ್ನೇ ಆಶ್ಚರ್ಯದಿಂದ ನೋಡಿ ಕೇಳಿದ.

"ಹ್ಞೂಂ. ಇದಾನೆ ಬನ್ನಿ" ಎನ್ನುತ್ತಾ ಅವನನ್ನು ಒಳಕ್ಕೆ ಕರೆದು, ತಾನು ಒಳಗೆಲ್ಲೋ ಹೊರಟು ಹೋದಳು. ಕೆಲವೇ ನಿಮಿಷಗಳಲ್ಲಿ ಭಾಸ್ಕರ ಬಂದ. ಇದ್ದಕ್ಕಿದಂತೆ ಮಧುಕರನನು ಕಂಡು ಅವನೂ ಗಲಿಬಿಲಿಗೊಂಡಿದ್ದ.

"ಗುಡ್ ಮಾರ್ನಿಂಗ್ ಸಾರ್... ಬನ್ನಿ... ಬನ್ನಿ" ವಿಧೇಯತೆಯಿಂದ ಕರೆದು ಕೂರಿಸಿದ.

"ಹೇಗಿದೀರಿ ಭಾಸ್ಕರ್... ನಿಮ್ಮ ಮನೆಯವರೆಲ್ಲಾ ಹೇಗಿದಾರೆ ?"

"ಎಲ್ಲಾ ಚೆನ್ನಾಗಿದ್ದಾರೆ... ನನ್ನಫ್ಯಾಮಿಲಿನ ಇಲ್ಲಿಗೆ ಷಿಫ್ಟ್ ಮಾಡಿದೀನಿ."

"ಓ... ಈ ಮಗು ? ಮಗು ತುಂಬಾ ಮುದ್ದಾಗಿದೆ.

"ನನ್ನದೇ..." ಅವನು ಸಂತಸದಿಂದ ಹೇಳಿಕೊಂಡಾಗ, ಮಧು ಭಾಸ್ಕರನನ್ನು ಆಳವಾಗಿ ನೋಡಿದ. ಭಾಸ್ಕರನಿಗೂ ಅರ್ಥವಾಗಿತ್ತು. ಕೇಳಲೋ ಬೇಡವೋ ಎಂದು ಅನುಮಾನದಿಂದ ಕೇಳಿದ.

"ಮಾಲಾ ಮೇಡಂ ಹೇಗಿದಾರೆ ? ಅವರ ಮಗು ಹೇಗಿದಾನೆ ? ಏನು ಹೆಸರು ?"

ಮಧು ನಿಧಾನವಾಗಿ ಕೆಲವು ವಿಷಯಗಳನ್ನೆಲ್ಲಾ ತಿಳಿಸಿದ. ಎಚ್ಚರಿಕೆಯಿಂದ ಇಂಗ್ಲಿಷ್‌ನಲ್ಲಿ ಮಾತಾಡಿದ. ಅಷ್ಟರಲ್ಲಿ ಭಾರತಿ, ಎರಡು ಕಪ್‌ಗಳನ್ನು ಹಿಡಿದು ಬಂದಳು. ಭಾಸ್ಕರ ಕಾಫಿಯ ಟ್ರೇಯನ್ನು ತೆಗೆದುಕೊಂಡು ಅವನಿಗೆ ಕೊಟ್ಟ.

"ಇವಳು ನನ್ನ ಮಿಸೆಸ್... ಭಾರತೀ" ಮಧು ಕೈ ಮುಗಿದು ನಮಸ್ಕಾರ ಎಂದ. ಅವಳೂ ಕೈ ಮುಗಿದಳು. ಮಾಲಾಳಿಗೂ, ಇವಳ ಗಂಡನಿಗೂ ಸಂಬಂಧವಿತ್ತು ಅಂತ ತಿಳಿದರೆ ಇವಳಿಗೆ ಏನನ್ನಿಸಬಹುದು ಎಂದುಕೊಂಡು ಅವಳನ್ನೇ ನೋಡಿದ.

"ಇವಳು ಮಾಲಾಳಂತೆ ಅಲ್ಲ. ರೂಪ ಹೇಗೇ ಸಾಧಾರಣವೋ ಬುದ್ಧಿಯೂ ಅಷ್ಟೇ. ಗಂಡನ ಮೇಲೆ ಯಾವ ಅನುಮಾನವೂ ಇಲ್ಲ" ಅಂತೆನ್ನಿಸಿತು. ಮಧುಗೆ ಏನನ್ನಿಸಿತೋ ಏನೋ, ಮಗುವಿನ ಕೈಗೆ ನೂರು

ರೂಪಾಯಿಯ ನೋಟನ್ನು ಕೊಟ್ಟ. ಭಾಸ್ಕರ ಸಂಕೋಚಗೊಂಡ. "ಇದೆಲ್ಲಾ ಏನು ಸಾರ್ ?" ಎಂದ.

"ಏನೂ ಇಲ್ಲ. ಇವನನ್ನು ನೋಡಿದ ಕೂಡಲೇ, ನನ್ನ ಮಗನನ್ನೇ ಇಲ್ಲಿ ನೋಡಿದಂತೆ ಅನ್ನಿಸಿತು. ಏನು ಹೆಸರು ?" ಎನ್ನುತ್ತಾ ಮಗುವಿನ ಕೆನ್ನೆಯನ್ನು ಸವರಿದ.

"ಆದಿತ್ಯ ಅಂತ. ಇವನು ಹುಟ್ಟಿದ್ದು ಭಾನುವಾರದ ದಿನ."

"ಓ... ನನ್ನ ಮಗುವಿನ ಹೆಸರು ಆಕಾಶ್ ಅಂತ. ಮಾಲಾನೇ ಸೆಲೆಕ್ಟ್ ಮಾಡಿದ್ದು."

"ಹೆಸರು ತುಂಬಾ ಚೆನ್ನಾಗಿದೆ" ಭಾಸ್ಕರ ಮೆಚ್ಚುಗೆಯನ್ನು ಸೂಸಿದ. ಮಧು ಅಲ್ಲಿಂದ ಹೊರಟ. ಅವನನ್ನು ರಸ್ತೆಯ ತನಕ ಭಾಸ್ಕರ ಹಿಂಬಾಲಿಸಿದ. ನಂತರ, ಮಾಲಾ ಈಗ ಧ್ರುವನ ಮನೆಯಲ್ಲಿರುವ ವಿಷಯವನ್ನು ತಿಳಿಸಿ, ಅವಳ ಮೇಲೆ ನಡೆದ ಅತಿಕ್ರಮಣದ ಬಗ್ಗೆ ಹೇಳಿದ.

"ನಾನು ಮಾಡಿದ ತಪ್ಪಿನಿಂದ, ಇವತ್ತು ಮಾಲಾ ಕಷ್ಟವನ್ನು ಅನುಭವಿಸುತ್ತಿದ್ದಾಳೆ. ಅವಳು ಸುಖವಾಗಿರಲಿ ಅಂತ ನನಗೂ ಆಸೆ. ಆದರೆ ಉಪಾಯ ಹೊಳೆಯುತ್ತಿಲ್ಲ" ಎಂದ.

"ನಾನು ಮಾಲಾ ಮೇಡಂ ಹತ್ತಿರ ಮಾತನಾಡಬೇಕು."

"ನಾಳೆ ದಿನ ನಾನೇ ಕರೆದುಕೊಂಡು ಬರ್ತೀನಿ" ಮಧು ನುಡಿದಾಗ ಅಪಸು ಬೇಡ ಎನ್ನಲಾಗಲಿಲ್ಲ.

○ ○ ○

"ನಾಳೆ ದಿನ ನಾನು ನಿನ್ನನ್ನು ಭಾಸ್ಕರನ ಮನೆಗೆ ಕರೆದುಕೊಂಡು ಹೋಗ್ತೀನಿ" ಅಂತ ಮಧು ನುಡಿದಾಗ ಮಾಲಾ ನಿರಾಕರಿಸಿದಳು.

"ನಾನು ಎಲ್ಲಿಗೂ ಬರುಲ್ಲ... ಅಲ್ಲಿ ಹೋಗಿ ಏನು ಮಾತನಾಡೋದು ಇದೆ ?" ರಘು ಹೇಳಿದ್ದ ಸುಳ್ಳು ನೆನಪಿಗೆ ಬಂತು.

"ಸರಿ ನಿನ್ನಿಷ್ಟ... ನಿನಗೆ ಈಗಲೂ ಅವನ ಮೇಲೆ ಪ್ರೀತಿ ಇದೆ ಅಂತ ಅಂದುಕೊಂಡಿದ್ದೆ. ನಿನಗೇ ಬೇಡವಾದರೆ ನನಗೇನು ?"

"ಭಾಸ್ಕರ ನನ್ನನ್ನು ಮರೆತು ಬಿಟ್ಟಿದ್ದಾರೆ. ಅವರು ಕೊಟ್ಟ ಕಾಣಿಕೆ ಕೂಡಾ ನನ್ನ ಬಳಿ ಇಲ್ಲ. ಈಗ ಅಪಮಾನದ ಮೂಟೆಯನ್ನು ಹೊತ್ತು ನಾನು ಅವರ ಎದುರಿಗೆ ಹೋಗುವುದಿಲ್ಲ."

"ಭಾಸ್ಕರನ ಮಗ ಆದಿತ್ಯ ಥೇಟ್ ನಮ್ಮ ಆಕಾಶ್ ತರಹಾನೇ ಇದಾನೆ... ಅದೇ ರೂಪ ಅದೇ ವಯಸ್ಸು." ಮಾಲಾ ಕಣ್ಣರಳಿಸಿದಳು. ಅವನು ಅವಳನ್ನೇ ವಿಚಿತ್ರವಾಗಿ ನೋಡಿದ.

"ಏನಂದೆ ? ಭಾಸ್ಕರನಿಗೆ ಇನ್ನೊಂದು ಮಗೂನಾ ?"

"ಯಾಕಾಗಬಾರದು ? ಅವನಿಗೂ ಮದುವೆಯಾಗಿದೆಯಲ್ಲ."

"ಅವರು ಹೆಂಡತಿಯನ್ನು ಪ್ರೀತಿಸುತ್ತಿರಲಿಲ್ಲ. ಅವಳಿಂದ ದೂರವೇ ಇದ್ದರು."

"ಪ್ರೀತಿಸೋದೇ ಬೇರೆ... ಈ ಮಾತೇ ಬೇರೆ... ಈಗಲಾದ್ರೂ ತಿಳೀತಾ ? ಎಷ್ಟೋ ಜನರಿಗೆ ಎರಡು ಮುಖಗಳಿರುತ್ತವೆ. ಭಾಸ್ಕರ ಹೆಂಡತಿಗೆ ದ್ರೋಹ ಮಾಡಿ, ನಿನ್ನನ್ನು ಮೋಹಿಸಿದ. ನಿನ್ನನ್ನು ನಂಬಿಸಿದ... ನಿನ್ನ ಮಗುವಿಗಿಂತ ಕೇವಲ ಹತ್ತು ದಿನಕ್ಕೆ ದೊಡ್ಡವನು ಈ ಆದಿತ್ಯ."

"ಅಂದ್ರೆ... ಭಾಸ್ಕರ ತಮ್ಮಿಬ್ಬರೊಡನೆ ಏಕಕಾಲದಲ್ಲಿ ಸಂಬಂಧವನ್ನಿಟ್ಟು ಕೊಂಡಿದ್ದ... ನನಗೆ ಗೊತ್ತಾಗಲೇ ಇಲ್ಲ" ಅಂತಂದುಕೊಂಡಾಗ ಮನ ಮುದುಡಿತ್ತು.

"ಹೋಗಲಿ ಬಿಡು. ಅದು ಅವನ ಸಂಸಾರ. ಅವನಿಗೆ ಅದೇ ಮುಖ್ಯ. ಅವನು ಎಷ್ಟು ಖುಷಿಯಾಗಿದಾನೆ ಗೊತ್ತಾ ? ನೀನೇ ಎಲ್ಲಾ ರೀತಿಯಿಂದಲೂ ಹಾಳಾದವಳು."

"ನಾನು ಹಾಳಾಗೋಕೆ ನೀನೇ ಕಾರಣ..."

"ನಾನು ಹಾಗೆ ವರ್ತಿಸೋಕೆ ಕಾರಣ ನೀನೇ ಈಗ ನಾನು ಬದಲಾಗಿದೀನಿ. ನಿನಗೋಸ್ಕರ, ನಿನ್ನ ಸ್ನೇಹಿತೆಗೋಸ್ಕರ. ನಿನ್ನ ಮಗನಿಗೋಸ್ಕರ ಕಾಂಪ್ರಮೈಸ್ ಮಾಡಿಕೊಂಡಿದೀನಿ. ಬದಲಾಗದೇ ಮೊಂಡಿಯ ತರಹ ಆಡ್ತಾ ಇರೋಳು ನೀನು... ಎಲ್ಲಾ ಅನಾಹುತಗಳಿಗೂ ನೀನೇ ಕಾರಣ..."

"ಹೌದು. ನನ್ನ ಅನಾಹುತಗಳಿಗೆ ನಾನೇ ಕಾರಣ. ನನ್ನ ಪಾಡಿಗೆ ನನ್ನನ್ನು ಬಿಟ್ಟುಬಿಡು."

"ಬಿಟ್ಟರೆ ಇನ್ನೂ ಹಾಳಾಗಿ ಹೋಗ್ತೀಯ. ಪ್ರತಾಪ ನಿನ್ನನ್ನು ಸುಂಡಿಯು ಸುಮ್ಮನೆ ಬಿಡುವವನಲ್ಲ. ಅವನು ಬಹಳ ಡೇಂಜರಸ್ ಮನುಷ್ಯ. ನನ್ನನ್ನು ಕೊಲ್ಲಕ್ಕೂ ಹೆದರುಲ್ಲ ಅವನು."

"ಅಂಥವರ ಸಂಬಂಧವನ್ನು ಯಾಕೆ ಬೆಳೆಸಬೇಕಾಗಿತ್ತು ನೀನು."

"ಆಗ ನನಗೆ ಗೊತ್ತಾಗಲಿಲ್ಲ. ಈಗ ನನಗೆ ನಿನ್ನದೇ ಚಿಂತೆ. ಹೀಗೆಲ್ಲಾ ಹಗರಣವಾಗಿದೆ ಅಂತ ವಸುಧಾಳಿಗೆ ತಿಳಿದರೆ, ಅವಳು ಬಂದು ಬಿಡುತ್ತಾಳೆ. ನಾವು ಆದಷ್ಟೂ ಬೇಗ ಇಲ್ಲಿಂದ ಹೋಗಬೇಕು."

"ಹೋಗೋಣ. ನಾವ್ಯಾಕೆ ಇವರಿಗೆಲ್ಲಾ ಕೇರ್ ಮಾಡಬೇಕು."

"ಮಾಡಬೇಕಾಗುತ್ತದೆ ಮಾಲಾ. ನಾವು ಬಚಾವಾಗಬೇಕಾದರೆ, ಇನ್ನೊಬ್ಬರಿಗೆ ಕೇರ್ ಮಾಡಬೇಕಾಗ್ತದೆ. ಕಾರ್ಯವಾಸಿ ಕತ್ತೆ ಕಾಲು ಕಟ್ಟು ಅಂತ ಗಾದೇನೇ ಇದೆ."

"ಹಾಗಾದ್ರೆ ನಾನೇನು ಮಾಡಬೇಕು ?"

"ತಪ್ಪಾಯಿತು ಅಂತ ಪ್ರತಾಪನ್ನ ಕ್ಷಮೆ ಕೇಳಿಕೊಂಡರಾಯ್ತು."

"ನೋ ವೇ. ನಾನು ಕ್ಷಮೆ ಕೇಳುಲ್ಲ. ಅವನು ನನ್ನನ್ನು ಕೆರಳಿಸಿಬಿಟ್ಟ."

"ಅವನು ಕೆರಳಿಸಿದರೂ ನಿನ್ನ ಬುದ್ಧಿ ನಿನ್ನ ಕೈಲಿರಬೇಕಾಗಿತ್ತು. ಸಹನೆ ಕಳೆದು ಕೊಂಡರೆ ? ನಿನಗೇ ಯಾರಾದ್ರೂ ಹೊಡೆದ್ರೆ ನೀನು ಸುಮ್ಮನಿರ್ತೀಯಾ ?"

ಮಾಲಾ ಏನನ್ನೋ ಯೋಚಿಸಿ ಸುಮ್ಮನಾದಳು. ಸ್ವಲ್ಪ ಸಮಯದಲ್ಲೇ ಪ್ರತಾಪನನ್ನು ಡಿಸ್ಚಾರ್ಜ್ ಮಾಡಿಸಿಕೊಂಡು ಮನೆಗೆ ಕರೆತಂದರು. ಮಧು ಬಲವಂತವಾಗಿ ಅವಳನ್ನು ಅವನೆದುರು ಕರೆತಂದ.

"ಪ್ರತಾಪ್ ಸಾರಿ. ಇವಳಿಂದ ನಿನಗೆ ಪೆಟ್ಟಾಯ್ತು. ಮನಸ್ಸಿಗೂ ನೋವಾಗಿದೆ. ಇವಳ ಪರವಾಗಿ ನಾನು ಕ್ಷಮೆಯನ್ನು ಕೇಳ್ತೀನಿ. ಕ್ಷಮಿಸಿಬಿಡು" ಎಂದ.

"ಪ್ರತಾಪ ಕೆಟ್ಟದಾಗಿ ನಕ್ಕು ನುಡಿದ. "ನಿನ್ನ ತಂಗಿ ಏನೂ ಚಿಕ್ಕ ಹುಡುಗಿಯಲ್ಲ. ಬೇಕೂಂತಲೇ ಹೀಗೆ ಅವಮಾನ ಮಾಡಿದಾಳೆ. ಕ್ಷಮಿಸಿಬಿಟ್ಟರೆ ಎಲ್ಲಾ ಸರಿ ಹೋಗುತ್ತಾ ?"

"ಇವಳಿಗೆ ನಮ್ಮಗಳ ಮೇಲೆಲ್ಲಾ ಅಸಮಾಧಾನ. ಬೇಗ ಎಕ್ಸೈಟ್ ಆಗಿಬಿಡ್ತಾಳೆ. ನೀನು ಎಷ್ಟಾಗಲೀ ದೊಡ್ಡವನು. ತಿಳುವಳಿಕೆಯುಳ್ಳವನು."

"ಏನೇ ಆಗಲಿ, ನನ್ನ ಮೇಲೆ ಅಕ್ರಮಣ ಮಾಡಲು ಇವಳಿಗೆ ಯಾವ ಅಧಿಕಾರವೂ ಇರಲಿಲ್ಲ. ಆದರೂ ನೀನು ನನ್ನ ಸ್ನೇಹಿತ... ಅನ್ನೋ ಭಾವನೆಯಿಂದ ನಿನ್ನ ತಂಗಿಯನ್ನು ಕ್ಷಮಿಸ್ತೀನಿ. ಆದರೆ ಒಂದು ಕಂಡೀಷನ್..."

"ಏನದು ?"

"ಅವಳು ಇಲ್ಲಿಯೇ ಇರಬೇಕು. ನಿನಗೇ ಗೊತ್ತು ಧ್ರುವನ ಸ್ಥಿತಿ ಏನಾಗಿದೆ ಅಂತ. ಮತ್ತೆ ಅವನಿಗೆ ಧೈರ್ಯದಿಂದ ಮದುವೆ ಮಾಡಲು ಸಾಧ್ಯವಿಲ್ಲ.

ಭಾರ್ಗವನ ಮಗುವಿನ ತಾಯಿಯಾಗುತ್ತಿದೀನಿ ಅಂತ ನಾಟಕವಾಡಿ ಮೋಸ ಮಾಡಿದಳು. ಹೇಗೂ ಇವಳಿಗೆ ಪತಿಯ ಸಂಪರ್ಕ ಬೇಕಿಲ್ಲ. ಧ್ರುವನೂ ಅದೇ ಕಂಡೀಷನ್‌ನಲ್ಲಿದಾನೆ. ಇವಳು ಇಲ್ಲೇ ಇದ್ದರೆ, ಅವಳಿಗೆ ಯಾವ ತೊಂದರೆಯೂ ಇಲ್ಲ. ಯಾರ ಭಯವೂ ಇಲ್ಲ. ಇದಕ್ಕೆ ಒಪ್ಪಿದರೆ ಸರಿ, ಇಲ್ಲದಿದ್ದರೆ ಅವಳ ದಾರಿ ಅವಳಿಗೆ... ನಾನು ಅವಳ ಮೇಲೆ ಆ್ಯಕ್ಷನ್ ತೆಗೆದುಕೊಳ್ಳುವುದು ಖಂಡಿತಾ..."

"ಇದ್ಯಾವ ನ್ಯಾಯ! ಈ ಕಂಡೀಷನ್ಗೆ ನಾನ್ಯಾಕೆ ಒಪ್ಪಬೇಕು?" ಮಾಲಾ ರೇಗಿದಳು.

"ನೋಡು ಮಧು. ನಿನ್ನ ತಂಗಿ ತುಂಬಾ ಜಾಣೆ ತರಹ ಮಾತನಾಡ್ತಾಳೆ. ಈ ಕಂಡೀಷನ್‌ನಿಂದ ಅವಳಿಗೆ ಏನು ಲಾಸ್? ಮರ್ಯಾದೆಯಿಂದ ಗಂಡನ ರಕ್ಷಣೆಯಲ್ಲಿರಬಹುದು. ಅದು ಬಿಟ್ಟು..."

"ನನ್ನನ್ನು ಇಲ್ಲಿ ಬಲವಂತವಾಗಿ ಇಟ್ಟುಕೊಳ್ಳುವುದರಿಂದ ನಿಮಗೇನು ಲಾಭ!"

"ಏನೂ ಲಾಭವಿಲ್ಲ. ನಿನಗೆ ಮಧೂಗೆ ನಷ್ಟ ಅಷ್ಟೇ. ಈ ಸ್ಕ್ಯಾಂಡಲ್‌ನಿಂದ ನಮ್ಮ ಬಿಸನೆಸ್ ವ್ಯವಹಾರಗಳಲ್ಲಿ ಏರುಪೇರಾಗುತ್ತದೆ. ಪರಿಣಾಮ ಎಲ್ಲಿಂದ ಎಲ್ಲಿಗೆ ಹೋಗುತ್ತದೋ. ? ಅಪಪ್ರಚಾರದಿಂದ ನಿನಗೇ ಲಾಸ್."

ಸಿಟ್ಟಿನಿಂದ ಮಾಲಾ ಮತ್ತೆ ರೂಮಿನೊಳಕ್ಕೆ ಹೊರಟು ಹೋದಳು. ಪ್ರತಾಪ ವಿಜಯದ ನಗೆಯನ್ನು ನಕ್ಕ. ಮಧು ಪೆಚ್ಚಾಗಿ, ಅವಳ ಹಿಂದೆ ಬಂದ.

"ಪ್ಲೀಸ್ ಮಾಲಾ... ಬೇಸರಮಾಡ್ಕೋಬೇಡ. ಆದಷ್ಟೂ ಬೇಗ ನಾನು ಯಾವುದಾದರೂ ಉಪಾಯವನ್ನು ಕಂಡು ಹಿಡಿಯುತ್ತೀನಿ. ಸದ್ಯಕ್ಕೆ ಇಲ್ಲಿ ಇರಲು ಒಪ್ಪಿಗೆ ಕೊಡು"

"ಎಲ್ಲರೂ ಸೇರಿ ನನಗೆ ಅವಮಾನ ಮಾಡ್ತಾ ಇದೀರಿ."

"ನಿನ್ನ ಪರಿಸ್ಥಿತಿಯನ್ನು ಅರ್ಥ ಮಾಡ್ಕೋ. ಮಾಲಾ. ಆ ಕಿಡ್ನಾಪ್ ಮಾಡಿದ ವ್ಯಕ್ತಿ ಸಿಗುವವರೆಗೂ, ನಾವುಗಳು ಒಗ್ಗಟ್ಟಾಗಿರಬೇಕು. ಇಲ್ಲದಿದ್ದರೆ ಇವರುಗಳು ಸಹಾಯ ಮಾಡ್ತಾರೊ ಇಲ್ಲವೋ. ಒಂದು ಸಲಕ್ಕೆ ಅದೆಲ್ಲ ಮುಗಿಯಲಿ. ಆಮೇಲೆ ನಾವುಗಳು ಇವರ ಮರ್ಜಿಯನ್ನು ಅನುಸರಿಸಬೇಕಾಗಿಲ್ಲ."

"ಅಂತೂ ನಾನು ಸೋಲಬೇಕು."

"ಸೋಲು ಗೆಲುವಿನ ಮಾತೇ ಇಲ್ಲ. ಈಗ ಸೋತರೆ ಮುಂದೆ ನಿನಗೇ

ತಾನೆ ಗೆಲುವು... ನಿನಗೆ ಬೇಸರವಾಗುತ್ತೆ ಅಂತ ನನಗೆ ಗೊತ್ತು. ನಾನು ವಸುಧಳನ್ನು ಕರೆಸ್ತೀನಿ. ಅವಳಿದ್ದರೆ ನಿನಗೆ ಎಷ್ಟೋ ಅನುಕೂಲವಾಗುತ್ತದೆ."

ಮಾಲಾ ಮಾತನಾಡಲಿಲ್ಲ. ಮುಖ ಮುಚ್ಚಿ ಅತ್ತಳು. ಮಧು ಪ್ರಥಮ ಬಾರಿಗೆ ಅವಳ ತಲೆಯ ಮೇಲೆ ಕೈ ಇಟ್ಟು ಸಾಂತ್ವನ ಹೇಳಿದ. ಅದೇ ದಿನ ವಸುಧಾಳಿಗೆ ಫೋನು ಮಾಡಿ ಅದಷ್ಟು ಬೇಗ ಬರುವಂತೆ ಹೇಳಿದ.

o o o

ವಸುಧಾಳನ್ನು ಕಂಡೊಡನೆ ಮಾಲಾ ಸ್ವಲ್ಪ ಗೆಲುವಾದಳು. ಆಕಾಶನನ್ನು ಎತ್ತಿಕೊಂಡು ಮುದ್ದಾಡಿದಳು. ಕೆಳದನಿಯಲ್ಲಿ ಕೇಳಿದಳು.

"ಭಾಸ್ಕರನ ಹೆಂಡತಿಗೂ ಒಂದು ಮಗುವಾಗಿದೆಯಂತೆ. ನಮ್ಮ ಆಕಾಶ್ ತರಹಾನೇ ಇದೆಯಂತೆ. ಆದರೆ ಹೀಗೆ ನಕ್ಕರೆ ಗುಳಿ ಇಲ್ಲದಿದ್ದರೆ ಸಾಕು. ಇದು ಇವನಿಗೆ ಮಾತ್ರ ಇರಬೇಕು" ಗುಳಿಗೆ ಮುತ್ತಿಟ್ಟಳು. ವಸುಧಾ ಉತ್ತರಿಸಲಿಲ್ಲ.

"ಆದರೆ, ಭಾಸ್ಕರ್ ಹೀಗೆ ಮಾಡ್ತಾರೆ ಅಂತ ನಾನು ಊಹಿಸಿರಲಿಲ್ಲ."

"ಆದರೆ, ಇದು ನ್ಯಾಯಾನೇ ತಾನೇ? ಅವರದ್ದೇನು ತಪ್ಪು? ಹಾಗೆ ನೋಡ್ತಾ ಹೋದ್ರೆ, ಮೊದಲ ಹಕ್ಕು ಪತ್ನಿಗೇ..."

"ಇರಬಹುದು. ಆದರೆ ಅವರು ನನಗೆ ಸುಳ್ಳು ಹೇಳಿಬಿಟ್ಟರು. ನಾನು ಅವಳ ಜೊತೆ ಸಂಬಂಧವನ್ನೇ ಇಟ್ಟುಕೊಂಡಿಲ್ಲ ಅಂತ ಹೇಳಿದ್ರು, ನಾನು ನಂಬಿಬಿಟ್ಟೆ. ಇದು ತಪ್ಪಲ್ವಾ?"

"ತಪ್ಪು ಅಂತ ಹೇಗೆ ಹೇಳ್ತೀ ಮಾಲಾ?" ಅದರೆ ಒಂದು ಮಾತು ನಿಜ. ಅವರ ಹೆಂಡತಿಗೆ, ಇದುವರೆಗೂ ಈ ವಿಷಯವನ್ನು ತಿಳಿಸಿರಲಾರರು."

"ನಾನು ತಿಳಿಸಿದರೆ ಹೇಗಿರುತ್ತೆ?"

"ಸಧ್ಯ ಸುಮ್ಮನಿರು ಮಹಾರಾಯಿತಿ. ಭಾಸ್ಕರ ತೊಂದರೆಗೆ ಸಿಕ್ಕಿ ಬೀಳ್ತಾರೆ."

"ಅವನ ಹೆಂಡತಿಗೂ ಒಂದು ಮಗು, ಅದೂ ಇವನಿಗಿಂತ ಮುಂಚೇನೇ ಹುಟ್ಟಿದಾನೆ ಅಂತ ತಿಳಿದಾಗ ನನಗೆ ಹೇಗೆ ಹೇಗೋ ಆಯ್ತು. ಅದೇ ಅನುಭವ ಅವನ ಹೆಂಡತಿಗೂ ಆಗಬೇಕು. ಆಗಲೇ ನನಗೆ ಸಮಾಧಾನ."

"ನಿನ್ನ ಸ್ವಭಾವಕ್ಕೂ ಭಾರತಿಯ ಸ್ವಭಾವಕ್ಕೂ ಅಜಗಜಾಂತರ ವ್ಯತ್ಯಾಸವಿದೆ. ಅವಳು ಭಾಸ್ಕರನನ್ನೇ ದೇವರು ಅಂತ ಭಾವಿಸಿದಾಳೆ. ನಿನ್ನ ಮಾತಿನ ಮೇಲೆ ಅವಳಿಗೆ ಖಂಡಿತಾ ನಂಬಿಕೆ ಬರೋಲ್ಲ."

"ಈ ಪೋರನ್ನ ನೋಡಿದ್ರೂ ನಂಬುಲ್ವಾ?" ಗುಳಿಯ ಮೇಲೆ

ಬೆರಳಾಡಿಸಿದಳು.

"ಇವನು ನನ್ನ ಮಗ ನೆನಪಿರಲಿ. ಆಗ ನನ್ನ ಸ್ಥಿತಿ ಏನಾಗಬಹುದು ಅಂತ ಯೋಚಿಸಿದೀಯಾ ? ಮಧು ಕೂಡಾ ನಂಬಿಬಿಡ್ತಾರೆ ಅಷ್ಟೇ..."

"ಸಾರಿ... ಸಾರಿ... ನಿನಗೆ ಹರ್ಟ್ ಆಗುವಂತಹ ಕೆಲಸವನ್ನು ನಾನು ಮಾಡುಲ್ಲ. ಆದರೆ ನನಗೆ ಒಮ್ಮೆ ಆ ಮಗುವನ್ನು ನೋಡಬೇಕೂಂತ ತುಂಬಾ ಆಸೆ."

"ನೋಡೋಣ. ಆ ಸಮಯವೂ ಒದಗಿ ಬರಬಹುದು. ಭಾಸ್ಕರನನ್ನು ಮೀಟ್ ಮಾಡಬೇಕೂಂತ ಇಲ್ಲಿಗೆ ಬಂದ್ಯಾ ?"

"ಇಲ್ಲ. ನಿನಗೆ ಏನೂ ಗೊತ್ತಿಲ್ವಾ? ಮಧು ಏನನ್ನೂ ಹೇಳಲಿಲ್ವಾ?" ಎನ್ನುತ್ತಾ ನಡೆದುದನ್ನೆಲ್ಲಾ ತಿಳಿಸಿದಾಗ, ವಸುಧಾ ವ್ಯಥೆಗೊಂಡಳು.

"ಇಷ್ಟೆಲ್ಲಾ ನಡೆದರೂ ನನಗೆ ಮಾತ್ರ ತಿಳಿಯಲಿಲ್ಲ. ಆ ಊರಿನಲ್ಲಿ ನಿನ್ನನ್ನು ಕಿಡ್ನಾಪ್ ಮಾಡಿದವರು ಯಾರು ? ನಿನಗೆ ಯಾರ ಮೇಲಾದ್ರೂ ಅನುಮಾನಾನಾ ?"

"ಮೊದಲು ನನಗೆ ಅನುಮಾನ ಬಂದದ್ದು ಧ್ರುವನ ಮೇಲೆ. ಆದರೆ ಈಗ ಧ್ರುವ ಬದಲಾಗಿದಾನೆ ಅಂತ ಅನಿಸುತ್ತೆ. ಹಾಗೇ ಧ್ರುವನ ತಮ್ಮ ಒಬ್ಬ ಇದಾನೆ ರಘು ಅಂತ. ನನಗೆ ಅವನ ಮೇಲೂ ಅನುಮಾನ. ಅವನು ನನ್ನ ಕಲೀಗ್. ನನ್ನ ಹಿಂದ ಮುಂದೆ ಸುತ್ತುತ್ತಿದ್ದ. ಅದರೆ ಅವನು ತಪ್ಪು ಮಾಡಿದವನಂತೆ ಮಾತನಾಡುಲ್ಲ. ಬಹಳ ಕೂಲ್ ಆಗಿದ್ದಾನೆ. ಆವನಿಗೆ ನಾನು ಧ್ರುವನ ಪತ್ನಿ ಅಂತ ಗೊತ್ತಿರಲಿಲ್ಲವಂತೆ."

"ಇದರಲ್ಲಿ ಅರ್ಧ ನಿಜ, ಅರ್ಧ ಸುಳ್ಳು ಇರಬಹುದು. ನಾಲ್ಕಾರು ದಿನಗಳು ಕಳೆಯಲಿ. ಎಲ್ಲಾ ತಾವಾಗಿಯೇ ಹೊರಬರುತ್ತದೆ. ಅಲ್ಲಿಯವರೆಗೆ ಸ್ವಲ್ಪ ತಾಳ್ಮೆಯಿಂದ ಇರಬೇಕಾಗುತ್ತದೆ."

"ನನಗೆ ತಾಳ್ಮೆ ?" ನಕ್ಕಳು.

"ದುಡುಕಬೇಡ ಮಾಲಾ. ಈ ಗೋಜಲಿನಿಂದ ಹೊರಬರಬೇಕಾದರೆ ನಯವಾಗಿ ಬಿಡಿಸಿಕೊಳ್ಳಬೇಕು. ನಿನಗೆ ನ್ಯಾಯ ಸಿಗುವವರೆಗೂ ನಾನು ನಿನ್ನ ಜೊತೆಗಿರುತ್ತೀನಿ. ಡೋಂಟ್ ವರಿ."

"ಆಮೇಲೆ ?"

"ಆಮೇಲೂ ನಿನ್ನ ಜೊತೆಗಿರ್ತೀನಿ."

"ನನ್ನ ಜೊತೆಗೆ ಈ ಪೋರ ಇರ್ತಾನಾ ?"

"ಓ. ಖಂಡಿತಾ ಅವನು ನಮ್ಮಿಬ್ಬರ ಜೊತೆಗೂ ಇರ್ತಾನೆ" ಇಬ್ಬರೂ ಒಟ್ಟಿಗೇ ಆಕಾಶನನ್ನು ಮುದ್ದಿಸಿದರು.

○ ○ ○

ಸುಮಿತ್ರಾದೇವಿ ವಸುಧಾಳನ್ನು ಆತ್ಮೀಯವಾಗಿ ಮಾತನಾಡಿಸಿದಳು. ಮಗುವನ್ನು ಮುದ್ದಾಡಿದಳು. ಮಗು ಹುಟ್ಟಿದ ವಿಷಯವನ್ನು ನೀನು ನಮಗೆ ತಿಳಿಸಲೇ ಇಲ್ಲ" ಆಕ್ಷೇಪಣೆ ಮಾಡಿದಳು.

"ಏನೋ ಆಂಟಿ... ನಿಮಗೇ ಎಲ್ಲಾ ಗೊತ್ತಲ್ಲ" ಎಂದಳು.

"ನೀನು ಇರೋದ್ರಿಂದ ಮಾಲಾ ನಗುನಗ್ತಾ ಇರ್ತಾಳೆ. ಅಲ್ಲ ಇವಳಿಗೆ ಯಾಕೆ ಈ ವನವಾಸ ಅಂತ? ಲಕ್ಷಣವಾಗಿ ಸಂಸಾರ ಮಾಡಿಕೊಂಡಿದ್ದರೆ, ಇಂತಹ ನಾಲ್ಕು ಮಕ್ಕಳಾಗುತ್ತವೆ. ಮನೆ ನಂದಗೋಕುಲವಾಗುತ್ತದೆ. ಅವಳ ಜೀವನವೂ ಸುಧಾರಿಸುತ್ತದೆ. ಇಷ್ಟೆಲ್ಲಾ ನಡೆದ ಮೇಲೂ ಧ್ರುವ ಅವಳನ್ನು ಪತ್ನಿಯನ್ನಾಗಿ ಗೌರವದಿಂದ ನೋಡಿಕೊಳ್ತಾನೆ. ನೀನಾದರೂ ನಿನ್ನ ಸ್ನೇಹಿತೆಗೆ ತಿಳುವಳಿಕೆಯನ್ನು ಹೇಳು."

"ನಾವೂ ಬಲವಂತ ಮಾಡುಲ್ಲ. ಏನೋ ಚಿಕ್ಕೋಳು. ಜವಾಬ್ದಾರಿ ಕಡಿಮೆ. ತಾಯಿಯ ಕೈ ಕೆಳಗೆ ಬೆಳೆದಿದ್ದರೆ, ನಿನ್ನ ಹಾಗೇ ಬುದ್ಧಿ ಬೆಳೆದಿರುತ್ತಿತ್ತು. ಚಿಕ್ಕ ವಯಸ್ಸಿನಲ್ಲೇ ತಾಯಿಯನ್ನು ಕಳೆದುಕೊಂಡವಳು ಅನ್ನೋ ವಿಷಯ ನನಗೂ ಗೊತ್ತಿರುವುದರಿಂದ, ನನಗೂ ಅವಳ ಮೇಲೆ ಕರುಣೆ ಇದೆ." ಮಾಲಾ ವಸುಧಾಳ ಮೊಣಕೈ ತಿವಿದಳು. ಮಗುವನ್ನು ಚಿವುಟಿದಳು. ಅವನು ಅಳಲು ಪ್ರಾರಂಭಿಸಿದ. ಸುಮಿತ್ರಾದೇವಿಯ ಭಾಷಣಕ್ಕೆ ಒಂದು ಕೊನೆ ಸಿಕ್ಕಿತು. ಕುಡಿಸಲು ಹಾಲನ್ನು ತರಲು ವಸುಧಾ ಎದ್ದು ಹೋದಾಗ, ಮಾಲಾಳೂ ಎದ್ದಳು ವಸುಧಾಳನ್ನು ಹಿಂಬಾಲಿಸಿದಳು.

"ಈ ಹೆಂಗಸಿಗಂತೂ ಬೇರೆ ಕೆಲಸವಿಲ್ಲ. ಈ ಧ್ರುವನಿಗೆ ಈ ಜನ್ಮದಲ್ಲಿ ಮಕ್ಕಳಾಗೋದಿಲ್ಲ ಅನ್ನೋ ಸತ್ಯ ಗೊತ್ತಿಲ್ಲ."

"ಪಾಪ ಆಕೆಯದು ತಪ್ಪೇನು? ಮಗನಿಗೆ ಏಡ್ಸ್‌ನಂತಹ ಭಯಂಕರ ರೋಗವಿದೆ ಅಂತ ತಿಳಿದರೆ, ಆ ತಕ್ಷಣವೇ ಕುಸಿದು ಬೀಳ್ತಾಳೆ..."

"ನಾನೇ ಹೇಳಿಬಿಟ್ಟರೆ ಹೇಗಿರುತ್ತೆ ?" ಕೈ ಕೊಡವಿದಳು.

"ಮಾಲಾ... ಪಾಪ ಅಂತ ಅನ್ನಿಸೋದೇ ಇಲ್ವಾ ನಿನಗೆ...?"

"ತಮಾಷೆ ಮಾಡಿದೆ. ಇನ್ನೂ ಆಕೆಯ ಕೊಲೆ ಅಪರಾಧದ ಮೇಲೆ ಜೀವಮಾನವೆಲ್ಲಾ ಜೈಲಿನಲ್ಲಿ ಕೊಳೆಯೋಕೆ ನನಗಿಷ್ಟವಿಲ್ಲಪ್ಪ" ಕಿಸಕ್ಕನೆ ನಕ್ಕಳು.

"ಪ್ರತಾಪಂದು ಏನು ಗಲಾಟೆ ? ಮಧು ಸರಿಯಾಗಿ ಹೇಳಲಿಲ್ಲ."

"ತಲೆ ಹರಟೆ ಮಾಡಿದ. ತಲೆಗೆ ಹೊಡೆದೆ. ತಲೆ ಕೆಟ್ಟವನ ತರಹ ಆಡ್ತಿದಾನೆ. ನಾನು ಇಲ್ಲಿ ಇರಬೇಕಂತೆ. ಇಲ್ಲದಿದ್ದರೆ ಅವನು ನನ್ನ ಮೇಲೆ ಕೇಸ್ ಹಾಕ್ತಾನಂತೆ. ನಾನು ಇಲ್ಲಿಯೇ ಇರಲಿ ಅಂತ ಮಧುಗೆ... ನೀನೇನಂತೀಯ ?"

"ನಿನಗೆ ಇಲ್ಲಿ ಇರೋಕೆ ಇಷ್ಟವಿಲ್ಲ, ನನಗೂ ಗೊತ್ತು. ಆದರೆ ಪ್ರತಾಪನಿಂದ ಬಚಾವಾಗಬೇಕಾದರೆ, ಕೆಲವು ದಿನಗಳಾದರೂ ಇಲ್ಲಿ ಇರೋದೇ ವಾಸಿ."

"ನೀನೂ ಹೇಗೇ ಅಂತೀಯಾ ? ಬೇರೆ ದಾರೀನೇ ಇಲ್ವಾ ?"

"ದಾರಿ ಇರಬಹುದು. ಸಧ್ಯಕ್ಕೆ ಅದು ಗೋಚರವಾಗ್ತಿಲ್ಲ. ಅಲ್ಲಿಯವರೆಗೆ ಕಾಯಬೇಕು ಅಲ್ವಾ ?" ಮಾಲಾ ಕೆಟ್ಟ ಮುಖ ಮಾಡಿದಳು.

○ ○ ○

"ಮಧುಕರ ಊರಿಗೆ ವಾಪಸ್ಸು ಹೊರಟು ಹೋಗಿದ್ದ. ಇದ್ದಕ್ಕಿದ್ದಂತೆ ಮತ್ತೆ ರಘು ಪ್ರತ್ಯಕ್ಷನಾಗಿದ್ದ. ಮಾಲಾ ಅವನಿಗೆ ವಸುಧಾಳನ್ನು ಪರಿಚಯಿಸಿಕೊಟ್ಟಳು. ವಸುಧಾಳ ಮೆಚ್ಚುಗೆಯನ್ನು ಗಳಿಸಲು ಅವನು ಆಕಾಶನನ್ನು ಅತಿ ಮುದ್ದು ಮಾಡುತ್ತಿದ್ದ. ಮಾಲಾ ಮುಖ ಸಿಂಡರಿಸುತ್ತಿದ್ದಳು.

"ರಘು ತುಂಬಾ ಚೀಪ್ ಆಗಿ ಬಿಹೇವ್ ಮಾಡ್ತಾನೆ. ಸ್ವಲ್ಪ ಕೇರ್ ಫುಲ್ ಆಗಿರು" ವಸುಧಾಳಿಗೆ ಎಚ್ಚರಿಕೆ ನೀಡಿದಳು.

"ಇವನನ್ನು ಈ ಮುಂಚೆ ಎಲ್ಲೋ ನೋಡಿದೀನಿ ಅಂತ ತುಂಬ ಅನ್ನಿಸ್ತಿದೆ. ಎಲ್ಲಿ ಅಂತ ತಿಳೀತಿಲ್ಲ"

"ನನ್ನ ಕಲೀಗ್ ಆಗಿದಾನಲ್ಲ..."

"ಅದೇ ಆಶ್ಚರ್ಯ. ಧ್ರುವನಂತಹ ಬಿಸಿನೆಸ್ ಮನುಷ್ಯನ ತಮ್ಮ, ಅಲ್ಲಿ ಒಂದು ಸಣ್ಣ ಆಫೀಸಿನಲ್ಲಿ ಹೇಗೆ ಕೆಲಸಕ್ಕೆ ಸೇರಿಕೊಂಡ ? ಯಾಕೆ ಸೇರಿಕೊಂಡ !?"

"ಅದೇನು, ಅತ್ತಿಗೆ ನಾದಿನಿ ಇಬ್ಬರೇ ಪಿಸು ಪಿಸು ಮಾತನಾಡ್ತೀರಿ. ನನಗೂ ಸ್ವಲ್ಪ ಹೇಳಿ." ಸುಮಿತ್ರಾದೇವಿ ಹೇಳಿದಾಗ ವಸುಧ ನಕ್ಕಳು.

"ನಾವು ಅತ್ತಿಗೆ ನಾದಿನಿ ಅನ್ನೋದಕ್ಕಿಂತ ಸ್ನೇಹಿತೆಯರೇ ಜಾಸ್ತಿ. ಒಟ್ಟಿಗೇ ಕಾಲೇಜಿನಲ್ಲಿ ಓದಿದೆವು. ಹಳೆಯ ವಿಷಯಗಳನ್ನು ನೆನೆಸಿಕೊಳ್ಳುತ್ತಿದ್ದೆವು."

"ನಿನ್ನ ತಂಗಿಗೆ ಎಷ್ಟು ವಯಸ್ಸು! ಇದ್ದಕ್ಕಿದ್ದಂತೆ ಆಕೆ ಕೇಳಿದಾಗ ವಸುಧಾ ಬೆಚ್ಚಿ ಬಿದ್ದಳು.

"ಅವಳಿಗೆ ಇಪ್ಪತ್ತು ವರ್ಷ... ಅಷ್ಟೇ..."

"ನಮ್ಮ ರಘೂಗೆ ಇಪ್ಪತ್ತಾರು ವರ್ಷ ಅಷ್ಟೇ..."

"ನನ್ನ ತಂಗಿಗೆ ಚಿಕ್ಕವಳಿದ್ದಾಗಲೇ ಮದುವೆ ಫಿಕ್ಸ್ ಆಗಿದೆ. ಸ್ವಂತ ಸೋದರ ಮಾವನ ಮಗನ ಜೊತೆ..." ವಸುಧಾ ಕಷ್ಟಪಟ್ಟು ಸುಳ್ಳನ್ನು ಹೇಳಿದಳು.

"ಹೌದೇನೇ ? ನೀನು ನನ್ಗೆ ಹೇಳಿರಲೇ ಇಲ್ಲ" ಮಾಲಾ ಕೇಳಿದಾಗ ಅವಳು ಹಲ್ಲು ಕಡಿದಳು.

"ಈಗ ಆ ವಿಷಯ ಬಂತು ಅದಕ್ಕೇ ಹೇಳಿದೆ. ಇಲ್ಲದಿದ್ದರೆ, ಯಾರಿಗೂ ಆ ವಿಷಯ ಹೇಳುವುದಿಲ್ಲ."

"ನನಗೂ ಹೇಳಲಿಲ್ಲವಲ್ಲ. ನಾನು ನಿನ್ನ ಆಪ್ತ ಸ್ನೇಹಿತೆ..."

"ನನ್ನ ತಂಗಿ ಬೈತಾಳೆ. ಎಲ್ಲರಿಗೂ ಹೇಳಿದ್ರೆ."

"ಯಾಕೆ ಅವಳಿಗೆ ಈ ಮದುವೆ ಇಷ್ಟವಿಲ್ವಾ ? ಇಷ್ಟವಿಲ್ಲದಿದ್ದರೆ ಖಂಡಿತಾ ಮಾಡಬೇಡಿ. ಅವಳು ನನ್ನ ಹಾಗೆ ಹಾಳಾಗಿ ಹೋಗ್ತಾಳೆ ಅಷ್ಟೇ..."

"ನೀನು ಸ್ವಲ್ಪ ಸುಮ್ಮನಿರ್ತೀಯಾ ? ಅದೆಷ್ಟು ಮಾತಾಗ್ತೀಯ" ಸುಮ್ಮನಿರು ಎನ್ನುವಂತೆ ಕಣ್ಣುಸನ್ನೆ ಮಾಡಿದಳು. ಮಾಲಾ ಕೋಪಿಸಿಕೊಂಡು ಒಳಗೆ ಎದ್ದು ಹೋದಳು. ವಸುಧಾ ಮಲಗಿದ್ದ ಮಗುವನ್ನು ಎತ್ತಿಕೊಂಡು ರೂಮಿನೊಳಕ್ಕೆ ಬಂದಳು.

"ಸ್ಸಾರಿ ಕಣೇ ಕೋಪ ಬಂತಾ ?"

"ಮತ್ತಿನ್ನೇನು ? ಆಕೆಯ ಎದುರಿಗೇ ಅವಮಾನ ಮಾಡಿದೆಯಲ್ಲಾ ?"

"ನಿನಗೆ ಸ್ವಲ್ಪನಾದ್ರೂ ಸೂಕ್ಷ್ಮ ಬೇಡ್ವ? ನಾನು ನಿಜ ಹೇಳಿದೆ ಅಂತ ಅಂದ್ಕೊಂಡ್ಯಾ ?"

"ಅಂದರೆ... ವಿನುತಂಗೆ ಮದುವೆ ಗೊತ್ತಾಗಿಲ್ವಾ ?"

"ಇಲ್ಲ. ಹಾಗೆ ಹೇಳಿದ್ರೆ, ಈ ರಘುಗೆ ಪ್ರಪೋಸ್ ಮಾಡ್ತಿದ್ರು..."

"ರಘು ಧ್ರುವನ ತಮ್ಮ ಅಂತ ಬೇಡಾಂತ ಅನ್ನಿಸ್ತಾ..."

"ರಘು ಮೇಲೆ ನನಗೆ ಏನೋ ಅನುಮಾನ ಮಾಲಾ... ಈ ಮುಂಚೆ ಅವನನ್ನು ಎಲ್ಲಿಯೋ ನೋಡಿದೀನಿ ಅಂತ ಹೇಳಲಿಲ್ವಾ? ಸರಿಯಾಗಿ ನೆನಪಿಗೆ ಬರುತ್ತಿಲ್ಲ..."

"ಈ ಗ್ಯಾಂಗೇ ಸರಿಯಾಗಿಲ್ಲ. ಬರೀ ಢೋಂಗಿಗಳು. ನನಗ್ಯಾಕೆ ಗಂಟು ಬಿದ್ದರು ಅಂತ. ಇದಕ್ಕೆಲ್ಲ ನಿನ್ನ ಗಂಡನೇ ಕಾರಣ."

"ಮಧುಗೆ ಪಶ್ಚಾತ್ತಾಪವಾಗಿದೆ... ಆದದ್ದೆಲ್ಲಾ ಒಳ್ಳೆಯದಕ್ಕೆ ಅಂತ ಸಮಾಧಾನ ಮಾಡ್ಕೊಬೇಕಾಗಿದೆ. ಇಲ್ಲದಿದ್ದರೆ ಈ ಆಕಾಶ ನನಗೆಲ್ಲಿ ದೊರಕುತ್ತಿದ್ದ ?

"ನೀನು ತುಂಬಾ ಸ್ವಾರ್ಥಿಕಣೇ. ಬರೀ ನಿನ್ನ ಸುಖಾನ ಮಾತ್ರ ಯೋಚಿಸ್ತೀಯ..."

"ಸ್ವಾರ್ಥಿ ಏನಲ್ಲ... ನನಗೆ ಅಲ್ಪದಲ್ಲೇ ತೃಪ್ತಿ. ಮಧು ಒಳ್ಳೆಯವನಲ್ಲ ಅಂತ ತಿಳಿದೂ ಮದುವೆಯಾದೆ. ಅವರ ಮೂರ್ಖತನದಿಂದ ಬಂಜೆಯಾದೆ... ನಿನ್ನ ದುಡುಕುತನದಿಂದ ತಾಯ್ತನ ಪಡೆದೆ... 'ಪಾಲಿಗೆ ಬಂದದ್ದು ಪಂಚಾಮೃತ' ಅಂತ ಅಕ್ಸೆಪ್ಟ್ ಮಾಡಿಕೊಂಡಿದೀನಿ. ಸ್ವಾರ್ಥಿ ಗೀರ್ಥಿ ಅಂತ ಮಾತ್ರ ಅನ್ನಬೇಡ."

"ಸ್ಸಾರಿ... ಸ್ಸಾರಿ..." ಎಂದು ಹೇಳಿದವಳು, ಇದ್ದಕ್ಕಿದ್ದಂತೆಯೇ ಮುಖವನ್ನು ಕಿವುಚಿಗಾಗ, ವಸುಧಾ ಗಾಬರಿಯಾದವಳು.

"ಏನಾಯ್ತು ? ಏನಾಯ್ತು ?"

"ಯಾಕೋ ಹೊಟ್ಟೆ ತೊಳಸುತ್ತಿದೆ. ಸಂಕಟವಾಗುತ್ತಿದೆ..." ಎಂಬು ಹೇಳಿ ಮಲಗಿಬಿಟ್ಟಳು.

"ನೀನು ಸರಿಯಾಗಿ ಊಟ ತಿಂಡಿ ಏನನ್ನೂ ಮಾಡುತ್ತಿಲ್ಲ. ಅದಕ್ಕೇ ಹೀಗಾಗ್ತಿದೆ. ಇಲ್ಲಿ ಇದ್ದ ಮೇಲೆ, ಯಾವ ಮುಲಾಜು ? ಚೆನ್ನಾಗಿ ಏನು ಬೇಕೋ ಕೇಳಿ ಮಾಡಿಸ್ಕೋ. ಹೇಗೂ ಅಡಿಗೆಯವರು ಇದಾರೆ. ಕೆಲಸದವರು ಇದಾರೆ. ಏನು ಕಷ್ಟ! ಚೆನ್ನಾಗಿ ಉಂಡು ತಿಂದು ಚೆನ್ನಾಗಿರು."

"ಅಂದರೆ ನಿನ್ನ ಹಾಗೆ ಪಾಲಿಗೆ ಬಂದದ್ದು ಪಂಚಾಮೃತ ಅಂತ ಅದ್ಕೊಂಡು ಹೂಂ ಹೂಂ. ನನ್ನ ಕೈಲಿ ಸಾಧ್ಯವಿಲ್ಲ. ಇಲ್ಲಿ ಇರೋದು ತಿಂದು ಕುಡಿದು ಮಲಗೋಕ್ಕಲ್ಲ."

"ಓಕೇ. ಆದರೆ ಬದುಕಿರೋಕೆ ತಿನ್ನಲೇಬೇಕು ಅಲ್ವಾ ?... ಕಾಟಾಚಾರಕ್ಕೆ ತಿನ್ನುವ ಬದಲು ರುಚಿರುಚಿಯಾಗಿ ತಿನ್ನಬೇಕು."

"ಓಕೆ. ಮೇಡಂ. ಇನ್ನು ನನ್ನ ಜೀವನದಲ್ಲಿ ಬರೀ ಇಷ್ಟೇ ತಾನೇ."

"ನೀನ್ಯಾಕೆ ಇಲ್ಲಿ ಧ್ರುವನ ಆಫೀಸಿನಲ್ಲಿ ಕೆಲಸಕ್ಕೆ ಹೋಗಬಾರದು ?" ಅಲ್ಲಿ

ಭಾಸ್ಕರನೂ ಇರ್ತಾನೆ. ನಿನ್ನ ಲೈಫ್‌ನಲ್ಲಿ ಸ್ವಲ್ಪ ಬದಲಾವಣೆ ಇರುತ್ತೆ."

"ನಾನು ಪರ್ಮನೆಂಟ್ ಆಗಿ ಇಲ್ಲಿ ಇರುಲ್ಲ. ಅಲ್ಲದೇ ಧ್ರುವನ ಯಾವ ಋಣವೂ ನನಗೆ ಬೇಡ. ಯಾಕೆ ಮಧು ಹತ್ತಿರ ನನ್ನ ಖರ್ಚಿಗೆ ಕೊಡುವಷ್ಟು ಹಣವೂ ಇಲ್ಲವಂತ...? ಡ್ಯಾಡಿಯ ಹಣದಲ್ಲಿ ನನಗೂ ಪಾಲಿದೆ."

"ಖರ್ಚು ವೆಚ್ಚದ ಮಾತಲ್ಲ. ನೀನು ತಪ್ಪು ತಿಳಿದುಕೊಳ್ತೀಯ. ನಾಲ್ಕು ಗೋಡೆ ಮಧ್ಯೆ ಕುಳಿತಿರುವ ಬದಲು, ಹೊರಗೆ ನಾಲ್ಕಾರು ಗಂಟೆಗಳು ಕಳೆಯುತ್ತೆ ಅಲ್ವಾ?"

"ಹೋಗೋಣ. ನನಗೆ ಈಗ ಆ ಮಾತು ಬೇಡ."

"ಯಾಕೆ ಭಯಾನಾ ಮಾಲಾ? ಮತ್ತೆ ಏನಾದರೂ ಅನಾಹುತ ನಡೆದೀತು ಅಂತ."

"ಭಯ ಇಲ್ಲದೇ ಇರುತ್ತಾ ವಸುಧಾ ನೀನೇ ಹೇಳು. ಯಾವುದೇ ಹೆಣ್ಣಾದರೂ, ಅತ್ಯಾಚಾರವನ್ನು ಸಹಿಸುವ ಶಕ್ತಿ ಅವಳಿಗಿರುವುದಿಲ್ಲ. ಆ ಘಟನೆಯನ್ನು ನೆನೆಸಿಕೊಂಡರೇ ಅಸಹ್ಯವಾಗುತ್ತದೆ. ಇಲ್ಲಿಗೆ ಬಂದು ಸಿಕ್ಕಿ ಹಾಕಿಕೊಳ್ಳದೇ ಇದ್ದಿದ್ದರೆ, ಕೇಸ್ ಹಾಕಿಸಬಹುದಾಗಿತ್ತು."

"ಯಾರ ಮೇಲೆ ಕೇಸ್ ಹಾಕಿಸ್ತೀಯಾ? ಅಲ್ಲದೆ ನಮ್ಮ ಮನೆಯ ವಿಷಯ ಎಲ್ಲರಿಗೂ ತಿಳಿಯುತ್ತಲ್ಲ..."

"ಎಂಥಾ ಅಸಹಾಯಕತೆ ಅಲ್ವಾ? ಆದರೆ ನಾನು ಖಂಡಿತಾ ಸುಮ್ಮನಿರೋಲ್ಲ. ಒಂದಲ್ಲ ಒಂದು ದಿನ ಅವನು ಯಾರೂಂತ ಪತ್ತೆ ಹಚ್ಚಿಸಿ, ಹುಚ್ಚ ನಾಯಿಯ ಕೈಲಿ ಕಚ್ಚಿಸ್ತೀನಿ. ರೇಬಿಸ್ ಬಂದು ಅವನು ಹೆದರಿ ಸಾಯಬೇಕು" ವಸುಧಾಳ ಮುಖದ ಮುಂದೆ ರಘುವಿನ ಮುಖ ತೇಲಿ ಬಂತು.

○ ○ ○

ಇದ್ದಕ್ಕಿದ್ದಂತೆ ಭಾಸ್ಕರನನ್ನು ಕಂಡು ಮಾಲಾ ಗಲಿಬಿಲಿಗೊಂಡು ಹಾಗೇ ನಿಂತುಬಿಟ್ಟಳು. "ಹೇಗೀದೀರಾ ಮೇಡಂ?" ಅವನು ಕೈ ಕಟ್ಟಿ ಕೇಳಿದಾಗ, ಅವನು ತುಂಬಾ ಬದಲಾಗಿಬಿಟ್ಟಿದ್ದಾನೆಂದೆನಿಸಿತ್ತು. ತಮ್ಮಿಬ್ಬರಲ್ಲಿ ಈಗ ಬಹಳ ಅಂತರ ಬಂದಿದೆ ಅಂತ ಎನ್ನಿಸಿತ್ತು.

"ಚೆನ್ನಾಗಿದೀನಿ..." ಎಂದಷ್ಟೇ ಹೇಳಿದಳು. ವಸುಧಾ ಹೊರಕ್ಕೆ ಬಂದಳು. ಅವಳ ಕೈಲಿದ್ದ ಮಗುವನ್ನು ಕಂಡು ಬೆರಗಾಗಿ ನಿಂತುಬಿಟ್ಟ. ಅದೇ ರೂಪ, ಆದಿತ್ಯನ ಅವಳಿ ಸೋದರನಂತಿದ್ದಾನೆ... ಮಾಲಾಳ ಕತೆ

ಮೆಚ್ಚುಗೆಯಿಂದ ನೋಡಿದ.

ಬಾ ಎನ್ನುವಂತೆ ಮಗುವಿನ ಕಡೆ ಕೈ ಮಾಡಿದ. ಮಗು ಬರಲಿಲ್ಲ. "ಹೊಸ ಮುಖ..." ಎಂದಳು ವಸುಧಾ.

"ಹೊಸ ಮುಖ ಏನಿಲ್ಲ. ಅವನಿಗೂ ಎಲ್ಲಾ ಗೊತ್ತಾಗುತ್ತೆ" ಮಾಲ ನುಡಿದಳು.

"ಸ್ಸಾರಿ ಮೇಡಂ. ನನಗೆ ಅರ್ಥವಾಗಲಿಲ್ಲ" ಎಂದ.

"ಪರವಾಗಿಲ್ಲ ಬಿಡಿ. ನಿಧಾನವಾಗಿ ಅರ್ಥವಾಗಬಹುದು" ಅಂತಂದಳು.

"ನಾನು ಇನ್ನೊಂದೆರಡು ದಿನಗಳಲ್ಲಿ ಊರಿಗೆ ವಾಪಸ್ಸು ಹೋಗ್ತೀನಿ. ಇಲ್ಲಿ ನಿಮ್ಮನ್ನಾ ಬಿಟ್ಟರೆ ಬೇರೆ ಪರಿಚಯದವರು ಇಲ್ಲ. ಆಗಾಗ್ಗೆ ಬಂದು ವಿಚಾರಿಸಿ ಕೊಂಡು ಹೋಗಿ" ಎಂದಳು ವಸುಧಾ.

"ನಾನೇನೋ ಬರ್ತೀನಿ. ಆದರೆ ಧ್ರುವನ ಮನೆಯವರಿಗೆ ಬೇಸರ ವಾದರೆ ?"

"ನಿಮಗೆ ಇಷ್ಟವಿಲ್ಲದಿದ್ದರೆ ಬರಬೇಡಿ ಭಾಸ್ಕರ್... ನೀವು ಇಲ್ಲದೆಯೂ ಬದುಕಿರಬಲ್ಲೆ ಅನ್ನೋ ಸತ್ಯ ನನಗೆ ಗೊತ್ತಾಗಿದೆ" ಮಾಲಾ ನುಡಿದಳು.

"ಆ ಮಾತೆಲ್ಲ ಇಲ್ಲಿ ಬೇಡ ಮಾಲಾ... ಇವರು ಆಗ ಈಗ ಬಂದರೆ, ನಿನ್ನ ಬೇಸರವೂ ಕಳೆಯುತ್ತೆ ಅಂತ ಹೇಳಿದೆ ಅಷ್ಟೇ."

"ಬೇಸರ ಕಳೆಯುತ್ತೋ ಬಿಡುತ್ತೋ ನನಗೆ ತಿಳಿಯದು. ಆದರೆ ನಿಮ್ಮ ಸಹಾಯ ಬೇಕಾಗಬಹುದು. ಸಹಾಯ ಮಾಡ್ತೀರಿ ತಾನೆ ? ಅಥವಾ ಸಮಯದಲ್ಲಿ ಕೈ ಕೊಡ್ತೀರೋ ?" ಮೆಲುವಾಗಿ ನಕ್ಕಳು.

"ನಾನು ಅಂಥೋನಲ್ಲ ಮೇಡಂ. ನನ್ನ ಕೈಲಾದ ಸಹಾಯ ಮಾಡ್ತೀನಿ. ಆದರೆ ಒಂದು ಕಂಡೀಷನ್ನು..."

"ನಿಮ್ಮ ನಿಮ್ಮ ಮಿಸೆಸ್‌ಗೆ, ನಮ್ಮಿಬ್ಬರ ಸಂಬಂಧದ ಬಗ್ಗೆ ತಿಳಿಯಬಾರದು ತಾನೇ... ಅವರಿಗೆ ಹೆದರ್ತೀರಾ ?"

"ಸಮಾಜಕ್ಕೆ ಹೆದರುತ್ತೀನಿ. ಅವಳಿಗೆ ನನ್ನಿಂದ ಬಹಳ ಅನ್ಯಾಯವಾಗಿದೆ. ಈ ವಿಷಯ ತಿಳಿದರೆ ಅವಳಿಗೆ ಆಘಾತವಾಗುತ್ತದೆ" ಇಬ್ಬರೂ ಸುಮ್ಮನಾಗಿಬಿಟ್ಟರು.

ಮಹಿಳಾ ಸಂಘಕ್ಕೆ ಹೋಗಿದ್ದ ಸುಮಿತ್ರಾದೇವಿ ಮನೆಗೆ ಬಂದಳು. ಭಾಸ್ಕರ ಎದ್ದುನಿಂತು ಕೈ ಮುಗಿದ. ಆಕೆ ಭಾಸ್ಕರನ ಮುಖವನ್ನೇ ಆಶ್ಚರ್ಯದಿಂದ

ವೀಕ್ಷಿಸಿದಳು. ವಸುಧಾ ಪರಿಚಯಿಸಿದಳು.

"ಗೊತ್ತು ಗೊತ್ತು ನೋಡಿದೀನಿ. ಆದರೆ ಅದೇನು ಇದ್ದಕ್ಕಿದ್ದ ಹಾಗೆ ಬಂದಿರೋದು ಧ್ರುವ ಊರಿನಲ್ಲಿಲ್ಲ ಅನ್ನೋದು ಗೊತ್ತಿದೆ ಅಲ್ವಾ?"

"ಹುಂ. ಗೊತ್ತು. ನಾಳೆ ನಮ್ಮ ಮನೆಗೆ ಊಟಕ್ಕೆ ಕರೆಯೋಣ ಅಂತ ಬಂದೆ. ಎಲ್ಲರೂ ಬರಬೇಕು" ಎಂದ.

"ನನಗೆ ಸಂಘದ ಕೆಲಸವಿದೆ. ಬಿಡುವಿಲ್ಲ. ಧ್ರುವ ಬಂದಿರುತ್ತಾನೋ ಇಲ್ಲವೋ ತಿಳಿಯದು. ರಘು ಜೊತೆ ಇವರುಗಳನ್ನು ಕಳಿಸ್ತೀನಿ" ಮಾಲಾ, ವಸುಧಾ ಮುಖ ಮುಖ ನೋಡಿಕೊಂಡರು.

"ಇಲ್ಲ. ಭಾಸ್ಕರ್ ಮುಂದಿನ ಸಲ ಬಂದಾಗ ಬರೋಣಂತೆ" ಎಂದು ವಸುಧಾ ನಯವಾಗಿ ನಿರಾಕರಿಸಿದಳು. ಮಾಲಾ ಹಾಯಾಗಿ ಉಸಿರಾಡಿದಳು. ಭಾಸ್ಕರ ಪೆಚ್ಚಾಗಿದ್ದ. ಅವನು ಹೊರಟು ಹೋದ ನಂತರ, ಸುಮ್ಮನೆ ಎಂಬಂತೆ ಸುಮಿತ್ರಾದೇವಿ ಹೇಳಿದಳು.

"ನಿನ್ನ ಮಗನಿಗೂ, ಭಾಸ್ಕರನಿಗೂ ಎಷ್ಟು ಹೋಲಿಕೆ ಇದೆ ಅಲ್ವಾ?" ಮಾಲಾಳ ಕಡೆ ನೋಡಿ, ವಸುಧಾ ಪೆಚ್ಚಾಗಿ ನಕ್ಕಳು. ಊರಿಗೆ ಹೊರಡುವುದಾಗಿ ಹೇಳಿದಳು.

ಮಾಲಾ ವಸುಧಾಳನ್ನು ಬಲವಂತದಿಂದ ಉಳಿಸಿಕೊಂಡಳು. "ನೀನೂ ಇಲ್ಲದಿದ್ದರೆ ನನಗೆ ಉಸಿರು ಕಟ್ಟಿದಂತಾಗುತ್ತದೆ... ನನಗೇ ಯಾಕೆ ಹೀಗಾಯ್ತು ಅಂತ.. ಮಧು ನನ್ನ ಲೈಫ್‌ನ ಕಾಂಪ್ಲಿಕೇಟ್ ಮಾಡಿಟ್ಟುಬಿಟ್ಟ." ಮಾಲ ಉದ್ವೇಗ ತಾಳಲಾರದೆ ಅತ್ತುಬಿಟ್ಟಳು.

"ಅಳಬೇಡ ಮಾಲಾ... ಎಲ್ಲಾ ಸಮಸ್ಯೆಗಳಿಗೂ ಒಂದು ಪರಿಹಾರವಿದ್ದೇ ಇರುತ್ತೆ."

"ನನ್ನ ಸಹನೆಗೂ ಒಂದು ಮಿತಿ ಇದೆ. ಇದುವರೆಗೂ ನಾನೆಂದೂ ಆತ್ಮಹತ್ಯೆಯ ಬಗ್ಗೆ ಯೋಚಿಸಿದವಳಲ್ಲ. ಆದರೆ ಇನ್ನು ಮುಂದೆ ಅದೊಂದೇ ದಾರಿ."

"ಥೂ ಬಿಡ್ತು ಅನ್ನು. ಆತ್ಮಹತ್ಯೆ ಮಾಡಿಕೊಳ್ಳುವ ಮಾತನ್ನಾಡಿದರೆ ನನ್ನಾಣೆ. ನಿನ್ನ ಮಗುವಿನ ಮೇಲಾಣೆ."

"ಆಯ್ತು. ಧ್ರುವ ಊರಿಗೆ ವಾಪಸ್ಸು ಬಂದ ಕೂಡಲೇ ನಾನೇ ಅವರ ಹತ್ತಿರ ಮಾತನಾಡಿ ನಿನ್ನನ್ನು ಇಲ್ಲಿಂದ ಕರೆದುಕೊಂಡು ಹೋಗ್ತೀನಿ.

ಆಯ್ತಾ ?" ಮಾಲಾ ಕಣ್ಣೊರೆಸಿಕೊಂಡಳು.

ಂ ಂ ಂ

ಧ್ರುವ ಹತ್ತು ಹನ್ನೆರಡು ದಿನಗಳು ಕಳೆದರೂ ವಾಪಸ್ಸಾಗಲಿಲ್ಲ. ಅವನು ಪ್ರತಾಪನೊಂದಿಗೆ ಯಾವುದೋ ಬಿಸಿನೆಸ್ ಸೆಮಿನಾರ್‌ಗೆಂದು ವಿದೇಶಕ್ಕೆ ಹೊರಟುಹೋಗಿದ್ದ. ಅದು ಮನೆಯವರಿಗೆ ತಿಳಿಸಿದ್ದ ಕಾರಣ ಅಷ್ಟೇ. ಏಡ್ಸ್ ರೋಗಕ್ಕೆ ಏನಾದರೂ ಚಿಕಿತ್ಸೆ ಸಿಗುವುದಿದೆಯೇ ಅಂತ ತಿಳಿಯಲು ಸ್ಪೆಷಲಿಸ್ಟ್‌ಗಳನ್ನು ಕನ್ಸಲ್ಟ್ ಮಾಡಲು ಹೋಗಿದ್ದರು. ಈಗ ಪ್ರತಾಪನೂ ಏಡ್ಸ್ ರೋಗಿಯೆಂದು ಖಚಿತವಾಗಿತ್ತು. ಆದರೆ ಅವನು ಅದನ್ನು ಧ್ರುವನಿಂದ ಮುಚ್ಚಿಟ್ಟಿದ್ದ. ಆದರೆ ಧ್ರುವ ಏಡ್ಸ್ ರೋಗಿಯೆಂದು ರಘುವಿಗೆ ತಿಳಿದಿತ್ತು.

ರಘು ಬಲವಂತವಾಗಿ, ಮಾಲಾ, ವಸುಧಾಳನ್ನು ಕರೆದುಕೊಂಡು, ಊರೆಲ್ಲಾ ಸುತ್ತಾಡಿಸಿದ. ಬೀಚ್‌ಗಳಿಗೆ ಕರೆದುಕೊಂಡು ಹೋಗಿದ್ದ. ಪ್ರಸಿದ್ಧ ದೇವಾಲಯಗಳಿಗೆ ಕರೆದುಕೊಂಡು ಹೋಗಿದ್ದ. ಆಕಾಶನನ್ನು ಬಲವಂತವಾಗಿ ಎತ್ತಿಕೊಂಡು ಅತಿಯಾಗಿ ಮುದ್ದಿಸುತ್ತಿದ್ದ. ಇಬ್ಬರಲ್ಲೂ ಸ್ನೇಹ ಬೆಳೆದಿತ್ತು.

ಎರಡು ದಿನಗಳ ನಂತರ ವಸುಧಾ ಹೊರಟುಬಿಟ್ಟಳು. ರಘೂನೇ ಅವಳನ್ನು ಏರ್‌ಪೋರ್ಟ್‌ಗೆ ಕರೆದುಕೊಂಡು ಹೋಗಿ ಪ್ಲೇನ್ ಹತ್ತಿಸಿದ. ವಾಪಸ್ಸು ಬರುವಾಗ ಕಾರಿನಲ್ಲಿ ಮಾಲಾ ರಘು ಇಬ್ಬರೇ. ಅವನಿಗೆ ಅವಳ ಹತ್ತಿರ ಮಾತನಾಡಬೇಕೆಂಬ ಆಸೆ. ಹಾಗೆ ಮಾತನಾಡುತ್ತಾ ಡ್ರೈವ್ ಮಾಡುತ್ತಿದ್ದಾಗ, ಎದುರಿನಿಂದ ವೇಗವಾಗಿ ಬರುತ್ತಿದ್ದ ಕಾರನ್ನು ಆತ ಗಮನಿಸಲಿಲ್ಲ. ನೇರವಾಗಿ ಡಿಕ್ಕಿ ಹೊಡೆದು ಕಾರು ಪಕ್ಕಕ್ಕೆ ಉರುಳಿ ಬಿತ್ತು. ರಘುಗೆ ಎಚ್ಚರವಾದಾಗ ತಾನು ಯಾವುದೋ ಆಸ್ಪತ್ರೆಯ ಬೆಡ್‌ನಲ್ಲಿರುವುದು ಗಮನಕ್ಕೆ ಬಂತು. ಎದ್ದು ಕೂರಲು ನೋಡಿದ. ಕಾಲಿಗೆ ಬ್ಯಾಂಡೇಜ್ ಬಿಗಿಯಲಾಗಿತ್ತು. 'ಸಿಸ್ಟರ್' ಎಂದು ಜೋರಾಗಿ ಕಿರುಚಿಕೊಂಡ.

"ನರ್ಸು ಓಡಿ ಬಂದಳು. ಅವನು ಮಾಲಾಳ ಬಗ್ಗೆ ವಿಚಾರಿಸಿದ. ಅವರಿಗೆ ಹೋದ ಜ್ಞಾನ ಇನ್ನೂ ಬಂದೇ ಇಲ್ಲವೆಂದು ತಿಳಿಯಿತು. ಮನೆಗೆ ಫೋನು ಮಾಡಿಸಿದ. ಸುಮಿತ್ರಾದೇವಿಗೆ ವಿಷಯ ತಿಳಿದು ತಕ್ಷಣ ಆಸ್ಪತ್ರೆಗೆ ಬಂದಳು.

ಮಾಲಾಳ ತಲೆಗೆ ಏಟು ಬಿದ್ದುದರಿಂದ ಅವಳಿಗೆ ಹೋದ ಜ್ಞಾನ ಬರದೇ, ಅವಳು 'ಕೋಮಾ'ಕ್ಕೆ ಹೊರಟು ಹೋಗಿದ್ದಳು. ರಘು ಕಾಲಿಗೆ ಏಟು ಬಿದ್ದು ಜಖಂ ಆಗಿದ್ದುದರಿಂದ, ಒಂದು ಕಾಲನ್ನು ಆಂಪ್ಯೂಟ್ ಮಾಡಿದ್ದರು.

ಧ್ರುವನನ್ನು ಕಾಂಟ್ಯಾಕ್ಟ್ ಮಾಡಿ ತಕ್ಷಣವೇ ಬರಬೇಕೆಂದು ಹೇಳಿದರು. ಮಧುಗೆ ಹೇಳುವುದು ಬೇಡವೆಂದು ಅವರುಗಳೇ ನಿರ್ಧರಿಸಿದರು.

○ ○ ○

ಸುಮಾರು ಇಪ್ಪತ್ತು ದಿನಗಳ ನಂತರ ಮಾಲಾಳಿಗೆ ಜ್ಞಾನ ಬಂದಿತ್ತು. ಸ್ವಲ್ಪ ಸ್ವಲ್ಪವಾಗಿ ಎಲ್ಲರನ್ನೂ ಗುರುತಿಸುತ್ತಿದ್ದಳು. ಮೊದಲಿಗೆ ಅವಳಿಗೆ ನೆನಪಿಗೆ ಬಂದವನು "ಆಕಾಶ್... ನನ್ನ ಮಗು ನನ್ನ ಮಗು..." ಎಂದು ಕನವರಿಸುವಂತೆ ನುಡಿದಾಗ, ಎಲ್ಲರೂ ಮುಖ ಮುಖ ನೋಡಿಕೊಂಡರು.

"ಅವರಿಗೆ ಪೂರ್ತಿ ಜ್ಞಾನ ಬಂದಿಲ್ಲ. ಏನೇನೋ ಅಸಂಬದ್ಧ ಮಾತನ್ನಾಡುತ್ತಿದ್ದಾರೆ. ಗ್ರಾಜುಯಲ್ ಆಗಿ ಎಲ್ಲ ಕ್ಲಿಯರ್ ಆಗುತ್ತೆ. ಡೋಂಟ್ ವರಿ" ಎಂದಿದ್ದರು ಡಾಕ್ಟರ್. ಆದರೆ ಪ್ರತಾಪ ಜಾಣ್ಮೆಯಿಂದ, ಅವಳು ಆಡುವ ಮಾತುಗಳನ್ನು ರೆಕಾರ್ಡ್ ಮಾಡಿಕೊಡಬೇಕೆಂದು ನರ್ಸಿಗೆ ಹೇಳಿ, ಒಂದು ರೆಕಾರ್ಡರ್ ತಂದು ಅವಳ ವಾರ್ಡಿನಲ್ಲಿ ಇರಿಸಿದ. ಆ ವಿಷಯ ರಘುಗೆ ತಿಳಿದಾಗ, ಅವನಿಗೂ ಕುತೂಹಲವುಂಟಾಗಿತ್ತು.

ಇದೇ ಸಮಯದಲ್ಲಿ ಅವಳನ್ನು ಕೂಲಂಕಷವಾಗಿ ಪರೀಕ್ಷಿಸಿದ ಡಾಕ್ಟರು, ಅವಳು ಗರ್ಭಿಣಿಯಾಗಿರುವಳೆಂದು ತಿಳಿಸಿದಾಗ, ಎಲ್ಲರಿಗೂ ತಮ್ಮ ಕಾರ್ಯ ಸಫಲವಾಯಿತೆಂದು ಖುಷಿಯಾಗಿತ್ತು. ಆದರೆ ಆಕ್ಸಿಡೆಂಟ್ ನಡೆದುದು ಬೇಸರವೂ ಆಗಿತ್ತು.

"ಬಹಳ ಎಚ್ಚರಿಕೆಯಿಂದ ನೋಡಿಕೊಳ್ಳಬೇಕು. ಅವರ ದೇಹಸ್ಥಿತಿಯೂ ಸೂಕ್ಷ್ಮವಾಗಿದೆ. ತುಂಬಾ ವೀಕ್ ಆಗಿದ್ದಾರೆ. ಹಾಗೇ ಮನದಲ್ಲಿ ಏನೋ ಗೊಂದಲವಿದೆ. ಅದೇನು ಅಂತ ತಿಳಿದರೆ, ಅದಕ್ಕೆ ಸೂಕ್ತವಾದ ಚಿಕಿತ್ಸೆಯನ್ನು ನೀಡಬಹುದು ಅಂತ ಡಾಕ್ಟರು ಮತ್ತೆ ಹೇಳಿದಾಗ, ಅವರುಗಳಿಗೆ ಆತಂಕವೂ ಆಗಿತ್ತು.

ರಘುಗೆ ಮಾಲಾ ಗರ್ಭಿಣಿಯಾಗಿದ್ದಾಳೆಂದು ತಿಳಿದಾಗ, ತಾನು ನಡೆಸಿದ ಕ್ರೌರ್ಯ ನೆನಪಾಗಿತ್ತು. ಪ್ರತಾಪನ ಮಾತಿಗೆ ಒಪ್ಪಿ, ತಾನು ಮಾಲಾಳನ್ನು ಕಿಡ್ನಾಪ್ ಮಾಡಿ ಅತ್ಯಾಚಾರವನ್ನೆಸಗಬಾರದಿತ್ತು ಅಂತ ಮೊದಲ ಬಾರಿಗೆ ಅನ್ನಿಸಿತು. ಅದಕ್ಕೇ ತನಗೆ ಈ ಶಿಕ್ಷೆ. ಇನ್ನು ಮುಂದೆ ತಾನು ಕುಂಟ. ಆ ನೆನಪೇ ಅವನಿಗೆ ವೇದನೆಯನ್ನುಂಟುಮಾಡಿತ್ತು. ಮಾಲಾಳಿಗೆ ಎಲ್ಲವನ್ನು ತಿಳಿಸಿ, ಇದರ ತಪ್ಪಿಗೆ ತಾನು ಕಾರಣನಲ್ಲನೆಂದು ಹೇಳಬೇಕೆನಿಸಿತ್ತು. ವ್ಹೀಲ್

ಚೇರ್ ಮೇಲೆ ಕುಳಿತು. ವಾರ್ಡ್‌ಬಾಯ್‌ನ ಸಹಾಯದಿಂದ ಮಾಲಾ ಇದ್ದ ವಾರ್ಡಿಗೆ ಬಂದ. ಅವಳು ಅರೆ ಜ್ಞಾನಾವಸ್ಥೆಯಲ್ಲಿ ಏನೋ ಬಡಬಡಿಸುತ್ತಿದ್ದಳು. ಸಿಸ್ಟರ್ ಟೇಪ್ ರೆಕಾರ್ಡರಿನ ಬಟನ್ ಒತ್ತಿದಳು.

"ಐ ಲವ್ ಯೂ ಭಾಸ್ಕರ್.... ಐ ಲವ್ ಆಕಾಶ್..." ಎಂದದ್ದು ಅಸ್ಪಷ್ಟವಾಗಿ ಕೇಳಿಸಿತ್ತು. "ಮಾಲಾ... ಮಾಲಾ..." ಅಂದ ಅವಳ ಬಳಿಗೆ ಬಂದು. ಅವಳಿಗೆ ಎಚ್ಚರವಾಗಲಿಲ್ಲ. ಆದರೆ ಮಾತನಾಡುವುದನ್ನು ನಿಲ್ಲಿಸಿದಳು. ಅವಳನ್ನೇ ದಿಟ್ಟಿಸಿ ನೋಡಿದ. ನಿದ್ರಾಸುಂದರಿಯ ಸೌಂದರ್ಯವನ್ನೇ ಮತ್ತೆ ಮತ್ತೆ ನೋಡಿದ. ಆಹಾ ಎಂತಹ ಆಕರ್ಷಣೆ! ಎಂತಹ ಯೌವನ... ಅತ್ಯಾಚಾರದ ನೆವದಲ್ಲಿ ಈ ದೇಹ ಸೌಂದರ್ಯ ನನ್ನದಾಗಿತ್ತು... ಈಗ ಇವಳ ಒಡಲಲ್ಲಿ ಬೆಳೆಯುವ ಮಗು ನನ್ನದು. ಆದರೆ ನಾನು ತಂದೆ ಎಂದು ಹೇಳಿಕೊಳ್ಳುವಂತಿಲ್ಲ. ಧ್ರುವ ಈ ಮಗುವಿನ ತಂದೆಯಾಗುತ್ತಾನೆ. ಈ ವಿಷಯ ಮಾಲಾಳಿಗೆ ತಿಳಿದರೆ ಅವಳಿಗೆ ಏನನ್ನಿಸಬಹುದು? ನಮ್ಮೆಲ್ಲರ ಮೇಲೂ ಅಸಹ್ಯ ಮೂಡಬಹುದು. ದ್ವೇಷ ಹುಟ್ಟಬಹುದು. ಹಾಗಾಗಬಾರದು. ಹೇಗಾದರೂ ಸರಿ ಮಾಲಾಳನ್ನು ಒಪ್ಪಿಸಿ, ಧ್ರುವನಿಂದ ಡೈವೋರ್ಸ್ ಕೊಡಿಸಿ ನಾನು ಮದುವೆಯಾದರೆ? ಇವಳು ಈ ಕುಂಟನನ್ನು ಒಪ್ಪುವಳೇ? ನಾನು ರೇಪಿಸ್ಟ್ ಅಂತ ತಿಳಿದರೆ, ಕೊಂದೇ ಹಾಕಿಬಿಡ್ತಾಳೋ ಏನೋ... ಈ ಸುಂದರಿಯಿಂದ ದೂರವಿರುವುದೇ ವಾಸಿ. ಆದರೆ ಮನಸ್ಸೇಕೋ ಇಳಿ ಬೀಳುತ್ತಿದೆ. ನಿಜವನ್ನು ಹೇಳಿ ಬಿಡಬೇಕೆನಿಸುತ್ತಿದೆ. ತಪ್ಪನ್ನು ಒಪ್ಪಿಕೊಳ್ಳಬೇಕೆನ್ನಿಸುತ್ತಿದೆ.

"ರಘು ಇಲ್ಲೇನು ಮಾಡ್ತಿದೀಯ?" ಪಕ್ಕದಲ್ಲಿ ನಿಂತಿದ್ದ ಧ್ರುವ ಕೇಳಿದಾಗ ರಘು ಬೆಚ್ಚಿದ.

"ಏನೂ ಇಲ್ಲ. ಮಾಲಾಳನ್ನು ನೋಡುತ್ತಿದ್ದೆ."

"ಅವಳು ನಿನ್ನ ಅತ್ತಿಗೆ ನೆನಪಿರಲಿ" ಪ್ರತಾಪ ನುಡಿದಾಗ, ರಘು ಅವನನ್ನು ದುರದುರನೆ ನೋಡಿದ. ಇಷ್ಟೆಲ್ಲ ನಡೆದದ್ದು ಇವನಿಂದಲೇ ಎನ್ನುವ ಆಕ್ರೋಶ ಕಣ್ಣಲ್ಲಿತ್ತು... ಹೊರಬಂದ. ಅವನ ಹಿಂದೆಯೇ ಪ್ರತಾಪ ಬಂದ.

"ರಿಲಾಕ್ಸ್ ರಘು ರಿಲಾಕ್ಸ್... ಈ ಆಕ್ಸಿಡೆಂಟ್ ಆಗಬಾರದಿತ್ತು. ಆದರೆ ನೀನೇ ಕಾರಣ ಅಲ್ವಾ?"

"ಹೌದು. ಎಲ್ಲದಕ್ಕೂ ನಾನೇ ಕಾರಣ. ಅದಕ್ಕೇ ಪಶ್ಚಾತ್ತಾಪ ಪಡ್ತಿದೀನಿ."

"ಯಾವುದಾದರೂ ಹಿಲ್‌ಸ್ಟೇಷನ್‌ಗೆ ಹೋಗು. ಮನಕ್ಕೂ ತಂಪಾಗುತ್ತದೆ. ದೇಹಕ್ಕೂ ತಂಪಾಗುತ್ತದೆ. ಇವಳು ಅಗ್ನಿಕನ್ಯೆ. ಇವಳ ಸಮೀಪಕ್ಕೆ ಬಂದವರಿಗೆ ಶಾಪವೇ ಗತಿ.. ನೀನು ಇವಳಿಂದ ದೂರ ಇರು."

"ಇದಕ್ಕೆಲ್ಲ ನೀನೇ ಕಾರಣ ಪ್ರತಾಪ್. ನಾನು ನಿನ್ನನ್ನು ಕ್ಷಮಿಸೋಲ್ಲ"

"ನನಗೆ ನಿನ್ನ ಕ್ಷಮೆ ಬೇಕಿಲ್ಲ... ಇನ್ನು ನಿನ್ನ ಪಾತ್ರ ಏನೂ ಇಲ್ಲ. ನೀನು ಫಾರಿನ್ನಿಗೆ ಹೋಗಿಬಿಡು... ನಿನಗೆ ಅದೇ ಸರಿಯಾದ ಸ್ಥಳ."

"ನಾನು ಮಾಲಾಳಿಗೆ ಎಲ್ಲಾ ಹೇಳ್ತೀನಿ."

"ಹೇಳುವಂತೆ. ಆದರೆ ಈಗಲೇ ಬೇಡ. ಮೊದಲು ಮಗು ಹುಟ್ಟಲಿ. ಆಮೇಲೆ ಇವಳ ಅವಶ್ಯಕತೆ ನಮಗಿಲ್ಲ."

"ನೀನು ಇಷ್ಟು ಕೆಟ್ಟವನು ಅಂತ ನಾನು ಅಂದುಕೊಂಡಿರಲಿಲ್ಲ."

"ಅದಕ್ಕೂ ಕಾರಣ ಈ ಮಾಲಾನೇ. ನನಗೆ ಅವಮಾನ ಮಾಡಿದಳು. ಮುಯ್ಯಿಗೆ ಮುಯ್ಯಿ. ಇವಳ ಹೊಟ್ಟೆಯಲ್ಲಿ ಬೆಳೆವ ಮಗು, ಅವಳೇ ಹೆತ್ತ ಮಗು ಅವಳಿಂದ ದೂರವಿರಬೇಕು. ನಾನು ಹಾಗೆ ಮಾಡ್ತೀನಿ."

"ಅದಕ್ಕೆ ನಾನು ಆಸ್ಪದ ಕೊಡುಲ್ಲ. ಇದು ನನ್ನ ಮಗು."

"ನಿನ್ನ ಮಗೂಗೆ, ಈ ಸಮಸ್ತ ಆಸ್ತಿಯೆಲ್ಲ ಸಿಗುತ್ತೆ. ನಿನಗೇನು ಕೊರತೆ ?" ಬೇರೆ ಮದುವೆ ಮಾಡಿಕೊಂಡು ಹಾಯಾಗಿರು."

"ಈಗ ನಾನು ಕಾಲು ಕಳೆದುಕೊಂಡು ಕುಂಟನಾಗಿದ್ದೇನೆ. ನನಗೆ ಯಾರು ಹೆಣ್ಣು ಕೊಡ್ತಾಗೆ. ನಾನು ಮಾಲಾಳಿಗೆ ಎಲ್ಲಾ ಹೇಳಿ, ಅವಳನ್ನೇ ಮದುವೆಯಾಗ್ತೀನಿ."

"ಚೆನ್ನಾಗಿದೆ. ನಿಮ್ಮಿಬ್ಬರಿಗೂ ಇವಳೇ ಬೇಕು..." ವಿಕಟವಾಗಿ ನಕ್ಕಾಗ ಅವನ ಕಪಾಳಕ್ಕೆ ಬಾರಿಸಬೇಕೆನ್ನಿಸಿತ್ತು.

○ ○ ○

ರಘುಗೆ ಮೊದಲಿನಿಂದಲೂ ಪ್ರತಾಪನ್ನ ಕಂಡರೆ ಅಷ್ಟಕ್ಕಷ್ಟೇ. ಪ್ರತಾಪ ಈ ಮನೆಗೆ ಬಂದು ಸೇರಿದ್ದೇ ಒಂದು ವಿಚಿತ್ರ, ಪ್ರತಾಪ ಅವನ ತಂದೆಗೆ ಹಿರಿಯ ಹೆಂಡತಿಯ ಮಗ. ಹಿರಿಯ ಹೆಂಡತಿ ಸತ್ತ ನಂತರ ಆತ ಎರಡನೇ ಮದುವೆ ಯಾಗಿದ್ದ. ಅವಳು ಪ್ರತಾಪನಿಗಿಂತ ನಾಲ್ಕು ವರ್ಷಕ್ಕೆ ದೊಡ್ಡವಳು. ಪ್ರತಾಪನ ತಂದೆ ತೀರಿಕೊಂಡ ನಂತರ, ಅವಳು ಅವನ ಚಿಕ್ಕಪ್ಪನನ್ನೇ ಮದುವೆ ಯಾಗಿದ್ದಳು. ಆಗ ಅವನು ಚಿಕ್ಕಮ್ಮನನ್ನು ದ್ವೇಷಿಸಲಾರಂಭಿಸಿದ. ತನ್ನ

ಭಾಗದ ಆಸ್ತಿಯನ್ನೆಲ್ಲಾ ಪಡೆದುಕೊಂಡು ಧ್ರುವನ ಮನೆಯನ್ನು ಸೇರಿದ. ಧ್ರುವನ ತಂದೆಯ ಸಹಾಯದಿಂದ ಅವನು ತನ್ನ ಹಣವನ್ನು ಬಿಸಿನೆಸ್‌ನಲ್ಲಿ ತೊಡಗಿಸಿ ಶ್ರೀಮಂತನಾದ. ಶ್ರೀಮಂತನಾದರೂ, ಧ್ರುವನ ತಂದೆಯ ಸಹಾಯವನ್ನು ಮರೆಯಲಿಲ್ಲ. ಅವನಿಗಿಂತ, ಸ್ವಲ್ಪ ಚಿಕ್ಕವನಾದ ಧ್ರುವನನ್ನು ಕಂಡರೆ ಅವನಿಗೆ ಮೆಚ್ಚುಗೆ. ಅವನ ಜೊತೆ ಜೊತೆಯಲ್ಲಿ ಬೆಳೆದ. ವ್ಯಾಸಂಗ ಮಾಡಿದ. ಧ್ರುವ ಕೇಳಿದುದನ್ನೆಲ್ಲ ಕೊಡಿಸುವ ಉದಾರಿಯಾದ. ಧ್ರುವನೊಡನೆ ಏನೋ ನಿಕಟ ಸಂಬಂಧ. ಇವನಿಲ್ಲದೆ ಅವನಿಲ್ಲ ಅನ್ನುವಷ್ಟರಮಟ್ಟಿಗೆ ಧ್ರುವನ ತಂದೆ ತೀರಿ ಹೋದ ಮೇಲೆ, ಎಲ್ಲಾ ಧ್ರುವನ ಕೈಗೆ ಬಂದರೂ, ಸೂತ್ರಧಾರ ಪ್ರತಾಪನೇ. ಧ್ರುವ ಅವನ ಒಂದು ಮಾತನ್ನೂ ಮೀರುತ್ತಿರಲಿಲ್ಲ.

ಧ್ರುವನಿಗಿಂತಲೂ ನಾಲ್ಕೈದು ವರ್ಷಕ್ಕೆ ಚಿಕ್ಕವನಾದ ರಘುವನ್ನು ಪ್ರತಾಪ ಬೈದು ಕಳಿಸುತ್ತಿದ್ದುದೇ ಹೆಚ್ಚು. "ನಾವಿಬ್ರೂ ಮಾತಾಡ್ತಾ ಇರುವಾಗ ನೀನು ಬರಬೇಡ. ದೊಡ್ಡೋರ ಮಧ್ಯೆ ನಿನಗೇನು ಕೆಲಸ ?" ಎಂದು ಅಟ್ಟುತ್ತಿದ್ದ. ಧ್ರುವ ಪ್ರತಾಪ ಇಬ್ಬರೂ ಒಟ್ಟಿಗೇ ವಿದ್ಯಾಭ್ಯಾಸ ನಡೆಸಿದರು. ಒಂಟಿಯಾಗಿದ್ದ ರಘು, ಚೇಷ್ಟೆ ಕೀಟಲೆಗಳಿಂದ ಸ್ಕೂಲಿನಲ್ಲಿ ಕೆಟ್ಟ ಹೆಸರನ್ನು ಗಳಿಸಿದ್ದ. ಸ್ಕೂಲಿನಿಂದ ದಿನೇ ದಿನೇ ದೂರುಗಳು ಬರುತ್ತಿದ್ದವು.

ಕಾಲೇಜಿನಲ್ಲಿ ಓದುತ್ತಿದ್ದಾಗ, ಯಾವುದೋ ಹುಡುಗಿಗೆ ಪತ್ರ ಬರೆದು ಸಿಕ್ಕಿಬಿದ್ದು ಕಾಲೇಜಿನಿಂದ ಹೊರಕ್ಕೆ ಬಂದ. ಆನಂತರ ಯಾವುದೋ ಒಂದು ಗ್ಯಾಂಗ್‌ಗೆ ಸೇರಿಕೊಂಡು ಒಂದು ರೇಪ್ ಕೇಸಿನಲ್ಲಿ ಸಿಕ್ಕುಬಿದ್ದು ಮೂರು ವರ್ಷ ಜೈಲಿನಲ್ಲಿದ್ದು ಹೊರಬಂದಿದ್ದ. ಅನಂತರ ಪ್ರತಾಪ ಅವನನ್ನು ಹೊರದೇಶಕ್ಕೆ ಕಳಿಸಿಬಿಟ್ಟಿದ್ದ. ಧ್ರುವನ ಮದುವೆಗೂ ಬಂದಿರಲಿಲ್ಲ. ಈಗ ಪ್ರತಾಪ ಅವನನ್ನು ತಾನೇ ಕರೆಸಿಕೊಂಡಿದ್ದ.

ಮಾಲಾ ಇರುವ ಸ್ಥಳ ಪತ್ತೆಯಾಗುವ ಹೊತ್ತಿಗೆ, ಅವಳಿಗೆ ಹೆರಿಗೆಯಾಗಿ ಮಗುವನ್ನು ವಸುಧಾಳಿಗೆ ಕೊಟ್ಟುಬಿಟ್ಟಿದ್ದಳು. ಈ ವಿಷಯ ಮನೆಯವರ ಹೊರತು ಬೇರೆ ಯಾರಿಗೂ ತಿಳಿಯದು. ಅವಳು ಕೆಲಸಕ್ಕೆ ಸೇರಿ, ಹೊರಗೆ ತಿರುಗಾಡಲು ಪ್ರಾರಂಭಿಸಿದಾಗ ಅವನು ರಘುವನ್ನು ಅಲ್ಲಿ ಕೆಲಸಕ್ಕೆ ಸೇರಿಸಿದ. ಹೇಗಾದರೂ ಸರಿ ನೀನು ಅವಳ ಸ್ನೇಹವನ್ನು ಸಂಪಾದಿಸಿ, ಅವಳ ಜೊತೆ ದೇಹ ಸಂಬಂಧವನ್ನಿಟ್ಟುಕೋ. ನಂತರ ಏನು ಮಾಡಬೇಕೂಂತ ನಾನು ಹೇಳ್ತೀನಿ ಅಂತ ಹೇಳಿದ್ದ. ಆದರೆ ಮಾಲಾ 'ಜ್ವಾಲಾ' ಆಗಿದ್ದಳು. ಇವನ

ಸ್ನೇಹಕ್ಕೆ ಅವಳು ಸ್ಪಂದಿಸಿರಲಿಲ್ಲ. ಈ ವಿಷಯವನ್ನು ತಿಳಿದ ಪ್ರತಾಪ ಕಿಡ್ನಾಪ್ ಮಾಡಿಸಿ, ರೇಪ್ ಮಾಡುವಂತೆ ಹೇಳಿದ. ಮಾಲಾಳ ರೂಪಕ್ಕೆ ಮನಸೋತಿದ್ದ ರಘು, ಅವಳ ಮೇಲಿನ ಆಸೆಯಿಂದ ಪ್ರತಾಪ ತಿಳಿಸಿದಂತೆ ಅವಳ ಮೇಲೆ ಅನೇಕ ಸಾರಿ ಅತ್ಯಾಚಾರವೆಸಗಿದ.

ಈಗ ತಾನು ಮಾಡಿದ್ದು ತಪ್ಪು ಅಂತ ಪದೇ ಪದೇ ಅನ್ನಿಸತೊಡಗಿತ್ತು.

೦ ೦ ೦

ಒಂದು ತಿಂಗಳು ಕಳೆಯುಪಷ್ಟರಲ್ಲಿ ಮಾಲಾ ಸಾಕಷ್ಟು ಚೇತರಿಸಿ ಕೊಂಡಿದ್ದಳು. ಆದರೂ ತಾನು ಗರ್ಭಿಣಿಯಾಗಿದ್ದೇನೆಂದು ತಿಳಿದದ್ದು ಬಹಳ ತಡವಾಗಿ. ಆ ಕ್ಷಣದಲ್ಲಿ ಅವಳಿಗೆ ಆ ಕರಾಳ ದಿನಗಳು ನೆನಪಿಗೆ ಬಂದವು. ನೋಡಲು ಬಂದ ಡಾಕ್ಟರಿಗೆ ಕೈ ಮುಗಿದು ಕೇಳಿಕೊಂಡಳು.

"ನನಗೆ ಈ ಮಗು ಬೇಡ. ಅತ್ಯಾಚಾರಕ್ಕೆ ಹುಟ್ಟುವ ಮಗುವಿಗೆ ನಾನು ಜನ್ಮ ಕೊಡಲಾರೆ" ಡಾಕ್ಟರು ಸುಮ್ಮನೇ ಎಲ್ಲಾ ಕೇಳಿಸಿಕೊಂಡಳು. ಈ ಮೊದಲೇ ಧ್ರುವ ಈ ವಿಷಯವನ್ನು ಡಾಕ್ಟರಿಗೆ ತಿಳಿಸಿದ್ದ. ನರ್ಸಿಂಗ್ ಹೋಂನಲ್ಲೇ ಎಲ್ಲಾ ಟೆಸ್ಟ್‌ಗಳನ್ನು ಮಾಡಿ ಎಲ್ಲಾ ನಾರ್ಮಲ್ ಆಗಿದೆ ಅಂತ ತಿಳಿಸಿದ್ದರು.

"ಈಗ ನಾವು ಏನೂ ಮಾಡುಕ್ಕಾಗುಲ್ಲ. ಬೇಬಿ ಬಹಳ ಡೆವಲಪ್ ಆಗಿ ಹೋಗಿದೆ. ನಿಮ್ಮ ಪತಿಗೇ ಯಾವ ಅಬ್ಜೆಕ್ಷನ್ ಇಲ್ಲದಿರುವಾಗ, ನೀವೂ ಅಕ್ಸೆಪ್ಟ್ ಮಾಡಿಕೊಳ್ಳಿ. ನೀವು ಈಗ ಅಬಾರ್ಷನ್ ಮಾಡಿಸಿಕೊಳ್ಳುವ ಸ್ಥಿತಿಯಲ್ಲಿಲ್ಲ" ಎಂದಿದ್ದಳು.

ಮಾಲಾಳ ಚಿಂತೆ ನಾನಾ ದಿಕ್ಕಿಗೆ ಓಡಿತು. ರೇಪ್ ಅಂತ ತಿಳಿದಾಗಲೂ ಇವರುಗಳಿಗೆ ಏನೂ ಅನ್ನಿಸಲಿಲ್ಲ. ಈಗ ಕನ್ಸೀವ್ ಆಗಿದೆ ಅಂತಂದ್ರೂ ಹಾಯಾಗಿದಾರೆ. ಪ್ರಪಂಚದಲ್ಲಿ ಇಷ್ಟು ಒಳ್ಳೆಯವರು ಇರೋಕೆ ಸಾಧ್ಯಾನಾ ? ಇಲ್ಲಿ ಏನೋ ರಹಸ್ಯವಿರಬಹುದು. ಅದೇನು ಅಂತ ತಿಳಿಯಬೇಕಾದರೆ, ನಾನೂ ಒಳ್ಳೆಯವಳಂತೆ ನಟಿಸಬೇಕು. ಆಗ ಧ್ರುವ ಎಲ್ಲವನ್ನೂ ಒದರುತ್ತಾನೆ ಅಂತಂದು ಕೊಂಡಳು. ತನ್ನ ಜೀವಕ್ಕೆ ಅಪಾಯ ತಂದುಕೊಂಡು ಅಬಾರ್ಷನ್ ಮಾಡಿಸಿಕೊಂಡರೆ ಅಥವಾ ಆತ್ಮಹತ್ಯೆ ಮಾಡಿಕೊಂಡರೆ, ಎಲ್ಲಾ ಅಲ್ಲಿಗೇ ಮುಗಿದುಹೋಗುತ್ತದೆ. ಹಾಗಾಗಬಾರದು, ಇವರುಗಳು ಎಂತಹವರು ಅಂತ ಹೊರಗಿನವರಿಗೆ ತಿಳಿಯಬೇಕು, ಮೊದಲು ನಮ್ಮ ಮಧುಗೆ ಅರಿವಾಗಬೇಕು ಎಂದುಕೊಂಡಳು.

ಅವಳನ್ನು ನೋಡಿ ಸಾಂತ್ವನಿಸಲು ಬಂದ ರಘುವನ್ನು ಮುಗುಳ್ನಗೆಯಿಂದ ಸ್ವಾಗತಿಸಿದಳು. "ನಾನು ಇಲ್ಲಿ ಆಸ್ಪತ್ರೆಯಲ್ಲಿರುವ ವಿಚಾರ, ನಮ್ಮ ಅಣ್ಣ ಅತ್ತಿಗೆಗೆ ಗೊತ್ತಾ ?" ಅಂತ ಕೇಳಿದಳು.

"ಏನೋ ನಂಗೊತ್ತಿಲ್ಲ. ನಾನೂ ಇಲ್ಲೇ ಅಡ್ಮಿಟ್ ಆಗಿದೀನಿ. ಐ ಆಮ್ ಸಾರಿ ಮಾಲಾ.... ನನ್ನಿಂದಲೇ ಹೀಗಾಯ್ತು."

"ಹೋಗಲಿ ಬಿಡಿ. ಇನ್ನು ಮುಂದೆ ಕಾರ್ ಡ್ರೈವ್ ಮಾಡೋವಾಗ ಕೇರ್‌ಫುಲ್ ಆಗಿರಿ."

"ಇನ್ನು ಮುಂದೆ ಕಾರ್ ಡ್ರೈವ್ ಮಾಡ್ತೀನೋ ಇಲ್ಲವೋ... ಬಲಗಾಲೇ ಇಲ್ಲ ನನಗೆ" ಬಟ್ಟೆಯನ್ನು ಸರಿಸಿ ತುಂಡರಿಸಿದ ಕಾಲನ್ನು ತೋರಿಸಿದ. ಅವಳು ಮುಖ ಕಿವುಚಿದಳು.

"ನೋಡಿದ್ರಾ ನಿಮಗೇ ಇಷ್ಟು ಬೇಸರವಾದರೆ, ನನ್ನ ಪಾಡೇನು ?" ಮಾಲಾ ಮಾತನಾಡಲಿಲ್ಲ. ಅವನು ತನ್ನನ್ನೇ ನೋಡುತ್ತಿದಾನೆ ಅಂತ ಅನ್ನಿಸಿದಾಗ ಮುಜುಗರವಾಗಿತ್ತು.

"ನೀವು 'ಕೋಮಾ'ದಲ್ಲಿದ್ದಾಗ ಏನೇನೋ ಅಸಂಬದ್ಧ ಮಾತುಗಳನ್ನಾಡುತ್ತಿದ್ರಿ ಅದೆಲ್ಲಾ ನಿಜಾನಾ ?"

"ಹೌದಾ ! ನಂಗೆ ಗೊತ್ತಿಲ್ಲ. ಏನು ಮಾತ್ನಾಡಿದೆ ?"

"ಭಾಸ್ಕರ್ ಐ ಲವ್ ಯು... ಅಂತ ಹೇಳಿದ್ದನ್ನು ನಾನೇ ಕೇಳಿಸಿಕೊಂಡೆ. ಯಾರು ಆ ಭಾಸ್ಕರ...?"

"ಯಾರೂ ಇಲ್ಲ... ನಿಮಗೆ ತಪ್ಪಾಗಿ ಕೇಳಿಸಿದೆ."

"ಇಲ್ಲ ಇದನ್ನೆಲ್ಲ ಸಿಸ್ಟರ್ ಟೇಪ್ ಮಾಡಿಕೊಂಡಿದಾಳೆ. ಪ್ರತಾಪ ಹೇಳಿ ಮಾಡಿಸಿದಾನೆ."

"ಹೌದಾ ! ಆ ಟೇಪ್ ಈಗ ಎಲ್ಲಿದೆ ?"

"ಇಲ್ಲೇ ಎಲ್ಲೋ ಇರಬಹುದು. ಸಿಸ್ಟರ್‌ಗೆ ಗೊತ್ತಿರುತ್ತೆ. ನಾನು ಹೇಳಿದ್ರೆ ತಂದುಕೊಡ್ತಾಳೆ."

"ಹಾಗಾದ್ರೆ ತರಿಸಿ ಕೊಡಿ."

"ನಿಮಗೆ ಇದರಿಂದ ನೆಮ್ಮದಿ ಸಿಗೋದಾದ್ರೆ, ನಾನು ಏನು ಮಾಡೋಕೂ ರೆಡಿ. ಅಲ್ಲದೆ ಈಗ ನೀವು ಪ್ರೆಗ್ನೆಂಟ್ ಅಂತ ತಿಳೀತು..." ಮಾಲಾ ಕೆಟ್ಟ ಮುಖ ಮಾಡಿದಳು.

"ಈ ಮಗೂಗೆ ಜನ್ಮ ಕೊಡ್ತೀರಾ ? ಈ ಮಗುವಿನ ತಂದೆ ಯಾರು ಅಂತ ಕೇಳಿದ್ರೆ ಏನು ಹೇಳ್ತೀರಿ ?" ನಿಜ ಹೇಳೋ ಧೈರ್ಯ ನಿಮಗಿದೆಯಾ ?"

"ಈ ಮಾತನ್ನೆಲ್ಲಾ ನಾನು ನಿಮ್ಮೊಂದಿಗೆ ಡಿಸ್ಕಸ್ ಮಾಡುಲ್ಲ..." ನನ್ನ ಸ್ವಂತದವರು ಅಂತ ನನ್ನ ಅಣ್ಣ ಅತ್ತಿಗೆ ಇದಾರೆ."

"ನಿಮಗೆ ಇಷ್ಟವಿಲ್ಲದಿದ್ದರೂ ನಾನೊಂದು ಸಲಹೆಯನ್ನು ಕೊಡ್ತೀನಿ. ನೀವು ಈ ಮಗುವಿಗೆ ಜನ್ಮ ಕೊಡಿ. ಇದರಲ್ಲಿ ಈ ಮಗುವಿನ ತಪ್ಪೇನಿದೆ ?"

"ಪ್ಲೀಸ್ ರಘು... ಈ ಚರ್ಚೆ ಸಾಕು."

"ಓ...ಕೇ... ಸಾಕು. ಸಾಕು ಆದರೆ, ನೀವು ಧೈರ್ಯವಂತೆ ಅಂತ ಕೇಳಿದೀನಿ. ಯಾವುದಕ್ಕೂ ಹೆದರಬೇಡಿ. ನಾನು ನಿಮ್ಮೊಂದಿಗೆ ಇದೀನಿ."

"ಓಕೆ ನಿಮ್ಮ ಸಲಹೆಗೆ, ಸಹಕಾರಕ್ಕೆ ಥ್ಯಾಂಕ್ಸ್"

"ಈ ಕುಂಟನಿಂದ ಯಾವ ಪ್ರಯೋಜನವಿಲ್ಲ ಅಂತ ಭಾವಿಸಬೇಡಿ ಮಾಲಾ. ನಿಮ್ಮ ಹಾಗೂ ನಿಮ್ಮ ಮಗುವಿನ ಜವಾಬ್ದಾರಿಯನ್ನು ಹೊರಬಲ್ಲೆ. ನಿಮ್ಮ ಮಗುವಿಗೆ ತಂದೆಯಾಗುತ್ತೇನೆ."

"ನೀವು ಅಣ್ಣ ತಮ್ಮಂದಿರಿಬ್ಬರೂ ಇಷ್ಟು ದೊಡ್ಡ ಹೃದಯದವರು ಅಂತ ನನಗೆ ಗೊತ್ತಿರಲಿಲ್ಲ ರಘು" ಮೆಲುವಾಗಿ ನಕ್ಕಳು.

"ಧ್ರುವನ ವಿಷಯವೇ ಬೇರೆ. ನಿಮಗೆ ಗೊತ್ತಿಲ್ಲದೇ ಇರುವ ವಿಷಯಗಳು ಬಹಳ ಇವೆ. ಪ್ರತಾಪನ ಕೈಗೊಂಬೆ ಅವನು. ಅವನಿಲ್ಲದೇ ಇರಲಾರ. ಅಂತಹ ಅಸಹ್ಯವಾದ ಸಂಬಂಧ ಅವರದು. ನಿಮಗೆ ತಿಳಿಯದಿರುವುದೇ ವಾಸಿ. ಹಾಗೇ ಅವರಿಬ್ಬರೂ ಏಡ್ಸ್ ರೋಗಿಗಳು. ಈಗ ಇಬ್ಬರಿಗೂ ಆರೋಗ್ಯವಂತ ಉತ್ತರಾಧಿಕಾರಿ ಬೇಕು. ಅದಕ್ಕೇ ನಿಮ್ಮ ಪ್ರೆಗ್ನೆನ್ಸಿಯ ಬಗ್ಗೆ ಅವರಿಗೆ ವ್ಯಥೆಗಿಂತ ಖುಷಿಯೇ ಹೆಚ್ಚು."

"ಅದು ನನಗೂ ಗೊತ್ತು. ಆದರೆ ನಿಮಗ್ಯಾಕೆ ಇಷ್ಟು ಖುಷಿ ಅಂತ ? ನೀವೂ ಈ ಮನೆಯವರೇ. ನಿಮ್ಮ ಉತ್ತರಾಧಿಕಾರಿಗೆ ತಾನೇ ಎಲ್ಲಾ ಆಸ್ತಿ ಸಿಗುತ್ತೆ..."

"ನಂಗೊತ್ತಿಲ್ಲ. ಹೆಂಡತಿ ಮಕ್ಕಳೇ ಇಲ್ಲದವನಿಗೆ ಆಸ್ತಿ ಪಾಸ್ತಿ ಯಾಕೆ ? ನೀವು ಒಪ್ಪೋದಾದ್ರೆ ಹೇಳಿ. ನಾವಿಬ್ಬರೂ ಈ ಎಲ್ಲಾ ಆಸ್ತಿಗೂ ಹಕ್ಕುದಾರರಾಗುತ್ತೇವೆ."

"ಸಮಪಾಲಿನಿಂದ ನನಗೇನು ಲಾಭ ? ಎಪ್ಪತ್ತು ಪರ್ಸೆಂಟ್ ಕೊಡೋಕೆ ರೆಡೀನಾ ?" ನಗುತ್ತಾ ಕೇಳಿದಾಗ ಅವನು ತಬ್ಬಿಬ್ಬಾದ.

"ನನ್ನ ಆಸ್ತಿಯೂ ಮುಂದೆ ನಿಮ್ಮದೇ ಆಗುತ್ತಲ್ಲ ಮಾಲಾ..."

"ಮುಂದೇನಾಗುತ್ತೆ ಅಂತ ನನಗೆ ಗೊತ್ತಿಲ್ಲ. ನನ್ನ ಕಂಡೀಷನ್‌ಗೆ ನೀವು ಒಪ್ಪೋದಾದ್ರೆ ಮುಂದಿನ ಮಾತು. ಇಲ್ಲದಿದ್ದರೆ ನನಗೂ ನನ್ನ ಮಗುವಿಗೂ ಏನು ಗ್ಯಾರಂಟಿ ಕೊಡಬಲ್ಲಿರಿ ?"

"ಮಾಲಾ... ಯೂ ಆರ್ ಸ್ಮಾರ್ಟ್. ಪ್ರತಾಪ ತಾನೇ ಜಾಣ ಅಂತ ತಿಳಿದುಕೊಂಡಿದ್ದಾನೆ. ನಾವಿಬ್ರೂ ಸೇರಿ ಅವನಿಗೆ ಬುದ್ಧಿ ಕಲಿಸೋಣ."

"ಯಾಕೆ ? ನಿಮಗೆ ಪ್ರತಾಪನ್ನ ಕಂಡರೆ ಆಗುಲ್ವಾ ?"

"ಇಲ್ಲ. ಅವನು ಒಳ್ಳೆಯವನಲ್ಲ. ನಮ್ಮ ಧ್ರುವ ಹಾಳಾಗೋಕೆ ಅವನೇ ಕಾರಣ... ನಾವಿಬ್ರೂ ಸೇರಿ ಅವನನ್ನು ಪಾಪರ್ ಮಾಡೋಣ..."

"ಆಗ ಧ್ರುವನೂ ಹಾಳಾಗ್ತಾರಲ್ಲ..."

"ಅವನಿಗೆ ಏನಾದ್ರೆ ನನಗೇನು ? ಅಲ್ಲದೆ ಅವನು ನಿಮ್ಮ ಲೈಫ್‌ನ ಹಾಳು ಮಾಡಿದವನು. ಅವನನ್ನು ನನ್ನ ಅಣ್ಣಂತ ಹೇಳಿಕೊಳ್ಳೋಕೆ ಇಷ್ಟವಿಲ್ಲ."

"ನಿಮ್ಮ ಮಾತನ್ನು ನಂಬಲಾ ?"

"ಖಂಡಿತಾ, ನಾನೇಕೆ ಸುಳ್ಳನ್ನು ಹೇಳಲಿ ?"

"ಆದರೆ ನನ್ನನ್ನೇಕೆ ನೀವುಗಳೆಲ್ಲ ಬಳಸಿಕೊಳ್ಳುತ್ತಿದೀರೋ... ನನಗೆ ಆಶ್ಚರ್ಯವೂ ಆಗುತ್ತೆ; ಆತಂಕವೂ ಆಗುತ್ತೆ. ನನ್ನ ಪಾಡಿಗೆ ನಾನು ನನ್ನ ಮನೆಗೆ ಹೊರಟು ಹೋಗ್ತೀನಿ. ನೀವು ಅಷ್ಟು ಸಹಾಯ ಮಾಡಿ ಸಾಕು. ನಮ್ಮ ಮಧುಗೆ ವಿಷಯ ತಿಳಿಸಿ. ಅವನು ಬಂದು ಕರೆದುಕೊಂಡು ಹೋಗಲಿ."

"ಅಷ್ಟು ಸುಲಭವಾಗಿ ನಿಮ್ಮನ್ನು ಹೋಗಲು ಬಿಡ್ತಾನಾ ಪ್ರತಾಪ್... ಅವನು ಭಾರಿ ಭಾರೀ ಪ್ಲಾನ್ ಮಾಡಿರುತ್ತಾನೆ."

"ನಾನು ಅವರ ಹತ್ತಿರ ಮಾತನಾಡಿ ಅವರನ್ನು ಒಪ್ಪಿಸ್ತೀನಿ."

"ಅವನು ತುಂಬಾ ಹಲ್ಕಾ... ಸ್ವಲ್ಪ ಹುಷಾರಾಗಿರಿ."

"ಈಗ ಯಾರ್ಯಾರು ಏನೇನು ಅಂತ ನನಗೆ ಚೆನ್ನಾಗಿ ಅರ್ಥವಾಗ್ತಿದೆ ರಘು" ಅವಳೂ ಗಂಭೀರವಾಗಿ ನುಡಿದಾಗ, ಅವನು ಪೆಚ್ಚಾದ.

○ ○ ○

ಮಧು ಬಂದು ಊರಿಗೆ ಕರೆದುಕೊಂಡು ಹೋಗ್ತೀವಿ ಅಂತ ಹೇಳಿದಾಗ ಸುಮಿತ್ರ ತಡೆದಿದ್ದಳು.

"ಏನೋ ಆಗಬಾರದ್ದು ಆಗಿಹೋಯಿತು. ಅದರಿಂದ ನಿನ್ನ ತಂಗಿಯನ್ನು ದೂಷಿಸಿದರೆ ಪ್ರಯೋಜನವಿಲ್ಲ. ಅಲ್ಲದೇ ಭ್ರೂಣಹತ್ಯೆ ಮಹಾ ಪಾಪ. ಈ

ಜನ್ಮದಲ್ಲಿ ಧ್ರುವನಿಗೆ ಮಕ್ಕಳಾಗುತ್ತೋ ಇಲ್ಲವೋ... ಈ ಮುಂಚೆಯೇ ಇವಳು ಸುಳ್ಳು ಹೇಳಿದ್ದಾಗ, ಧ್ರುವ ಇವಳನ್ನು ಕ್ಷಮಿಸಿದ. ಆದರೆ ಈಗ ಈ ಮಾತು ನಿಜವಾಗಿದೆ. ಈ ಮಗು ನಮಗೆ ಬೇಕು. ಯಾರದ್ದೇ ಆಗಿರಲಿ, ಅದನ್ನು ಧ್ರುವ ತನ್ನ ಸ್ವಂತ ಮಗುವಿಗಿಂತ ಹೆಚ್ಚಾಗಿ ನೋಡಿಕೊಳ್ಳುತ್ತಾನೆ. ನಾನು ಮಾತು ಕೊಡ್ತೀನಿ."

"ಇದೇನು ದಡ್ಡತನವೋ, ಜಾಣತನವೋ, ದೊಡ್ಡತನವನ್ನು ತೋರಿಸುವಷ್ಟು ಒಳ್ಳೇತನ ಇವರುಗಳಲ್ಲಿದೆಯೇ ?" ಮಧುಗೂ ಆಶ್ಚರ್ಯವಾಗಿತ್ತು.

"ನಾನು ಧ್ರುವನ ಹತ್ತಿರ ಏಕಾಂತದಲ್ಲಿ ಮಾತನಾಡಬೇಕು" ಮಾಲಾ ಹೇಳಿದಾಗ ಪ್ರತಾಪ ಅಡ್ಡಬಂದ.

"ಏನಿದ್ರೂ ಎಲ್ಲಾ ಎಲ್ಲರೆದುರಿಗೇ ಡಿಸೈಡ್ ಆಗಬೇಕು. ಏಕಾಂತದಲ್ಲಿ ಮಾತನ್ನಾಡುವಂತಹ ಇಂಟಿಮೆಸಿ ಏನಿದೆ ನಿಮ್ಮಲ್ಲಿ ?"

"ಯಾಕೆ ? ನಾವಿಬ್ರೂ ಪತಿ ಪತ್ನಿಯರು ಅಲ್ವಾ! ಪ್ರೈವೆಸಿ ಬೇಕು. ಒಂದು ವೇಳೆ ನಿಮಗೆ ಮದುವೆಯಾಗಿದ್ದು, ನಾನು ಮಧ್ಯೆ ಇದ್ದರೆ ಏನು ಮಾಡ್ತಿದ್ರಿ ?"

"ಹೌದು ಪ್ರತಾಪ. ಇಬ್ಬರ ಬಾಳಿನಲ್ಲೂ ಏನೇನೋ ದುರಂತಗಳು ನಡೆದಿವೆ. ಅದನ್ನು ಅವರಿಬ್ಬರೇ ಸಾಲ್ವ್ ಮಾಡಿಕೊಳ್ಳಲಿ ! ನಾವುಗಳು ಯಾಕೆ ಬೇಡ ಅನ್ನಬೇಕು ?"

"ಇಲ್ಲ ಆಂಟಿ. ನಿಮಗೆ ಗೊತ್ತಿಲ್ಲ. ಧ್ರುವ ಮುಗ್ಧ. ಇವಳು ಸ್ಮಾರ್ಟ್.... ಅವನು ಇವಳ ಮಾತಿಗೆ ಒಪ್ಪಿ ಬಿಡ್ತಾನೆ...."

"ಇಲ್ಲ. ಪ್ರತಾಪ. ನಾವು ಇವಳಿಗೂ ಅವಕಾಶವನ್ನು ಕೊಡೋಣ. ಬಲವಂತದಿಂದ ನಡೆದ ಮದುವೆ ಸಫಲವಾಗಲಿಲ್ಲ. ಈಗ ಬಲವಂತವಾಗಿ, ನಾವು ಈಗ ಇವಳನ್ನು ಉಳಿಸಿಕೊಳ್ಳಲಾಗುವುದಿಲ್ಲ." ಪ್ರತಾಪ ಸುಮ್ಮನಾದ. ಧ್ರುವ, ಮಾಲಾ ಇಬ್ಬರೂ ಒಳಗಿನ ರೂಮಿಗೆ ಹೋಗಿ ಬಾಗಿಲನ್ನು ಹಾಕಿಕೊಂಡರು.

"ಅದೇನು ಹೇಳಬೇಕೂಂತ ಇದೀಯೋ ಧೈರ್ಯವಾಗಿ ಹೇಳು. ನಾನು ನಿನ್ನ ಕಡೆಗಿದೀನಿ. ನಾವಿಬ್ಬರೂ ಗಂಡ ಹೆಂಡತಿಯರಂತೆ ಬಾಳಲಿಲ್ಲ. ಆದರೆ ಈಗ ಒಟ್ಟಿಗೆ ತಂದೆ ತಾಯಿಯರಂತೆ ಮಗುವನ್ನು ಬೆಳೆಸೋಣ. ಅದೇ ನನ್ನಾಸೆ."

"ನಿಮ್ಮ ಆಸೆ ತುಂಬಾ ವಿಚಿತ್ರವಾಗಿದೆ ಧ್ರುವ. ನಾನು ಭಾರ್ಗವನ ಪ್ರೇಯಸಿ

ಅಂತ ತಿಳಿದ್ರೂ ನನ್ನನ್ನು ಬಲವಂತವಾಗಿ ಮದುವೆಯಾದ್ರಿ... ಆದರೆ ನನ್ನನ್ನು ನಿಮ್ಮವಳನ್ನಾಗಿ ಮಾಡಿಕೊಳ್ಳಲಾಗಲಿಲ್ಲ. ಈಗ, ಅತ್ಯಾಚಾರಕ್ಕೆ ಹುಟ್ಟುತ್ತಿರುವ ಮಗುವನ್ನು ನಿಮ್ಮ ಮಗನನ್ನಾಗಿ ಮಾಡಿಕೊಳ್ಳಲು ಸಿದ್ಧರಾಗಿದೀರಿ. ನನಗೆ ನಿಜಕ್ಕೂ ಆಶ್ಚರ್ಯವಾಗ್ತಿದೆ. ಅನುಮಾನವೂ ಬರುತ್ತಿದೆ. ಆದರೂ ನಿಮ್ಮ ಧೈರ್ಯಕ್ಕೆ ಮೆಚ್ಚುತ್ತೀನಿ. ನಾನೂ ಹೇಡಿಯಲ್ಲ. ಆತ್ಮಹತ್ಯೆಯ ಯೋಚನೆ ಯಾಗಲೀ, ಅಬಾರ್ಷನ್ ಆಲೋಚನೆಯಾಗಲೀ ನನ್ನಲ್ಲಿಲ್ಲ. ಈ ಮಗುವಿಗೆ ಜನ್ಮ ಕೊಡ್ತೀನಿ. ಆದರೆ ನನಗೆ ಇಲ್ಲಿ ನಿಮ್ಮ ಮನೆಯಲ್ಲಿರಲು ಇಷ್ಟವಿಲ್ಲ. ನಾನು ನಮ್ಮೂರಿಗೆ ವಾಪಸ್ಸು ಹೋಗ್ತೀನಿ."

"ಯಾಕೆ ಇಲ್ಲಿ ನಿನಗೇನು ತೊಂದರೆ ?"

"ಯಾಕೋ ಏನೋ ಇಲ್ಲಿರಲು ನನಗೆ ಕಷ್ಟವೆನಿಸುತ್ತದೆ. ನನ್ನ ಮನೆಯಲ್ಲಿ ಆರಾಮವೆನಿಸುತ್ತದೆ."

"ಸರಿ. ನಿನ್ನ ಇಷ್ಟ. ನಾನು ಮಮ್ಮಿಗೆ ಹೇಳ್ತೀನಿ."

"ನನಗೆ ಒಂದು ವಿಷಯ ಅರ್ಥವಾಗ್ತಿಲ್ಲ. ನಿಮ್ಮ ತಾಯಿ, ಈ ಮಗುವನ್ನು ತಮ್ಮ ಮೊಮ್ಮಗು ಅಂತ ಹೇಗೆ ಒಪ್ಪಿಕೊಳ್ತಾರೆ ?"

"ಅಮ್ಮ ಸಮಾಜಸೇವಕಿ. ನಿನ್ನಂತಹ ಎಷ್ಟೋ ಹೆಂಗಸರಿಗೆ ಸಹಾಯ ಮಾಡಿರುತ್ತಾಳೆ. ಅವಳ ಮನೆಯಲ್ಲೇ ಇಂತಹ ಸಂದರ್ಭ ಒದಗಿದಾಗ, ಹಿಂದೆ ಸರಿಯುಕ್ಕೆ ಆಗುತ್ತಾ ?... ಅದೇ ಆಟಿಟ್ಯೂಡ್ ಇರಬೇಕು ಅಲ್ವಾ ?"

ಮಾಲಾ, ಸುಮ್ಮನೆ ಮಿಕಿ ಮಿಕಿ ಅವನನ್ನೇ ನೋಡುತ್ತಿದ್ದಳು.

○ ○ ○

ಮಾಲಾಳನ್ನು ಕಂಡೊಡನೆ ವಸುಧಾ ಓಡಿ ಬಂದು ತಬ್ಬಿಕೊಂಡಳು. "ಆಕ್ಸಿಡೆಂಟ್ ಆಯ್ತು ಅಂತ ಕೇಳಿ ಎಷ್ಟು ಗಾಬರಿಯಾಯ್ತು ಗೊತ್ತಾ? ಈ ಮೊದಲೇ ತಿಳಿಸಬಾರದಾಗಿತ್ತಾ ? ಎಂಥಾ ಜನರಪ್ಪಾ ?"

"ಎಂಥಾ ಜನರು ಅನ್ನೋದು ಗೊತ್ತೇ ಇದೆ... ಹೊಸದೇನಲ್ಲ. ಯಾವುದೋ ದರಿದ್ರ ಪಿಂಡ ನನ್ನ ಹೊಟ್ಟೆಯೊಳಗೆ ಬೆಳೀತಿದೆ. ಅದು ಬೇಕಂತೆ ಅವರುಗಳಿಗೆ ಎಂಥಾ ವಿಚಿತ್ರ ಜನರು ನೋಡು. ಮೇಲೆ ನೋಡೋಕೆ ಸಂಭಾವಿತರು. ನನಗೆ ಆಗಿರೋ ನಷ್ಟದ ಬಗ್ಗೆ ಚಿಂತೇನೇ ಇಲ್ಲ... ಈ ಮಗೂದೇ ಚಿಂತೆ... ತುಥ್"

"ಯಾಕೆ ಹಾಗೆ ಅಂತ ?"

"ಅವರ ಆಸ್ತಿಗೆ ಒಬ್ಬ ವಾರಸುದಾರ ಬೇಕು. ಆಗ ನಾನು ಬಸಿರಿ ಅಂತ ತಿಳಿದಾಗಲೂ ಹಾಗೆ ಆಡಿದ್ರು. ಈಗಲೂ ಅಷ್ಟೇ. ಎಲ್ಲರೂ ದೊಡ್ಡ ದೊಡ್ಡ ಮಾತುಗಳನ್ನಾಡುತ್ತಾರೆ. ಒಳಗೊಳಗೇ ಏನೋ ಪಿತೂರಿ ಮಾಡ್ತಿದಾರೆ ಅಂತಲೇ ಅನ್ನಿಸುತ್ತೆ. ಇಷ್ಟಾದರೂ ಒಬ್ಬರನ್ನು ಕಂಡರೆ ಇನ್ನೊಬ್ಬರಿಗೆ ಆಗುಲ್ಲ ಅಷ್ಟಕ್ಕಷ್ಟೇ. ಈ ಧ್ರುವನೋ ಶತಪೆದ್ದು."

"ಹೋಗಲಿ ಬಿಡು. ಈಗ ನಿನ್ನ ಮನಸ್ನಲ್ಲಿ ಏನಿದೆಯೋ ಹಾಗೇ ಮಾಡೋಣ. ಆಪರೇಷನ್ ಮಾಡಿ, ಈ ಬೇಡವಾದದ್ದನ್ನು ತೆಗೆಸಬಹುದು."

"ತೆಗೆಸಿದರೆ ನನ್ನ ಜೀವಕ್ಕೇ ಅಪಾಯ ಅಂತ ಆ ಲೇಡಿ ಡಾಕ್ಟರು ಬೇರೆ ಹೆದರಿಸಿದಾಳೆ. ನೀನೇ ಹೇಳು ವಸುಧಾ... ಯಾವುದೋ ಮಗುಗೋಸ್ಕರ, ನನ್ನ ಪ್ರಾಣ ಹೋಗಬೇಕಾ ?"

"ಛೇ, ಛೇ, ಹಾಗೆಲ್ಲ ಏನೂ ಆಗುಲ್ಲ.. ಇಲ್ಲಿಯ ಡಾಕ್ಟರ್ ಹತ್ತಿರ ಕನ್ಸಲ್ಟ್ ಮಾಡೋಣ. ಆದರೆ ಅವರು ಯಾಕೆ ಏನು ಎತ್ತ ಅಂತ ಕೇಳಿದರೆ ಎಲ್ಲಾ ಹೇಳಬೇಕಾಗುತ್ತದೆ..."

"ಹೇಳಿದರಾಯ್ತು. ಹೊಟ್ಟೆಯೊಳಗೆ ಯಾವುದೋ ಅಸಹ್ಯದ ಪಿಂಡವನ್ನು ಇಟ್ಟುಕೊಂಡು ಓಡಾಡುವ ಬದಲು, ಕತೆಯನ್ನೆಲ್ಲಾ ಹೇಳಿದರಾಯ್ತು. ಆದರೆ ಧ್ರುವನ ಮನೆಯವರಿಗೆ ಮಾತ್ರ ತಿಳಿಯಬಾರದು. ಅವನು ಮಗೂಗೆ ಏನೂ ತೊಂದರೆಯಾಗಬಾರದು ಅನ್ನೋ ಕಂಡೀಷನ್ ಹಾಕಿದ್ದಾನೆ. ತಿಳಿದರೆ ಪ್ರತಾಪ ಮತ್ತೆ ತನ್ನ ಬಾಲವನ್ನು ಬಿಚ್ಚುತ್ತಾನೆ."

"ಈ ಪ್ರತಾಪ ಎಲ್ಲಾ ಕಡೆ ಗೂಢಾಚಾರರನ್ನು ಬಿಟ್ಟಿರುತ್ತಾನಂತೆ. ಅವನಿಗೆ ತಿಳಿಯದೇ ಇರಲು ಸಾಧ್ಯವೇ ಇಲ್ಲ. ಏನಾದರೂ ಹೆಚ್ಚು ಕಡಿಮೆ ಆದರೆ ಅವನು ಡಾಕ್ಟರ್‌ಗಳನ್ನು ಸಹ ಜೀವಂತ ಬಿಡ್ತಾನೋ ಇಲ್ಲವೋ..."

"ಇವನಿಗೆ ಹೆದರುವ ಸ್ಥಿತಿ ಬಂತಲ್ಲ... ಏನಾದರೂ ಒಂದು ಉಪಾಯ ಸಿಕ್ಕೇ ಸಿಗುತ್ತೆ. ಆಕಾಶ್ ಎಲ್ಲಿ ಏನ್ಮಾಡ್ತಿದಾನೆ ?" ಎನ್ನುತ್ತಾ ಒಳಗೆ ಹೋದಳು. ವಸುಧಾ ಮಧುಗೆ ಎಲ್ಲಾ ವಿಷಯವನ್ನು ತಿಳಿಸಿದಾಗ, ಅವನು ತಲೆಯ ಮೇಲೆ ಕೈ ಹೊತ್ತ.

"ಅಂತೂ ಇವಳಿಂದ ಮರ್ಯಾದೆಯಾಗಿ ತಲೆ ಎತ್ತಿ ತಿರುಗಾಡುವಂತಿಲ್ಲ. ಆಗ, ಅದು ಇವಳಿಗೇ ಬೇಕಾದ ಮಗು. ಈಗ ಇದು ಬೇಡವಾದ ಮಗು. ನಾವು ಇಂತಹ ಮಕ್ಕಳನ್ನು ಸಾಕಬೇಕಾ ?" ವಸುಧಾ ಅವನನ್ನೇ

ವಿಚಿತ್ರವಾಗಿ ನೋಡಿದಳು.

"ಆಗಲೆ ಇವಳು, ಇವನನ್ನು ಧ್ರುವನಿಗೆ ಒಪ್ಪಿಸಿದ್ದರೆ, ಮತ್ತೆ ಹೀಗಾಗುತ್ತಿರಲಿಲ್ಲ. ಇದೆಲ್ಲಾ ಅವರದ್ದೇ ಪ್ಲಾನ್ ಅಂತ ನನಗನ್ನಿಸುತ್ತೆ. ಇಲ್ಲದಿದ್ದರೆ, ಹೀಗೆ ಎಲ್ಲವನ್ನೂ ಅಕ್ಸೆಪ್ಟ್ ಹೇಗೆ ಮಾಡಿಕೊಳ್ತಾರೆ ?"

"ನಾನು ಅವರುಗಳ ಮೇಲೆ ಕೇಸ್ ಹಾಕ್ತೀನಿ."

"ನಮ್ಮ ಹತ್ತಿರ ಏನು ಎವಿಡೆನ್ಸ್ ಇದೆ ? ಅಲ್ಲದೆ ಕೋರ್ಟು ಕೇಸು ಅಂತ ಮನೆಯ ವಿಷಯ ಹೊರಗೆ ಬರುತ್ತೆ. ಸಿಕ್ಕಾ ಬಟ್ಟೆ ಹಣ ಖರ್ಚಾಗುತ್ತೆ."

"ಹಾಗಂತ ಸುಮ್ಮನಿದ್ದುಬಿಡೋಣ್ವಾ ?"

"ಧ್ರುವನ್ನ ಕರೆಸಿ ಮಾತಾಡೋಣ. ಅವರನ್ನು ಒಪ್ಪಿಸೋಣ. ಅವರು ಯಾವುದಾದರೂ ಒಂದು ಮಗುವನ್ನು ದತ್ತು ತೆಗೆದುಕೊಳ್ಳಲಿ. ಈ ಬೇಡದ ಮಗುವಿಗೆ ಜನ್ಮ ಕೊಡು ಅಂತ ಮಾಲಾಗೆ ಮಾತ್ರ ಬಲವಂತ ಮಾಡುವುದು ಬೇಡ."

"ಅಂತೂ ನನ್ನ ಜೀವನವನ್ನು ಕಾಂಪ್ಲಿಕೇಟ್ ಮಾಡಿಬಿಟ್ಟಳು. ಅವಳೂ ಹ್ಯಾಪಿಯಾಗಿಲ್ಲ. ನನ್ನನ್ನೂ ಹ್ಯಾಪಿಯಾಗಿರಲು ಬಿಡಲಿಲ್ಲ."

"ನೀನು ನನ್ನ ಜೀವನವನ್ನು ಕಾಂಪ್ಲಿಕೇಟ್ ಮಾಡಿದ್ದು. ನನ್ನನ್ನು ಹ್ಯಾಪಿಯಾಗಿರಲು ಬಿಡಲಿಲ್ಲ. ನೀನು ನನ್ನ ಆಸೆಗೆ ಬೆಲೆ ಕೊಟ್ಟಿದ್ದರೆ ಇಬ್ಬರೂ ಹ್ಯಾಪಿಯಾಗಿರಬಹುದಾಗಿತ್ತು." ಒಳಗಿನಿಂದ ಮಾಲಾ ನುಡಿದಾಗ, ಮಧು ಹಲ್ಲು ಕಡಿದ.

○ ○ ○

"ಮಾಲಾಗೆ ಹುಷಾರಿಲ್ಲ. ನಿನ್ನ ಹತ್ತಿರ ಮಾತನಾಡಬೇಕು. ನೀನು ಒಬ್ಬನೇ ಬಾ" ಅಂತ ಮಧು ಫೋನಿನಲ್ಲಿ ಧ್ರುವನಿಗೆ ತಿಳಿಸಿದ. ಮರುದಿನ ಫ್ಲೈಟಿನಲ್ಲಿ ಧ್ರುವ ಪ್ರತಾಪನೊಡನೆ ಬಂದ. ಆದರೆ ಮನೆಗೆ ಧ್ರುವ ಒಬ್ಬನೇ ಬಂದ.

"ಮಾಲಾಗೆ ಆಘಾತವಾಗಿದೆ. ಸುಸ್ತು ಬಳಲಿಕೆ ಸಹ ಇದೆ. ಈ ಮಗು ಬೇಕು ಅನ್ನೋ ಆಸೆ ನಿನಗ್ಯಾಕೆ ? ಮಾಲಾಳ ಲೈಫ್ಗೆ ರಿಸ್ಕ್ ಇದೆ. ಅವಳು ಬದುಕಿರಲಿ ಅಂತ ನಮ್ಮ ಆಸೆ. ಅವಳಿಗೆ ಅಭಾರ್ಷನ್ ಮಾಡಿಸ್ತೀವಿ" ಮಧು ಹೇಳಿದ.

"ಹಾಗೇನಿಲ್ಲ. ಎಲ್ಲಾ ರೀತಿಯಿಂದಲೂ ಅವಳ ಹೆಲ್ತ್ ಸರಿಯಾಗಿದೆ ಅಂತ ಡಾಕ್ಟರ್ ಹೇಳಿದಾರೆ. ಅಲ್ಲದೆ ಮಾಲಾ ಸಹ ಒಪ್ಪಿದಾಳೆ. ಇನ್ನು ನಿನ್ನ ಕಿತಾಪತಿ ಏನು ? ನಮಗೆ ಈ ಮಗು ಬೇಕೇ ಬೇಕು."

"ಯಾವುದೋ ಅತ್ಯಾಚಾರಕ್ಕೆ ಹುಟ್ಟಿದ ಮಗುವನ್ನು ಸಾಕುವ ಆಸೆ ನಿನಗೇಕೆ? ಅನಾಥಾಶ್ರಮದಿಂದ ಒಂದು ಮಗುವನ್ನು ದತ್ತು ತೆಗೆದುಕೊಂಡರಾಯ್ತು."

"ಯಾವುದೋ ಅನಾಥಾಶ್ರಮದ ಮಗುವನ್ನು ದತ್ತು ತೆಗೆದುಕೊಳ್ಳುವುದಕ್ಕಿಂತ ಇದು ಏನೂ ಬೇರೆಯಲ್ಲ. ಒಂದೇ ಒಂದು ವ್ಯತ್ಯಾಸವೆಂದರೆ, ಇದು ನನ್ನ ಪತ್ನಿಯ ಮಗು. ಆ ಲೇಬಲ್ ಇರುತ್ತೆ. ಹೆಂಡತಿಯನ್ನಂತೂ ಪ್ರೀತಿಸಲಾಗಲಿಲ್ಲ. ಅವಳ ಮಗುವನ್ನಾದರೂ ಪ್ರೀತಿಯಿಂದ ಬೆಳೆಸ್ತೀನಿ. ಈ ಮಗುವಿನ ಜನ್ಮ ಹೇಗೇ ಇರಲಿ. ಅದು ನನ್ನ ಹೆಂಡತಿಯ ಮಗು. ನನಗೆ ಅಷ್ಟು ಸಾಕು."

"ನೀವುಗಳೆಲ್ಲ ಇಷ್ಟು ಬದಲಾಗೋಕೆ ಸಾಧ್ಯಾನೇ ಇಲ್ಲ. ಇದರ ಹಿಂದೆ ಏನೋ ರಹಸ್ಯವಿದೆ."

"ರಹಸ್ಯ ಏನೂ ಇಲ್ಲ. ಯಾಕೆ ಮನುಷ್ಯ ಬದಲಾಗೋಕೆ ಸಾಧ್ಯಾನೇ ಇಲ್ವಾ? ನೀನು ಬದಲಾಗಿಲ್ವಾ? ನೀನು ಲಕ್ಕೀ ನಿನಗೆ ವಸುಧಾಳಂತಹ ಹೆಂಡತಿ ಸಿಕ್ಕಿದಳು. ನೀನೂ ನಿನ್ನ ತಂಗಿಗೋಸ್ಕರ ಎಷ್ಟೋ ಕಾಂಪ್ರಮೈಸ್ ಮಾಡಿಕೊಂಡಿದೀಯ. ನನಗೆ ಗೊತ್ತು."

"ಮಾಲಾ ನನ್ನ ಸ್ವಂತ ತಂಗಿ. ಈ ಮಗು ಯಾವನೋ ಕಿಡ್ನಾಪರ್‌ದು."

"ಏನು ಮಾಡೋದು ಪರಿಸ್ಥಿತಿ ಹಾಗೆ ಬಂದಿದೆಯಲ್ಲ. ನಿನ್ನ ಹೆಂಡತಿ ವಸುಧಾ ನನಗೊಂದು ಮಗೂನ ಹೆತ್ತುಕೊಡ್ತಾಳಾ ಕೇಳು... ಆಗ ನೋಡೋಣ" ನಕ್ಕ.

"ನಾನ್ಸೆನ್ಸ್ – ಇದೆಂತಹ ಪ್ರಶ್ನೆ?"

"ಪ್ರಶ್ನೆ, ಉತ್ತರ ಯಾವುದೂ ಬೇಡ. ವಸುಧಾಗೆ ಹುಟ್ಟುವ ಮಗು ನಿನ್ನದಾಗುತ್ತದೆ. ಹಾಗೆ ಮಾಲಾಗೆ ಹುಟ್ಟುವ ಮಗು ನನ್ನದಾಗುತ್ತದೆ. ಇನ್ನು ಮಾತು ಬೇಡ"

"ಮಾಲಾಳ ಪ್ರಾಣ ಹೋದರೂ ಪರವಾಗಿಲ್ಲ. ನಿನಗೆ ವಾರಸುದಾರಬೇಕು ಅಲ್ವಾ?"

"ಹಾಗೆಲ್ಲ ಏನೂ ಆಗೊಲ್ಲ. ಮಾಲಾನೇ ಒಪ್ಪಿಕೊಂಡಿರುವಾಗ, ನಿನಗೇನು ತೊಂದರೆ? ನನ್ನ ಸಮಸ್ತ ಆಸ್ತಿಗೂ ನಿನ್ನ ತಂಗಿ ಮಗನೇ ವಾರಸುದಾರನಾಗುತ್ತಾನೆ. ನಾನು ನಿನ್ನ ಹಾಗೆ ಮೋಸ ಮಾಡುಲ್ಲ. ಅವಳನ್ನು ಚೆನ್ನಾಗಿ

ನೋಡಿಕೊಳ್ಳುತ್ತೇನೆ."

"ಷಟಪ್ ಧ್ರುವ. ಆ ಕಾಲ ಈಗ ಬದಲಾಗಿದೆ."

"ಕಾಲ ಬದಲಾಗಿದೆ ತಾನೇ. ಹಾಗಿದ್ರೆ ನಿನ್ನ ತಂಗಿಯ ಲೈಫ್‌ಗೆ ಅಡ್ಡ ಬರಬೇಡ. ಭಾರ್ಗವನ್ನ ಅವಳಿಂದ ದೂರ ಮಾಡಿ, ಅವಳ ಸುಖವನ್ನೇ ತಲೆ ಕೆಳಗೆ ಮಾಡಿದವನು ನೀನು. ಈಗ ತಂಗಿಯ ಚಿಂತೆ... ಮಾಲಾ ಒಪ್ಪಿಕೊಂಡಿದ್ದರಿಂದಲೇ ನಾನು ಅವಳನ್ನು ಇಲ್ಲಿಗೆ ಕಳಿಸಿದ್ದು... ಈಗ ಮಾತಿಗೆ ತಪ್ಪಿದರೆ ಪರಿಣಾಮ ನೆಟ್ಟಗಾಗುಲ್ಲ."

ಅಷ್ಟರಲ್ಲಿ ವಸುಧಾ ಮಗುವನ್ನು ಎತ್ತಿಕೊಂಡು ಹೊರಬಂದಳು. ಅವಳ ಹಿಂದೆ ಅಡಿಗೆಯ ಹೆಂಗಸು ಕಾಫಿ ಬಟ್ಟಲುಗಳನ್ನು ತಂದಿತ್ತಳು. ಧ್ರುವ ಏಕದೃಷ್ಟಿಯಿಂದ ಮಗುವನ್ನು ನೋಡಿದಾಗ ವಸುಧಾ ಮುಜುಗರಗೊಂಡಳು "ಕಾಫಿ ತಗೊಳ್ಳಿ" ಎಂದಳು.

"ನನಗೆ ಏನೂ ಬೇಡ" ಎನ್ನುತ್ತ ಧ್ರುವ ಎದ್ದು ಹೊರಟೇ ಹೋದ. ವಸುಧಾ ಪೆಚ್ಚಾದಳು.

"ಮಗೂನೇ ದುರು ದುರು ಅಂತ ನೋಡ್ತಿದ್ದ. ಇವನನ್ಯಾಕೆ ಹೊರಕ್ಕೆ ಕರೆದುಕೊಂಡು ಬಂದೆ ?"

"ನೋಡಿದರೇನಾಯ್ತು ? ಯಾಕೆ ಹೀಗಾಡ್ತೀರಿ ?"

"ಭಾಸ್ಕರನ ಮಗೂನೂ ಹೀಗೇ ಇದೆ. ಇವನಿಗೆ ಅನುಮಾನ ಬಂದರೆ ?"

"ಅನುಮಾನ ಬಂದರೂ, ಈಗ ನಾವು ಏನೂ ಮಾಡುಕ್ಕಾಗುಲ್ಲ. ಈಗ ಮಾಲಂಗೆ ಏನೂ ಆತಂಕವಿಲ್ಲ. ನಿಶ್ಚಿಂತೆಯಾಗಿದಾಳೆ. ಅಲ್ಲದೆ ಎಷ್ಟೆಷ್ಟು ಅಂತ ಮುಚ್ಚಿಡೋಕೆ ಆಗುತ್ತೆ? ಒಂದಲ್ಲ ಒಂದು ದಿನ ಎಲ್ಲಾ ಗುಟ್ಟು ಹೊರಬೀಳಬಹುದು. ಆಗ ಎದುರಿಸಲೇಬೇಕಾಗುತ್ತೆ ಅಲ್ವಾ ?"

"ನನ್ನ ಒಂದು ತಪ್ಪು. ಇಷ್ಟು ಕಾಂಪ್ಲಿಕೇಟ್ಸ್‌ನ ಕ್ರಿಯೇಟ್ ಮಾಡುತ್ತೆ ಅಂತ ನಾನು ಅಂದುಕೊಂಡಿರಲಿಲ್ಲ." ವಿಷಾದದಿಂದ ನುಡಿದ. ಮಗು ಅವನ ಬಳಿಗೆ ಬರುತ್ತೇನೆಂದು ಕೈ ಮಾಡಿ ಅತ್ತರೂ, ಎತ್ತಿಕೊಳ್ಳಲು ಮುಂದಾಗಲಿಲ್ಲ. ವಸುಧಾ ಮಗುವನ್ನು ರಮಿಸುತ್ತಾ ಹೊರಬಂದಳು. ಬ್ಯೂಟಿ ಪಾರ್ಲರ್‌ಗೆ ಹೋಗಿದ್ದ ಮಾಲಾ ವಾಪಸ್ಸಾಗಿದ್ದಳು. ವಸುಧಾ ಧ್ರುವ ಬಂದು ಹೋದ ವಿಷಯವನ್ನು ಅವಳಿಗೆ ಹೇಳಲಿಲ್ಲ.

○ ○ ○

ಮಾಲಾ ಮನೆಯಲ್ಲಿ ಹೊತ್ತು ಹೋಗುವುದಿಲ್ಲವೆಂದು ಮತ್ತೆ ಆಫೀಸಿಗೆ ಹೋಗಲಾರಂಭಿಸಿದಳು. ಈಗ ಭಾಸ್ಕರನ ಬದಲಿಗೆ ಒಬ್ಬಳು ಹೆಂಗಸು ಸೇರಿಕೊಂಡಿದ್ದಳು. ಅವಳು ವಯಸ್ಸಿನಲ್ಲಿ ಮಾಲಾಗಿಂತ ಹಿರಿಯವಳು. ಅವಳ ಹೆಸರು ಚಂದ್ರಕಲಾ. ಅವಳು ಭಾಸ್ಕರನಿಗೆ ದೂರ ಸಂಬಂಧಿ. ಈ ವಿಷಯ ಮಾಲಾಳಿಗೆ ತಿಳಿಯದು. ಆದರೂ, ಅವಳ ಸ್ನೇಹಪರತೆಗೆ ಮಾರು ಹೋದಳು.

ಭಾಸ್ಕರ ಯಾವುದೋ ಕೆಲಸದ ಮೇಲೆ ಬೆಂಗಳೂರಿಗೆ ಬಂದಿದ್ದವನು ಮಾಲಾಳನ್ನು ಕಂಡು ಮಾತನಾಡಿಸಲು ಅವರ ಮನೆಗೆ ಬಂದ. ಮಾಲಾ ಆಫೀಸಿಗೆ ಹೋಗಿದ್ದಾಳೆಂದು ತಿಳಿದಾಗ ಅಲ್ಲಿಗೇ ಹೋದ. ಅವನನ್ನು ಕಂಡ ಕೂಡಲೇ ಮಾಲಾಳ ಕಣ್ಣುಗಳು ಮಿಂಚಿದವು. ಎದುರಿಗೆ ಚಂದ್ರಕಲಾ ಇರುವುದನ್ನು ಮರೆತು, ಅವನೆಡೆಗೆ ಬಂದು ಅವನ ಕೈ ಹಿಡಿದಳು. ಭಾಸ್ಕರ ಕಣ್ಣು ಸಂಜ್ಞೆ ಮಾಡಿದ.

"ಇವರು ನನ್ನ ಹೊಸ ಕಲೀಗ್.. ಚಂದ್ರಕಲಾ" ಪರಿಚಯಿಸಿದಳು.

"ಹೂಂ ಗೊತ್ತು. ದೂರದ ಸಂಬಂಧಿಯಾಗಬೇಕು. ನಾನೇ ಇವರನ್ನು ನನ್ನ ಜಾಗಕ್ಕೆ ಸಜೆಸ್ಟ್ ಮಾಡಿದ್ದು."

"ಓ..." ಉದಾಸೀನದಿಂದ ನುಡಿದಳು.

"ಹೇಗಿದೀರಿ ಮಾಲಾ ? ಇನ್ನೇನು ವಿಷಯ ?" ಎಂಬಂತೆ ಕೇಳಿದ.

"ತುಂಬಾ ವಿಷಯವಿದೆ ಭಾಸ್ಕರ್... ಪ್ರೈವೇಟ್ ಆಗಿ ಕೂತು ಮಾತನಾಡಬೇಕು. ಎಲ್ಲಿಗೆ ಹೋಗೋಣ."

"ನಿಮ್ಮ ಮನೆಗೇ ಹೋಗೋಣ. ನಾನು ಆಕಾಶನನ್ನು ನೋಡಬೇಕು."

"ಹೌದು. ನೀವು ಅವನನ್ನು ನೋಡಲೇಬೇಕು..." ಎನ್ನುತ್ತಾ ಉತ್ಸಾಹ ದಿಂದ ಅವನ ಜೊತೆ ಜೊತೆಗೆ ನಡೆದಾಗ, ಚಂದ್ರಕಲಾ ಬೆರಗಾಗಿ ಅವರಿಬ್ಬರನ್ನೇ ನೋಡುತ್ತಿದ್ದಳು.

ಭಾಸ್ಕರನನ್ನು ಕಂಡು ವಸುಧಾ ಹುಬ್ಬೇರಿಸಿದಳು. ಅವಳ ಸೊಂಟದಲ್ಲಿದ್ದ ಆಕಾಶನನ್ನೇ ಭಾಸ್ಕರ ನೋಡಿದ. ಈ ಆಕಾಶ, ಆದಿತ್ಯನ ಪಡಿಯಚ್ಚು. ಮಗುವನ್ನು ಎತ್ತಿಕೊಳ್ಳಲು ಕೈ ಮುಂದೆ ಮಾಡಿದ. ಆದರೆ ಆಕಾಶ ಮುಖ ಅತ್ತ ತಿರುಗಿಸಿದ. "ಹೊಸ ಮುಖ ಪರಿಚಯವಿಲ್ಲದವರ ಜೊತೆಗೆ ಬರುವುದೇ ಇಲ್ಲ." ವಸುಧಾ ಅವರಿಬ್ಬರನ್ನು ಅಲ್ಲಿಯೇ ಬಿಟ್ಟು ಒಳಗೆ ಹೊರಟುಹೋದಳು.

"ನನಗೆ ನನ್ನ ಕಣ್ಣುಗಳನ್ನೇ ನಂಬುಕ್ಕೆ ಆಗ್ತಿಲ್ಲ ಮಾಲಾ... ಥೇಟ್... ನನ್ನ

ಮಗನ ತರಹಾನೇ..."

"ಇವನೂ ನಿಮ್ಮ ಮಗನೇ..."

"ಆದರೆ ಸಮಾಜದ ಕಣ್ಣಿಗೆ ಇವನು ಮಧುಕರನ ಮಗುವಾಗಿದಾನಲ್ಲ."

"ನೀವು ನನಗೆ ಮೋಸ ಮಾಡಿಬಿಟ್ಟಿರಿ."

"ನಾನಾ ? ನಾನೇನು ಮಾಡಿದೆ ?"

"ನಿಮಗೆ ಇನ್ನೂ ಒಬ್ಬ ಮಗ ಹುಟ್ಟಿರುವ ವಿಷಯವನ್ನು ನನಗೆ ತಿಳಿಸಲೇ ಇಲ್ಲ. ಯಾಕೆ ನಾನು ಜಗಳ ಆಡ್ತೀನಿ ಅಂತ ಹೆದರಿದ್ರಾ ?"

"ಅದು ಒಂದು ಆಕಸ್ಮಿಕ... ನನಗೆ ಹೇಳೋಕೆ ಸಾಧ್ಯವಿರಲಿಲ್ಲ."

"ಆಕಸ್ಮಿಕವಾದರೂ, ಅದು ಸಂಬಂಧವೇ... ಹಾಗೆ ನೋಡ್ತಾ ಹೋದ್ರೆ ಅವರೇ ನಿಮ್ಮ ಪತ್ನಿ... ಅದರೆ ನೀವು... ಹೀಗೆ ಮಾಡ್ತೀನಿ ಅಂತ ನಾನಂದು ಕೊಂಡಿರಲಿಲ್ಲ."

"ಹೇಳಿದೆನಲ್ಲ ಅದೊಂದು ಆಕ್ಸಿಡೆಂಟ್ ಅಂತ. ನಿಜ ಹೇಳ್ತಾ ಹೋದರೆ, ನಾನು ನನ್ನ ಪತ್ನಿಯ ಮೇಲೆ ಎಸಗಿದ್ದು ಅತ್ಯಾಚಾರ. ಅಲ್ಲಿ ಪ್ರೀತಿ ಇರಲಿಲ್ಲ. ಇದ್ದುದು ಬರೀ ಕಾಮ... ಅಷ್ಟೇ ಅದೇ ಕಡೆ, ಅದೇ ಮೊದಲು... ಆಮೇಲೆ ನಾನೆಂದೂ ಅವಳನ್ನು ಆ ದೃಷ್ಟಿಯಿಂದ ಸಹ ನೋಡಿಲ್ಲ..."

"ಆದರೇನು ? ರಿಸಲ್ಟ್ ಒಂದೇ... ಇವನಿಗಿಂತ ಮೊದಲು ಹುಟ್ಟಿ, ನಿಜವಾದ ಹಕ್ಕುದಾರನಾಗಿಬಿಟ್ಟ.... ನಿಮ್ಮ ಪತ್ನಿಗೆ ಈ ವಿಷಯ ಗೊತ್ತಾ ?"

"ಇಲ್ಲ. ನಾನು ಹೇಳಿಲ್ಲ. ಹೇಳಿದ್ರೆ ಏನೇನಾಗುತ್ತದೋ ನನಗೆ ಗೊತ್ತಿಲ್ಲ. ನೀವು ವಸುಧಂಗೆ ಮಗೂನ ದತ್ತು ಕೊಟ್ಟಿದ್ದು ಒಳ್ಳೇದೇ ಆಯ್ತು. ಈಗ ಯಾರಿಗೂ ಯಾವ ಅನುಮಾನವಿಲ್ಲ."

"ಅಂದ್ರೆ ಎಲ್ಲರಂತೇ ನೀವೂ ಜನಕ್ಕೆ ಹೆದರುತ್ತೀರಿ ಅಂತಾಯ್ತು."

"ಹೆದರಲೇಬೇಕಾಗುತ್ತದೆ... ಹಾಗಾದ್ರೆ ಧ್ರುವನಿಗೆ ಈ ವಿಷಯ ಗೊತ್ತಾ ?"

"ಇಲ್ಲ. ಅವರಿಗೆ ನಾನು ಹೇಳಲಿಲ್ಲ. ಒಂದು ವೇಳೆ ಗೊತ್ತಾಗಿದ್ದರೂ ಅವರು ಅಕ್ಸೆಪ್ಟ್ ಮಾಡಿಕೊಳ್ಳುತ್ತಿದ್ದರು. ನನಗೆ ಅದು ಬೇಕಾಗಿರಲಿಲ್ಲ. ಅದಕ್ಕೆ ನಾನು ಯಾರಿಗೂ ತಿಳಿಯದಂತೆ ಅಜ್ಞಾತವಾಸದಲ್ಲಿದ್ದೆ. ಆದರೆ ವಿಧಿ ಮತ್ತೆ ನನ್ನನ್ನು ಅವರ ಮನೆಗೆ ಎಳೆದುಕೊಂಡು ಹೋಯ್ತು."

"ನೀವು ಅಲ್ಲಿ ಇರುವ ವಿಷಯ ತಿಳಿದು ನನಗೆ ಎಷ್ಟು ಖುಷಿಯಾಯ್ತು ಗೊತ್ತಾ ? ಮುಂಚಿನಂತೆ ಸ್ನೇಹಿತರಾಗಿರಬಹುದು ಅಂತ ಅಂದುಕೊಂಡೆ.

ಆದರೆ ನನಗೆ ಒಂದ್ಮಾತೂ ತಿಳಿಸದೇ ಇಲ್ಲಿಗೆ ಬಂದು ಬಿಟ್ಟಿದ್ದೀರಿ."

"ಇನ್ನೂ ಈ ಜನ್ಮದಲ್ಲಿ ಮುಂಚಿನಂತೆ ನಾವಿಬ್ಬರೂ ಇರಲು ಸಾಧ್ಯವಿಲ್ಲ."

"ಸ್ಟಿಲ್ ಐ ಲವ್ ಯೂ ಮಾಲಾ... ನನ್ನಿಂದ ಏನಾದರೂ ತಪ್ಪು ನಡೆದಿದ್ದರೆ ಪ್ಲೀಸ್ ಕ್ಷಮಿಸಿಬಿಡಿ" ಎನ್ನುತ್ತಾ ಅವಳ ಕೈಗಳನು ಹಿಡಿದ. ಅವಳು ನಯವಾಗಿ ಬಿಡಿಸಿಕೊಂಡಳು.

"ಸಾರಿ ಭಾಸ್ಕರ್. ನಾವಿಬ್ಬರೂ ಮೊದಲಿನಂತೆ ಇರಲು ಸಾಧ್ಯವಿಲ್ಲ."

"ಯಾಕೆ ಸಾಧ್ಯವಿಲ್ಲ? ನನಗೆ ಗೊತ್ತು ನೀವು ಈಗಲೂ ನನ್ನನ್ನು ಪ್ರೀತಿಸುತ್ತೀರಿ. ಹೌದೋ ಅಲ್ಲವೋ ನಿಜ ಹೇಳಿ."

"ಹೌದು. ನಾನು ಈಗಲೂ ಪ್ರೀತಿಸುತ್ತೀನಿ. ಆದರೆ ನಿಮ್ಮವಳಾಗಲಾರೆ."

"ನನ್ನ ಮೇಲೆ ಕೋಪಾನಾ ಮಾಲಾ ?"

"ಇಲ್ಲ. ನನ್ನ ಮೇಲೇ ನನಗೆ ಕೋಪ. ನನ್ನ ಅದೃಷ್ಟ ಚೆನ್ನಾಗಿಲ್ಲ. ನಾನು ಯಾರನ್ನು ನಂಬಿದೆನೋ ಅವರೇ ನನಗೆ ಮೋಸ ಮಾಡಿಬಿಟ್ಟರು."

"ನಾನು ನಿಮಗೆ ಮೋಸ ಮಾಡಿಲ್ಲ ಮಾಲಾ... ನಿಮಗಾಗಿ ನಾನು ಈಗಲೂ ಕಾಯುತ್ತಿದ್ದೇನೆ."

"ಸಾರಿ. ನಾನು ನಿಮ್ಮ ಬಳಿಗೆ ಬರಲಾರೆ. ನನ್ನ ಸ್ಥಿತಿ ನಿಮಗೆ ಗೊತ್ತಿಲ್ಲ. ಈಗ ನನ್ನ ದಾರಿ ಬದಲಾಗಿದೆ... ನನ್ನ ನಿಮ್ಮ ಸ್ನೇಹ ಹೀಗೇ ಮುಂದುವರೆಯಲಿ, ಬಿಡಲಿ, ನಾನು ಮಾತ್ರ ನಿಮ್ಮನ್ನು ಮರೆಯಲಾರೆ. ನಿಮ್ಮ ಕಾಣಿಕೆಯನ್ನು ಮರೆಯುಲಾರೆ... ಈ ಜನ್ಮದಲ್ಲಿ ನನಗೆ ಇಷ್ಟು ಸಾಕು."

"ಯಾಕೆ ಇಷ್ಟು ವೈರಾಗ್ಯ ?"

"ಈಗ ನಾನು ಏನನ್ನೂ ಹೇಳಲುಇಷ್ಟ ಪಡುವುದಿಲ್ಲ. ಸಮಯ ಬಂದಾಗ ಹೇಳ್ತೀನೆ" ಎನ್ನುತ್ತಾ ಅವನ ಕೈಯನ್ನು ಅದುಮಿದಳು. ಅವನು ಅವಳ ಕೈಗಳನ್ನು ಹಿಡಿದು ತನ್ನ ತುಟಿಗಳ ಬಳಿಗೆ ಒಯ್ದು. ಅಷ್ಟರಲ್ಲಿ ವಸುಧಾ ಪ್ರತ್ಯಕ್ಷಳಾಗಿದ್ದಳು. ಅವನು ಅವಳಿಂದ ದೂರ ಸರಿದು ಕುಳಿತ. ಮಾಲಾ ಎದ್ದು, ತನ್ನ ರೂಮಿಗೆ ಹೋಗಿಬಿಟ್ಟಳು. ವಸುಧಾ, ಏನಾಯ್ತು ಎನ್ನುವಂತೆ ಅವನನ್ನೇ ನೋಡಿದಳು. ಅವನ ಕೈಗೆ ತಿಂಡಿಯ ತಟ್ಟೆಯನ್ನು ಕೊಟ್ಟು ಅಲ್ಲೇ ಕುಳಿತಳು.

"ಮಾಲಾ ಯಾಕೋ ಅಪ್ಸೆಟ್ ಆಗಿದ್ದಾಳೆ ಅಂತ ಅನ್ನಿಸ್ತು."

"ಅವಳನ್ನು ಕಿಡ್ನಾಪ್ ಮಾಡಿದ್ದ ವಿಷಯ ನಿಮಗೆ ಗೊತ್ತು ಅಲ್ವಾ ?"

"ಹೂಂ. ಮಧುಕರ ಹೇಳಿದ್ರು. ಆದರೆ, ಧ್ರುವನ ಮನೆಯಲ್ಲಿ ಸೇಫ್ ಆಗಿ

ಇದ್ರಲ್ಲ. ಈಗ ಆ ಭಯ ಕಡಿಮೆ ಆಗಿರಬಹುದಲ್ಲಾ ?"

"ಹಾಗಾದರೆ ಏನು ನಡೀತು ಅಂತ ನಿಮಗೆ ಪೂರ್ಣ ವಿಷಯ ತಿಳಿಯದು. ಕಿಡ್ನಾಪ್ ಮಾಡಿದ ಪಾಪಿ ಅತ್ಯಾಚಾರವನ್ನೂ ಮಾಡಿದ್ದಾನೆ. ಅದರ ಫಲವಾಗಿ ಈಗ ಅವಳು ಪ್ರೆಗ್ನೆಂಟ್... ಅವಳ ಮನಃಸ್ಥಿತಿಯೇ ಸರಿಯಿಲ್ಲ" ಭಾಸ್ಕರ ಕಣ್ಣರಳಿಸಿದ. ಅವನಿಗೆ ನಂಬಲಾಗಿರಲಿಲ್ಲ.

"ಛೇ... ಹೀಗಾಗಬಾರದಿತ್ತು... ತನ್ನನ್ನು ತಾನೇ ಅಪವಿತ್ರ ಅಂತ ತಿಳಿದುಕೊಂಡಿದ್ದಾಳೆ ಪಾಪ."

"ಹಾಗೇನಿಲ್ಲ. ಇದರಲ್ಲಿ ಅವಳ ತಪ್ಪು ಏನೂ ಇರಲಿಲ್ಲ. ಆದರೆ, ಅಬಾರ್ಷನ್ ಮಾಡಿಸಿಕೊಳ್ಳಲು ಧ್ರುವ ಬಿಡಲಿಲ್ಲ. ಧ್ರುವನಿಗೆ ಈ ಮಗು ಬೇಕಂತೆ."

"ಹೌದಾ ? ಅದ್ಯಾಕೆ ಈ ಮಗುವೇ ಬೇಕು ಅಂತ ?"

"ಧ್ರುವನ ವಿಷಯ ನಿಮಗೆ ತಿಳಿಯದು. ಅವನು ಏಡ್ಸ್ ರೋಗಿ. ಅವನು ಬೇರೆ ಮದುವೆಯಾದರೆ, ಮಕ್ಕಳಾದ್ರೂ ಈ ಭಯವಿದ್ದೇ ಇರುತ್ತದೆ. ಅದಕ್ಕೇ ಮಾಲಾಳ ಆರೋಗ್ಯವಂತ ಮಗುವನ್ನು ತಾನು ಸಾಕಬೇಕೆಂದು ಬಯಸುತ್ತಾನೆ."

"ಓ ಹೀಗೋ ವಿಷಯ. ನನಗೆ ಗೊತ್ತಿರಲಿಲ್ಲ. ಆದರೆ ರೇಪ್ ಮಾಡಿದ ವ್ಯಕ್ತಿ ಎಂತಹವನೋ ಏನೋ ? ಡಾಕ್ಟರ್ ಏನಂದ್ರೋ ?" ಬ್ಲಡ್ ಟೆಸ್ಟ್ ಏನು ಹೇಳುತ್ತೆ ?"

"ಎಲ್ಲಾ ಸರಿಯಾಗಿದೆ ಅಂತ ಹೇಳಿದ್ದಾರೆ. ಅಬಾರ್ಷನ್‌ಗೆ ಸಮಯ ಮೀರಿದೆ. ಮಾಡಿಸುವುದು ಬೇಡ ಅಂತ ಸಲಹೆ ಕೊಟ್ಟಿದಾರೆ."

"ಛೇ. ಹೀಗಾಗಬಾರದಿತ್ತು... ಮಾಲಾ ಏನಂತಾರೆ ?"

"ಒಬ್ಬೊಬ್ಬರು ಒಂದೊಂದು ತರಹ ಮಾತನಾಡಿ, ಅವಳ ತಲೆಯಲ್ಲಿ ಏನೇನನ್ನೋ ತುಂಬಿದಾರೆ. ಅವಳ ಮನಃಸ್ಥಿತಿ, ದೇಹಸ್ಥಿತಿ ಎರಡೂ ಸರಿಯಿಲ್ಲ ಅಷ್ಟೇ."

"ನಾನು, ಅವರನ್ನು ನಮ್ಮ ಮನೆಗೆ ಕರೆದುಕೊಂಡು ಹೋಗ್ತೀನಿ. ಒಂದೆರಡು ವಾರ ಅಲ್ಲಿರಲಿ. ಯಾರಿಗೂ ಗೊತ್ತಾಗುವುದಿಲ್ಲ."

"ಬೇಡ. ಡೆಲಿವರಿ ಆಗೋವರೆಗೂ ಅವಳು ಇಲ್ಲಿಂದ ಎಲ್ಲಿಗೂ ಹೋಗುವಂತಿಲ್ಲ. ಈಗ ಅವಳು ಧ್ರುವನ ಕಸ್ಟಡಿಯಲ್ಲಿದ್ದಾಳೆ. ಅಲ್ಲೀವರೆಗೂ ಅವಳು ಇಲ್ಲಿ ನಮ್ಮ ಮನೆಯಲ್ಲಿ ಇರಲು ಒಪ್ಪಿಕೊಂಡಿದಾರೆ."

"ಇದೇನ್ಲಾ ವಿಚಿತ್ರ ಅನ್ನಿಸೋಲ್ವಾ?"

"ವಿಚಿತ್ರವಲ್ಲದೇ ಇನ್ನೇನು? ಆಕಾಶ ಹುಟ್ಟಿದಾಗ, ಅವರುಗಳೆಲ್ಲಿ ಮಗುವನ್ನು ಕಿತ್ತುಕೊಂಡು ಬಿಡುವರೋ ಅನ್ನೋ ಭಯಕ್ಕೆ ನನಗೆ ಕೊಟ್ಟು ಬಿಟ್ಟಳು. ಈಗ ಅವನಿಗಾಗಿ ಈ ಮಗುವಿಗೆ ಜನ್ಮ ಕೊಡಬೇಕಾಗಿದೆ. ಒಂಬತ್ತು ತಿಂಗಳು ಹೊತ್ತು ಹೆತ್ತು, ಹಾಲು ಕುಡಿಸಿದರೂ ಅವಳ ಮಡಿಲು ಖಾಲಿ. ಇದ್ದಕ್ಕಿಂತ ವಿಚಿತ್ರ ಇನ್ನೇನು ಬೇಕು?" ಭಾಸ್ಕರ ನಿರುತ್ತರನಾದ ಅವನೂ ಗೊಂದಲದಲ್ಲಿ ಮುಳುಗಿದ್ದ.

"ನೀವು ಈ ಕಡೆಗೆ ಬಂದಾಗ ಅವಳನ್ನು ಮಾತನಾಡಿಸಿಕೊಂಡುಹೋಗಿ. ನಿಮ್ಮೊಂದಿಗೆ ಸ್ವಲ್ಪ ಸಲುಗೆಯಿಂದ ಇರುತ್ತಾಳೆ. ಇಲ್ಲದಿದ್ದರೂ, ಊಟ ತಿಂಡಿಯಲ್ಲಿ ಆಸಕ್ತಿಯಿಲ್ಲ. ಔಷಧ ಪಥ್ಯದಲ್ಲಿ ನಂಬಿಕೆ ಇಲ್ಲ. ಬೇಕೂಂತ ತನ್ನ ದೇಹವನ್ನು ದಂಡಿಸಿಕೊಳ್ಳುತ್ತಾಳೆ."

"ಯಾಕೆ ಹಾಗೆ?"

"ಮಗು ಹೇಗೆ ಬೆಳೆದರೆ ತನಗೇನು ಅನ್ನೋ ಉದಾಸೀನ. ಧ್ರುವ, ಆಸೆ ಪಡೋ ಮಗು, ಅಸತ್ಯವಾಗಿರಬೇಕು ಅಂತ ಹೇಳ್ತಾಳೆ."

"ಕಿಡ್ನಾಪರ್ ಯಾರು? ರೇಪಿಸ್ಟ್ ಯಾರು ಅಂತ ಗೊತ್ತಾಗ್ಲೇ ಇಲ್ವಾ?"

"ಎಲ್ಲರೂ ಕಂಪ್ಲೇಂಟ್ ಕೊಡುವುದೇ ಬೇಡ ಅಂತ ಅಂದುಬಿಟ್ರು. ಬೇರೆಯವರಿಗೆ ತಿಳಿದರೆ ಮನೆಯ ಮರ್ಯಾದೆ ಹೋಗುತ್ತದೆ ಅನ್ನೋ ಚಿಂತೆ."

"ಯಾರಾದ್ರೂ ಹೀಗೆ ಇರ್ತಾರಾ? ಎಲ್ಲವನ್ನೂ ಅಕ್ಸೆಪ್ಟ್ ಮಾಡಿಕೊಂಡು."

"ನನಗೂ ಅದೇ ಆಶ್ಚರ್ಯ. ಈ ವಿಷಯದಲ್ಲಿಯೂ ಎಷ್ಟು ಕೂಲ್ ಆಗಿದಾರೆ. ಅದೇ ನಮಗ್ಯಾರಿಗೂ ಅರ್ಥವಾಗ್ತಿಲ್ಲ."

"ಇಲ್ಲಿ ಏನೋ ಎಳಗುಟ್ಟಿದೆ ಅಂತ ನನಗನ್ನಿಸುತ್ತೆ. ನಾನು ಕಂಡು ಹಿಡಿಯಲು ಪ್ರಯತ್ನಿಸುತ್ತೀನಿ. ಒಂದಲ್ಲ ಒಂದು ದಿನ ರಹಸ್ಯ ಹೊರ ಬೀಳುತ್ತದೆ. ನೀವು ಆತಂಕ ಪಡಬೇಡಿ" ಎಂದ. ಅವನು ಹೊರಟಾಗಲೂ ಅವಳು ಹೊರಬಂದಿರಲಿಲ್ಲ.

"ಮಲಗಿದಾರೋ ಏನೋ ಎಬ್ಬಿಸಬೇಡಿ. ಗರ್ಭಿಣಿ ಹೆಂಗಸು ನಿದ್ದೆ ಮಾಡುತ್ತಿರುವಾಗ ಎಬ್ಬಿಸಬಾರದಂತೆ. ಹಾಗಂತ ನಮ್ಮ ತಾಯಿ ಹೇಳ್ತಾರೆ."

"ಹೌದು ಮತ್ತೆ ಎಂದು ಬರ್ತೀರಿ?"

"ನಾನು ನಾಳೆ ಮತ್ತೆ ... ಹೋಗಬೇಕು. ಆದಾಗ ಮತ್ತೆ ಬರ್ತೀನಿ"

ಎಂದು ಹೇಳಿ ಹೊರಟು ಹೋದ. ಮತ್ತೆ ನೆನಪಿಸಿಕೊಂಡವನಂತೆ ಒಳಬಂದು, ತನ್ನ ಬಳಿ ಇದ್ದ ರೂಪಾಯಿ, ನೂರರ ನೋಟೊಂದನ್ನು ಮಗುವಿಗೆ ಕೊಟ್ಟ. ಏನಾದರೂ ಆಟದ ಸಾಮಾನನ್ನು ತೆಗೆಸಿಕೊಡಿ" ಎಂದ. ವಸುಧಾ ಸಂಕೋಚದಿಂದ ನೋಟನ್ನು ತೆಗೆದುಕೊಂಡಳು.

o o o

ಮಾಲಾ ಉದಾಸೀನ ಮಾಡಿದರೂ, ಅವಳ ಬಸಿರು ಆರೋಗ್ಯವಾಗಿ ಬೆಳೆಯಿತು. ವಸುಧಾ ಬಲವಂತಮಾಡಿ ಡಾಕ್ಟರ ಬಳಿಗೆ ಕರೆದುಕೊಂಡು ಹೋಗುತ್ತಿದ್ದಳು. ಧ್ರುವ ಆಗಾಗ್ಗೆ ಫೋನು ಮಾಡುತ್ತಿದ್ದ. ಅವಳ ಕ್ಷೇಮವನ್ನು ವಿಚಾರಿಸುತ್ತಿದ್ದ. ಮಾಲಾ ಮಾತನಾಡುತ್ತಿರಲಿಲ್ಲ. ವಸುಧಾಳೇ ಉತ್ತರ ಕೊಡುತ್ತಿದ್ದಳು.

ಮೈ ಕೈ ತುಂಬಿಕೊಂಡ ಮಾಲಾ ಬಹಳ ಆಕರ್ಷಕವಾಗಿ ಕಾಣುತ್ತಿದ್ದಳು. ಹೊಟ್ಟೆಯೊಳಗೆ ಮಗು ಮಿಸುಕಾಡುವಾಗ, ಏನೋ ಒಂದು ಬಗೆಯ ಆನಂದ ಉಂಟಾಗುತ್ತಿತ್ತು. ಅವಳಿಗೇ ಅರಿಯದಂತೆ, ಹೊಟ್ಟೆಯ ಮೇಲೆ ಕೈಯಾಡಿಸುತ್ತಿದ್ದಳು.

ಆಕಾಶ ಹುಟ್ಟೋಕ್ಮುಂಚೆ ಕೂಡಾ, ಮಗು ಮಿಸುಕಾಡುವಾಗ ಹೀಗಾಗುತ್ತಿರಲಿಲ್ಲ. ಈಗ ಈ ಮಗು ವಿಪರೀತ ಆಕ್ಟಿವ್ ಇರಬಹುದು. ಹುಟ್ಟುವವರೆಗೂ ಎಷ್ಟು ಕಷ್ಟ ಅನುಭವಿಸಬೇಕೋ ಅಂತ ಅಂದುಕೊಳ್ಳುತ್ತಿದ್ದಳು. ಕ್ರಮೇಣ ತನಗೇ ಅರಿಯದಂತೆ ತನ್ನ ಒಡಲಲ್ಲಿರುವ ಮಗುವನ್ನು ಪ್ರೀತಿಸಲಾರಂಭಿಸಿದಳು.

ಜನ್ಮಕ್ಕೆ ಕಾರಣ ಏನೇ ಇರಲಿ. ಇದು ನನ್ನ ಮಗು ಕೂಡಾ... ನನ್ನ ಒಡಲೊಳಗೆ ಬೆಳೆಯುತ್ತಿದೆ. ಇದರ ಮೇಲೆ ಪೂರ್ಣ ಹಕ್ಕು ನನ್ನದು. ನಾನೇಕೆ ಧ್ರುವನಿಗೆ ಒಪ್ಪಿಸಬೇಕು? ಎಂಬ ಆಲೋಚನೆ ಬರತೊಡಗಿತು. ವಸುಧಾಳೊಡನೆ ಹೇಳಿದಾಗ ಅವಳು ತಲೆಯಾಡಿಸಿದಳು.

"ಈ ಅನುಭವಗಳು ನನಗೆ ಉಂಟಾಗಲಿಲ್ಲ. ಆದರೂ ತಾಯಿ ಮಗುವಿನ ಬಾಂಧವ್ಯ ಅಂದರೆ ಇದೇ ಇರಬಹುದು. ನೀನು ಪೋಷಿಸುವಾಗ ನಿನಗೇ ಅರಿಯದಂತೆ ಮಮತೆಯ ಧಾರೆಯೂ ಸೇರಿರುತ್ತದೆ. ನೀನು ಉದಾಸೀನ ಮಾಡಿದರೂ, ನಿನ್ನ ಮಗು ತನ್ನ ಬೆಳವಣಿಗೆಯನ್ನು ನಿಲ್ಲಿಸಿಲ್ಲ" ಮಾಲಾ ನಿಲುವುಗನ್ನಡಿಯ ಮುಂದೆ ನಿಂತು ತನ್ನ ಉಬ್ಬಿದ ಹೊಟ್ಟೆಯನ್ನೇ

ನೋಡಿಕೊಂಡಳು.

"ನನಗೇನೋ ಅನುಮಾನ ಟ್ವಿನ್ಸ್ ಇರಬಹುದಾ ಅಂತ..."

"ಇನೇ ಬೇಡದ ಮಗು.. ಅವಳಿ ಹುಟ್ಟಿದರೆ ಏನು ಗತಿ ?"

"ಒಂದನ್ನು ನಾನು ಇಟ್ಟುಕೊಳ್ಳುತ್ತೀನಿ. ಇನ್ನೊಂದನ್ನು ಧ್ರುವನಿಗೆ ಕೊಡ್ತೀನಿ."

"ಧ್ರುವ ಎರಡೂ ಮಕ್ಕಳೂ ತನಗೇ ಬೇಕೂಂತ ಅಂದರೆ ?"

"ಅವನಿಗೆ ಯಾವ ಹಕ್ಕೂ ಇಲ್ಲ... ಎರಡನ್ನೂ ನಾನೇ ಸಾಕ್ತೀನಿ" ಎಂದಳು.

○ ○ ○

ಇದ್ದಕ್ಕಿದ್ದಂತೆ ಸುಮಿತ್ರಾದೇವಿ ಬಂದಿಳಿದಾಗ ಎಲ್ಲರಿಗೂ ದಿಗಿಲಾಗಿತ್ತು. ಆದರೂ ನಗು ನಗುತ್ತಾ ಬರಮಾಡಿಕೊಂಡಳು. "ನನ್ನ ಸೊಸೇನ ನೋಡ್ಕೊಂಡು ಹೋಗಬೇಕು ಅಂತ ಅನ್ನಿಸ್ತು. ನನ್ನ ಕಣ್ಣುಗಳೇ ನಿನಗೆ ತಾಕುತ್ತವೆ. ಅಷ್ಟು ಚೆನ್ನಾಗಿ ಆಗಿ ಬಿಟ್ಟಿದ್ದೀಯ" ಆಕೆ ಬಾಯಿ ತುಂಬ ಹೊಗಳಿದಾಗ ಮಾಲಾಗೆ ಖುಷಿಯೇನೂ ಆಗಲಿಲ್ಲ. ಸೊಟ್ಟ ಮೂತಿ ಮಾಡಿದಳು.

"ಇದು ನಮ್ಮ ಮೊಮ್ಮಗು. ಆ ಸಂಭ್ರಮ ನಮಗೆ ಇದ್ದೇ ಇದೆ. ಬಳೆ ತೊಡಿಸುವ ಶಾಸ್ತ್ರವನ್ನು ಮಾಡಬೇಕೂಂತ ಆಸೆ." ಅದಕ್ಕೋಸ್ಕರ ಹಸಿರು ರೇಷ್ಮೆ ಸೀರೆ, ಪಚ್ಚೆ ಕಲ್ಲಿನ ಒಡವೆ ಸೆಟ್ ತಂದಿದೀನಿ" ಅಂತ ಅವುಗಳನು ತೆಗೆದು ತೋರಿಸಿದಾಗ, ಮಾಲಾ ಅಲ್ಲಿಂದ ಎದ್ದು ಹೋಗಿದ್ದಳು.

"ನೀನೇ ಒಪ್ಪಿಸಬೇಕು. ನಿನ್ನ ಮಾತುಗಳನ್ನಾದರೆ ಕೇಳ್ತಾಳೆ. ಚೊಚ್ಚಲು ಬಸಿರಿ. ನಾಲ್ಕು ಮಂದಿ ಮುತ್ತೈದೆಯರನ್ನು ಕರೆದು ಆರತಿ ಮಾಡಿದರೆ ಶಾಂತಿಯಾಗುತ್ತದೆ. ನಮ್ಮ ಧ್ರುವನ ಅದೃಷ್ಟದಲ್ಲಿ ಹೀಗೇ ಬರೆದಿತ್ತೇನೋ... ಮದುವೆ ನಡೆದದ್ದು ಹಾಗೆ ಆತುರಾತುರದಲ್ಲಿ. ಈಗ ನೋಡಿದರೆ ಹೀಗೆ... ಆದರೂ ನಮ್ಮ ಕರ್ತವ್ಯ ಗರ್ಭಿಣಿ ಹುಡುಗಿಯನ್ನು ಖುಷಿಯಾಗಿಡಬೇಕು. ಅದಕ್ಕೇ ಇದನ್ನೆಲ್ಲಾ ತಂದಿದೀನಿ."

"ಸೀರೆ, ಒಡವೆಗಳಿಂದ ಖುಷಿ ಸಿಗೋದಾದ್ರೆ... ಪ್ರಪಂಚದಲ್ಲಿ ಯಾವ ತಪ್ಪೂ ತಪ್ಪು ಅಂತ ಅನ್ನಿಸುಲ್ಲ ಅಲ್ವ ಆಂಟಿ ?"

"ಏನೋಮ್ಮ. ನಾನೇನೋ ಎಲ್ಲಾ ಮರೆತು, ಇವಳನ್ನು ನನ್ನ ಸೊಸೆ, ಹುಟ್ಟುವ ಮಗುವನ್ನು ನನ್ನ ಮೊಮ್ಮಗು ಅಂತ ಒಪ್ಪಿಕೊಂಡು ಬಿಟ್ಟಿದೀನಿ... ಇದು ತಪ್ಪಾ ?"

"ತಪ್ಪೇನಿಲ್ಲ ಅ[illegible] ನಿಮ್ಮ ದೊಡ್ಡ ಗುಣ. ನಿಮ್ಮ ಆಸೆಗೂ ಬೆಲೆ ಕೊಡಬೇಕು. ನಾ[illegible]ನ್ನ ಒಪ್ಪಿಸ್ತೀನಿ" ಆಕೆ ಹರ್ಷಗೊಂಡಳು.

"ಮೊದಲಿಗೆ ಮಾಲಾ ಒಪ್ಪಲಿಲ್ಲ. ನನಗೆ ಇದೆಲ್ಲ ಇಷ್ಟವಿಲ್ಲ... ಎಲ್ಲ ಹಾಸ್ಯಾಸ್ಪದವಾಗಿ ಕಾಣುತ್ತೆ. ಇವರ ಆಸೆಗಳು ವಿಪರೀತವಾಗುತ್ತಿದೆ. ಇವತ್ತು ಬಳೆ ತೊಡಿಸುವ ಶಾಸ್ತ್ರ ಅಂತಾರೆ, ನಾಳೆ ನಾಮಕರಣ ಶಾಸ್ತ್ರ ಅಂತಾರೆ. ನನಗೆ ಇವೆಲ್ಲಾ ಬೇಡವೇ ಬೇಡ."

"ಹಸಿರು ಸೀರೇನ ಬೇಡ ಅನ್ನಬಾರದು. ಬಸಿರು ಹೆಂಗಸಿಗೆ ಹಸಿರೇ ಭೂಷಣ. ಒಡವೇ ಬೇಡ ಬಿಡು ನಾವು ಇಬ್ಬರು ಇದೀವಿ. ಪಕ್ಕದ ಮನೆ ಹೆಂಗಸನ್ನು ಕರೆದು ಆರತಿ ಮಾಡಿದರಾಯ್ತು. ಅದರಿಂದ ತೊಂದರೆ ಏನು ?"

"ತೊಂದರೆ ಯಾಕೆ ಇಲ್ಲ ? ಅವರು ಹೇಳಿದ್ದಕ್ಕೆಲ್ಲ ಒಪ್ಪಬೇಕೂಂತ ಏನಿಲ್ಲ. ಹೌದು ತಾನೇ ? ನನ್ನ ಪರವಾಗಿ ನೀನೇ ಮಾತಾಡು. ನನಗೆ ಅವರ ಮುಖವನ್ನು ನೋಡೋಕೆ ಇಷ್ಟವಿಲ್ಲ."

"ಸುಮ್ಮನೆ ಚರ್ಚೆ ಬೇಡ. ಹೊಟ್ಟೇಲಿರೋ ಮಗೂಗೆ ತಲೆ ಚಿಟ್ಟು ಹಿಡಿಯುತ್ತೆ. ನಿನಗೋಸ್ಕರ ಅಲ್ಲವಾದರೂ, ಮಗುಗೋಸ್ಕರ ಒಪ್ಕೋ..." ವಸುಧಾ ಒಪ್ಪಿಸಿದ್ದಳು.

ಸ್ಕ್ಯಾನ್ ಮಾಡಿಸಿದಾಗ, ಮಾಲಾಳ ಅನಿಸಿಕೆ ನಿಜವಾಗಿತ್ತು. ಅವಳಿ ಮಕ್ಕಳುಗಳಿದ್ದವು. ಒಂದು ಗಂಡು ಒಂದು ಹೆಣ್ಣು. ಅವಳಿಗೆ ಆಶ್ಚರ್ಯವೂ ಆಗಿತ್ತು. ವ್ಯಥೆಯೂ ಆಗಿತ್ತು. ಒಂದೇ ಬೇಡವಾಗಿರುವಾಗ, ಎರಡೆರಡು ಮಕ್ಕಳು. ಇದೇನು ವರವಲ್ಲ. ಶಾಪವೇ. ಆದರೆ ಈಗಲೇ ಯಾರಿಗೂ ಹೇಳುವುದು ಬೇಡ ಎಂದುಕೊಂಡಳು.

'ಬಳೆ ತೊಡಿಸುವ ಶಾಸ್ತ್ರ' ಸರಳವಾಗಿ ಮಾಡಿದರೂ ಧ್ರುವ ಪ್ರತಾಪ ಎಲ್ಲರೂ ಬಂದಿದ್ದರು. ನಾಚಿಕೆ ಇಲ್ಲದೆ ಬಂದಿದ್ದಾರೆ ಎಂದು ಮಾಲಾ ಬೈದು ಕೊಂಡಳು. ಧ್ರುವ ಮಾಲಾಳನ್ನು ನೋಡಿಯೇ ನೋಡಿದ. ಎಂಥಾ ರೂಪ ವಂತೆ ! ಆದರೆ ಒಂದು ದಿನವೂ ನನ್ನವಳಾಗಲಿಲ್ಲ. ದೂರದಿಂದ ರೂಪವನ್ನು ನೋಡಿದ್ದೇ ಆಯ್ತು. ನನ್ನದೂ ಎಂಥಾ ಹೀನ ಅದೃಷ್ಟ. ಇವಳಿಗಾಗಿ, ಇವಳ ಮಗುವಿಗಾಗಿ ಹಾತೊರೆಯುವ ಪರಿಸ್ಥಿತಿ !" ಛೇ... ಇದಕ್ಕೆಲ್ಲ ಈ ಪ್ರತಾಪನೇ ಕಾರಣ ಅಂತ ಅವನ ಮೇಲೆ ಅಸಮಾಧಾನ ಮೂಡಿತ್ತು.

ಮಧುಗೆ ಇದೆಲ್ಲ ಬೇಕಿರಲಿಲ್ಲ. "ಈ ಅಕರಾಸ್ತೆಯೆಲ್ಲಾ ಏನು ?

ನೋಡೋರಿಗೋಸ್ಕರ ಈ ನಾಟಕ ಆಡಿದರೆ, ನಿಜ ಏನು ಅನ್ನೋದು ಮುಚ್ಚಿ ಹೋಗುತ್ತಾ? ಮಾಲಾ ಯಾಕೆ ಒಪ್ಪಿಕೊಂಡಳು?" ವಸುಧಾಳ ಎದುರಿಗೆ ಕೂಗಾಡಿದ್ದ.

"ಎಲ್ಲಾ ಸರಿಯಾಗಿದ್ದಿದ್ದರೆ, ಈ ಆಕಾಶನ ಬಸುರಿಯಲ್ಲೇ ಈ ಸಮಾರಂಭವನ್ನ ಮಾಡಬೇಕಾಗಿತ್ತು. ಅಜ್ಞಾತವಾಸದಲ್ಲಿ ಹುಟ್ಟಿದವನು ಇವನು. ಈಗ ಅವರಿಗೆ ಆಸೆ. ಅದಕ್ಕೆ ಬೇಡ ಅನ್ನೋ ಹಕ್ಕು ನಮಗಿಲ್ಲ."

"ಇದರ ಬದಲು, ಮಾಲಾ ಧ್ರುವನೊಡನೆ ನೆಟ್ಟಗೆ ಸಂಸಾರ ಮಾಡಿ ಕೊಂಡಿದ್ದರೇ ಚೆನ್ನಾಗಿತ್ತು. ಇದೆಲ್ಲಾ ತಮಾಷೆಯಾಗಿ ಕಾಣುತ್ತಿದೆ ನನಗೆ."

"ಅವರಿಗೆ ತಮ್ಮ ಮಗನ ಹೆಂಡತಿಗೆ, ಅಂದರೆ ತಮ್ಮ ಮಗನಿಗೆ ಮಗುವಾಗುತ್ತಿದೆ ಅಂತ ತಮ್ಮವರಿಗೆ ತಿಳಿಸುವ ಆಸೆ ಇರಬಹುದು. ಎಲ್ಲರಿಗೂ ನಿಜ ಏನೂಂತ ತಿಳಿಸೋಕೆ ಆಗುತ್ತಾ?"

"ಇದಕ್ಕೇ ಅವಳಿಗೆ ಡೈವೋರ್ಸ್ ಕೊಡದೇ ಸತಾಯಿಸುತ್ತಿರುವುದು. ಡೈವೋರ್ಸ್ ಸಿಕ್ಕಿದ್ದರೆ, ಈ ನಾಟಕವನ್ನೆಲ್ಲಾ ಆಡಲು ಆಗುತ್ತಿರಲಿಲ್ಲ."

"ಮಾಲಾನೂ ಸುಮ್ಮನಿದ್ದು ಬಿಟ್ಟಳಲ್ಲಾ... ಯಾಕೋ?"

"ಡೈವೋರ್ಸ್ ಸಿಕ್ಕಿದರೂ, ಅವಳಿಗೆ ಭಾರ್ಗವನಾಗಲೀ, ಭಾಸ್ಕರನಾಗಲೀ ಅವಳನ್ನು ಮದುವೆಯಾಗಲು ಸಿದ್ಧರಿರಲಿಲ್ಲ ಅಥವಾ ಧ್ರುವ ಹೇಗೂ ಬೇರೆ ಯಾರನ್ನೂ ಮದುವೆಯಾಗಲಾರ ಅಂತ ಸುಮ್ಮನಿರಬಹುದು. ಒಂಥರಕ್ಕೆ ಒಳ್ಳೆಯದೇ ಆಯ್ತು. ಅವಳು ಡೈವೋರ್ಸಿಯಾಗಿ ಭಾಸ್ಕರನ ಮಗುವಿಗೆ ತಾಯಿಯಾಗಿದ್ದರೆ? ಈಗ ಈ ಸ್ಥಿತಿಯಲ್ಲಿ ಮತ್ತೆ ತಾಯಿಯಾದರೆ ಜನ ಆಡಿಕೊಂಡು ನಗೋಲ್ವಾ?"

"ಹಾಗಾದ್ರೆ ನಿಮಗೂ ಏನೂ ಅನ್ನಿಸುತ್ತಿಲ್ವಾ?"

"ಅನ್ನಿಸುತ್ತೆ. ಏನೇನೋ ಅನ್ನಿಸುತ್ತೆ. ಇದಕ್ಕೆಲ್ಲಾ ನಾನೇ ಕಾರಣ ಅಂತ ಅನ್ನಿಸಿದಾಗ ಆತ್ಮಹತ್ಯೆ ಮಾಡ್ಕೋಬೇಕು ಅಂತ ಸಹ ಅನ್ನಿಸುತ್ತೆ. ಆದರೆ ಆತ್ಮಹತ್ಯೆಯಿಂದ ಎಲ್ಲಾ ಪ್ರಾಬ್ಲಂ ಸಾಲ್ವ್ ಆಗುಲ್ಲ. ಅಲ್ಲದೆ ನಿಮ್ಮಗಳ ಜವಾಬ್ದಾರಿ ನನ್ನದೇ ತಾನೆ" ಎನ್ನುತ್ತ ಮಗುವನ್ನು ಎತ್ತಿಕೊಂಡು ಮುತ್ತಿಟ್ಟ.

"ಮುಂದೆ ನಮಗೆ ಹುಟ್ಟುವ ಮಕ್ಕಳಿಗೂ ಇದೇ ಪ್ರೀತಿ ತೋರುತ್ತೀರಾ?" ನಗುತ್ತಾ ಪ್ರಶ್ನಿಸಿದಳು.

"ಏನೋ ಗೊತ್ತಿಲ್ಲ. ಇವನು ನಿನ್ನ ಮಡಿಲಿಗೆ ಬಂದು, ನನ್ನ

ಮಗನಾಗಿ ಬಿಟ್ಟ. ಧ್ರುವನ ಬಗ್ಗೆ ಹಗುರವಾಗಿ ಮಾತನಾಡ್ತೀವಿ. ಆದರೆ ನಾವು ಮಾಡಿದ್ದು ಇದೇ ತಾನೇ. ಜರುಗಿದ ತಪ್ಪಿನ ಮೇಲೆ ಪರದೆ ಎಳೆದು ಮುಚ್ಚಿಟ್ಟೆವು ಅಲ್ವಾ?"

"ಪರದೆ ಎಳೆಯದೇ ಇದ್ದಿದ್ದರೆ, ಮಾಲಾಳ ಗತಿ ಏನಾಗುತ್ತಿತ್ತೋ. ಈ ಕಂದನ ಗತಿ ಏನಾಗುತ್ತಿತ್ತೋ" ವಸುಧಾ ನುಡಿದಾಗ, ಮಧುಕರನ ಕಣ್ಣುಗಳು ಹನಿಗೂಡಿದವು.

ం ం ం

ಭಾಸ್ಕರ ಮಾಲಾಳನ್ನು ಹಾಗೆ ನೋಡುತ್ತಾ ನಿಂತುಬಿಟ್ಟ. ಅವಳೇ ಅವನನ್ನು ಎಚ್ಚರಿಸಿದಳು" ಇದೇನಿದು ಯಾಕೆ ಹಾಗೆ ನಿಂತುಬಿಟ್ರಿ?

"ನಾನು ನಿಮ್ಮನ್ನೇ ನೋಡ್ತಿದೀನಿ... ತುಂಬಾ ಚೆನ್ನಾಗಿ ಕಾಣ್ತಿದ್ದೀರಿ..."

"ಥೂ ತುಂಬಾ ದಪ್ಪನಾಗಿಬಿಟ್ಟಿದೀನಿ.. ಮೈ ಭಾರದಿಂದ ನಡೆಯೋಕೆ ಆಗುತ್ತಿಲ್ಲ."

"ಹಾಗೆನ್ನಬೇಡಿ. ಇದು ಸ್ತ್ರೀಯರಿಗೆ ಅಮೂಲ್ಯವಾದ ವರ."

"ಬೇರೆ ಸ್ತ್ರೀಯರಿಗೆ ಇರಬಹುದು. ಆದರೆ ನನಗಲ್ಲ. ತಮಾಷೆಗೂ ಈ ಮಾತುಗಳನ್ನಾಡಬೇಡಿ."

"ಸಾರಿ. ನಿಮ್ಮ ಮನಸ್ಸನ್ನು ನೋಯಿಸುವ ಇಚ್ಛೆ ಇಲ್ಲ. ನೀವು ಆಕಾಶನ ಬಸಿರಿಯಾಗಿದ್ದಾಗ, ನಿಮ್ಮನ್ನು ನೋಡಿ ಆನಂದಿಸುವ ಅವಕಾಶ ನನಗಿರಲಿಲ್ಲ. ಈಗ ನೋಡುವಾಗ ಮೆಚ್ಚುಗೆ ಮೂಡಿತು. ಬೇಸರವಾಗಿದ್ದರೆ ಕ್ಷಮಿಸಿ."

"ಹೋಗಲಿ ಬಿಡಿ. ನಿಮ್ಮ ಹೆಂಡತಿಯೂ ಗರ್ಭಿಣಿಯಾಗಿದ್ದರಲ್ಲ. ಅವರನ್ನು ಹೀಗೇ ಹೊಗಳುತ್ತಿದ್ರಾ...?"

"ಇಲ್ಲ ಮಾಲಾ... ಅವಳು ಗರ್ಭಿಣಿಯಾಗಿದ್ದೇ ಒಂದು ಆಕಸ್ಮಿಕ. ನಾನು ಅವಳ ಮೇಲೆ ಅತ್ಯಾಚಾರ ಮಾಡಿದೆ. ಅದರ ಫಲ ಈ ಆದಿತ್ಯ. ಭಾರತಿಯನ್ನು ಕಂಡಾಗಲೆಲ್ಲಾ ನಾನು ಮಾಡಿದ ತಪ್ಪು ನನ್ನನ್ನು ಚುಚ್ಚುತ್ತಿತ್ತು. ನೀವೊಬ್ಬರೇ ನನ್ನ ಜೀವನದಲ್ಲಿ ಅಂತ ಅಂದುಕೊಂಡಿದ್ದೆ. ನಿಮಗೆ ಮೋಸ ಮಾಡಿಬಿಟ್ಟೆನೇನೋ ಅಂತ ಸಹ ಅನ್ನಿಸುತ್ತಿತ್ತು. ನೀವು ಪ್ರೆಗ್ನೆಂಟ್ ಅಂತ ತಿಳಿದಾಗ ನಮ್ಮ ಪ್ರೀತಿ ಸಫಲವಾಯಿತು ಅಂತ ಖುಷಿಯಾಯ್ತು. ಆದರೆ ಧ್ರುವ ಬೆದರಿಕೆ ಹಾಕಿದಾರೆ ಅಂತ, ನಿಮ್ಮನ್ನು ನೋಡುವುದು ಬೇಡ ಅಂತ ಹೇಳಿಬಿಟ್ಟರು ನಿಮ್ಮ ಅಣ್ಣ."

"ಅವನು ಹಾಗೇನೇ. ಎಲ್ಲರ ಸುಖಕ್ಕೂ ಕಲ್ಲು ಹಾಕ್ತಾನೆ... ಹಾಗಾದ್ರೆ ಈಗಲೂ ನಿಮಗೆ ನಿಮ್ಮ ಹೆಂಡತಿಯ ಮೇಲೆ ಯಾವ ಫೀಲಿಂಗ್ಸ್ ಇಲ್ವಾ?"

"ಇಲ್ಲ. ಅದೇ ಕಡೇ ಅದೇ ಮೊದಲು. ಮತ್ತೆಂದೂ ನಾನು ಅವಳ ಬಳಿಗೆ ಹೋಗಿಲ್ಲ. ನನ್ನ ಅತ್ಯಾಚಾರಕ್ಕೆ ಅವಳೂ ಹೆದರಿದ್ದಳು. ಆದರೆ ಆದಿತ್ಯನ ತಪ್ಪೇನಿದೆ ಇದರಲ್ಲಿ? ಅವಳಿಗೆ ತಾನು ತಾಯಿಯಾದೆ ಅನ್ನೋದೇ ಖುಷಿ. ಅವಳಿಗೆ ಮತ್ತೆ ಯಾವ ಆಸೆಯೂ ಇಲ್ಲ. ಅವಳು ನನ್ನ ಬಳಿ ಬರುವ ಆಸೆಯನ್ನು ವ್ಯಕ್ತಪಡಿಸಿಲ್ಲ."

"ನನ್ನನ್ನು ಪ್ರೀತಿಸಿ ನನ್ನ ಕೈ ಬಿಟ್ಟಿರಿ. ನಿಮ್ಮ ಹೆಂಡತಿಯನ್ನು ಕೆಡಿಸಿ ದೂರ ಮಾಡಿಕೊಂಡಿರಿ. ಇಬ್ಬಿಬ್ಬರಿಗೆ ಅನ್ಯಾಯ ಮಾಡಿದ್ದೀರಿ. ಇದು ನ್ಯಾಯಾನಾ?"

"ನ್ಯಾಯ ಅಲ್ಲ ನನಗೆ ಗೊತ್ತು. ಆದರೆ ಯೋಚಿಸ್ತಾ ಹೋದರೆ, ಈಗ ಇಲ್ಲಿ ನಡೆದಿರುವುದೆಲ್ಲಾ ಅನ್ಯಾಯದ ಸಂತೆ ಅಲ್ವಾ? ಎಲ್ಲರೂ ಒಬ್ಬರಿಗೊಬ್ಬರು ಒಂದಲ್ಲ ಒಂದು ರೀತಿಯಲ್ಲಿ ಅನ್ಯಾಯ ಮಾಡಿದಾರೆ ಅಲ್ವಾ? ಇದನ್ನು ಸರಿಪಡಿಸೋಕೆ ಆಗುತ್ತಾ? ಮುಖವಾಡವನ್ನು ಹಾಕಿಕೊಂಡು ನ್ಯಾಯ ಅನ್ಯಾಯಗಳ ಬಗ್ಗೆ ಚರ್ಚೆ ಮಾಡುತ್ತೀವಿ. ಇದರಿಂದ ಲಾಭವಂತೂ ಇಲ್ಲ."

ಸರ್ರನೆ ಮಾಲಾ ಅವನ ಕೈಗಳನ್ನೆಳೆದು, ತನ್ನ ಹೊಟ್ಟೆಯ ಮೇಲೆ ಇರಿಸಿಕೊಂಡಳು. "ನೋಡಿ... ಮಕ್ಕಳು ಹೇಗೆ ಓಡಾಡುತ್ತಿವೆ..." ಅವನು ಹೊಟ್ಟೆಯ ಮೇಲೆ ಕೈಯಾಡಿಸಿದ. ಮಕ್ಕಳು ಅತ್ತಿಂದಿತ್ತ ಪುಳಕ್ ಪುಳಕ್ ಅಂತ ಓಡಾಡುಡುವ ಅರಿವಾಗಿತ್ತು. 'ವಂಡರ್‌ಫುಲ್ ಎಕ್ಸ್‌ಪೀರಿಯನ್ಸ್... ಇದೇ ಫಸ್ಟ್ ಟೈಂ.... ಈ ಅನುಭವ ಆಗ್ತಾ ಇರುವುದು...ಥ್ಯಾಂಕ್ ಯೂ ಮಾಲಾ.... ಈಗಲಾದರೂ, ನಿಮ್ಮ ಅನುಭವಗಳನ್ನು ನನ್ನೊಡನೆ ಹಂಚಿಕೊಂಡಿರಲ್ಲ."

"ಆಗ ಆ ಆಸೆ ನೆರವೇರಲಿಲ್ಲ. ನನಗೂ ಬೇಸರವಾಗಿತ್ತು. ಒಂದೊಂದು ದಿನದ ಅನುಭವಗಳನ್ನು ನಿಮ್ಮೊಡನೆ ಹಂಚಿಕೊಳ್ಳಬೇಕೆನ್ನಿಸಿತ್ತು. ಈಗ ನನಗೆ ಏನೂ ಬೇಡವೆನ್ನಿಸಿದರೂ, ಹೊಟ್ಟೆಯೊಳಗೆ ಇರುವುದು ನನ್ನ ಮಕ್ಕಳೇ ತಾನೇ..."

"ಯೂ ಮೀನ್ ಟ್ವಿನ್ಸ್..." ಹೊಟ್ಟೆಯನ್ನು ಮೃದುವಾಗಿ ತಟ್ಟಿದ.

"ಹೌದು. ಒಂದು ಗಂಡು ಒಂದು ಹೆಣ್ಣು ಇರಬಹುದು ಅಂತ ಡಾಕ್ಟರ್ ಹೇಳಿದಾರೆ."

"ಹಾಗಾದರೆ ತುಂಬಾ ಕಷ್ಟವಾಗುತ್ತಿರಬಹುದು ಅಲ್ವಾ?"

"ಹೂಂ. ಡೆಲಿವರಿ ಆದರೆ ಸಾಕು ಅಂತ ಕಾಯ್ತಾ ಇದೀನಿ. ಆದರೆ ನನಗಿಂತ ಕಾತುರದಿಂದ ಧ್ರುವನ ಮನೆಯುವರು ಕಾಯ್ತಾ ಇದಾರೆ..."

"ಎರಡು ಮಕ್ಕಳನ್ನು ಅವರಿಗೇ ಕೊಟ್ಟು ಬಿಡ್ತೀರಾ ?"

"ನಿಮಗೆ ಒಂದು ಬೇಕಾ ಹೇಳಿ. ಗಂಡು ಬೇಕೋ ಹೆಣ್ಣು ಬೇಕೋ...?" ತುಂಟತನದಿಂದ ಕೇಳಿದಳು.

"ಯೋಚಿಸಿಬಿಟ್ಟು ಹೇಳ್ತೀನಿ."

"ಯೋಚಿಸುಕ್ಕೆ ಏನಿದೆ. ನಾನೇ ಹೇಳ್ತೀನಿ. ಹೇಗೂ ಒಬ್ಬ ಮಗನಿದ್ದಾನೆ. ಒಬ್ಬ ಮಗಳು ಬೇಡ್ವಾ?" ಹೆಣ್ಣು ಮಗೂನ ನಿಮಗೆ ಕೊಟ್ಟು ಬಿಡ್ತೀನಿ."

"ಆಗ ನಿಮಗೆ ಉಳಿಯುವುದು ಏನು ?"

"ಜೀರೋ... ಈಗ ನಾನು ಮಕ್ಕಳನ್ನು ಹೆರುವ ಯಂತ್ರವಾಗಿದೀನಿ. ಮಕ್ಕಳಿಲ್ಲದವರಿಗೆ, ಮಕ್ಕಳು ಬೇಕಾದವರಿಗೆ ಹೆತ್ತುಕೊಡ್ತೀನಿ" ಇದ್ದಕ್ಕಿದ್ದಂತೆ ಮಾಲಾ ಬಿಕ್ಕಿ ಬಿಕ್ಕಿ ಅಳಲು ಪ್ರಾರಂಭಿಸಿದಾಗ, ಅವನು ಕಕ್ಕಾಬಿಕ್ಕಿಯಾದ. ಅವಳನ್ನು ತನ್ನ ಎದೆಗೆ ಒರಗಿಸಿಕೊಂಡು ಸಮಾಧಾನ ಹೇಳಿದ. ಅವಳು ಕಣ್ಣೊರೆಸಿಕೊಂಡಳು.

"ನಾನು ಈಗ ಸಾರೋಗೇಟ್ ಮದರ್ ತರಹ. ಇದನ್ನೇ ಒಂದು ಬಿಸಿನೆಸ್ ಮಾಡಿಕೊಂಡರೆ, ನಾನೂ ಶ್ರೀಮಂತಳಾಗಬಹುದು... ಹೌದಲ್ವಾ?"

"ಛೀ... ಹೀಗೆಲ್ಲಾ ಮಾತನಾಡಬೇಡಿ. ನಾವೆಲ್ಲಾ ಇಲ್ವಾ?" ಅವನು ಸಮಾಧಾನ ಹೇಳಿದ.

ಡಾಕ್ಟರು ಕೊಟ್ಟಿದ್ದ ಅವಧಿಗೆ ಮುಂಚೆಯೇ ಮಾಲಾಗೆ ಹೆರಿಗೆ ನೋವು ಪ್ರಾರಂಭವಾಗಿತ್ತು. ತಕ್ಷಣವೇ ನರ್ಸಿಂಗ್ ಹೋಂಗೆ ಸೇರಿಸಿದರು. ಅದೇ ರಾತ್ರಿ ಸಿಸೇರಿಯನ್ ಆಪರೇಷನ್ ಮಾಡಲಾಯಿತು. ಮಾಲಾ ಅವಳಿ ಮಕ್ಕಳಿಗೆ ಜನ್ಮ ನೀಡಿದ್ದಳು. ಮಾಲಾಳಿಗೆ ಜ್ಞಾನ ಬರುವವರೆಗೂ ಯಾರಿಗೂ ಸುದ್ದಿಯನ್ನು ತಿಳಿಸಲಿಲ್ಲ.

ಮಕ್ಕಳೆರಡೂ ಅತಿ ಮುದ್ದಾಗಿದ್ದವು. ಮಾಲಾಳ ಕಣ್ಣುಗಳಲ್ಲಿ ನೀರು ತುಂಬಿಕೊಂಡಿತ್ತು. ಏಕೋ ಏನೋ ವಿಪರೀತ ವ್ಯಥೆಯಾಗಿತ್ತು. ಈ ಮಕ್ಕಳಿಗಾಗಿ ತಾನು ಅನುಭವಿಸಿದ ಸಂಕಟವೆಷ್ಟು? ಒಂಬತ್ತು ತಿಂಗಳು ಹೊತ್ತವಳು ನಾನು. ಹೆತ್ತವಳು ನಾನು. ಈಗ ಈ ಮಕ್ಕಳ ಮೇಲೆ ಧ್ರುವನ ಅಧಿಕಾರವೆಂದರೆ... ಅದು ನ್ಯಾಯಾನಾ ? ಅವನಿಗೆ ಯಾವ ಹಕ್ಕೂ ಇಲ್ಲ.

ಯಾಕೆ ಕೊಡಬೇಕು ಎಂದು ಪದೇ ಪದೇ ಅನ್ನಿಸತೊಡಗಿತು. ಆದರೆ ಅದರೊಂದಿಗೆ ನೂರಾ ಎಂಟು ಚಿಂತೆಗಳು. ಪ್ರತಾಪನ ಬೆದರಿಕೆ, ಧ್ರುವನ ಕೋರಿಕೆ, ರಘೂನ ಹಲ್ಲು ಕಿರಿಯುವಿಕೆ ಎಲ್ಲಾ ಅಸಹ್ಯವಾಗಿ ಕಾಣ ತೊಡಗಿದವು. ಈ ಮಕ್ಕಳು ತನಗೇ ಬೇಕೆಂದರೆ ಕಾನೂನಿನ ಮೊರೆ ಹೋಗಬೇಕಾಗುತ್ತದೆ. ಎಲ್ಲಾ ವಿಷಯಗಳೂ ಹೊರಬರುತ್ತವೆ. ತನಗೇ ಜಯ ಸಿಗಬಹುದು. ಆದರೆ ನನ್ನ ಜೊತೆಗೆ ನಿಂತು ಹೋರಾಡಲು ಮಧು ಸಿದ್ಧನಿರುವನೇ ? ಭಾಸ್ಕರ ಸಹಾಯಕ್ಕೆ ಬರುವನೇ... ನನ್ನ ಬಳಿ ಸ್ವಂತ ಹಣ ಇಲ್ಲ ; ಆಸ್ತಿ ಇಲ್ಲ. ಎಲ್ಲಾದಕ್ಕೂ ಮಧೂನೇ ಅವಲಂಬಿಸಬೇಕು. ಯೋಚಿಸಿ ಸುಸ್ತಾಗಿದ್ದವಳನ್ನು ವಸುಧಾ ಸಮಾಧಾನ ಗೊಳಿಸಿದಳು. "ಈಗಲಿಂದ ಚಿಂತಿಸಬೇಡ. ದೇವರು ಒಂದು ದಾರಿಯನ್ನು ತೋರಿಸುತ್ತಾನೆ. ಇನ್ನೂ ಆರು ತಿಂಗಳಂತೂ ಮಕ್ಕಳು ನಿನ್ನ ಬಳಿಯೇ ಇರುತ್ತವೆ. ಧ್ರುವ ಹೇಗೂ ಬಲವಂತ ಮಾಡುವುದಿಲ್ಲ" ಆದರೂ ಮಾಲಾಳ ಚಿಂತೆ ಕಡಿಮೆ ಆಗಿರಲಿಲ್ಲ.

ವಿಷಯ ತಿಳಿಯುವ ಮೊದಲೇ ಸುಮಿತ್ರಾ ದೇವಿ ಧ್ರುವನೊಂದಿಗೆ ಬಂದಿಳಿದಳು. ಮಕ್ಕಳೆರಡನ್ನೂ ಕಂಡು ಅವಳಿಗೆ ಆಶ್ಚರ್ಯ, ಸಂತೋಷ ದೊಂದಿಗೆ ಸ್ವಲ್ಪ ಕೋಪವೂ ಕೂಡಾ.

"ನಮಗೆ ಅವಳಿ ಮಕ್ಕಳಿವೆ ಅಂತ ತಿಳಿಸಿರಲೇ ಇಲ್ಲ. ಅಲ್ಲದೇ ಇವಳನ್ನು ನರ್ಸಿಂಗ್ ಹೋಂಗೆ ಸೇರಿಸಿದ ಕೂಡಲೇ ತಿಳಿಸಬೇಡವೇ ?" ಅಂತ ಆಕ್ಷೇಪಿಸಿದಳು. ವಸುಧಾ ಉತ್ತರಿಸಲಿಲ್ಲ. ಮಾಲಾ ನಿದ್ದೆಯನ್ನು ನಟಿಸಿದಳು. ವಿಷಯ ತಿಳಿದ ಕೂಡಲೇ ಪ್ರತಾಪ, ರಘು ಸಹ ಬಂದರು. ಪ್ರತಾಪನಿಗೆ ಒಂದು ತರಹ ನೆಮ್ಮದಿಯಾದರೆ, ರಘೂಗೆ ಏನೋ ಉತ್ಸಾಹ. ಮಕ್ಕಳೆರಡನ್ನೂ ಕಣ್ತುಂಬಾ ನೋಡಿದ. ಆದರೆ ಎರಡು ಮಕ್ಕಳೂ ಅವನಂತೆ ಇಲ್ಲ. ಮಾಲಾಳ ಹೋಲಿಕೆಯೇ ಜಾಸ್ತಿ. ನಿರಾಸೆಯೂ ಆಗಿತ್ತು. ನಿರಾಳವೂ ಆಗಿತ್ತು.

ಭಾಸ್ಕರ ತಾನೇ ಫೋನು ಮಾಡಿ ಎಲ್ಲಾ ವಿವರಗಳನ್ನೂ ತಿಳಿದುಕೊಂಡ. ಮಾಲಾ ಹೇಳಿದ್ದು ನಿಜ. ಅವಳಿ ಮಕ್ಕಳು ! ಒಂದು ಗಂಡು; ಒಂದು ಹೆಣ್ಣು !! ಗಂಡು ಮಗು ಧ್ರುವನಿಗೆ ಅಂತ ತೀರ್ಮಾನಿಸಿಬಿಟ್ಟಿದ್ದಾರೆ. ಹೆಣ್ಣು ಮಗುವನ್ನು ನನಗೆ ಕೊಡ್ತೀನಿ ಅಂತ ಹೇಳಿದಳಲ್ಲ... ನಾನು ತೆಗೆದುಕೊಳ್ಳುವುದು ನ್ಯಾಯವೇ ? ಅಲ್ಲದೆ ನನಗೆ ಯಾವ ಹಕ್ಕೂ ಇಲ್ಲ. ಜೊತೆಗೆ ಇಲ್ಲಿ ಮನೆ ಯವರು ಕೇಳಿದರೆ ಏನು ಹೇಳುವುದು ! ನಿಜ ಪರಿಸ್ಥಿತಿಯನ್ನು ಮಾಲಾಳಿಗೆ

ಹೇಳಿಬಿಡ್ತೀನಿ. ಇನ್ನೊಂದು ಮಗುವನ್ನು ಬೇಕಾದರೆ ಧ್ರುವನಿಗೇ ಕೊಡಲಿ ಅಥವಾ ಅವಳೇ ಸಾಕಿಕೊಳ್ಳಲಿ. ಅದೇ ಸರಿ. ಆದರೆ ತಾನೊಮ್ಮೆ ಹೋಗಿ ಅವಳನ್ನು ನೋಡಿ ಮಾತನಾಡಿಸಿಕೊಂಡು ಬರಬೇಕೆಂದು ನಿರ್ಧರಿಸಿದ. ಆದರೆ ಅದೇ ದಿನ ಅವನ ತಾಯಿಗೆ ಹುಷಾರಿಲ್ಲದೆ ನರ್ಸಿಂಗ್ ಹೋಂಗೆ ಸೇರಿಸಬೇಕಾಗಿ ಬಂತು. ಅವನ ಪ್ರಯಾಣ ಮುಂದಕ್ಕೆ ಹೋಯಿತು.

ಮಾಲಾ ಡಿಸ್ಚಾರ್ಜ್ ಆಗಿ ಮಕ್ಕಳೊಂದಿಗೆ ಮನೆಗೆ ಬಂದಿದ್ದಳು. ಸುಮಿತ್ರಾ ದೇವಿ ಅಲ್ಲೇ ಉಳಿದುಕೊಂಡಳು. "ನಿನಗೇ ಚಿಕ್ಕ ಮಗು, ಎರಡೆರಡು ಮಕ್ಕಳನ್ನು ಸುಧಾರಿಸಿ ಬಾಣಂತನ ಮಾಡುವುದು ಕಷ್ಟವಾಗುತ್ತದೆ. ನಾನು ನಿನಗೆ ಸಹಾಯಕಳಾಗಿರುತ್ತೇನೆ" ಎಂದು ವಸುಧಾಳಿಗೆ ಹೇಳಿದ್ದಳು. ವಸುಧಾಳಿಗೆ ಬೇರೆ ವಿಧಿ ಇರಲಿಲ್ಲ. ಅಲ್ಲದೆ ಆಸ್ಪತ್ರೆಯ ಅಷ್ಟೂ ಖರ್ಚನ್ನು ಧ್ರುವ ವಹಿಸಿಕೊಂಡಿದ್ದ. ಒಟ್ಟಿಗೇ ಎರಡೆರಡು ಮಕ್ಕಳನ್ನು ನೋಡಿ ಅವನು ಅತಿ ಉತ್ಸಾಹಿತನಾಗಿದ್ದ. ಆದರೆ ಮಾಲಾಳಿಗೆ ಅವನ ಜೊತೆ ಮಾತುಕತೆ ಯಾವುದೂ ಬೇಕಿರಲಿಲ್ಲ. ತನ್ನ ಮಕ್ಕಳನ್ನು ಕಿತ್ತುಕೊಂಡು ಹೋಗಲು ಬಂದಿರುವ ಪಿಶಾಚಿ ಎಂದೇ ಬೈದುಕೊಳ್ಳುತ್ತಿದ್ದಳು. ಮನೆಯ ವಾತಾವರಣವೇ ಬದಲಾಗಿತ್ತು. ಕೆಲಸದವರ ಮಾತು, ಮಕ್ಕಳ ಅಳು, ಅಡಿಗೆಯವರ ಆತುರ, ಸುಮಿತ್ರಾ ದೇವಿಯ ವಟವಟ ಪ್ರತಿಯೊಂದೂ ಬೇಸರವನ್ನುಂಟುಮಾಡುತ್ತಿತ್ತು. ಮಕ್ಕಳನ್ನು ಸುಧಾರಿಸಲೆಂದೇ ಒಂದು ಕೆಲಸದ ಹುಡುಗಿಯನ್ನು ಗೊತ್ತು ಮಾಡಿಕೊಂಡಿದ್ದರು. ಮಧುಗೆ ಇದು ತನ್ನ ಮನೆ ಅಂತ ಅನ್ನಿಸುತ್ತಲೇ ಇರಲಿಲ್ಲ. ಯಾರೋ ಪರರ ಮನೆಗೆ ತಾನು ಬರುತ್ತೇನೆ ಅಂತ ಅನ್ನಿಸಿತ್ತು. ಹಾಗಾಗಿ ಅವನು ಮನೆಯಿಂದ ಹೊರ ಹೊರಗೇ ಇರುತ್ತಿದ್ದ. ಪ್ರತಾಪ, ರಘು ಇಬ್ಬರೂ ಹೋಟೆಲಿನಲ್ಲಿ ಇಳಿದು ಕೊಂಡಿದ್ದರು. ಒಂದೆರಡು ದಿನಗಳ ನಂತರ ಊರಿಗೆ ವಾಪಸ್ಸು ಹೊರಟು ಹೋಗಿದ್ದರು.

ಧ್ರುವನಿಗೆ ಮಾಲಾಳ ಜೊತೆ ಮಾತನಾಡಬೇಕೆಂಬ ಆಸೆ. ಆದರೆ ಅವಳು ಸದಾ ಮಲಗಿಯೇ ಇರುತ್ತಿದ್ದಳು. ಆದರೂ ಒಂದು ದಿನ ಸಮಯ ಕಾದು, ಅವಳ ರೂಮಿಗೆ ಬಂದ.

"ಥ್ಯಾಂಕ್ ಯೂ ಮಾಲಾ... ಅಂತೂ ನನ್ನ ಮಾತಿಗೆ ಬೆಲೆ ಕೊಟ್ಟು ಮಗನನ್ನು ಹೆತ್ತು ಕೊಟ್ಟಿದ್ದೀಯ... ಜೊತೆಗೆ ಹೆಣ್ಣು ಮಗು ಸಹ. ನಿನಗೆ ಎಷ್ಟು

ಥ್ಯಾಂಕ್ಸ್ ಹೇಳಿದರೂ ಸಾಲದು" ಕೈ ಕೈ ಉಜ್ಜಿದ. ಅವಳಿಗೆ ತಿರಸ್ಕಾರ ಮೂಡಿತು.

"ನಾನೊಂದು ತೀರ್ಮಾನಕ್ಕೆ ಬಂದಿದೀನಿ. ಈ ಎರಡೂ ಮಕ್ಕಳನ್ನು ನಾನೇ ಸಾಕ್ತೀನಿ. ಎರಡೂ ನನ್ನ ಮಕ್ಕಳು" ಮಾಲಾ ನೇರವಾಗಿ ನೋಡಿ ಹೇಳಿದಳು.

"ಈಗ ಕೊಟ್ಟ ಮಾತಿಗೆ ತಪ್ಪಿದರೆ? ಅಲ್ಲದೆ ನಿನಗೆ ಈ ಪ್ರೆಗ್ನೆನ್ಸಿಯೇ ಬೇಕಿರಲಿಲ್ಲ ಅಲ್ವಾ?" ಚುಡಾಯಿಸುವವನಂತೆ ಪ್ರಶ್ನಿಸಿದ.

"ಹೌದು. ರೇಪ್‌ಗೆ ಹುಟ್ಟುವ ಮಕ್ಕಳು ಯಾರಿಗೆ ಬೇಕಾಗಿರುತ್ತೆ? ಆದರೆ ನಾನೇ ತಾಯಿ ತಾನೆ? ನನಗೆ ಸಂಪೂರ್ಣ ಹಕ್ಕು. ನಾನು ಯಾರಿಗೂ ಕೊಡುವುದಿಲ್ಲ"

"ನಾನು ನಿನ್ನ ಮೇಲೆ ಕೇಸ್ ಹಾಕಬೇಕಾಗುತ್ತದೆ ಅಷ್ಟೆ..."

"ಹಾಕಿ. ನಾನೂ ಫೈಟ್ ಮಾಡ್ತೀನಿ. ನಾನೇನೂ ಬರೆದುಕೊಟ್ಟಿರಲಿಲ್ಲ. ಎಲ್ಲಾ ವಿಷಯವೂ ಹೊರಬೀಳುತ್ತದೆ. ಎಲ್ಲಾ ಅಂದರೆ ಎಲ್ಲಾ. ಆಗ ನಿಮ್ಮ ಸ್ಥಿತಿ ಏನಾಗಬಹುದು ಯೋಚಿಸಿ."

"ಪ್ಲೀಸ್ ಹೀಗೆಲ್ಲಾ ಹೇಳಬೇಡ. ಒಂದು ಮಗುವಿಗಾಗಿ ನಾನು, ಎಲ್ಲವನ್ನೂ ಸಹಿಸಿಕೊಂಡಿದೀನಿ. ಒಪ್ಪಂದದ ಪ್ರಕಾರ ನನಗೆ ಒಂದು ಮಗು ಸಾಕು. ನಿನಗೆ ಇನ್ನೊಂದಿರಲಿ. ಬೇಕಾದರೆ ಗಂಡು ಮಗುವನ್ನೆ ನೀನು ಇಟ್ಟುಕೋ."

"ನೀವು ಕೇಳಿಕೊಂಡರೂ, ನಿಮಗೆ ಹೆಣ್ಣು ಮಗುವನ್ನು ಕೊಡುವುದಿಲ್ಲ. ಹೆಣ್ಣಿನ ಬೆಲೆಯನ್ನೇ ಅರಿಯದವರು ನೀವು. ನಾನು ಹೆಣ್ಣಾಗಿ ಏನೇನು ಅನುಭವಿಸಿದೀನಿ ಅನ್ನೋದು ನನಗೆ ಮಾತ್ರ ಗೊತ್ತು. ನನ್ನನ್ನು ಇಟ್ಟುಕೊಂಡು ನೀವುಗಳು ಎಷ್ಟೆಷ್ಟು ಅವ್ಯವಹಾರಗಳನ್ನು ಮಾಡಿಲ್ಲ. ಹಾಗೇ ನಾಳೆ ಈ ಹೆಣ್ಣು ಮಗುವನ್ನು ದುರುಪಯೋಗಪಡಿಸಿಕೊಳ್ಳಲು ಹಿಂದೆ ಮುಂದೆ ಯೋಚಿಸುವುದಿಲ್ಲ ನೀವು...ನನ್ನ ಮಗುವನ್ನು ನಾನೇ ಕೈಯಾರೆ ಹಾಳಾಗಲು ಆಸ್ಪದ ಕೊಡುವುದಿಲ್ಲ."

"ಹೀಗೆ ಕಟುವಾಗಿ ಯಾಕೆ ಮಾತನಾಡ್ತೀಯ."

"ನಯವಾಗಿ ಮಾತನಾಡಿದರೆ ನಿಮಗೆ ಅರ್ಥವಾಗುವುದಿಲ್ಲವಲ್ಲ..."

"ನಾನು ಅಷ್ಟು ನೀಚನಲ್ಲ ಮಾಲಾ... ನಿನ್ನ ಅಣ್ಣ ಕೂಡಾ ನಿನಗೆ ದ್ರೋಹ ಮಾಡಿದ. ಆದರೆ ಅವನ ನೆರಳಿನಲ್ಲೇ ಇದ್ದೀಯಲ್ಲ. ಅದೆಲ್ಲ ಮರೆತು ಹೋಯ್ತಾ?"

"ಮರೆತಿಲ್ಲ. ನಾನು ಏನನ್ನೂ ಮರೆತಿಲ್ಲ. ನಾನು ಸೂಕ್ತ ಸಮಯಕ್ಕಾಗಿ ಕಾಯ್ತಿದೀನಿ. ಆದರೆ ನಾನು ಹೆಂಗಸು. ಈ ಅತ್ಯಾಚಾರ, ಬಸಿರು, ಬಾಣಂತನ ಇವುಗಳಿಂದ ಬಿಡುವಿಲ್ಲ. ಚೆನ್ನಾಗಿ ಚೇತರಿಸಿಕೊಂಡ ನಂತರ ಎಲ್ಲರಿಗೂ ಬುದ್ಧಿ ಕಲಿಸದೇ ಬಿಡುವುದಿಲ್ಲ. ನಾನು ಖಂಡಿತಾ ಸುಮ್ಮನಿರುವುದಿಲ್ಲ" ರೋಷದಿಂದ ನುಡಿದಳು.

"ದೇವರೇ ನಮಗೆ ಬುದ್ಧಿ ಕಲಿಸಿದ್ದಾಗಿದೆ. ನನಗೆ ಏನಾಗಿದೆ ಅಂತ ನಿನಗೆ ತಿಳಿದೇ ಇದೆ. ಇನ್ನೂ ಹಂಗಿಸಿ ಮಾತನಾಡ್ತೀಯಲ್ಲ. ಪ್ರತಾಪನ ಆರೋಗ್ಯವೂ ಚೆನ್ನಾಗಿಲ್ಲ. ನಿನ್ನ ಮೇಲೆ ಕಣ್ಣು ಹಾಕಿದ ರಘು ಈಗ ಕುಂಟನಾಗಿದಾನೆ. ಇನ್ನೇನಾಗಬೇಕು... ಇಷ್ಟು ಸಾಕು."

"ಅವನು ಹೊರಗೆ ಹೋದರೆ ಸಾಕೆಂದು ಚಡಪಡಿಸಿದಳು. ನನಗೆ ಸುಸ್ತಾಗಿದೆ. ಇನ್ನೆಂದಾದ್ರೂ ಮಾತಾಡೋಣ. ಈಗ ಹೋಗಿ."

"ನನಗೆ ತುಂಬಾ ಅವಮಾನ ಮಾಡ್ತಿದೀಯ... ನೀನು ಬದಲಾಗೇ ಇಲ್ಲ. ಈಗ ನಿನ್ನ ಮಾತಿಗೆ ಒಪ್ಪಿ ಹೋಗ್ತಾ ಇದೀನಿ. ಆದರೆ ಮಾತುಗಳು ಇನ್ನೂ ಬಾಕಿ ಇವೆ" ಎನ್ನುತ್ತಾ ಅವನು ಹೊರಗೆ ಹೊರಟುಹೋದ.

○ ○ ○

ಸುಖಮುಖವಾಗಿ ಹೆರಿಗೆಯಾಗಿ, ಎಲ್ಲಾ ಸರಿ ಹೋದರೆ, ನಂಜುಂಡೇಶ್ವರನಿಗೆ ಕ್ಷೀರಾಭಿಷೇಕ ಮಾಡಿಸ್ತೀನಿ ಅಂತ ಹರಕೆ ಹೊತ್ತಿದ್ದೆ. ಹೋಗಿ ಹರಕೆಯನ್ನು ಪೂರೈಸಬೇಕು" ಸುಮಿತ್ರಾದೇವಿ ಮಗನಿಗೆ ಹೇಳಿದಳು.

"ಏನು ದೇವರೋ, ಏನು ಹರಕೆಯೋ, ನನಗೆ ನಂಬಿಕೆಯಿಲ್ಲ."

"ಹಾಗೆನ್ನಬೇಡ ಧ್ರುವ. ನಂಜುಂಡೇಶ್ವರ ನಮ್ಮ ಮನೆ ದೇವರು. ಈ ಮಕ್ಕಳನ್ನು ನಮ್ಮ ಮಕ್ಕಳು ಅಂತ ಒಪ್ಪಿಕೊಂಡ ಮೇಲೆ ಹರಕೆ ತೀರಿಸಬೇಡವೇ ?"

"ಮಾಲಾ ಈಗ ತಿರುಗಿ ಬಿದ್ದಿದ್ದಾಳೆ. ಅವಳು ಮಕ್ಕಳನ್ನು ಕೊಡಲ್ಲವಂತೆ"

"ಯಾಕಂತೆ ?"

"ನಿಮಗೆ ಈ ಮಕ್ಕಳ ಮೇಲೆ ಯಾವ ಹಕ್ಕೂ ಇಲ್ಲ" ಅಂತಂದುಬಿಟ್ಟಳು.

"ಅದೇನೋ ನಿಜ. ಆದರೆ ಕೊಟ್ಟ ಮಾತಿಗೆ ಬೆಲೆ ಬೇಡವೇ ? ಇವಳಿಂದಾದ ಅವಮಾನವನ್ನೆಲ್ಲ ಸಹಿಸಿಕೊಂಡು, ಮಕ್ಕಳು ಹುಟ್ಟಲಿ ಅಂತ ಕಾದೆವು. ಈಗ ಏನು ಮಾಡೋದು ?"

"ಯಾವುದಾದರೂ ರೀತೀಲಿ ಹೆದರಿಸಬೇಕು. ಹೆದರಿಕೆಗೆ ಬಗ್ಗುತ್ತಾಳೆ."

"ಇದಕ್ಕೆಲ್ಲಾ ಪ್ರತಾಪನೇ ಸರಿ. ನಿನಗಂತೂ ಬುದ್ದೀನೇ ಓಡೊಲ್ಲ."

"ಪ್ರತಾಪನ ಮಾತು ಕೇಳಿ ನಾನು ಹಾಳಾದೆ. ಇಲ್ಲದಿದ್ದರೆ ನಾನೂ ನನ್ನ ಪಾಡಿಗೆ ಹಾಯಾಗಿರುತ್ತಿದ್ದೆ" ಮಗನನ್ನು ನಯವಾಗಿ ಅಣಕಿಸಿದಳು.

"ಅವನ ಮಾತುಗಳನ್ನು ಕೇಳಿದ್ದರಿಂದಲೇ ನೀನೂ ಶ್ರೀಮಂತನಾಗಿರೋದು. ಮಾಲಾಳಂತಹ ಹೆಂಡತಿ ಸಿಕ್ಕಿದ್ದು... ಈಗ ಮುದ್ದಾದ ಮಕ್ಕಳು ಸಿಕ್ಕಿರೋದು."

"ಸಿಕ್ಕಿದರೇನು ? ಯಾವುದೂ ನನ್ನದಾಗಲಿಲ್ಲ. ಶ್ರೀಮಂತನಾದರೇನು ? ವ್ಯವಹಾರವೆಲ್ಲ ಅವನ ಕೈಯಲ್ಲಿ. ಮಾಲಾ ಹೆಸರಿಗೆ ಹೆಂಡತಿ. ಇನ್ನು ಈ ಮಕ್ಕಳು... ನನ್ನ ಹೆಂಡತಿಯ ಮಕ್ಕಳು. ನನಗೆ ಹಕ್ಕೇ ಇಲ್ಲ" ಅವನೂ ದೂಷಿಸಿದ.

"ಸಾಕು ಮಾಡು. ಯಾರಿಗಾದ್ರೂ ಕೇಳಿಸೀತು. ಮೊದಲು ನಂಜನಗೂಡಿಗೆ ಹೋಗುವ ಏರ್ಪಾಡು ಮಾಡು. ಎಲ್ಲಾ ಸರಿ ಹೋಗುತ್ತದೆ" ಅವನ ಬಾಯಿ ಮುಚ್ಚಿಸಿದಳು.

o o o

ಅವರುಗಳೆಲ್ಲ ನಂಜನಗೂಡಿಗೆ ಹೋದವರು ಹಾಗೇ ಅಲ್ಲಿಂದಲೇ ಬಾಂಬೆಗೆ ಹೊರಟುಹೋದರು. ಮಾಲಾ ನಿರಾಳವಾಗಿ ಉಸಿರಾಡಿದಳು. ಒಂದೆರಡು ದಿನಗಳ ನಂತರ ಭಾಸ್ಕರ ಬಂದ. ಮಾಲಾ ನಗು ನಗುತ್ತಾ ಅವನನ್ನು ಮುಂಬಾಗಿಲಿನಲ್ಲೇ ಸ್ವಾಗತಿಸಿದಳು.

"ನಾನು ಬರ್ತೀನಿ ಅಂತ ಗೊತ್ತಿತ್ತಾ ನಿಮಗೆ ?" ಅವನು ಪ್ರಶ್ನಿಸಿದ.

"ಇಲ್ಲ. ದಿನಾ ಇಷ್ಟು ಹೊತ್ನಲ್ಲಿ ಮುಂಬಾಗಿಲಿನಲ್ಲಿ ಸ್ವಲ್ಪ ಹೊತ್ತು ಕುಳಿತಿರುತ್ತೀನಿ. ಒಳಗೆ ತುಂಬಾ ಸೆಕೆ."

"ಹೀಗೆ ಫ್ರೀಯಾಗಿ ಗಾಳೀಲಿ ಓಡಾಡ್ತೀರಾ ? ಬಾಣಂತಿ ಅಂತಂದ್ರೆ, ಮಫ್ಲರ್‌ನ ತಲೆಗೆ ಕಟ್ಟಿಕೊಂಡು ಸ್ವೆಟರ್ ಹಾಕಿಕೊಂಡು, ಕಾಲು ಚೀಲಗಳನ್ನು ಧರಿಸಬೇಕು. ನೀವು ನೋಡಿದ್ರೆ ನೈಟಿ ಹಾಕಿಕೊಂಡು ಚಿಕ್ಕ ಹುಡುಗಿಯ ತರಹ ಓಡಾಡ್ತಾ ಇದೀರಿ" ತಮಾಷೆಯಿಂದ ನಕ್ಕ.

"ನಾನು ಹಳೇ ಕಾಲದವಳಲ್ಲ. ಹಾಗೆಲ್ಲಾ ಸ್ಟ್ರಿಕ್ಟಾಗಿ ಬಾಣಂತನ ಮಾಡಿಸಿ ಕೊಳ್ಳೋಕೆ.. ನಾನು ಯಾವತ್ತೂ ನನಗಿಷ್ಟ ಬಂದ ಹಾಗೇ ಇರೋಳೆ."

"ಅದೇನೋ ಹೌದು. ಎಲ್ಲಿ ನಿಮ್ಮ ಮಕ್ಕಳು ? ಮಲಗಿದಾರಾ ?"

"ಹುಂ ಸದ್ಯಕ್ಕೆ ಅದೇ ಕೆಲಸ. ನಿಶ್ಚಿಂತೆಯಿಂದ ನಿದ್ರಿಸುವುದು. ಬನ್ನಿ ನೋಡೋರಂತೆ ಅಂತ ಒಳಗಿನ ರೂಮಿಗೆ ಕರೆದೊಯ್ದಳು. ಎರಡು ತೊಟ್ಟಿಲುಗಳಲ್ಲಿ ಹಾಯಾಗಿ ನಿದ್ರಿಸುತ್ತಿದ್ದ ಮಕ್ಕಳನ್ನು ನೋಡಿ, ಅವಳ ಕಡೆ ನೋಡಿ ಮುಗುಳ್ನಕ್ಕ. "ಕಂಗ್ರಾಟ್ಸ್ ಮಾಲಾ... ಮಕ್ಕಳು ತುಂಬಾ ಮುದ್ದಾಗಿವೆ" ಎನ್ನುತ್ತಾ ಎರಡು ನೂರರ ನೋಟುಗಳನ್ನು ಮಕ್ಕಳ ಕೈಯಲ್ಲಿ ಇಟ್ಟ.

"ಇದೆಲ್ಲಾ ಏನು ಭಾಸ್ಕರ್..."

"ನಿಮಗಲ್ಲ. ಮಕ್ಕಳಿಗೆ, ಮಕ್ಕಳ ಶ್ರೇಯಸ್ಸಿಗೆ."

"ರೈಲ್ವೇ ಸ್ಟೇಷನ್‌ನಲ್ಲಿ ಅದ್ಹೇಗೋ ನನ್ನ ಸೂಟ್‌ಕೇಸ್ ಅದಲು ಬದಲಾಗಿ ಹೋಗಿದೆ. ಒಳಗೆ ಯಾರೋ ಬೇರೆಯವರ ವಸ್ತುಗಳಿವೆ. ಇದರಲ್ಲಿ ಅವರ ಫೋನು ನಂಬರು, ವಿಳಾಸವಿದೆ. ಅವರನ್ನು ಹುಡುಕಿ ಈ ಸೂಟ್‌ಕೇಸನ್ನು ಕೊಡಬೇಕು. ನಾನಿನ್ನು ಬರ್ತೀನಿ" ಎಂದು ಹೊರಟವನನ್ನು ತಡೆದಳು.

"ನಿಮ್ಮ ಸೂಟ್‌ಕೇಸ್‌ನಲ್ಲಿ ಏನಿತ್ತು? ನನ್ನ ಫೋಟೋ ಇರಲಿಲ್ಲ ತಾನೇ...?"

"ಇತ್ತು. ಇದ್ದರೇನು? ಆ ಫೋಟೋ ತೆಗೆದುಕೊಂಡು ಅವನೇನು ಮಾಡಬಲ್ಲ?"

"ನನ್ನ ಜೊತೆ ಏನೇನು ನಡೀತು ಅಂತ ನಿಮಗೆ ತಿಳಿದೇ ಇದ. ಈ ಮನುಷ್ಯ ಬ್ಲಾಕ್‌ಮೇಲ್ ಮಾಡಿದರೆ?"

"ಬ್ಲಾಕ್‌ಮೇಲ್ ಮಾಡಿದರೆ ಸುಮ್ನೆ ಬಿಡ್ತೀನಾ? ಇದರಲ್ಲಿ ಅವನ ವಿಳಾಸ ಫೋನು ನಂಬರುಗಳಿವೆ. ಅದನ್ನು ಬರೆದಿಟ್ಟುಕೊಳ್ಳಿ... ಎನ್ನುತ್ತಾ ತಾನೇ ಒಂದು ಕಡೆ ಬರೆದಿಟ್ಟು, ಅದನ್ನು ದಿಂಬಿನ ಕೆಳಗೆ ಮಡಿಸಿಟ್ಟು, ಸೂಟ್‌ಕೇಸನ್ನು ಮುಚ್ಚಿದ. ಏಕೋ ಏನೋ ವಿನಾಕಾರಣ ಅವಳ ಎದೆ ಹೊಡೆದುಕೊಂಡಿತು. ಅವನು ಅತ್ತ ಹೋದ ಕೂಡಲೇ ಕುತೂಹಲದಿಂದ, ಆ ಚೀಟಿಯನ್ನು ಬಿಡಿಸಿ ಓದಿದಳು. ಅವಳ ಉಸಿರು ನಿಂತಂತಾಗಿತ್ತು. ಆ ವಿಳಾಸ ಭಾರ್ಗವನದೇ ಆಗಿತ್ತು."

"ಭಾರ್ಗವ ಇದೇ ಊರಿನಲ್ಲಿದ್ದಾನೆ. ಆದರೆ ನಮ್ಮಿಬ್ಬರ ಭೇಟಿಯಾಗಿಲ್ಲ. ಈಗ ಅವನು ಹೇಗಿರಬಹುದು? ಮದುವೆ ಮಾಡಿಕೊಂಡಿರಬಹುದೇ? ಉತ್ಸಾಹವನ್ನು ಅದುಮಿಡಲಾಗದೆ ವಸುಧಾಳಿಗೆ ಎಲ್ಲಾ ವಿಷಯವನ್ನು ಹೇಳಿ, "ನಾನು ಅವನನ್ನು ಒಮ್ಮೆ ನೋಡಬೇಕು, ಮಾತನಾಡಿಸಬೇಕು, ಅವನನ್ನು

ನನಗಾಗಿ ಕರೆದುಕೊಂಡು ಬರ್ತೀಯಾ ಪ್ಲೀಸ್..." ಎಂದು ಕೇಳಿಕೊಂಡಳು.

"ಅವರು ಈ ಮನೆಗೆ ಬರ್ತಾರೋ ಇಲ್ಲವೋ.." ಅವಳು ಅನುಮಾನಿಸಿದಳು.

"ಹಾಗಾದ್ರೆ ನಾನೇ ಹೋಗ್ತೀನಿ. ಈ ನಂಬರ್‍ಗೆ ಫೋನು ಮಾಡಿ, ಅವನ ಮನೆಗೆ ಬರ್ತಿದೀನಿ ಅಂತ ಹೇಳಿಬಿಡು."

"ಬೇಡಾ ಮಾಲಾ.... ಇದು ಮುಗಿದು ಹೋದ ಅಧ್ಯಾಯ. ಮತ್ತೇಕೆ ಅವರ ಸಹವಾಸ ?" ಈಗಿರುವ ಫಜೀತಿಗಳು ಸಾಲದಾ ?"

"ಈಗಿರುವ ಫಜೀತಿಗಳು ಸಾಲ್ವ್ ಆಗಬೇಕಾದರೆ, ನನಗೆ ಭಾರ್ಗವನ ಸಹಾಯವೂ ಬೇಕಾಗಬಹುದು... ಪ್ಲೀಸ್ ಬೇಡ ಅನ್ನಬೇಡ."

"ಆಯ್ತು. ನಾನು ಮಾತಾಡ್ತೀನಿ. ಭಾಸ್ಕರ ಇನ್ನೇನು ಹೇಳಿದ ?"

"ಏನೂ ಹೆಚ್ಚಿಗೆ ಮಾತನಾಡಲಿಲ್ಲ. ಆತುರದಲ್ಲಿದ್ದ... ನನಗೆ ನಮ್ಮ ಭಾರ್ಗವನೇ ಇರಬಹುದು ಎಂಬ ಅನುಮಾನ... ಒಂದು ವೇಳೆ ಇವನು ಭಾರ್ಗವ ಆಗಿಲ್ಲದಿದ್ದರೆ ?"

"ನೀನ್ಯಾಕೆ ಇಷ್ಟು ಎಕ್ಸೈಟ್ ಆಗ್ತೀಯಾ ? ಸಹನೆಯಿಂದಿರು."

"ಇದ್ದಕ್ಕಿದ್ದ ಹಾಗೆ ಅವನು ಮತ್ತೆ ಸಿಗುವ ಛಾನ್ಸ್ ಇರುವಾಗ, ಸಹನೆಯಿಂದ ಇರೋಕೆ ಆಗುತ್ತಾ? ಅವನು ಹೇಗಿದಾನೋ? ಏನು ಮಾಡುತ್ತಿದ್ದಾನೋ ಅಂತ ತಿಳಿದುಕೊಳ್ಳುವ ಆತುರ... ಒಂದು ವೇಳೆ ಅವನಿಗೆ ಮದುವೆಯಾಗಿ ಬಿಟ್ಟಿದ್ದರೆ ?"

"ಆಗಿದ್ದರೆ ಏನು ಮಾಡ್ತೋಕೆ ಆಗುತ್ತೆ? ಒಂಟಿಯಾಗಿ ಎಷ್ಟು ದಿನ ಇರುತ್ತಾರೆ ?" ಮಾಲಾಳಿಗೆ ಈ ಮಾತು ಖುಷಿಯನ್ನು ಕೊಡಲಿಲ್ಲ. ಅವಳ ಬಲವಂತಕ್ಕೆ ವಸುಧಾ ಆ ನಂಬರ್‍ಗೆ ಫೋನು ಮಾಡಿದಳು. ಭಾರ್ಗವನೇ ಎತ್ತಿದ. ಇವಳು ಇಲ್ಲಿಂದ "ಹಲೋ ನಾನು ವಸುಧಾ" ಎಂದು ಹೇಳಿದ ಕೂಡಲೇ, ಅವನು ಫೋನನ್ನು ಇಟ್ಟ ಸದ್ದು ಕೇಳಿಸಿತು. ಅಲ್ಲೇ ನಿಂತಿದ್ದ ಮಾಲಾಳಿಗೆ ಹೇಳಿದಳು "ಅವರಿಗೆ ನಮ್ಮ ಹತ್ತಿರ ಮಾತಾಡಲು ಇಷ್ಟವಿಲ್ಲ ಅಂತ ಕಾಣುತ್ತೆ."

"ಅವನ ಇಷ್ಟವನ್ನು ಕೇಳಿದೋರು ಯಾರು? ನನಗೆ ಅವನ ಹತ್ತಿರ ಮಾತನಾಡಬೇಕು ಅಂತ ಇಷ್ಟ. ನಾನು ಈಗಲೇ ಹೋಗ್ತೀನಿ" ಎಂದು ಹೇಳಿ ಚಪ್ಪಲಿ ಮೆಟ್ಟಿ ಹೊರಟೇಬಿಟ್ಟಳು. ಆಟೋದಲ್ಲಿ ಕುಳಿತವಳಿಗೆ, ಮನೆಯನ್ನು

ಹುಡುಕುವುದು ಕಷ್ಟವಾಯಿತು. ಎರಡನೇ ಮಹಡಿಯ ಮನೆಯಲ್ಲಿ ವಾಸವಾಗಿದ್ದ. ಇವಳು ಶ್ರಮಪಟ್ಟು ಹತ್ತಿ ಎರಡನೇ ಮಹಡಿಯನ್ನು ತಲುಪಿದಳು. ಅವನ ಮನೆಯ ಬಾಗಿಲ ಬಳಿ ಆಯಾಸದಿಂದ ಕುಸಿದು ಬಿದ್ದುಬಿಟ್ಟಳು. ಬಾಗಿಲ ಬಳಿ ಧಡ್ ಎನ್ನುವ ಸದ್ದು ಕೇಳಿ ಭಾರ್ಗವ ಹೊರಬಂದ. ಬಿದ್ದುಕೊಂಡಿದ್ದ ಮಾಲಾಳನ್ನು ಕಂಡ. ಒಳಗಿನಿಂದ ನೀರನ್ನು ತಂದು ಅವಳ ಮುಖದ ಮೇಲೆ ಚಿಮುಕಿಸಿದ. ಅವಳು ನಿಧಾನವಾಗಿ ಕಣ್ಣುಗಳನ್ನು ಬಿಟ್ಟು "ಭಾರ್ಗವ" ಎಂದಳು. ಅವನು ಎಲ್ಲಾ ವ್ಯಥೆಯನ್ನು ಮರೆತ. "ಮಾಲಾ... ಮಾಲಾ..." ಎನ್ನುತ್ತ ಅವಳನ್ನು ತನ್ನ ಮನೆಯೊಳಕ್ಕೆ ಕರೆದುಕೊಂಡು ಬಂದ. ಅವಳಿಗೆ ಕುಡಿಯಲು ಬಿಸಿ ಹಾಲನ್ನು ಕೊಟ್ಟ. ಚೇತರಿಸಿಕೊಂಡ ಮಾಲಾ ಸುತ್ತಲೂ ನೋಡಿದಳು. ಒಂದು ಸಣ್ಣ ಮನೆ. ಮನೆಯಲ್ಲಿ ಬೇರೆ ಯಾರೂ ಇದ್ದಂತಿಲ್ಲ. ಅವಳಿಗೆ ಸಮಾಧಾನವಾಗಿತ್ತು.

"ನೀನು ಇಲ್ಯಾಕೆ ಬಂದೆ ? ನಿನಗೆ ಈ ವಿಳಾಸ ಹೇಗೆ ಸಿಗ್ತು ?"

"ನಿನ್ನನ್ನು ನೋಡಿ ಮಾತನಾಡಿಸಲು ಬಂದೆ. ನಮ್ಮ ಮನೆಗೆ ಭಾಸ್ಕರ್ ಅಂತ ಒಬ್ಬರು ಬಂದಿದ್ರು... ಅವರ ಬಳಿ ನಿನ್ನ ಸೂಟ್‌ಕೇಸ್ ಇತ್ತು. ಅವರಿಂದ ಈ ವಿಳಾಸ ಸಿಕ್ಕಿತು. ಅವರು ಬಂದಿದ್ರಾ ?"

"ಹುಂ. ಅವರು ಆಗಲೇ ಬಂದು ಸೂಟ್‌ಕೇಸ್‌ನ್ನು ಕೊಟ್ಟು, ಅವರ ಸೂಟ್‌ಕೇಸ್ ತೆಗೆದುಕೊಂಡು ಹೊರಟೇ ಹೋದ್ರು. ಯಾರು ಈ ಭಾಸ್ಕರ್ ?"

"ನಮ್ಮ ಕಂಪನಿಯಲ್ಲಿ ನಿನ್ನ ಜಾಗಕ್ಕೆ ಬಂದವರು. ಆದರೆ ಅವರು ಈಗ ಇಲ್ಲಿ ಇಲ್ಲ. ಬಾಂಬೇಲಿದ್ದಾರೆ... ನೀನು ಎಲ್ಲಿಗೆ ಹೋಗಿದ್ದೆ ?"

"ನಾನು ಶಿರಡಿಗೆ ಹೋಗಿದ್ದೆ. ಅದರಲ್ಲಿ ಪ್ರಸಾದವೂ ಇತ್ತು. ತಡೀ ನಿನಗೂ ಸ್ವಲ್ಪ ಪ್ರಸಾದ ಕೊಡ್ತೀನಿ" ಎನ್ನುತ್ತಾ ಸೂಟ್‌ಕೇಸಿನಿಂದ ಪೊಟ್ಟಣಗಳನ್ನು ತೆಗೆದ. ಅವನನ್ನೇ ನೋಡುತ್ತಾ ಕೇಳಿದಳು.

"ಇದೇನಿದು ಜುಬ್ಬಾ ಪೈಜಾಮ. ಅದೂ ಬಿಳಿಯದು. ನಿನಗೆ ಒಂಚೂರೂ ಒಪ್ಪಲ್ಲ."

"ಬಿಳಿಯ ಬಟ್ಟೆ ಶಾಂತಿಯ ಸಂಕೇತ. ಈಗ ನಾನು ಶಿರಡಿ ಸಾಯಿಬಾಬಾರ ಭಕ್ತ. ಅವರು ತೋರುವ ಮಾರ್ಗದಲ್ಲಿ ನಡೆಯುತ್ತಿದ್ದೀನಿ."

"ಆ ಮಾರ್ಗದಲ್ಲಿ ನಾನು ಇಲ್ವಾ ಭಾರ್ಗವ ?"

"ಇದೀಯ. ಇರೋದ್ರಿಂದಾನೇ ಈ ದಿನ ನೀನು ಪ್ರತ್ಯಕ್ಷವಾಗಿರೋದು. ಆದು ಬಿಡು. ನೀನ್ಯಾಕೆ ಹೀಗೆ ನಿತ್ರಾಣವಾಗಿದೀಯ... ಧ್ರುವ ನಿನ್ನನ್ನು ಚೆನ್ನಾಗಿ ನೋಡಿಕೊಳ್ತಾ ಇಲ್ವಾ?"

"ನನಗೇ ಏನೂ ಬೇಡವಾಗಿದೆ. ಧ್ರುವ..ಮಧು ಎಲ್ಲರೂ ಚೆನ್ನಾಗಿ ನೋಡಿಕೊಳ್ತಾರೆ. ಅದೇ ನನಗೆ ಈಗ ಕಷ್ಟವಾಗಿರೋದು." ಏನು ಕಷ್ಟ ಎಂದು ಅವನು ಕೇಳಲಿಲ್ಲ.

"ಇನ್ನೊಂದಾದ್ರೂ ಮತ್ತೆ ಬಂದು ಮಾತಾಡ್ತೀನಿ. ಈಗ ನಾನು ಮನೆಗೆ ಹೋಗಲೇಬೇಕು" ಎನ್ನುತ್ತಾ ಎದ್ದಳು.

"ನಿನ್ನನ್ನು ಕೆಳಗಿನ ತನಕ ಬಿಟ್ಟು ಬರ್ತೀನಿ" ಎಂದು ಹೊರಟವನ ಕೈ ಹಿಡಿದಳು. ಪ್ಲೀಸ್ ನನ್ನ ಕೈ ಬಿಡಬೇಡ ಭಾರ್ಗವ. ಈಗ ನೀನೇ ದಿಕ್ಕು ನನಗೆ" ಎನ್ನುತ್ತಾ ಅತ್ತಳು. ಅವನಿಗೂ ವ್ಯಥೆಯಾಯಿತು.

"ಅಳಬೇಡ ಮಾಲಾ. ನಾನು ನಿನ್ನ ಸಹಾಯಕ್ಕೆ ಇದೀನಿ. ಶಿರಡಿ ಸಾಯಿಬಾಬಾನ ವಿಭೂತಿ ಇದೆ. ಕೊಡ್ತೀನಿ. ದಿನಾ ಇಟ್ಕೋ. ಧೈರ್ಯ ಬರುತ್ತೆ. ಎಂಥ ಕಷ್ಟವನ್ನಾದರೂ ಜಯಿಸಬಹುದು."

"ಇದ್ದಕ್ಕಿದ್ದ ಹಾಗೇ ನಿನಗೆ ಹೀಗೆ ಬಾಬಾನ ಭಕ್ತನಾಗುವ ಆಸೆ ಯಾಕೆ ಬಂತು?"

"ಯಾಕೆ ಅಂದ್ರೆ! ನನಗೆ ಆದ ಆಘಾತದಿಂದ ನಾನು ಆತ್ಮಹತ್ಯೆ ಮಾಡಿ ಕೊಳ್ಳಲಿಲ್ಲ ಅಷ್ಟೇ. ಬಾಬಾನ ದರ್ಶನಕ್ಕೆ ಹೋದೆ. ಆ ಆಕರ್ಷಣೆ ನನ್ನ ಸೆಳೆಯಿತು. ನಾನೀಗ ಅವರ ಭಕ್ತ. ಅವರ ಆದರ್ಶದಲ್ಲಿ ನಡೆಯಲು ಪ್ರಯತ್ನಿಸುತ್ತಿದ್ದೇನೆ" ಅವನೇ ವಿಭೂತಿಯನ್ನು ಅವಳ ಹಣೆಯಲ್ಲಿ ಇಟ್ಟ. ಇಬ್ಬರೂ ಕೆಳಗಿಳಿದು ಬಂದರು. ಒಂದು ರಿಕ್ಷಾದಲ್ಲಿ ಅವಳನ್ನು ಕೂಡಿಸಿದ. ಅವಳು ಮನೆಗೆ ಬಂದು ತಲುಪಿದಳು. ಅವಳ ಎರಡೂ ಮಕ್ಕಳು ಎಚ್ಚರ ಗೊಂಡು ರಂಪ ಮಾಡಿ ಅಳುತ್ತಿದ್ದವು. ವಸುಧಾ ತನ್ನ ಮಗುವನ್ನು ತನ್ನ ತಾಯಿಯ ಮನೆಯಲ್ಲಿ ಬಿಟ್ಟಿದ್ದಳು.

"ನೀನು ವಾಪಸ್ಸು ಬರೋದೇ ಇಲ್ವೇನೋ ಅಂತ ಅಂದುಕೊಂಡೆ" ವಸುಧಾ ಚುಡಾಯಿಸಿದಳು.

"ಇಲ್ಲಿ ಈ ಮಕ್ಕಳು ಅಳಲು ಪ್ರಾರಂಭಿಸಿದ ಕೂಡಲೇ, ನನ್ನ ರವಿಕೆಯೆಲ್ಲ ತೋಯ್ದು ಹೋಯ್ತು..." ಎನ್ನುತ್ತಾ ಮಗುವನ್ನು ಎತ್ತಿಕೊಂಡಳು. ಈಗ

ಭಾರ್ಗವ ಮತ್ತೆ ಸಿಕ್ಕಿದಾನೆ. ನನಗೆ ಈ ಮಕ್ಕಳು ಮರಿ ಏನೂ ಬೇಡ. ಯಾರಿಗೆ ಬೇಕೋ ತೆಗೆದುಕೊಂಡು ಹೋಗಲಿ. ನಾನು ಅವನೊಂದಿಗೆ ಹಾಯಾಗಿರ್ತೀನಿ."

"ಏನು ಮಾತುಗಳನ್ನಾಡಿದೆ ? ಅವರು ಏನೆಂದರು ?"

"ಹೆಚ್ಚಿಗೆ ಏನೂ ಆಡುಕ್ಕೆ ಆಗಲಿಲ್ಲ. ಅವನೀಗ ಶಿರಡಿ ಸಾಯಿಬಾಬನ ಭಕ್ತನಾಗಿದ್ದಾನೆ. ಬಿಳಿ ಜುಬ್ಬಾ ಪೈಜಾಮ, ಗಡ್ಡ ಮೀಸೆ ಬಿಟ್ಟಿದಾನೆ. ಕತ್ತಿನಲ್ಲಿ ಒಂದು ರುದ್ರಾಕ್ಷಿ ಸರ ಇತ್ತು. ಹಣೆಯಲ್ಲಿ ಚಂದನ, ವಿಭೂತಿ, ಕುಂಕುಮ ಏನೇನೋ ಇತ್ತು. ಫ್ಯಾನ್ಸಿ ಡ್ರೆಸ್ ಹಾಕಿದ ಹಾಗಿತ್ತು. ನಾನು ಒಂದೊಂದಾಗಿ ಎಲ್ಲವನ್ನೂ ಸರಿ ಮಾಡ್ತೀನಿ. ಅವನನ್ನು ಮೊದಲಿನ ರೂಪಕ್ಕೆ ತರ್ತೀನಿ."

"ಯಾರನ್ನು ಬದಲಾಯಿಸುಕ್ಕೆ ಆಗುಲ್ಲ. ಸುಮ್ಮನೆ ಇಲ್ಲದ ತೊಂದರೆಯನ್ನು ನೀನೇ ಮೈಮೇಲೆ ಎಳೆದುಕೊಳ್ತೀಯ... ಈಗ ನಿನಗೆ ನಿನ್ದೇ ಆದ ಕೆಲಸಗಳಿವೆ. ಎರಡು ಮಕ್ಕಳಜವಾಬ್ದಾರಿ ಇದೆ" ಅವಳ ಮಾತುಗಳಿಗೆ ಒತ್ತು ಕೊಡುವಂತೆ, ಒಂದು ಮಗು ಕೊಂಯ್ ಎಂದು ಅಳಲು ಪ್ರಾರಂಭಿಸಿತು.

"ಥೂ ಹಾಳಾದೋವು... ನನ್ನ ಪಾಡಿಗೆ ನನ್ನನ್ನು ಎರಡು ಗಳಿಗೆ ಇರುಕ್ಕೆ ಬಿಡುಲ್ಲ" ಅಂತ ಗೊಣಗಿ ಮಗುವನ್ನು ಎತ್ತಿಕೊಂಡಳು.

"ಮಕ್ಕಳನ್ನು ಮಾತ್ರ ಬೈಯಬೇಡ ಮಾಲಾ. ಮಕ್ಕಳು ದೇವರ ಸಮಾನ ಅಂತ ಅಂತಾರೆ. ಅಲ್ಲದೆ ಯಾವ ಪಾಪವನ್ನೂ ಅರಿಯದ ಕಂದಗಳು. ಈ ಕಂದಗಳು ಮುಂದೆ ಏನೇನು ಅನಭವಿಸಬೇಕೋ, ಈಗಲಾದ್ರೂ ನಿಶ್ಚಿಂತೆಯಾಗಿರಲಿ."

"ಎರಡು ಮಕ್ಕಳನ್ನು ಸುಮಿತ್ರಾ ದೇವಿಗೆ ಒಪ್ಪಿಸಿ, ಭಾರ್ಗವನ ಜೊತೆ ಓಡಿ ಹೋಗೋಣ ಅಂತ ಅಂದುಕೊಂಡಿದೀನಿ"

"ಒಂದೊಂದು ಸಾರಿ ಒಂದೊಂದು ತರಹ ಮಾತನಾಡ್ತೀಯ ನೀನು. ಅದಕ್ಕೆ ಈ ಕಾಂಪ್ಲಿಕೇಷನ್ಸ್."

"ಅದನ್ನೆಲ್ಲ ಸಾಲ್ವ್ ಮಾಡೋಕೆ ನೀನು ಇದೀಯಲ್ಲ."

"ಒಂದು ದಿನವಾದರೂ ನನ್ನ ಬಗ್ಗೆ ನೀನು ಯೋಚಿಸಿದೀಯ...?"

"ಇಲ್ಲ. ಸಾರಿ ವಸುಧಾ. ನನ್ನ ತಾಪತ್ರಯವೇ ಹಾಸಿ ಹೊದ್ದುಕೊಳ್ಳುವಷ್ಟಿದೆ. ನಿನ್ನ ಬಗ್ಗೆ ಯೋಚಿಸೋಕೆ ಪುರುಸತ್ತೇ ಇಲ್ಲ..." ನಾನೇನು ಮಾಡಲಿ ?"

"ಈ ಮಕ್ಕಳನ್ನು ಧ್ರುವನಿಗೆ ಒಪ್ಪಿಸಿ, ಮತ್ತೆ ಕಂಪೆನಿಗೆ ಜಾಯಿನ್ ಆಗು. ಆಫೀಸಿನ ಕೆಲಸ ಕಾರ್ಯಗಳಲ್ಲಿ ನಿನ್ನ ತಾಪತ್ರಯವನ್ನು ಮರೆತುಬಿಡು."

"ಭಾರ್ಗವನ ಜೊತೆ ಇದ್ದರೆ ನಾನು ಎಲ್ಲವನ್ನೂ ಮರೆಯಬಲ್ಲೆ ಅಂತ ಅನ್ನಿಸುತ್ತೆ. ಆದರೆ ಈಗ ಮಹಾ ದೈವಭಕ್ತನಾಗಿಬಿಟ್ಟಿದ್ದಾನೆ. ಮೊದಲು ಅವನನ್ನು ಸರಿ ಮಾಡಬೇಕು" ಇನ್ನೊಂದು ಮಗುವೂ ಅಳಲು ಪ್ರಾರಂಭಿಸಿದಾಗ, ಒಂದನ್ನು ತೊಟ್ಟಿಲಲ್ಲಿ ಮಲಗಿಸಿ, ಇನ್ನೊಂದನ್ನು ಎತ್ತಿಕೊಂಡಳು.

"ನಿನಗೆ ಮಕ್ಕಳು ಹುಟ್ಟಿದ ವಿಷಯವನ್ನು ಅವನಿಗೆ ತಿಳಿಸಿದೆಯಾ ?"

"ಇಲ್ಲ. ಯಾಕೋ ಹೇಳಬೆಕು ಅಂತ ಅನ್ನಿಸಲಿಲ್ಲ."

"ಮೊದಲು ಅವನಿಗೆ ಅಷ್ಟೂ ವಿಷಯ ತಿಳಿಸುವುದೇ ಒಳ್ಳೆಯದು. ಆಗ ಅವನ ಮನಸ್ಸಿನಲ್ಲಿ ಏನಿದೆ ಅಂತ ತಿಳಿಯುತ್ತೆ."

"ಎಸ್ ಯೂ ಆರ್ ರೈಟ್... ನಾನು ನಾಳೇನೇ ಮತ್ತೆ ಅವನ ಮನೆಗೆ ಹೋಗಿ ಎಲ್ಲಾ ಮಾತನಾಡ್ತೀನಿ."

ಮಾರನೇ ದಿನ ಮತ್ತೆ ಅವಳು ಅವನ ಮನೆಗೆ ಬಂದಾಗ ಮುಂಬಾಗಿಲಿಗೆ ಬೀಗ ಹಾಕಿತ್ತು. ಅವನು ಎಲ್ಲಿಗೆ ಹೋದ ? ಯಾವಾಗ ಬರ್ತಾನೆ ಅನ್ನುವ ವಿಷಯ ಅಕ್ಕ ಪಕ್ಕದವರ್‍ಯಾರಿಗೂ ತಿಳಿಯಲಿಲ್ಲ. ಅವರುಗಳು ಇವಳನ್ನೇ ವಿಚಿತ್ರವಾಗಿ ನೋಡಿದಾಗ, ಇವಳಿಗೆ ಮುಜುಗರವುಂಟಾಗಿತ್ತು. ಸೋತ ಮುಖವನ್ನು ಹೊತ್ತು ವಾಪಸ್ಸು ಬಂದಳು. ಆಟೋದಿಂದ ಇಳಿದವಳ ಎದುರಿಗೆ ಭಾರ್ಗವ ಪ್ರತ್ಯಕ್ಷನಾದ.

"ನೀನು ? ಇಲ್ಲಿ ? ನಾನು ನಿನ್ನನ್ನು ಹುಡುಕಿಕೊಂಡು ನಿನ್ನ ಮನೆಗೆ ಹೋಗಿದ್ದೆ."

"ಅಲ್ಲಿಗೆ ಪದೇ ಪದೇ ಬರಬೇಡ ಮಾಲಾ. ಆ ಏರಿಯಾ ಚೆನ್ನಾಗಿಲ್ಲ."

"ಇದನ್ನು ಹೇಳೋಕೆ ಬಂದೆಯಾ ? ಹೋಗಲಿ ಒಳಗೆ ಬಾ..."

"ಇಲ್ಲ. ನಾನು ಮನೆಯೊಳಕ್ಕೆ ಬರಲ್ಲ. ಒಂದುವಿಷಯ ಹೇಳೋಣ ಅಂತ ಬಂದೆ. ಇನ್ನೊಂದೆರಡು ದಿನಗಳ ನಂತರ ನಾನು ಮತ್ತೆ ಶಿರಡಿಗೆ ಹೊರಟಿದೀನಿ. ನೀನು ಬರೋದಾದ್ರೆ ಬಾ... ಅಲ್ಲಿ ಬಾಬಾನ ದರ್ಶನದಿಂದ, ಆಶೀರ್ವಾದದಿಂದ ನಿನ್ನ ಮನಸ್ಸಿಗೆ ಶಾಂತಿ, ನೆಮ್ಮದಿ ಸಿಗುತ್ತದೆ."

"ನನಗೆ ಯಾವ ಬಾಬಾನ ಆಶೀರ್ವಾದದ ಮೇಲೆ ನಂಬಿಕೆ ಇಲ್ಲ. ಈಗ ನೀನು ಮತ್ತೆ ಸಿಕ್ಕೆಯಲ್ಲ ನನಗೆ ಅಷ್ಟು ಸಾಕು. ಬಹುಶಃ ನಿನ್ನ ಜೊತೆ ಇದ್ದರೆ

ನನಗೆ ಅದೇ ನೆಮ್ಮದಿ.. ಮದುವೆ, ಮಕ್ಕಳು ಇಲ್ಲದೇ ನೀನು ಹಾಯಾಗಿರಬಹುದು. ನಿನ್ನ ನೆಮ್ಮದಿಯನ್ನು ನಿದ್ದೆಯನ್ನು ಕೆಡಿಸಬೇಕು ಅಂತ ನನಗೆ ಆಸೆ" ಕಿಲಕಿಲನೆ ನಕ್ಕವಳನ್ನೇ ಬೆಪ್ಪನಂತೆ ನೋಡಿದ.

"ಯಾಕೆ ಹಾಗೆ ನೋಡ್ತೀಯ ? ನಾನು ಹೇಳಿದ್ದರಲ್ಲಿ ತಪ್ಪೇನಿದೆ ? ನಿನಗಾಗಿ ಕಾದು ಎದುರು ನೋಡಿದ ದಿನಗಳೆಷ್ಟು? ನಿನಗಾಗಿ ಅತ್ತು ಅತ್ತು ನಿದ್ದೆಯಿಲ್ಲದೇ ಹೊರಳಾಡಿದ ರಾತ್ರಿಗಳೆಷ್ಟು? ಆ ಲೆಕ್ಕಗಳನ್ನೆಲ್ಲ ಚುಕ್ತಾ ಮಾಡಬೇಡವೇ ?" ಅವನು ತಲೆತಗ್ಗಿಸಿದ.

"ನಿನ್ನ ಆದರ್ಶ ನನಗೆ ಬೇಕಿರಲಿಲ್ಲ ಭಾರ್ಗವ. ನನಗೆ ಬೇಕಾಗಿದ್ದವನು ನೀನು. ಹಳೆಯ ವಿಷಯವನ್ನು ಮರೆತುಬಿಡೋಣ."

"ಹೇಗೆ ಮರೆಯೋಕೆ ಆಗುತ್ತೆ ಮಾಲಾ... ನೀನು ಧ್ರುವನ ಪತ್ನಿ ಅನ್ನೋದನ್ನ ನಾನು ಹೇಗೆ ಮರೆಯಲಿ ?" ಅವನ ಧ್ವನಿಯಲ್ಲಿ ವ್ಯಥೆಯಿತ್ತು.

"ನಾನು ಅವನ ಪತ್ನಿಯಾದದ್ದು ಯಾರಿಗಾಗಿ ? ನಿನಗಾಗಿ. ನಿನಗಾಗಿ ಭಾರ್ಗವ... ಇಲ್ಲದಿದ್ದರೆ ಜೈಲಿನಿಂದ ನೀನು ವಾಪಸ್ಸು ಬರೋಕೇ ಆಗುತ್ತಿರಲಿಲ್ಲ."

"ಅದೆಲ್ಲ ಒಂದು ನಾಟಕ. ಎಲ್ಲರೂ ಸೇರಿ ಆಡಿದ ನಾಟಕ. ನಿನಗೆ ನನ್ನ ಮೇಲೆ ನಂಬಿಕೆ ಇರಲಿಲ್ವಾ? ಹೋಗಲಿ ಬಿಡು. ಈಗ ಹಳೆಯ ಮಾತುಗಳು ಬೇಡ. ನೀನು ಸುಖವಾಗಿಲ್ಲ ಅಂತ ನಿನ್ನ ಮುಖವೇ ಹೇಳುತ್ತೆ. ಸುಖ, ಶಾಂತಿ, ನೆಮ್ಮದಿಯನ್ನು ನಾವು ಅರಸಿಕೊಂಡು ಹೋಗಬೇಕು. ನಮ್ಮ ಬಳಿಗೇ ಬರುವುದಿಲ್ಲ. ನನಗೆ ಬಾಬಾರ ಆಶೀರ್ವಾದ ಸಿಕ್ಕಿದೆ. ಎಲ್ಲವನ್ನೂ ಮರೆಯಲು ಪ್ರಯತ್ನಿಸುತ್ತಿದೀನಿ. ಅದೇ ಮಾತನ್ನು ನಿನಗೆ ಹೇಳಬೇಕು ಅಂತ ಅನ್ನಿಸ್ತು. ಅದಕ್ಕೇ ಬಂದೆ.

"ಒಳಕ್ಕೆ ಬಂದು ವಸುಧಾಳೊಡನೆ ಮಾತನಾಡು. ಅವಳಿಗೂ ಸಂತೋಷವಾಗುತ್ತೆ. ಹಾಗೆ ನಮ್ಮ ಮಕ್ಕಳಿಗೂ ನಿನ್ನ ಆಶೀರ್ವಾದ ಬೇಕು..."

"ನಿನಗೆ ಮಕ್ಕಳಾ... ನನಗೆ ಗೊತ್ತೇ ಇರಲಿಲ್ಲ" ಅವನ ಮುಖ ಸಪ್ಪಗಾಗಿತ್ತು.

"ಹೌದು... ನನಗೆ ಅವಳಿ ಮಕ್ಕಳಾಗಿವೆ. ನೀನು ಬಂದು ಆಶೀರ್ವಾದ ಮಾಡಬೇಕು" ಅವಳು ನಾಟಕೀಯವಾಗಿ ಕೇಳಿಕೊಂಡಾಗ ಅವನು ಬೆಪ್ಪನಾದ. ಒಂದು ಗಳಿಗೆ ಸುಮ್ಮನಿದ್ದವನು "ನಡೀ.." ಎನ್ನುತ್ತಾ ಅವಳಿಗಿಂತ ಮುಂದಾಗಿ ಮನೆಯೊಳಕ್ಕೆ ಬಂದ. ವಸುಧಾಳಿಗೆ ತಕ್ಷಣ ಅವನ ಗುರುತು

ಸಿಗಲಿಲ್ಲ. ಎದ್ದು ಕೈ ಮುಗಿದಳು.

"ನಾನು ಭಾರ್ಗವ" ಎಂದ. ಅವನ ಹಿಂದೆಯೇ ಮಾಲಾಳು ಬಂದಳು. ಅವಳ ಕಡೆ ತಿರುಗಿ, ಏನು ಎನ್ನುವಂತೆ ಸಂಜ್ಞೆ ಮಾಡಿದಳು.

'ಇವನು ಬಾಬಾನ ಭಕ್ತ. ಇವನ ಆಶೀರ್ವಾದ ನನ್ನ ಮಕ್ಕಳಿಗೆ ಬೇಕು. ಅದಕ್ಕೆ ಕರೆದುಕೊಂಡು ಬಂದೆ. ಎನ್ನುತ್ತಾ ಅವಳು ಮಕ್ಕಳನ್ನು ಎತ್ತಿಕೊಂಡು ಬರಲು ಒಳಗೆ ಹೋದಳು.

"ನನಗೆ ಯಾವ ವಿಷಯವೂ ಗೊತ್ತಿರಲಿಲ್ಲ... ಅವಳೇ ಹೇಳಿದಳು." ಭಾರ್ಗವನೆಂದ,

"ಅವಳು ನಿಮಗೆ ಏನೆಂದು ಹೇಳೀದಾಳೋ ನನಗೆ ತಿಳಿಯದು. ಆದರೆ ಎಲ್ಲರಿಗೂ ತಿಳಿಸಿ ಆನಂದ ಪಡುವಂಥಾದ್ದು ಏನೂ ಇಲ್ಲ. ಅವಳ ಜೀವನದಲ್ಲಿ ಏನೇನೋ ನಡೆದು ಹೋಯ್ತು. ಅದಕ್ಕೆ ಯಾರ್‍ಯಾರು ಕಾರಣರೋ, ಯಾರ್‍ಯಾರನ್ನ ದೂರಬೇಕೋ ತಿಳಿಯದು. ಅವಳಿಗೇ ಅರಿವಾಗದಂತೆ, ಅವಳ ಜೀವನ ಏರುಪೇರಾಗಿ ಸಾಗುತ್ತಿದೆ."

"ಅವಳು ಸುಖವಾಗಿಲ್ಲ ಅಂತ ಅನ್ನಿಸ್ತು... ಆದರೆ ಇದೆಲ್ಲ ಗೊತ್ತಿರಲಿಲ್ಲ."

"ಬಹುಶಃ ಸುಖವಾಗಿರುವುದನ್ನು ಕೇಳಿಕೊಂಡು ಹುಟ್ಟಿಲ್ಲ ಅವಳು. ಅವಳ ವಿಷಯ ಹೇಳೋಕೆ ಬೇಕಾದಷ್ಟಿದೆ. ಕೇಳೋಕೆ ನಿಮಗೆ ಶಕ್ತಿ ಇರಬೇಕು ಅಷ್ಟೇ..."

ಒಳಗಿನಿಂದ ಮಾಲಾ ಎರಡು ಮಕ್ಕಳನ್ನೂ ಎತ್ತಿಕೊಂಡು ಹೊರಬಂದಳು. ಒಂದು ಮಗುವನ್ನು ವಸುಧಾ ಎತ್ತಿಕೊಂಡಳು. ಭಾರ್ಗವ ಮಕ್ಕಳಿಬ್ಬರನ್ನೂ ಯಾವ ಭಾವನೆಯನ್ನು ಹೊರಗೆಡವದೇ ನೋಡಿದ.

"ಏನು ಹೆಸರಿಟ್ಟಿದ್ದೀರಿ ?" ಏನಾದರೂ ಕೇಳಬೇಕು ಎಂಬಂತೆ ಕೇಳಿದ.

"ಏನೂ ಹೆಸರೂ ಇಲ್ಲ. ಕುಲವೂ ಇಲ್ಲ. ನೀನೇ ಯಾವುದಾದರೂ ಸಜೆಸ್ಟ್ ಮಾಡು."

"ನನ್ಗೆ ಏನು ತಿಳಿಯುತ್ತೆ ? ಧ್ರುವ ಏನಂತಾನೆ ?"

"ಧ್ರುವ ಏನಂತಾನೆ ? ಅವನಿಗೆ ಏನು ಹಕ್ಕಿದೆ... ನಿನಗೆ ಯಾವುದಾದರೂ ಒಳ್ಳೆಯ ಹೆಸರು ಗೊತ್ತಿದ್ದರೆ ಹೇಳು. ಇಲ್ಲದಿದ್ದರೆ ಬಿಡು."

"ನಿನಗೆ ಸಹನೇನೇ ಇಲ್ಲ ಮಾಲಾ. ಇವರಿಗೆ ಏನು ಗೊತ್ತು ?" ವಸುಧಾ ನುಡಿದಾಗ ಮಾಲಾ ಮೆತ್ತಗಾದಳು.

"ಸಾರಿ ಭಾರ್ಗವ ? ನೀನು ನನಗೆ ತುಂಬಾ ಬೇಕಾದವನು ಅಂತ ನಿನಗೇ ಈ ಅವಕಾಶವನ್ನು ಕೊಟ್ಟೆ, ನಿನ್ನ ಆಶೀರ್ವಾದ ಅಂತ ತಿಳಿದುಕೊಳ್ತೀನಿ."

"ಹಿರಿಯೋರ ಆಶೀರ್ವಾದ ಮಕ್ಕಳ ಮೇಲಿರಬೇಕು. ಸದಾಶಿವ ಅಂತ ನಿನ್ನ ಮಗನಿಗೆ ಹೆಸರನ್ನಿಡು. ನಿನ್ನ ತಾಯಿಯ ಹೆಸರೂ ಏನುಂತ ನನಗೆ ತಿಳಿಯದು ಮಧುಗೆ ಗೊತ್ತಿರಬಹುದು. ಅವನನ್ನು ಕೇಳಿ. ಆ ಹೆಸರನ್ನು ಇಡು. ಇದು ನನ್ನ ಸಜೆಷನ್."

"ಅವನನ್ನೇನು ಕೇಳೋದು ? ಅವನಿಗೆ ಗೊತ್ತಿರೋದು ಅಷ್ಟರಲ್ಲೇ ಇದೆ. ನನ್ನನ್ನು ಸಾಕಿ ಬೆಳೆಸಿದವಳು ಕಾವೇರಮ್ಮ. ಅವರ ಹೆಸರನ್ನೇ ಮಕ್ಕಳಿಗೆ ಇಡ್ತೀನಿ."

"ಬೇಡಾ ಮಾಲಾ. ನದೀ ಹೆಸರನ್ನು ಇಟ್ಟುಕೊಂಡವರು ಸುಖಿಗಳಾಗುವುದಿಲ್ಲ."

"ಅದೆಲ್ಲ ಸುಳ್ಳು. ನನ್ನ ಹೆಸರು ವನಮಾಲಾ. ನಾನೇನು ಸುಖವಾಗಿದೀನಿ ?" ಸುಖ ಅವರವರ ಹಣೆಯಲ್ಲಿ ಬರೆದಿರಬೇಕು. ಹೆಸರಿನಲ್ಲಿ ಅಲ್ಲ. ಸರಿ. ಇವತ್ನಿಂದ ಇವನು ಸದಾಶಿವ, ಇವಳು ಕಾವೇರಮ್ಮ."

"ಹಳೇ ಕಾಲದ ಹೆಸರಾಗಲಿಲ್ವಾ ಮಾಲಾ ?"

"ಅದನ್ನೇ ಸ್ವಲ್ಪ ನವೀನ ಮಾಡಿದರಾಯ್ತು. ಇವನು ಸದನ್. ಇವಳು ಕಾವ್ಯ" ವಸುಧಾ ಮುಗುಳ್ನಕ್ಕಳು. ಭಾರ್ಗವ ಪರ್ಸನ್ನು ತೆಗೆದು, ಮಕ್ಕಳ ಕೈಗೆ ಹತ್ತರ ಎರಡು ನೋಟುಗಳನ್ನಿಟ್ಟ. "ನಾನು ಬಡವ, ನನ್ನ ಆಶೀರ್ವಾದ ಇಷ್ಟೇ" ಎಂದ.

"ನೀನು ಹೀಗೆಲ್ಲಾ ಮಾತನಾಡಬೇಡ. ನನಗೆ ಬೇಸರವಾಗುತ್ತೆ" ಅವಳು ಮಕ್ಕಳನ್ನು ಒಳಗೆ ಎತ್ತಿಕೊಂಡು ಹೋದಳು. ವಸುಧಾ ಕೆಳದನಿಯಲ್ಲಿ ನುಡಿದಳು.

"ಆಗ ಈಗ ಬರ್ತಿರಿ ಭಾರ್ಗವ್. ಅವಳಿಗೂ ಖುಷಿಯಾಗುತ್ತೆ. ಅವಳೀಗ ಯಾರಿಗಾಗಿ ಬದುಕ್ತಿದಾಳೆ ಅಂತ ಅವಳಿಗೇ ತಿಳಿಯದು."

"ನಾನು ಬಂದರೆ ಮಧುಗೆ ಇಷ್ಟವಾಗದೇ ಇರಬಹುದು. ಅಲ್ಲದೆ ಅದು ಚೆನ್ನಲ್ಲ. ಇಲ್ಲೇ ಸಮೀಪದಲ್ಲಿ ಒಂದು ಸಾಯಿಬಾಬ ಮಂದಿರ ಇದೆ. ಅಲ್ಲಿಯ ಆಫೀಸಿನಲ್ಲಿ ನಾನು ಕ್ಲರ್ಕ್ ಆಗಿದೀನಿ. ಅಲ್ಲಿಗೆ ಬರಲಿ. ಏನು ಬೇಕಾದರೂ ಮಾತನ್ನಾಡಬಹುದು. ಹಾಗೇ ನೀವೂ ಬನ್ನಿ. ಬಾಬಾನ ದರ್ಶನವೂ ಆಗುತ್ತೆ.

ನಾನಿನ್ನು ಬರ್ತೀನಿ" ಎಂದು ಕೈ ಮುಗಿದು ಹೊರಟೇಬಿಟ್ಟ. ಒಳಗಿನಿಂದ ಬಂದ ಮಾಲಾ, ಅವನು ಇಲ್ಲದುದನ್ನು ಕಂಡು ಸಪ್ಪೆ ಮುಖ ಮಾಡಿದಳು. "ಯಾಕೇ? ಹೊರಟು ಹೋದ್ನಾ?" ಎನ್ನುತ್ತಾ ಸೋಫಾದ ಮೇಲೆ ಕುಳಿತಳು. ಅದೇ ಸಮಯಕ್ಕೆ ಸರಿಯಾಗಿ ಮಧು ಒಳಗೆ ಬಂದ. "ಏನೂ ಇಬ್ಬರೂ ಆರಾಮವಾಗಿ ಕೂತುಬಿಟ್ಟಿದೀರಿ? ಯಾರು ಬಂದಿದ್ರು?" ಅಂತ ಕೇಳಿದಾಗ, ಇಬ್ಬರೂ ಒಟ್ಟಿಗೇ "ಯಾರೂ ಇಲ್ಲ" ಎಂದರು. ಮಧು ನಕ್ಕ.

"ಯಾರಾದ್ರೂ ಖಂಡಿತ ಬರ್ತಾರೆ. ಇಬ್ಬರೂ ಒಟ್ಟಿಗೇ ಮಾತನಾಡಿದೀರ..." ಎಂದ. ಇಬ್ಬರೂ ಸುಮ್ಮನೆ ನಕ್ಕರು.

○ ○ ○

"ನಾನು ಸಾಯಿಬಾಬ ಮಂದಿರಕ್ಕೆ ಹೋಗಿ ಬರ್ತೀನಿ" ಎಂದು ಮಾಲಾ ಹೊರಟಾಗ, ವಸುಧಾ ಎಚ್ಚರಿಕೆ ನೀಡಿದಳು.

"ಬೇಗ ಬಂದುಬಿಡು ಮಾಲಾ... ಮಧುಗೆ ಗೊತ್ತಾದ್ರೆ ಏನಾಗುತ್ತೋ ಏನೋ?"

"ಏನಾಗುತ್ತೆ? ಒಂದಿಷ್ಟು ಬೈತಾನೆ. ಅದೇನೂ ಅಪರೂಪಾನಾ?" ಎನ್ನುತ್ತಾ ಚಪ್ಪಲಿ ಮೆಟ್ಟಿ ಹೊರಟೇಬಿಟ್ಟಳು. "ಮಕ್ಕಳಿಗೆ ಎರಡು ತಿಂಗಳು ಸಹ ತುಂಬಿಲ್ಲ ಇವಳು ಹೀಗೆ ಓಡಾಡಿದರೆ, ಅಕ್ಕಪಕ್ಕದವರು ನನ್ನನ್ನೇ ದೂಷಿಸುತ್ತಾರೆ. ಇವಳಿಗೆ ಹೇಗೆ ತಿಳುವಳಿಕೆ ಹೇಳುವುದು ಅಂತ ಅಂದುಕೊಂಡಳು.

ಭಾರ್ಗವನೇನೂ ಇವಳಿಗಾಗಿ ಕಾಯುತ್ತಿರಲಿಲ್ಲವಾದರೂ ಇವಳನ್ನು ಕಂಡು ಮುಗುಳ್ನಕ್ಕ. "ಒಬ್ಬಳೇ ಬಂದೆಯಾ? ವಸುಧಾ ಬರಲಿಲ್ವಾ" ಅಂತ ಕೇಳಿದ.

"ವಸುಧಾ ಬೇಬಿ ಸಿಟ್ಟಿಂಗ್ ಮಾಡ್ತಿದಾಳೆ. ಇದೇನಾ ನಿನ್ನ ಆಫೀಸು" ಸುತ್ತಲೂ ನೋಡುತ್ತಾ ಕೇಳಿದಳು.

"ಹೂಂ. ಇಷ್ಟೇ ಬರ್ತೀಯಾ? ದರ್ಶನಕ್ಕೆ ಹೋಗೋಣ್ವಾ?" ಕೇಳಿದ.

"ಹೋದರಾಯ್ತು. ಬಾಬಾ ಅಲ್ಲೇ ಇರ್ತಾರೆ ಅಲ್ವಾ? ಏನು ಅರ್ಜೆಂಟು."

"ಹಾಗೆಲ್ಲಾ ಹಗುರವಾಗಿ ಮಾತನಾಡಬಾರದು ಮಾಲಾ... ದರ್ಶನ ಮೊದಲು, ನಂತರ ಉಳಿದದ್ದು" ಎನ್ನುತ್ತ ಅವನು ಎದ್ದಾಗ ಅವಳು ಎದ್ದಳು.

"ಇನ್ನು ಮುಂದೆ ದರ್ಶನಕ್ಕೆ ಬರುವಾಗ ಬಿಳಿ ಉಡುಪು ಧರಿಸಿ ಬಾ..."

"ಏನು? ಕಂಪಲ್ಸರೀನಾ?"

"ಕಂಪಲ್ಸರಿ ಏನಲ್ಲ. ಬಿಳಿಯ ಉಡುಪು ಮನಸ್ಸಿಗೆ ನೆಮ್ಮದಿಯನ್ನು

ನೀಡುತ್ತದೆ."

"ಈ ವೈರಾಗ್ಯ ಎಲ್ಲಾ ನನಗೆ ಬೇಡ. ನಾನು ಈಗ ಹೇಗಿದೀನೋ ಅದೇ ಸರಿ." ಮೂತಿ ಉದ್ದ ಮಾಡಿದಳು. "ನಾವು, ಮೇಲೆ ಬಿಳಿ ಉಡುಪು ಧರಿಸಿದರೆ. ಮನದ ಕಲ್ಮಶ ತೊಳೆದು ಹೋಗುತ್ತಾ ಭಾರ್ಗವ ?"

"ಮನದ ಕಲ್ಮಶ ತೊಳೆದು, ಮನಸ್ಸು ಹಾಲಿನಂತಾಗಬೇಕೆನ್ನುವದೇ ಇದರ ಉದ್ದೇಶ." ಬಿಳಿ ಉಡುಪು ಅದರ ಸಂಕೇತ."

"ಹಾಗಾದರೆ ಈಗ ನಿನ್ನ ಮನಸ್ಸು ಹಾಲಿನಂತೆ ಬೆಳ್ಳಗಿದೆಯಾ ?"

"ಇನ್ನೂ ಇಲ್ಲ. ಅದಕ್ಕೇ ಪ್ರಯತ್ನ ಪಡ್ತಿದೀನಿ."

"ಬರೀ ನಿನ್ನ ಮನಸ್ಸು ಬೆಳ್ಳಗಾದರೆ ಸಾಲದು ಭಾರ್ಗವ, ಸಮಾಜದ ಕಲ್ಮಶವನ್ನು ಹೋಗಲಾಡಿಸಬೇಕು. ನಿನ್ನನ್ನು ನೀನು ಉದ್ಧಾರ ಮಾಡಿಕೊಂಡರೆ ಸಾಲದು. ಉಳಿದವರನ್ನು ಉದ್ಧಾರ ಮಾಡಬೇಕು."

"ಉಳಿದವರು ಅಂದರೆ... ಯಾರ ವಿಷಯ ಹೇಳ್ತಾ ಇದೀಯ ?"

"ನನ್ನ ವಿಷಯ. ನನ್ನನ್ನು ನೀನು ಉದ್ಧಾರ ಮಾಡಬೇಕು..."

"ನಿನ್ನನ್ನು ಉದ್ಧಾರ ಮಾಡೋಕೆ ನಾನ್ಯಾರು ? ಭಗವಂತನಿದ್ದಾನೆ."

"ಭಗವಂತ ನನ್ನನ್ನು ಮರೆತುಬಿಟ್ಟಿರಬಹುದು. ಇಲ್ಲದಿದ್ದರೆ ನನಗೆ ಇಷ್ಟು ತೊಂದರೆಗಳು ಒದಗುತ್ತಿರಲಿಲ್ಲ."

"ತೊಂದರೆಗಳು ಬರುವುದೇ ಮನುಷ್ಯರಿಗೆ. ಅದನ್ನು ದಾಟಿ ಆಚೆ ಬರಬೇಕು."

"ನನಗೆ ಇಂತಹ ಆಧ್ಯಾತ್ಮಿಕ ವಿಷಯಗಳು ಅರ್ಥವಾಗವುದಿಲ್ಲ ಭಾರ್ಗವ. ನಿನಗೂ ಇದರಲ್ಲಿ ಆಸಕ್ತಿ ಇರಲಿಲ್ಲ ಅಲ್ವಾ? ಅದ್ಹೇಗಾಯ್ತು ?"

"ನಾನು ಮಧೂಗೆ ಥ್ಯಾಂಕ್ಸ್ ಹೇಳಬೇಕು. ನನ್ನ ಈ ತಿರುವಿಗೆ ಅವನೇ ಕಾರಣ. ಇಲ್ಲದಿದ್ದರೆ ನಾನೂ ಆ ಆಸೆ, ಲೋಭ, ಮೋಹಗಳ ನಡುವೆ ಬಿದ್ದಿರುತ್ತಿದ್ದೆ."

"ಹಾಗಾದ್ರೆ ಮಧು ಮೇಲೆ ನಿನಗೆ ಯಾವ ಕೋಪವೂ ಇಲ್ಲವಾ ?"

"ಇಲ್ಲ. ನನಗೆ ಅವನ ಮೇಲಾಗಲೀ, ಯಾರ ಮೇಲಾಗಲೀ ಕೋಪವಿಲ್ಲ."

"ನನ್ನ ಮೇಲೂ ಕೋಪವಿಲ್ಲವಾ ?"

"ನಿನ್ನ ಮೇಲೆ ನಾನು ಕೋಪಿಸಿಕೊಂಡಿರಲೇ ಇಲ್ಲ. ಆ ಘಟನೆಗಳಿಂದ ಮನಸ್ಸಿಗೆ ಆಘಾತವಾದದ್ದು ನಿಜ. ಆಗ ಒಂದು ದಿನ ಹೀಗೇ ತಿರುಗುತ್ತಿದ್ದಾಗ,

ಬಾಬಾರ ಭಜನೆ ಕಿವಿಗೆ ಬಿತ್ತು. ಇಂಪಾಗಿದೆ ಅಂತ ಅನ್ನಿಸ್ತು. ಮಂದಿರದೊಳಕ್ಕೆ ಬಂದೆ. ಬಾಬಾರ ದರ್ಶನವಾಯ್ತು. ಏನೋ ಒಂದು ರೀತಿಯ ಸಂತೃಪ್ತಿ ದೊರಕಿತು.... ಆಮೇಲೆ ಆಗ ಈಗ ಇಲ್ಲಿಗೆ ಬರತೊಡಗಿದೆ. ಆಫೀಸಿನಲ್ಲಿ ಲೆಕ್ಕ ಪತ್ರ ನೋಡಿಕೊಳ್ಳಲು ಯಾರಾದರೂ ಬೇಕಾಗಿದ್ದಾರೆ ಅಂತ ತಿಳಿಯಿತು. ಹಾಗೇ ನಾನು ಇಲ್ಲಿ ಒಬ್ಬನಾದೆ."

"ಬರೀ ಇದಿಷ್ಟೇನಾ ನಿನ್ನ ಕೆಲಸ ?"

"ಇಲ್ಲ. ಒಂದು ಕಂಪೆನಿಯಲ್ಲಿ ಸೇಲ್ಸ್ ಎಕ್ಸಿಕ್ಯೂಟಿವ್ ಆಗಿದೀನಿ"

"ಶಾಭಾಸ್... ಸಧ್ಯ ಬರೀ ಭಜನೆ ಮಾಡಿಕೊಂಡು ಹೊಟ್ಟೆ ತುಂಬಿಸಿಕೊಳ್ತೀಯೇನೋ ಅಂತ ಅಂದುಕೊಂಡಿದ್ದೆ."

"ಹೊಟ್ಟೆ ಪಾಡಿಗೆ ಸಂಪಾದನೆ ಬೇಕೇ ಬೇಕಲ್ಲ."

"ಸಧ್ಯ ಅಷ್ಟಾದರೂ ತಿಳೀತಲ್ಲ. ನೀನ್ಯಾಕೆ ನನ್ನ ಡ್ಯಾಡಿ ಕೊಟ್ಟ ಆಸ್ತಿಯನ್ನು ವಾಪಸ್ಸು ಮಾಡಬೇಕಾಗಿತ್ತು? ಅದು ಇದ್ದಿದ್ದರೆ, ನಿನಗೆ ಯಾವ ಕೊರತೆಯೂ ಇರಲಿಲ್ಲ."

"ಈಗಲೂ ನನಗೆ ಯಾವ ಕೊರತೆಯೂ ಇಲ್ಲ."

"ನಿಜ ಹೇಳು. ನನ್ನ ಕೊರತೆ ನಿನಗಿಲ್ಲವಾ ?"

"ಈಗ ಈ ಮಾತೆಲ್ಲಾ ಇಲ್ಲಿ ಬೇಡ..."

"ಇಲ್ಲಿ ಈ ಮಾತುಗಳು ಬೇಡ, ನಿನ್ನ ಮನೆಗೆ ಬರುವುದು ಬೇಡ. ನನ್ನ ಮನೆಗೆ ನೀನು ಬರುವುದಿಲ್ಲ. ಹಾಗಾದರೆ ಮನದಲ್ಲಿರುವ ಮಾತುಗಳ ನ್ನಾಡುವುದು ಎಲ್ಲಿ ?"

"ಷ್. ಮೆಲ್ಲಗೆ ಇದು ಆಶ್ರಮ... ಪ್ರಶಾಂತವಾದ ಪ್ರದೇಶ. ನೀನು ಹೀಗೆ ಉದ್ವೇಗಗೊಂಡು ಮಾತನಾಡಿದರೆ,ಉಳಿದವರಿಗೆ ತೊಂದರೆಯಾಗುತ್ತದೆ."

"ಸಾರಿ ಭಾರ್ಗವ" ಎಂದಷ್ಟೇ ಹೇಳಿದಳು.ಮತ್ತೆ ಮಾತನಾಡಲಿಲ್ಲ. ಇಬ್ಬರೂ ಮೌನವಾಗಿಯೇ ಬಾಬಾನ ದರ್ಶನ ಮಾಡಿ ಆಶೀರ್ವಾದ ಪಡೆದರು. ಮತ್ತೆ ಹೊರಬಂದಾಗಲೂ ಅವಳು ಮಾತನಾಡದಿದ್ದಾಗ ಅವಳಿಗೆ ಕೋಪ ಬಂದಿದೆಯೆಂದು ಅರಿತ.

"ಈಗಲೂ ನಿನಗೆ ಎಷ್ಟು ಬೇಗ ಕೋಪ ಬರುತ್ತೆ ನೋಡಿದ್ಯಾ? ಎರಡು ಮಕ್ಕಳ ತಾಯಿಗೆ ಅತಿ ಸಹನೆ ಬೇಕು."

"ನಿನ್ನ ಉಪದೇಶದ ಪಾಠ ನನಗೆ ಬೇಕಿಲ್ಲ" ಎಂದು ಹೇಳಿ ಅಲ್ಲಿ ನಿಲ್ಲದೇ

ದುಡು ದುಡು ಬಂದು ರಸ್ತೆಗೆ ಇಳಿದಳು. ಭಾರ್ಗವ ಪೆಚ್ಚಾದ. ತನ್ನ ಮೊಬೈಲ್‌ನಿಂದ ವಸುಧಾಳಿಗೆ ಫೋನು ಮಾಡಿದ.

"ಮಾಲಾ ಕೋಪಿಸ್ಕೊಂಡು ಬರ್ತಾ ಇದಾಳೆ. ಅವಳನ್ನು ಶಾಂತ ಗೊಳಿಸುವುದು ನಿನ್ನ ಕೆಲಸ" ಎಂದ ಮೆದುವಾಗಿ ನಕ್ಕು.

"ಈ ಕೆಲಸ ನನಗೆ ಅಪರೂಪವೇನಲ್ಲ. ಹೆಚ್ಚು ಕಡಿಮೆ ದಿನಾ ಇದ್ದೇ ಇರುತ್ತೆ" ಅವಳೂ ಮೃದುವಾಗಿ ನಕ್ಕಳು.

"ಅವಳು ಸುಖವಾಗಿಲ್ಲ ಎನ್ನುವುದನ್ನು ಅವಳ ವರ್ತನೆಯೇ ತೋರಿಸುತ್ತದೆ. ಏನು ನಡೆದಿದೆ ಅಂತ ನನಗೆ ಗೊತ್ತಿಲ್ಲ. ತಿಳಿದುಕೊಳ್ಳಲೇ ಬೇಕೆಂಬ ಹಂಬಲವೂ ನನಗಿಲ್ಲ. ಆದರೆ ಮಾಲಾಳಿಗಾಗಿ ನನ್ನ ಹೃದಯ ಮಿಡಿಯುತ್ತದೆ. ಅವಳೊಡನೆ ಮಾತನಾಡಲು ಕಷ್ಟವಾಗುತ್ತದೆ. ನಿಮಗೆ ಏನೂ ತೊಂದರೆ ಇಲ್ಲದಿದ್ದರೆ... ಹೇಳುತ್ತೀರಾ ?"

"ನಾನು ಎಲ್ಲ ವಿಷಯಗಳನ್ನೂ ಹೇಳ್ತೀನಿ ಭಾರ್ಗವ. ಅವಳು ಕೆಲವು ವಿಷಯದಲ್ಲಿ ಮುಗ್ಧೆ. ಕೆಲವು ವಿಷಯಗಳಲ್ಲಿ ಅಜ್ಞಾನಿ. ಎಲ್ಲಕ್ಕಿಂತ ಹೆಚ್ಚಾಗಿ ಏನೋ ಹಠ... ಇದೆಲ್ಲ ಅವಳನ್ನು ಘಾಸಿಗೊಳಿಸಿವೆ. ಅವಳು ಎಲ್ಲಾ ನಂಬಿಕೆಗಳನ್ನು ಕಳೆದುಕೊಂಡು ಬಿಟ್ಟಿದ್ದಾಳೆ."

"ನನ್ನಿಂದಾಗುವ ಸಹಾಯವನ್ನು ನಾನು ಮಾಡ್ತೀನಿ. ಏನು ಮಾಡಬೇಕು ಹೇಳಿ."

"ಮೊದಲು ಅವಳೊಂದಿಗೆ ಏನೇನು ನಡೆಯಿತು ಅನ್ನೋದನ್ನ ಹೇಳ್ತೀನಿ. ನಾನು ನಿಮ್ಮನ್ನು ಎಲ್ಲಿ ಭೇಟಿಯಾಗಲಿ ?"

"ನನ್ನ ಆಫೀಸಿಗೆ ಬನ್ನಿ" ಎಂದು ಹೇಳಿ ವಿಳಾಸವನ್ನು ತಿಳಿಸಿದ.

○ ○ ○

ವಸುಧಾಳನ್ನು ಗೌರವದಿಂದ ಸ್ವಾಗತಿಸಿದ. "ಕಾಫಿ ಟೀ ಏನಾದ್ರೂ ತರಿಸ್ಲಾ ?" ಅಂತ ಸಹ ಕೇಳಿದ.

"ಏನೂ ಬೇಡ. ಇಲ್ಲಿ ನಾವು ಮಾತನಾಡುವುದರಿಂದ ತೊಂದರೆ ಏನಿಲ್ಲವಲ್ಲ."

"ಇಲ್ಲ. ಇದು ನನ್ನ ಕ್ಯಾಬಿನ್. ಎಷ್ಟೋ ಜನ ವಿಸಿಟರ್ಸ್ ಬರ್ತಾ ಇರುತ್ತಾರೆ. ನೀವು ಸಂಕೋಚವಿಲ್ಲದೆ ಮಾತನಡಬಹುದು ಯಾರಿಗೂ ತಿಳಿಯುವುದಿಲ್ಲ."

ವಸುಧಾ ಅವನನ್ನೇ ನೋಡಿದಳು. ಮಾತನ್ನು ಹೇಗೆ ಪ್ರಾರಂಭಿಸ ಬೇಕೆಂದು ಗೊತ್ತಾಗಲಿಲ್ಲ. ಅವನೇ ಮೌನವನ್ನು ಮುರಿದ.

"ಈಗ ಮಾಲಾ ಮಧು ಹೇಗಿದಾರೆ? ಮುಂಚಿನಂತೆ ಈಗಲೂ ವಾದ ವಿವಾದ ಆಗ್ತಾನೇ ಇರುತ್ತಾ?"

"ಅಷ್ಟಿಲ್ಲ. ಮಧು ಎಷ್ಟೋ ಬದಲಾಗಿದಾರೆ. ತಪ್ಪೆಲ್ಲಾ ಅವರದೇ ಎಂಬ ಅರಿವೂ ಉಂಟಾಗಿದೆ. ಆದರೆ ಮಾಲಾ ಮಾತ್ರ ಬದಲಾಗಿಲ್ಲ."

"ನನಗೂ ಹಾಗೇ ಅನ್ನಿಸ್ತು."

"ನೀವೇಕೆ ನಮ್ಮೊಂದಿಗೆ ಬಂದು ಇರಬಾರದು? ಮಧು ನಿಮ್ಮ ಹತ್ತಿರ ಕ್ಷಮಾಪಣೆ ಕೇಳಿದರೆ ಬರ್ತೀರಾ?"

"ಈ ರೀತೀನೇ ಸರಿಯಾಗಿದೆ ಬಿಡಿ ವಸುಧಾ. ಮತ್ತೆ ಸಂಬಂಧವನ್ನು ಕೂಡಿಸಿದರೆ ತೇಪೆ ಹಾಕಿ ಹೊಲಿದ ಬಟ್ಟೆಯಂತೆ, ಕುರೂಪವಾಗಿ ಬಿಡುತ್ತದೆ."

"ಹಾಗ್ಯಾಕೆ ಅಂದುಕೊಳ್ತೀರಿ. ಈಗ ನಾನು ಈ ಮನೆಯಲ್ಲಿದೀನಿ. ಮಾಲಾ ಇರುತ್ತಾಳೆ. ಮಧು ಕೂಡಾ ಮೊದಲಿನ ಮಧು ಅಲ್ಲ." ಭಾರ್ಗವ ಇಲ್ಲವೆನ್ನುವಂತೆ ತಲೆಯಾಡಿಸಿ ನಕ್ಕ.

"ಮಾಲಾನ ಜೊತೆ ಧ್ರುವನೂ ನಿಮ್ಮ ಮನೇಲೇ ಇದಾನಾ?"

"ಇಲ್ಲ. ಯಾರೂ ಒಬ್ಬರ ಜೊತೆ ಒಬ್ಬರು ಇರಲೇ ಇಲ್ಲ. ಅವಳೆಂದೂ ಅವನನ್ನು ಮೆಚ್ಚಿಕೊಳ್ಳಲೇ ಇಲ್ಲ. ನಿಮ್ಮ ಒಳಿತಿಗಾಗಿ ಅವನನ್ನು ಮದುವೆಯಾಗುವ ನಾಟಕವಾಡಿದಳು. ಆಮೇಲೆ ನಿಮ್ಮನ್ನು ನಿರಪರಾಧಿ ಅಂತ ಸಾಬೀತು ಪಡಿಸುವುದಕ್ಕಾಗಿ, ಅವನ ಸಹಾಯವನ್ನು ಕೇಳಿದ್ದಳು. ಅಲ್ಲಿ ಯಾವ ಅಪರಾಧವೇ ಇರಲಿಲ್ಲವಾದುದರಿಂದ ಕೇಸನ್ನು ವಾಪಸ್ಸು ತೆಗೆದು ಕೊಂಡು ನಿಮ್ಮನ್ನು ಬಿಡುಗಡೆ ಮಾಡಿದ ನಾಟಕ ಆಡಿದರು. ಈ ವಿಷಯ ತಿಳಿದ ಮಾಲಾ ಧ್ರುವನಿಂದ ಡೈವೋರ್ಸ್ ತೆಗೆದುಕೊಳ್ಳಬೇಕೆಂದು ಕೊಂಡಳು. ಆದರೆ ಮಧುಗೆ ಅದು ಸಮ್ಮತವಿರಲಿಲ್ಲ. ಧ್ರುವನಿಗೆ ಸಹ ಹೇಗಾದರೂ ಇವಳನ್ನು ತನ್ನವಳನ್ನಾಗಿ ಮಾಡಿಕೊಳ್ಳಬೇಕೆಂಬ ಹಠ ಚಿಕನ್ ಫಾಕ್ಸ್ ಆಗಿ ಚೇತರಿಸಿಕೊಳ್ಳುವವರೆಗೂ ಅವನು ಅವಳಿಂದ ದೂರವೇ ಇದ್ದ.ನಂತರ ನಮ್ಮ ಮದುವೆಯ ಸಮಯದಲ್ಲೇ ಹೋಮ ಹವನ ನಡೆಸುವಾಗ, ನಿಮಗೆ ಆ ವಿಷಯ ತಿಳಿಯಿತೆಂದು ಬಹಳ ಕೊರಗಿದಳು. ಆ ರಾತ್ರಿ ಯಾವ ಗಂಡನೂ ಪತ್ನಿಗೆ ಕೇಳದಂತಹ ಪ್ರಶ್ನೆಯನ್ನು ಕೇಳಿ ಅವಳಿಗೆ ಅವಮಾನ ಮಾಡಿದ."

"ಅವನಿಗೆ, ನನ್ನ ಮಾಲಾಳ ನಡುವೆ ದೇಹ ಸಂಬಂಧ ಇತ್ತು ಅನ್ನುವ ಅನುಮಾನವಿತ್ತು ಅಲ್ವಾ ?"

"ಹೂಂ. ಅದೇ ವಿಷಯವಾಗಿ ಮಾತುಕತೆಯಾಗಿ, ಅವನು ನಿಮ್ಮನ್ನು ಭೇಟಿಯಾಗಲು ಬಂದು, ಆಕ್ಸಿಡೆಂಟ್ ಆಗಿ ಆಸ್ಪತ್ರೆ ಸೇರಿದ."

"ಹೂಂ. ನಾನೇ ಸೇರಿಸಿದೆನಲ್ಲಾ."

"ಆಮೇಲೇನಾಯ್ತು ಅಂತ ನಿಮಗೆ ಗೊತ್ತಿಲ್ಲ ಭಾರ್ಗವ. ಧ್ರುವ ತಿಂಗಳಾನುಗಟ್ಟಲೇ ನಮ್ಮ ಮನೆಯಲ್ಲಿ ಪ್ರತಾಪನೊಂದಿಗೆ ಇದ್ದರು. ಅವನಿಂದ ದೂರ ಇರಲು ಬಯಸಿದ ಮಾಲಾ, ನಮ್ಮ ಕಂಪೆನಿಯಲ್ಲೇ ಕೆಲಸಕ್ಕೆ ಸೇರಿ ಕೊಂಡಳು. ನಿಮ್ಮ ಜಾಗಕ್ಕೆ ಹೊಸದಾಗಿ ಸೇರಿಕೊಂಡಿದ್ದ ಭಾಸ್ಕರನೊಂದಿಗೆ ಅವಳ ಸ್ನೇಹ ಬೆಳೆಯಿತು. ಅವನ ಜೊತೆ ಸ್ನೇಹದಿಂದ ಇದ್ದರೆ, ಧ್ರುವ ಬೇಗ ಡೈವೋರ್ಸ್ ಕೊಟ್ಟು ಬಿಡುತ್ತಾನೆಂದು ಭಾವಿಸಿದ್ದಳು. ಆದರೆ ಅದು ಸುಳ್ಳಾಯಿತು. ಅದೇ ಸಮಯದಲ್ಲಿ ಧ್ರುವ ಏಡ್ಸ್ ರೋಗಿಯೆಂಬ ವಿಷಯ ತಿಳಿಯಿತು. ಅವಳ ಸ್ಥಿತಿ ಹೇಗಿರಬೇಡ...?"

"ಹೌದಾ ? ಹಾಗಾದ್ರೆ ಧ್ರುವ ?... ಅವನಿಗೆ ಗೊತ್ತಾ ?"

"ಹೌದು. ಅವನು ಏಡ್ಸ್ ರೋಗಿ. ಅವನಿಗೂ ಗೊತ್ತು. ಈ ಆಘಾತವನ್ನು ಸಹಿಸಲಾಗದೇ ಮಾಲಾ ಭಾಸ್ಕರನೊಡನೆ ನಿಕಟ ಸಂಬಂಧವನ್ನಿಟ್ಟು ಕೊಂಡಳು. ಧ್ರುವನಿಗೆ ಅವಮಾನವಾಗಲೇಬೇಕು, ಅವನು ಅವಮಾನ ತಾಳಲಾರದೆ ಆತ್ಮಹತ್ಯೆ ಮಾಡಿಕೊಳ್ಳುತ್ತಾನೆ ಎಂದೆಲ್ಲಾ ಭಾವಿಸಿದ್ದಳು. ಆದರೆ ಹಾಗೇನೂ ಆಗಲಿಲ್ಲ. ಆದರೆ ಮಾಲಾ ಗರ್ಭಿಣಿಯಾಗಿದ್ದಳು !

"ಮಾಲಾ ಈ ಲೆವೆಲ್‌ಗೆ ಇಳಿಯಬಾರದಿತ್ತು."

"ಅವಳೂ ಹೆಣ್ಣೇ ತಾನೇ ? ನೀವು ನಂಬಿಸಿದ್ದಿರಿ. ನೀವು ಅವಳ ಕೈ ಬಿಟ್ಟಿರಿ. ಧ್ರುವ ಒಳ್ಳೆಯ ಪತಿಯಾಗಲು ಲಾಯಕ್ಕು ಇರಲಿಲ್ಲ. ಮತ್ತೇನು ಮಾಡ್ತಾಳೆ ? ಭಾಸ್ಕರನ ಪ್ರೀತಿಗೆ ಮನಸೋತಳು. ಅವನಿಗೆ ತನ್ನನ್ನು ಒಪ್ಪಿಸಿ ಕೊಂಡಳು. ಅವಳು ಗರ್ಭಿಣಿ ಎಂದು ತಿಳಿದ ಧ್ರುವ ಅವಳ ಮೇಲೆ ಕೋಪಿಸಿ ಕೊಳ್ಳಲಿಲ್ಲ. ಬದಲಿಗೆ ಆ ಮಗು ತನಗೆ ಬೇಕೆಂದು ಕಂಡೀಷನ್ ಹಾಕಿದ. ಮಾಲಾ ಒಪ್ಪಲಿಲ್ಲ. ಒಂದು ವರ್ಷ ಅಜ್ಞಾತವಾಸದಲ್ಲಿದ್ದು ಒಂದು ಗಂಡನ್ನು ಹೆತ್ತಳು. ಆ ಮಗುವನ್ನು ನನಗೆ ಕೊಟ್ಟುಬಿಟ್ಟಳು. ನನ್ನ ಮಗ ಆಕಾಶನ ಸ್ವಂತ ತಾಯಿ ಮಾಲಾ..."

"ಭಾಸ್ಕರನನ್ನೇ ಮದುವೆಯಾಗಬಹುದಿತ್ತಲ್ಲಾ..."

"ನಿಮ್ಮ ಹೊರತು ಬೇರೆ ಯಾರನ್ನೂ ಮದುವೆಯಾಗುವ ಆಸೆ ಅವಳಿಗೆ ಇರಲಿಲ್ಲ. ಅಲ್ಲದೇ ಅದೇ ಸಮಯದಲ್ಲಿ ನನಗೆ ಒಂದು ಮಿಸ್ ಕ್ಯಾರೇಜ್ ಆಗಿ, ಮುಂದೆ ನನಗೆ ಮಕ್ಕಳಾಗುವ ಸಾಧ್ಯತೆ ಇಲ್ಲ ಎಂದು ಡಾಕ್ಟರು ಹೇಳಿದ್ದರು. ತನ್ನ ಕರುಳಿನ ಕುಡಿಯನ್ನು ನನಗೆ ಧಾರಾಳವಾಗಿ ಕೊಟ್ಟು ಬಿಟ್ಟಳು."

"ಮಧು ಒಪ್ಪಿಕೊಂಡ್ನಾ?"

"ನಾನು ತಾಯಿಯಾಗಲು ಅಸಮರ್ಥಳು ಅನ್ನುವ ವಿಷಯದಲ್ಲಿ ಮಧುಗೂ ವ್ಯಸನವಿತ್ತು. ಅಲ್ಲದೆ ಮಾಲಾಳ ವಿಷಯವನ್ನು ಗೋಪ್ಯವಾಗಿಡ ಬೇಕಾಗಿತ್ತು. ಅದಕ್ಕೇ ಒಪ್ಪಿಕೊಂಡರು. ಆಕಾಶ ಈಗ ಅವರ ಮುದ್ದಿನ ಮಗ."

"ಭಾಸ್ಕರನಿಗೂ ಆ ಮಗು ಬೇಕಿರಲಿಲ್ವಾ?"

"ಆ ಪ್ರಶ್ನೆಯೇ ಬರಲಿಲ್ಲ. ಆವೇಳೆಗಾಗಲೇ ಅವರು ವಿವಾಹಿತರಾಗಿದ್ದರು. ಅವರ ಹೆಂಡತಿಗೂ ಇದೇ ವಯಸ್ಸಿನ ಮಗು ಇದೆ."

"ಇದೇಲ್ಲಾ ತಪ್ಪು ಅಂತ ಅನ್ನಿಸುಲ್ವಾ ವಸುಧಾ?"

"ತಪ್ಪೇ. ಆದ್ದರಿಂದಲೇ ಅದನ್ನು ಬಹಿರಂಗಪಡಿಸಲಿಲ್ಲ. ಮಾಲಾ ಏನೋ ನಾನು ಯಾವುದಕ್ಕೂ ಕೇರ್ ಮಾಡುಲ್ಲ ಅಂತ ಕುಣಿದಾಡಿದ್ದಳು. ಆದರೆ ಧ್ರುವ ಪ್ರತಾಪ ಸೇರಿ ಮಗುವನ್ನು ಕಿಡ್ನಾಪ್ ಮಾಡಿದರೆ ಅನ್ನೋ ಭಯ ಹುಟ್ಟಿಕೊಂಡಾಗ ಮೆತ್ತಗಾದಳು. ಆಮೇಲೆ ಅದೇ ಊರಿನಲ್ಲಿ ಕೆಲಸಕ್ಕೆ ಸೇರಿಕೊಂಡಳು."

"ಮಾಲಾಳ ಬಗ್ಗೆ ಧ್ರುವ ಮತ್ತೆ ವಿಚಾರಿಸಿದಾಗ, ಅವಳು ಪ್ರೆಗ್ನೆಂಟ್ ಆಗಿರಲೇಇಲ್ಲ. ಅವಳು ಸುಳ್ಳು ಹೇಳಿದಳು" ಎಂದು ನಂಬಿಸಿದೆವು. "ಅವಳೀಗ ನಮ್ಮ ಜೊತೆ ಇಲ್ಲ. ಎಲ್ಲಿದಾಳೋ ತಿಳಿಯದು" ಅಂತ ಸುಳ್ಳು ಹೇಳಿದೆವು. ಅವನು ನಂಬಿದನೋ ಬಿಟ್ಟನೋ ನಮಗೆ ತಿಳಿಯದು" ಆದರೆ ಐದಾರು ತಿಂಗಳ ನಂತರ ಒಂದು ಅಚಾತುರ್ಯ ನಡೆದು ಹೋಯಿತು. ಅವಳನ್ನು ಯಾರೋ ಕಿಡ್ನಾಪ್ ಮಾಡಿ, ರೇಪ್ ಮಾಡಿ, ಫ್ಲಾಟ್ ಒಂದರಲ್ಲಿ ಬಿಸ್ಟಾಕಿದ್ದರಂತೆ. ಮಹಿಳಾ ಸಂಸ್ಥೆಯವರು ಅವಳನ್ನು ರಕ್ಷಿಸಿದರು. ಆ ಮಹಿಳಾ ಸಂಘದ ಅಧ್ಯಕ್ಷೆ ಸುಮಿತ್ರಾದೇವಿ. ಆಕೆ ಮಾಲಾಳನ್ನು ತನ್ನ ಮನೆಗೆ ಕರೆದೊಯ್ದಳು. ಅವಳ ಮೇಲೆ ನಡೆದ ಅತ್ಯಾಚಾರವನ್ನು ಮನೆತನದ ಮರ್ಯಾದೆ ಹೋಗುತ್ತದೆಂದು ಮುಚ್ಚಿಟ್ಟುಬಿಟ್ಟರು. ಧ್ರುವ ಕೂಡಾ 'ಆದದ್ದು

ಆಗಿಹೋಯ್ತು. ನನಗೆ ನಿನ್ನ ಮೇಲೆ ಬೇಸರವಿಲ್ಲ. ನಾವು ಪತಿ ಪತ್ನಿಯರಂತೆ ಬಾಳದಿದ್ದರೂ ಪರವಾಗಿಲ್ಲ. ನಮ್ಮ ಮನೆಯನ್ನು ಬಿಟ್ಟು ಹೋಗಬೇಡ' ಎಂದು ಬಗೆ ಬಗೆಯಾಗಿ ಕೇಳಿಕೊಂಡ. ಆದರೆ ಮಾಲಾ ಅಲ್ಲಿರಲು ಒಪ್ಪಲಿಲ್ಲ. ಈ ವಿಷಯವಾಗಿ ಪ್ರತಾಪನಿಗೂ ಮಾಲಾಳಿಗೂ ಮಾತುಕತೆ ಆಯಿತು. ಕೋಪದ ಭರದಲ್ಲಿ ಅವಳು ಅವನಿಗೆ ಕೈಗೆ ಸಿಕ್ಕ ವಸ್ತುವಿನಿಂದ ಹೊಡೆದಳು. ಅದೇ ನೆವ ಹಾಕಿ, ಪ್ರತಾಪ ಅವಳ ಮೇಲೆ ಕೊಲೆ ಮಾಡಲು ಹವಣಿಸಿದಳು ಎಂದು ಆರೋಪವನ್ನು ಹೊರಿಸಿ, ಕೇಸ್ ಹಾಕುವ ಬೆದರಿಕೆಯನ್ನು ಹಾಕಿದ. ಈ ಅವಾಂತರಗಳ ನಡುವೆ ಎಲ್ಲರಿಗೂ, ಮಾಲಾ ಗರ್ಭಿಣಿಯಾಗಿದ್ದ ವಿಷಯ ತಿಳಿಯಿತು. ಈ ಬಾರಿ ಮುಚ್ಚಿಡಲಾಗಲಿಲ್ಲ.

"ಅಬಾರ್ಷನ್ ಮಾಡಿಸುವುದು ಬೇಡ. ಈ ಮಗುವನ್ನು ನಾವು ಸಾಕಿಕೊಳ್ಳುತ್ತೇವೆ ಅಂತ ಮನೆಯವರೆಲ್ಲಾ ಒಂದಾಗಿ, ಗರ್ಭವನ್ನು ಉಳಿಸಿಬಿಟ್ಟರು. ಅದರ ಫಲವೇ ಈ ಅವಳಿ ಮಕ್ಕಳು.

ಭಾರ್ಗವ ತನಗೇ ಸೋಲು ಆದಂತೆ ಕತ್ತು ತಗ್ಗಿಸಿ ಕುಳಿತಿದ್ದ.

"ಈಗ ಈ ಎರಡು ಮಕ್ಕಳು ತಮಗೆ ಬೇಕು ಅಂತ ಅವರು ಕೇಳುತ್ತಿದ್ದಾರೆ. ಇವು ನನ್ನ ಮಕ್ಕಳು. ಎಲ್ಲಾ ತರಹದ ಕಷ್ಟವನ್ನು ಅನುಭವಿಸಿ, ಹೊತ್ತು, ಹೆತ್ತವಳು ನಾನು. ಅವರುಗಳಿಗೆ ಯಾವ ಹಕ್ಕೂ ಇಲ್ಲ. ನಾನು ಕೊಡುವುದಿಲ್ಲ ಅಂತ ಮಾಲಾ ಹಠ ಹಿಡಿದಿದಾಳೆ. ಮುಂದೇನಾಗುತ್ತೋ ತಿಳಿಯದು."

"ಮಾಲಾ ಹೇಳುವುದು ನಿಜ. ಎಲ್ಲಾ ಕಷ್ಟಗಳು ಇವಳದ್ದು. ಸುಲಭವಾಗಿ ಎರಡೆರಡು ಮಕ್ಕಳು ಅವರಿಗೆ...ಇದು ನ್ಯಾಯ ಅಲ್ಲ... ಮಧು ಏನಂತಾನೆ ?"

"ಯಾವುದೋ ಅತ್ಯಾಚಾರಕ್ಕೆ ಹುಟ್ಟಿದ ಮಕ್ಕಳು ನಮಗೆ ಬೇಡವೇ ಬೇಡ. ಅವರೇ ಸಾಕಿಕೊಳ್ಳಲಿ ಕೊಟ್ಟುಬಿಡು ಅಂತಾರೆ."

"ಅದೂ ಸರಿಯೇ. ಯಾವ ಕುಲವೋ ಯಾವ ಜಾತಿಯೋ... ಆ ಮಕ್ಕಳನ್ನು ಮಾಲಾ ಯಾಕೆ ಸಾಕಬೇಕು ?"

"ಏನು ಹೀಗಂತೀರಿ ಭಾರ್ಗವ ? ತಾಯಿಯ ಒಡಲಲ್ಲಿ ಬೆಳೆಯುವಾಗ, ಯಾವ ಜಾತಿ ಯಾವ ಕುಲ ಅಂತ ಆ ಮಕ್ಕಳಿಗೇನು ಗೊತ್ತು ? ಈ ಮಕ್ಕಳು ತಾವು ಹುಟ್ಟಿ ಬರುತ್ತೀವಿ ಎಂದು ಅರ್ಜಿಯನ್ನೇನೂ ಸಲ್ಲಿಸಿರಲಿಲ್ಲ. ತಾಯಿಯ ರಕ್ತ ಮಾಂಸವನ್ನೂ ಹಂಚಿಕೊಂಡು ಬೆಳೆದ ಕೂಸುಗಳು. ಅವಳದ್ದೇ ಜಾತಿ ಅವಳದ್ದೇ ಕುಲ... ನೀವು ತಾಯ್ತನಕ್ಕೆ ಅವಮಾನ ಮಾಡಬೇಡಿ. ಇದು

ಮಾಲಾ ತಾನಾಗಿಯೇ ಮಾಡಿಕೊಂಡ ಅಪರಾಧವಲ್ಲ."

"ಸಾರಿ ವಸುಧಾ. ನಾನು ಆ ಅರ್ಥದಲ್ಲಿ ಹೇಳಲಿಲ್ಲ. ತಂದೆಯ ನೆರಳಿಲ್ಲದೇ ಮಾಲಾ ಮಕ್ಕಳನ್ನು ಹೇಗೆ ಬೆಳೆಸುತ್ತಾಳೆ. ಧ್ರುವನೊಂದಿಗೆ ಇರಬೇಕಾಗುತ್ತದೆ ಅಲ್ವಾ ?"

"ಅವರುಗಳೋ ಬಾಣಂತನ ಎಂದಿಗೆ ಮುಗಿಯುತ್ತದೋ ಎಂದು ಹೊಂಚಿ ಕುಳಿತಿದ್ದಾರೆ. ಮಾಲ ಮಕ್ಕಳನ್ನು ಕೊಡದಿದ್ದರೆ ಅವರು ತಗಾದೆ ಮಾಡದೆ ಬಿಡುವುದಿಲ್ಲ."

"ಕೋರ್ಟಿಗೆ ಹಾಕಿದರೆ, ಕೇಸು ಇವಳ ಕಡೆಯೇ ಆಗುತ್ತದೆ."

"ಆದರೆ ಕೋರ್ಟಿನಲ್ಲಿ ಎಲ್ಲಾ ವಿಷಯವೂ ಹೊರಬೀಳುತ್ತದೆ ಅಲ್ವಾ? ಮನೆತನದ ಮರ್ಯಾದೆ ಏನು ಉಳಿಯುತ್ತದೆ ?"

"ಯಾವ ಮರ್ಯಾದೆಯ ವಿಷಯ ಹೇಳ್ತಿದೀರಿ ? ಮಾಲಾ ಮಾಡಿದ್ದು ಖಂಡಿತಾ ಸರಿಯಲ್ಲ. ಅವಳು ಅಬಾರ್ಷನ್ ಮಾಡಿಸಿಕೊಂಡು ಬಿಡಬೇಕಾಗಿತ್ತು."

"ಹೌದು. ಮಾಲಾ ಮಾಡಿದ್ದು ತಪ್ಪೇ. ಹಾಗಂತ ಅವಳನ್ನೂ ಮನೆಯಿಂದ ಹೊರಕ್ಕೆ ಹಾಕುಕ್ಕೆ ಆಗುತ್ತಾ ? ಗಂಡಸರು ರಣಹದ್ದುಗಳಂತೆ ಕಾಯ್ತಾ ಇರ್ತಾರೆ... ನಾವು ಮನೆಯವರಾಗಿ ಅವಳ ರಕ್ಷಣೆ ಮಾಡಬೇಡವೇ ? ಮಕ್ಕಳನ್ನು ಅನಾಥಾಶ್ರಮಕ್ಕೆ ಸೇರಿಸೋಕೆ ಆಗುತ್ತಾ ?"

"ಮುಂದೆ ಮಾಲಾ ಯಾವ ತಪ್ಪನ್ನೂ ಮಾಡುವುದಿಲ್ಲ ಅಂತ ಏನು ಗ್ಯಾರಂಟಿ ?"

"ನೀವೇ ಹೀಗೆ ಹೇಳಿದರೆ ಹೇಗೆ ? ಮೊದಲಿನಿಂದ ಅವಳನ್ನು ಬಲ್ಲವರು. ಅವಳಿಗೆ ಸಹಾಯ ಮಾಡಬೇಕು... ಯಾಕೆ ಅವಳ ಮೇಲಿನ ಪ್ರೀತಿ ಹೊರಟು ಹೋಯಿತೇ ?"

"ಪ್ರೀತಿ ಇದೆ ಅಂತ, ಅವಳು ಮಾಡಿದ್ದನ್ನೆಲ್ಲಾ ಒಪ್ಪಿಕೊಳ್ಳೋಕೆ ಆಗುತ್ತಾ ?"

"ಹಾಗೆ ಹೇಳಲಿಲ್ಲ ನಾನು. ಈಗ ನೀವೇ ಅವಳಿಗೆ ಮಾರಲ್ ಸಪೋರ್ಟ್. ಅವಳಿಗೆ ಸೂಕ್ತ ಸಲಹೆಯನ್ನು ಕೊಡಿ."

"ಈ ಮಕ್ಕಳಿಗಾಗಿ ನಾನು ಯಾವ ಸಲಹೆಯನ್ನು ಕೊಡುವುದಿಲ್ಲ."

"ಸರಿ ಬಿಡಿ. ನೀವು ಮೊದಲಿನ ಭಾರ್ಗವ ಅಲ್ಲ. ಬದಲಾಗಿದೀರಿ. ಬಿಳಿಯ

ಉಡುಪು ಧರಿಸಿದ ಮಾತ್ರಕ್ಕೆ ಮನ ನಿಚ್ಚಳವಾಗುವುದಿಲ್ಲ. ಅದಕ್ಕೆ ಸಾಧನೆ ಬೇಕು. ನಿಮಗಿಂತ ಸುಮಿತ್ರಾದೇವಿ ಎಷ್ಟೋ ವಾಸಿ. ಮಾಲಾಳಿಗೆ ಸಪೋರ್ಟ್ ಮಾಡಿದರು.... ನೀವು ಹೀಗೆ ವರ್ತಿಸುತ್ತೀರಿ ಅಂತ ನಾನು ಅಂದುಕೊಂಡಿರಲಿಲ್ಲ."

"ನಿಮಗೆ ವಿವೇಕವಿದೆ, ವಿವೇಚನಾ ಶಕ್ತಿ ಇದೆ ಅಂತ ಅಂದುಕೊಂಡಿದ್ದೆ ವಸುಧಾ. ಮಾಲಾಳ ಎಲ್ಲಾ ವಿಷಯದ ಮೇಲೂ ಪರದೆ ಎಳೆಯುತ್ತಿದೀರಲ್ಲ. ಅವಳೇ ಎಲ್ಲವನ್ನೂ ಸರಿಪಡಿಸಿಕೊಳ್ಳಲಿ. ನೀವು ಸುಮ್ಮನಿದ್ದು ಬಿಡಿ."

"ನಾನು ಅವಳ ಸ್ನೇಹಿತೆ, ಅವಳ ಅತ್ತಿಗೆ, ಅವಳ ಮಗುವಿಗೆ ತಾಯಿ, ಅವಳ ಸಂಬಂಧ, ಋಣ ಎಲ್ಲಾ ನನ್ನೊಂದಿಗೆ ಇದೆ. ನಿಮ್ಮ ಹಾಗೆ ನಾನು ಹೊರಗಿನವಳಲ್ಲ. ನಿಮಗೆ ಯಾವ ಆಸ್ತಿಯೂ ಸಿಕ್ಕಿಲ್ಲ ಅಂದ ಮಾತ್ರಕ್ಕೆ ಎಲ್ಲ ಋಣವೂ ತೀರಿಹೋಯ್ತು ಅಂತ ಅಂದುಕೊಂಡ್ರಾ? ಮಾಲಾ, ನಿಮ್ಮನ್ನು ಭಟ್ಟರನ್ನು ಎಷ್ಟು ಹೊಗಳುತ್ತಿದ್ದಳು. ಅದು ಅವಳ ಹೃದಯಾಂತರಾಳದಿಂದ ಬಂದ ಹೊಗಳಿಕೆ. ಅದಕ್ಕೆ ಬೆಲೆ ಕಟ್ಟುಕ್ಕೆ ಆಗುಲ್ಲ. ಒಂದು ತರಹದಲ್ಲಿ ಅವಳ ಈ ವಿನಾಶಕ್ಕೆ ನೀವೂ ಕಾರಣ. ಪ್ರೀತಿ ಮಾಡುವವರು, ದೇಶ, ಜಾತಿ, ಮತ, ತಂದೆ, ತಾಯಿ, ಸಂಬಂಧ ಎಲ್ಲವನ್ನೂ ಬಿಟ್ಟು ಓಡಿ ಹೋಗಿ ಮದುವೆ ಯಾಗಲು ಸಿದ್ಧರಿರುತ್ತಾರೆ. ಅಂಥಾದ್ದರಲ್ಲಿ ಆದರ್ಶದ ಮಾತುಗಳನ್ನಾಡಿ ಅವಳಿಂದ ದೂರವಾದಿರಿ..."

"ಅವಳು ಸುಖದಲ್ಲಿ ಬೆಳೆದವಳು, ನನ್ನಲ್ಲಿ ಶ್ರೀಮಂತಿಕೆ ಇರಲಿಲ್ಲ."

"ಅವಳಿಗೆ ಬೇಕಾದದ್ದು ನಿಮ್ಮ ಹೃದಯ... ಈಗ ಅವಳಿಗೆ ಶ್ರೀಮಂತಿಕೆ ಇದೆ, ಆದರೆ ಯಾವ ಸುಖವಿದೆ ನೀವೇ ಹೇಳಿ."

"ಹೀಗೆಲ್ಲಾ ಆಯ್ತು ಅಂತ ನನಗೇನು ಗೊತ್ತಿತ್ತು ?"

"ಯಾರಿಗೂ ಗೊತ್ತಿರಲಿಲ್ಲ. ಆಮೇಲೆ ಎಂದಾದ್ರೂ ನೀವು ಮಾಲಾಳ ಬಗ್ಗೆ ವಿಚಾರಿಸಿರಲಿಲ್ಲ. ಅವಳನ್ನು ನಿಮ್ಮ ಮನಸ್ಸಿನಿಂದ ಕಿತ್ತು ಹಾಕಿಬಿಟ್ರಿ."

"ಹೌದು. ಅವಳು ನನಗೆ ಪರರ ವಸ್ತುವಾಗಿದ್ದಳು. ಅವಳ ಬಗ್ಗೆ ವಿಚಾರಿಸುವುದು ಪಾಪವಾಗುವುದಿಲ್ಲವಾ ?"

"ಪಾಪಿಗಳು ಹಾಯಾಗಿರುತ್ತಾರೆ. ಪುಣ್ಯವಂತರೇ ಕಷ್ಟಕ್ಕೆ ಸಿಕ್ಕಿ ಬೀಳುವುದು. ಬಿಡಿ. ಈಗ ನಿಮಗೆ ಎಲ್ಲಾ ವಿಷಯವು ತಿಳಿಯಿತು. ಅವಳು ಪಾಪಿಯೋ ಪುಣ್ಯವಂತೆಯೋ ಅದನ್ನು ನೀನೇ ನಿರ್ಧರಿಸಿ. ಬದನ್ನೆಲ್ಲಾ

ನಿಮಗೆ ತಿಳಿಸಿದೀನಿ ಅಂತ, ನಾನು ಮಾಲಾಳಿಗೂ ಸಹ ತಿಳಿಸುವುದಿಲ್ಲ. ನೀವು ಅಷ್ಟೇ ಅವಳನ್ನು ಏನೂ ಕೇಳಬೇಡಿ. ಅವಳ ಹಣೆಯಲ್ಲಿ ಬರೆದಂತೆ ಆಗುತ್ತದೆ. ಬದಲಾಯಿಸೋಕೆ ನೀವ್ಯಾರು ? ನಾನ್ಯಾರು ?" ಎನ್ನುತ್ತಾ ವಸುಧಾ ಎದ್ದಳು. ಅವನು ಭಾವೋದ್ವೇಗದಿಂದ ಅವಳ ಕೈ ಹಿಡಿದ.

"ಸಾರಿ ವಸುಧಾ. ನೀವು ಹೇಳುವುದು ಸರಿ. ಮನದೊಳಗಿನ ಮಲಿನ ಇನ್ನೂ ಕಡಿಮೆ ಆಗಿಲ್ಲ. ಕಹಿ ಇನ್ನೂ ಉಳಿದಿದೆ. ನಾನು ಮನುಷ್ಯನೇ ತಾನೇ... ಹೀಗೆ ನೀವು ಹೇಳುವಷ್ಟು ದಿಟ್ಟವಾಗಿ ನಮ್ಮ ತಾಯಿ ಕೂಡಾ ನನ್ನೊಂದಿಗೆ ಮಾತನಾಡಿರಲಿಲ್ಲ. ಹಾಗಂತ ನನಗೆ ಬೇಸರವಿಲ್ಲ. ನನ್ನ ಮನಸ್ಸೂ ಕಲಕಿ ಹೋಗಿದೆ. ಅಸಹಾಯಕತೆಯಿಂದ ನಿರ್ಬಲನಾಗಿದ್ದೇನೆ. ಈಗಲೇ ನಾನು ಏನೂ ಆಡಲಾರೆ. ಮಾಲಾಳಿಗೆ ನಿಮ್ಮಂತಹ ಸ್ನೇಹಿತೆ ಸಿಕ್ಕಿದ್ದು ಅವಳ ಅದೃಷ್ಟ. ಅವಳ ಜೀವನವನ್ನು ಸರಿ ಮಾಡುವ ಸಾಮರ್ಥ್ಯ ನಿಮಗಿದೆ. ನಿಮ್ಮ ಮೇಲೆ ನನಗೆ ವಿಶ್ವಾಸವಿದೆ."

"ನನ್ನನ್ಯಾಕೆ ಸುಮ್ಮನೆ ಹೊಗಳುತ್ತಿದ್ದೀರಿ ?"

"ಮಧು ಅದೃಷ್ಟವಂತ. ಅವನಿಗೆ ನಿಮ್ಮಂತಹ ವಿವೇಕ ಪತ್ನಿ ಸಿಕ್ಕಿದಳು. ನಾನು ದುರಾದೃಷ್ಟವಂತ. ಮಾಲಾಳಂತಹ ಪತ್ನಿ ಕೂಡಾ ದಕ್ಕಲಿಲ್ಲ... ಮಾಲಾಳಿಗೆ ನಿಮ್ಮಷ್ಟು ವಿವೇಚನೆ ಇದ್ದಿದ್ದರೆ, ಅವಳಿಗೆ ಈ ದುಃಸ್ಥಿತಿ ಒದಗುತ್ತಿರಲಿಲ್ಲ."

"ಯಾವ ವಿವೇಕ, ವಿವೇಚನೆ ಕೂಡಾ ಸಮಯದಲ್ಲಿ ಎಷ್ಟೋ ಸಾರಿ ಉಪಯೋಗಕ್ಕೆ ಬರುವುದಿಲ್ಲ. ಕೈ ಕೊಟ್ಟು ಬಿಡುತ್ತವೆ. ಆಕಸ್ಮಿಕಗಳು ಘಟಿಸಿ ಬಿಡುತ್ತವೆ. ಆಗ ಏನು ಮಾಡೋದು ? ಏನು ಉಪಾಯ ಹುಡುಕುವುದು ?"

"ಎಲ್ಲಾ ಸಮಸ್ಯೆಗೂ ಒಂದು ಪರಿಹಾರವಿದ್ದೇ ಇರುತ್ತೆ ಅಂತ ತಿಳಿದವರು ಹೇಳ್ತಾರೆ... ತಾಳ್ಮೆಯಿಂದ ಕಾದು ನೋಡಬೇಕು ಅಷ್ಟೇ."

"ತಾಳ್ಮೆ! ತಾಳ್ಮೆ ಅನ್ನೋ ಹೆಸರೇ ತಿಳಿಯದು ಮಾಲಾಳಿಗೆ.ಈಗಾಗಲೇ ಚಡಪಡಿಸುತ್ತಿರುತ್ತಾಳೆ. ಮಕ್ಕಳೂ ಗೋಳು ಹೊಯ್ದುಕೊಂಡಿರುತ್ತವೆ. ನಾನು ಇನ್ನು ಬರ್ತೀನಿ ಎಲ್ಲಾ ವಿಷಯ ನಿಮಗೆ ಗೊತ್ತಾಗಿದೆ. ನಿಮ್ಮ ಅನಿಸಿಕೆಯನ್ನು ತಿಳಿಸಿದ್ದೀರಿ. ಹಾಗೇ ಯಾವುದಾದರೂ ಉಪಾಯವಿದ್ದರೂ ತಿಳಿಸಿ. ಒಟ್ಟಿನಲ್ಲಿ ಮಾಲಾ ಸುಖವಾಗಿರುವುದು ಮುಖ್ಯ ನನಗೆ." ಎನ್ನುತ್ತಾ ಕೈ ಮುಗಿದು ಹೊರಟಳು. ಅವನು ಮಾತಿಲ್ಲದವನಂತೆ ಸುಮ್ಮನಾದ. ಅವಳನ್ನು ಗೇಟಿನ

ತನಕ ಬಿಟ್ಟು ಬರಬೇಕೆಂಬುದೂ ಸಹ ಹೊಳೆಯಲಿಲ್ಲ. ಬೆಪ್ಪನಂತೆ ಕೂತೇ ಇದ್ದ.

○ ○ ○

ಆ ನಂತರ ಭಾರ್ಗವನಿಗೆ ಆಫೀಸಿನ ಕೆಲಸ ಮುಂದುವರೆಸಲು ಸಾಧ್ಯವಾಗಲಿಲ್ಲ. ತಲೆನೋವಿನ ನೆಪ ಹೇಳಿ ಮನೆಗೆ ಬಂದುಬಿಟ್ಟ, ಊಟ ಮುಗಿಸಿ, ಹಾಸಿಗೆಯ ಮೇಲೆ ಉರುಳಿಕೊಂಡ. ವಸುಧಾ ಆಡಿದ ಮಾತುಗಳೇ ಗುಂಯ್ ಗುಟ್ಟುತ್ತಿದ್ದವು. ಎರಡು ವರ್ಷದ ಹುಡುಗಿಯಾಗಿದ್ದಾಗಿನಿಂದಲೂ ಮಾಲಾಳನ್ನು ಬಲ್ಲ. ಅವಳು ತನ್ನ ಮೇಲೆ ಇಟ್ಟಿದ್ದ ಪ್ರೀತಿ, ವಿಶ್ವಾಸ ನಂಬಿಕೆಯನ್ನು ಸಹ ತಿಳಿದಿದ್ದ. ಅವಳು ಯಾವಾಗ ಇವನನ್ನು ಪ್ರೀತಿಸಲು ಆರಂಭಿಸಿದಳೋ ಇವನಿಗೆ ತಿಳಿಯದು. ಆದರೆ ಇವನೂ ಪ್ರೀತಿಸಲು ತೊಡಗಿದಾಗ ಜರುಗಿದ್ದು ಅನಾಹುತಗಳ ಸರಮಾಲೆ. ತನಗೂ ಸ್ವಾಭಿಮಾನ ವಿತ್ತು! ಮಧು ಆಡಿದ ಮಾತುಗಳಿಂದ ಅವಮಾನಿತನಾಗಿದ್ದ. ಆಗ ಪ್ರೀತಿಗಿಂತ ಋಣ ಹೆಚ್ಚಾಗಿ ಭಾರವಾಗಿ ಕಾಡಿತ್ತು. ಹಂಗಿನ ಜೀವನಕ್ಕಿಂತ ಸ್ವತಂತ್ರ ಜೀವನ ಬೇಕೆನಿಸಿತ್ತು. ತನ್ನದಲ್ಲದ ಆಸ್ತಿ ತನಗೆ ಬೇಡವೇ ಬೇಡ ಎಂದು ದೃಢ ನಿರ್ಧಾರ ಮಾಡಿದ್ದ. ಆಗ ಮಾಲಾ ಸಹ ತನ್ನವಳಲ್ಲ. ತಮ್ಮ ಮದುವೆಗೆ ಮಧು ಒಪ್ಪುವುದಿಲ್ಲ ಎಂದೆನಿಸಿತ್ತೇ ವಿನಃ, ಅವಳೊಂದಿಗೆ ಓಡಿ ಹೋಗಿ ಮದುವೆಯಾಗಬೇಕೆಂದು ಅನ್ನಿಸಲಿಲ್ಲ. ಅದು ತಪ್ಪು ಎಂದೇ ಅವನ ಭಾವನೆ. ಹೋಗಲಿ ಆದದ್ದು ಆಗಿಹೋಯಿತು, ಇನ್ನು ಮಾಲಾ ಧ್ರುವನ ಪತ್ನಿ" ಅವಳೂ ಎಲ್ಲಾದರೂ ಸುಖವಾಗಿರಲಿ ಎಂದುಕೊಂಡು ಎಲ್ಲವನ್ನೂ ಮರೆಯಲು ಪ್ರಯತ್ನಿಸಿದ್ದ. ಹಾಗಾದರೆ ನಾನು ಮಾಡಿದ್ದು ತಪ್ಪೇ... ಮಾಲಾಳನ್ನು ಮನೆಯಿಂದ ಓಡಿಸಿಕೊಂಡು ಹೋಗಿದ್ದರೆ, ಮಧು ಸುಮ್ಮನಿರುತ್ತಿದ್ದನೇ? ಆಗ ಕೂಡ ನಾನಾ ಅಪವಾದಗಳನು ಹೊರಿಸಿ, ಜೈಲಿನಲ್ಲಿರುವಂತೆ ಮಾಡಿರುತ್ತಿದ್ದ. ಆ ಭಯದಿಂದ ಹೇಡಿಯಾಗಿಬಿಟ್ಟೆನೇ? ಆದರೆ ಮಾಲಾಳಿಗೆ ಹೀಗಾಗಬಾರದಾಗಿತ್ತು. ಈಗ ಎಲ್ಲವನ್ನೂ ಸರಿಪಡಿಸಲಾಗುತ್ತದೆಯೇ?

'ನನ್ನಿಂದ ಮಾಲಾಳಿಗೆ ಅನ್ಯಾಯವಾಯಿತು ಎನ್ನುವಂತೆ ವಸುಧಾ ಆಡಿದಳಲ್ಲಾ ಆದರೆ ನಾನು ಬೇರೆ ಯಾರನ್ನೂ ಮದುವೆಯಾಗಿಲ್ಲ. ಇವತ್ತಿಗೂ ಬ್ರಹ್ಮಚಾರಿಯಾಗಿಯೇ ಇದೀನಿ. ಆದರೆ ಮಾಲಾ? ರೀತಿ ನೀತಿ ನಿಯಮ ಸಂಯಮಗಳನ್ನು ಮುರಿದು, ಭಾಸ್ಕರನಿಗೆ ಒಲಿಯಬಾರದಿತ್ತು. ಇದು ಇವಳು ನಮ್ಮ ಪ್ರೀತಿಗೆ ಮಾಡಿದ ಅವಮಾನವಲ್ಲವೇ? ಧ್ರುವನ ಮೇಲಿನ ಕೋಪಕ್ಕೆ,

ಭಾಸ್ಕರನೊಡನೆ ಸರಸವಾಡುವಾಗ ಅವಳಿಗೆ ನನ್ನ ನೆನಪು ಬರಲಿಲ್ಲವೇ? ಹಾಗಾದರೆ ಇಷ್ಟೇನಾ ಪ್ರೀತಿ? ಆಲೋಚನೆಗಳ ಕಾರ್ಮೋಡ ಕವಿದಿತ್ತು. ಮಾಲಾಳ ದುರ್ಗತಿಗೆ ನಾನು ಕಾರಣನಲ್ಲ. ಅವಳೇ ಕಾರಣ. ಅವಳೇ ಕಾರಣ' ಎಂದೇ ಅನ್ನಿಸತೊಡಗಿತ್ತು.

ಆದರೆ, ತಾನು ಮತ್ತೆ ಮಾಲಾಳೊಂದಿಗೆ ಹೊಂದಾಣಿಕೆ ಮಾಡಿಕೊಂಡು ಇರಲು ಸಾಧ್ಯವೇ? ನಾನು ಭಾಸ್ಕರನೂ ಅಲ್ಲ. ಧ್ರುವನೂ ಅಲ್ಲ... ಭಾಸ್ಕರ. ಅವನ ಹೆಂಡತಿಗಿಂತ ಹೆಚ್ಚಾಗಿ ಇವಳನ್ನು ಪ್ರೀತಿಸಿರಬಹುದು. ಧ್ರುವ ಎಲ್ಲವನ್ನೂ ಮರೆತು, ಇವಳಿಗೆ ಪತ್ನಿಯ ಸ್ಥಾನವನ್ನು ಕೊಡಲು ನಿರ್ಧರಿಸಿರ ಬಹುದು. ಆದರೆ ನನ್ನ ಪ್ರೀತಿ ಅಂತಹುದಲ್ಲ... ಈಗ ಬಲವಂತವಾಗಿ ಇವಳೊಡನೆ ಬಾಳಲಾರೆ. ಯಾಕೋ ನನ್ನ ಮನ ಇದಕ್ಕೆ ಒಪ್ಪುತ್ತಿಲ್ಲ. ನಾನು ಮಾಲಾಳಿಗೆ ಯಾವ ರೀತಿಯಿಂದಲೂ ಸಹಾಯ ಮಾಡಲಾಗುವುದಿಲ್ಲ.

ಎಂತಹ ಘೋರ ಅನಾಹುತ ನಡೆದಿದೆ? ಮರ್ಯಾದೆಗೆ ಅಂಜಿ, ಪೋಲೀಸ್ ಕಂಪ್ಲೇಂಟ್ ಕೊಡದೇ, ಕಿಡ್ನಾಪರ್ ಯಾರು ಅಂತ ಹುಡುಕಿಸದೆ, ಅನ್ಯಾಯವನ್ನು ಒಪ್ಪಿಕೊಂಡು ಎಲ್ಲರೂ ಕುಳಿತಿದಾರಲ್ಲ. ಇದು ನ್ಯಾಯವಲ್ಲ. ಇಲ್ಲಿ ಬರೀ ಮರ್ಯಾದೆಯ ಪ್ರಶ್ನೆಯಲ್ಲ. ಇನ್ನು ಏನೋ ರಹಸ್ಯವಿರ ಬಹುದು. ಧ್ರುವ, ಪ್ರತಾಪ ಒಳ್ಳೆಯವರೇ ಅಲ್ಲ. ಇಲ್ಲಿ ಪ್ರತಾಪನ ಕೈವಾಡ ಇದೆ ಎಂದೇ ಅನ್ನಿಸುತ್ತದೆ. ಹೇಗೂ ಮಾಲಾಳಿಗೆ ಆರೋಗ್ಯವಂತ ಮಗು ಹುಟ್ಟಿದರೆ ಸಾಕು, ಧ್ರುವನಿಗೆ ಆ ಯೋಗವಿಲ್ಲ... ಅಂತ ಈ ಕಿಡ್ನಾಪಿನ ನಾಟಕವನ್ನಾಡಿರ ಬಹುದೇ?... ಹಾಗಾದರೆ, ಆ ರೇಪಿಸ್ಟ್ ಅವರ ಮನೆಯವರ ಪೈಕಿಯೇ ಇರಬಹುದು ಅಥವಾ ಯಾರಿಗಾದರೂ ಹಣ ಕೊಟ್ಟು ಈ ಕೆಲಸವನ್ನು ಮಾಡಿಸಿರಬಹುದು. ಇದನ್ನು ಪತ್ತೆ ಹಚ್ಚಿದರೆ ನಿಜ ಹೊರ ಬೀಳುತ್ತದೆ... ಆಗ ಸಮಸ್ಯೆಗೆ ಪರಿಹಾರ ಸಿಗುತ್ತದೆ. ತಪ್ಪಿತಸ್ಥರನ್ನು ಹಾಗೇ ಬಿಡುವುದು ಶುದ್ಧ ತಪ್ಪು. ಅವರಿಗೆ ಶಿಕ್ಷೆಯಾಗಲೇಬೇಕು. ನನ್ನನ್ನು ಎಲ್ಲರೂ ಸೇರಿ ಅಪರಾಧಿ ಎಂದು ಪೋಲೀಸರಿಗೆ ಒಪ್ಪಿಸಿ, ಅವಮಾನ ಮಾಡಿದ್ದರಲ್ಲವೇ? ಈಗ ಇವರುಗಳ ಸರದಿ. ಇವರುಗಳು ನಿಜವಾಗಿಯೂ ಅಪರಾಧಿಗಳೇ ಆಗಿದ್ದಲ್ಲಿ ಇವರುಗಳನ್ನು ಜೈಲಿಗೆ ಕಳಿಸಲೇಬೇಕು... ಆದರೆ ಅದಕ್ಕೆ ಮುಂಚೆ ಸಾಕ್ಷ್ಯಗಳನ್ನು ಸಂಗ್ರಹಿಸಬೇಕು.

ತಕ್ಷಣವೇ ವಸುಧಾಳಿಗೆ ಫೋನು ಮಾಡಿ ತನ್ನ ಅನುಮಾನವನ್ನು

ತಿಳಿಸಿದ. ಮಾಲಾ ಇದ್ದ ಊರು ಯಾವುದು ? ಆಫೀಸಿನ ಹೆಸರು. [illegible]ಗಳನ್ನು ಕೇಳಿಕೊಂಡ. "ನಾನು ಆ ಊರಿಗೆ ಹೋಗಿ ಕೆಲವು ವಿಷಯಗಳನ್ನು ತಿಳಿದುಕೊಂಡು ಬರ್ತೀನಿ, ಅಲ್ಲಿಯವರೆಗೂ ಈ ವಿಷಯವನ್ನು ತಿಳಿಸಬೇಡಿ" ಎಂದ.

ವಸುಧಾ ತನ್ನ ಚಿಕ್ಕಮ್ಮನ ವಿಳಾಸವನ್ನು ಕೊಟ್ಟು "ಅಲ್ಲಿಗೂ ಹೋಗಿ ಬನ್ನಿ" ಎಂದಳು.

೦ ೦ ೦

ಒಂದು ವಾರದ ನಂತರ ಭಾರ್ಗವ ಫೋನು ಮಾಡಿ. ವಸುಧಾಳಿಗೆ ಆಫೀಸಿಗೆ ಬರುವಂತೆ ಹೇಳಿದ. ಅವಳು ಆತುರಾತುರವಾಗಿ ಹೊರಟಾಗ ಮಾಲಾ ಕೇಳಿದಳು.

"ಅದೇನದು ಇದ್ದಕ್ಕಿದ್ದಂತೆ ಫೋನು ಬಂದ ಕೂಡಲೇ ಹೊರಟೆಯಲ್ಲ. ಅಮ್ಮನ ಮನೆಗಾ ? ಆಕಾಶ ಹುಶಾರಾಗಿದಾನೆ ತಾನೆ."

"ನಾನು ಭಾರ್ಗವನ ಆಫೀಸಿಗೆ ಹೋಗ್ತಿದೀನಿ. ಅವನು ಫೋನು ಮಾಡಿದ್ದ."

"ಈಗ ನಿನ್ನ ಹತ್ತಿರ ಏನಂತೆ ಅವನ ಸರಸ ?"

"ಮಾಲಾ... ಮೈಂಡ್ ಯುವರ್ ಲಾಂಗ್ವೇಜ್... ಅವನೂ ಅಂಥೋನಲ್ಲ. ನಾನೂ ಅಂಥೋಳಲ್ಲ. ನಿನಗೆ ಗೊತ್ತಿದೆ."

"ಸಾರಿ. ಸಾರಿ... ಏನಂತೆ ರಾಜಕಾರ್ಯ ?"

"ನಿಜ ಹೇಳಬೇಕೂಂದರೆ ನಿನ್ನ ವಿಷಯವೇ... ಬಂದ ಮೇಲೆ ಹೇಳ್ತೀನಿ."

"ನನ್ನ ವಿಷಯಾನ ನನ್ನ ಹತ್ತಿರವೇ ಆಡಬಹುದಲ್ಲ. ಅವನನ್ನು ಮನೆಗೇ ಬರಹೇಳು. ಧೈರ್ಯವಿದ್ದರೆ ನನ್ನೊಂದಿಗೆ ಆಡಲಿ."

"ಈಗಲೇ ಮಧೂಗೆ ತಿಳಿಯದಿರಲಿ ಅಂತ..."

"ಈಗಲೂ ಮಧೂಗೆ ಹೆದರುತ್ತಾನಾ ? ವಾರೆವ್ಹಾ ಭಾರ್ಗವ... ಇವನು ಶಿರಡಿ ಸಾಯಿಬಾಬನ ಭಕ್ತ... ಮನದಲ್ಲಿ ಅಳುಕು."

"ಗೊತ್ತಿಲ್ಲದೆ ಏನೇನೋ ಮಾತನಾಡಬೇಡ. ಮಾಲಾ. ಮಧು ಊಟಕ್ಕೆ ಎಷ್ಟು ಹೊತ್ತಿಗೆ ಬರ್ತಾರೋ ಏನೋ... ಇಲ್ಲದಿದ್ದರೆ ಭಾರ್ಗವನಿಗೆ ಮನೆಗೇ ಬನ್ನಿ ಅಂತ ಹೇಳ್ತಿದ್ದೆ."

"ನನಗ ಈ ಎರಡು ಪಿಳ್ಳೆಗಳ ಕಾಟವಿಲ್ಲದೇ ಇದ್ದಿದ್ದರೆ ನಾನೂ ಬರ್ತಿದ್ದೆ."

"ಹಾಗಾದರೆ ನೀನೇ ಹೋಗು. ನಾನು ಈ ಮಕ್ಕಳನ್ನು ನೋಡಿ ಕೊಂಡಿರುತ್ತೀನಿ. ಆದರೆ ಅವನ ಹತ್ತಿರ ಜಗಳ ಕಾಯಬಾರದು. ಅವನು ಕೇಳಿದ್ದಕ್ಕೆ ಸರಿಯಾಗಿ ಉತ್ತರವನ್ನು ಕೊಡಬೇಕು."

"ನಾನು ಜಗಳಗಂಟಿ; ನೀವು ಶಾಂತಿದೂತರು ನೀವೇ ಹೋಗಿಬನ್ನಿ. "ಕೈ ಮುಗಿದು ಅವಳು ವ್ಯಂಗ್ಯವಾಗಿ ನುಡಿದಾಗ, ವಸುಧಾ ಸುಮ್ಮನಾಗಿಬಿಟ್ಟಳು. ತಕ್ಷಣವೇ ಭಾರ್ಗವನಿಗೆ ಮತ್ತೆ ಫೋನು ಮಾಡಿ" ಮಧು ಇನ್ನೂ ಊಟಕ್ಕೆ ಬಂದಿಲ್ಲ. ಅವರು ಬಂದು ಹೋದ ಮೇಲೆ ನೀವೇ ಮನೆಗೆ ಬರಬಹುದು. ಮಾಲಾ ಅದನ್ನೇ ಹೇಳಿದಳು."

"ಸರಿ ಹಾಗೇ ಮಾಡ್ತೀನಿ" ಅಂತಂದ. ಮಾಲಾ ವಸುಧಾಳನ್ನು ತರಾಟೆಗೆ ತೆಗೆದುಕೊಂಡಳು.

"ನಾನು ಮೊದಲೇ ಕೆಟ್ಟವಳು. ಮತ್ತೆ ಮತ್ತೆ ಕೆಟ್ಟವಳನ್ನಾಗಿ ಮಾಡ್ತೀಯಲ್ಲ."

"ನಾನೂ ಸಹ ಕೆಟ್ಟವಳೇ. ನಿನ್ನ ಕೆಟ್ಟತನಕ್ಕೆ ಬೆಂಬಲ ಕೊಡ್ತೀನಲ್ಲ. ನಿನಗೆ ಸುಳ್ಳು ಹೇಳಿ, ಹೋಗಿದ್ದರೆ ಏನು ಮಾಡ್ತಿದ್ದೆ."

"ಅದು ಒಳ್ಳೆಯತನ, ಕೆಟ್ಟತನವಲ್ಲ. ವಸುಧಾ ಯೂ ಆರ್ ಟೂ ಗುಡ್. ನಾನು ಎಷ್ಟು ಸತಾಯಿಸಿದೀನಿ ಅಲ್ವಾ.. ನಾನು ಇನ್ನು ಮುಂದೆ ಹೀಗೆ ಮಾತನಾಡುಲ್ಲ" ಎನ್ನುತ್ತಾ ಅವಳ ಕತ್ತಿಗೆ ಜೋತುಬಿದ್ದಳು.

"ಸಾಕು, ಸಾಕು. ಯಾಕೆ ಈ ಮುದ್ದು ?"

"ಏನಿಲ್ಲ... ನನ್ನ ಮೇಲಿನ ಕೋಪಕ್ಕೆ ನನ್ನ ಮಗನನ್ನ ಶಿಕ್ಷಿಸಿದರೆ ?"

"ಹ್ಞಾಂ ಏನಂದೆ ? ನಾನು ಯಶೋದೆ. ದೇವಕಿಗಿಂತ ಒಳ್ಳೆಯವಳು."

"ಆ ವಿಶ್ವಾಸದಿಂದಲೇ ನನ್ನ ಮಗನ್ನ ನಿನಗೆ ಒಪ್ಪಿಸಿದೀನಿ. ನನ್ನ ಹತ್ತಿರವೇ ಇದ್ದಿದ್ದರೆ, ಆ ಧ್ರುವ ಖಂಡಿತಾ ಕಿತ್ತುಕೊಂಡು ಹೋಗಿರುತ್ತಿದ್ದ."

"ಕೇಸು ಹಾಕಿ, ನಿನ್ನ ಮಗನನ್ನ ನೀನೇ ಹಿಂದಕ್ಕೆ ವಾಪಸ್ಸು ಪಡೆಯಬಹುದಾಗಿತ್ತು."

"ಆಗ ನಿಜಾಂಶವೆಲ್ಲಾ ಹೊರಬಿದ್ದು, ಭಾಸ್ಕರನಿಗೆ ತೊಂದರೆಯಾಗುತ್ತಿತ್ತು. ನನ್ನಿಂದ ಭಾಸ್ಕರನಿಗೆ ತೊಂದರೆಯಾಗಬಾರದು..."

"ಭಾಸ್ಕರನನ್ನು ಈಗಲೂ ಅಷ್ಟೇ ಪ್ರೀತಿಸ್ತೀಯಾ ?"

"ಹೂಂ ಅಂತ ಕಾಣುತ್ತೆ... ಈ ಮಕ್ಕಳೂ ಭಾಸ್ಕರನವೇ ಆಗಿದ್ದರೆ, ಎಷ್ಟು ಚೆನ್ನಾಗಿರುತ್ತಿತ್ತು ಅಂತ ಎಷ್ಟೋಸಲ ಅನ್ನಿಸುತ್ತೆ" ವಸುಧಾ ನಕ್ಕಳು.

"ಆಗ ಭಾಸ್ಕರನಿಗೆ ಒಟ್ಟು ನಾಲ್ಕು ಮಕ್ಕಳು... ಅವನ ಹೆಂಡತಿ ಸ್ವಲ್ಪ ಪೆದ್ದು... ಇಲ್ಲದಿದ್ದರೆ ಅವನಿಗೆ ಡೈವೋರ್ಸ್ ಕೊಟ್ಟು ಹೋಗಿರುತ್ತಿದ್ದಳು."

"ಈ ಧ್ರುವನೂ ಪೆದ್ದನೇ. ನನ್ನಿಂದ ಅವನಿಗೆ ಮೋಸವಾಗ್ತಿದೆ ಅಂತ ಅನ್ನಿಸೋದೇ ಇಲ್ವಾ? ಡೈವೋರ್ಸ್ ಕೊಡದೆ, ನೀನೆ ನನ್ನ ಹೆಂಡತಿ, ನಿನ್ನ ಮಕ್ಕಳೇ ನನ್ನ ಮಕ್ಕಳು ಅಂತ ಸಾಯ್ತಾನಲ್ವ"

"ಅವನು ಪೆದ್ದನಲ್ಲ. ಪೆದ್ದು ಜಾಣ... ಪ್ರತಾಪನ ಎದುರು ಪೆದ್ದುತನವನ್ನು ನಟಿಸಿ, ಒಳಗೊಳಗೇ ಏನೇನೋ ಪ್ಲಾನ್ ಮಾಡಿಸುತ್ತಾನೆ ಅಂತ ನನ್ನ ಅನುಮಾನ."

"ಪ್ರತಾಪ. ಅವನೊಬ್ಬ ಹಲ್ಕಾ. ಅವನ ಜೊತೆ ಇರೋದ್ರಿಂದ ಈ ಧ್ರುವನೂ ಕಮ್ಮಿ ಏನಲ್ಲ. ಇವರಿಬ್ಬರನ್ನೂ ಮೀರಿಸಿದವನು ಆ ರಘು. ಅದಕ್ಕೇ ಅವನಿಗೆ ಸರಿಯಾಗಿ ಶಿಕ್ಷೆಯಾಯಿತು."

"ಅವನನ್ನು ನೋಡಿದರೆ ನನಗೂ ಹಾಗೆ ಅನ್ನಿಸುತ್ತೆ. ಈ ಮುಂಚೆ ಅವನನ್ನು ಈ ಊರಿನಲ್ಲಿಯೇ ನೋಡಿದೀನಿ. ಆದರೆ ಸರಿಯಾಗಿ ನೆನಪಿಲ್ಲ. ಅವನು ನಿನ್ನ ಕಲೀಗ್ ಆಗಿದ್ದಾಗ, ಅವನು ತಾನು ಧ್ರುವನ ತಮ್ಮ ಅಂತ ಹೇಳಿರಲಿಲ್ವಾ?"

"ಇಲ್ಲ. ನೀನ್ಯಾರು ಅಂತ ನಾನೂ ಕೇಳಿರಲೂ ಇಲ್ಲ. ಅಲ್ಲದೆ ನಾನು ಹೆಸರನ್ನು ಬದಲಾಯಿಸಿಕೊಂಡಿದ್ದೆ. ಅವನು ಧ್ರುವನ ಹೆಸರನ್ನು ಹೇಳಿದರೂ ನಾನು ರಿಯಾಕ್ಟ್ ಮಾಡುವ ಹಾಗಿರಲಿಲ್ಲ."

"ಅಲ್ಲ. ಒಬ್ಬ ದೊಡ್ಡ ಬಿಸಿನೆಸ್ ಮನೆಯ ಹುಡುಗ, ಆ ಸಣ್ಣ ಆಫೀಸಿಗೆ ಕೆಲಸಕ್ಕೆ ಯಾಕೆ ಸೇರಿಕೊಂಡಿದ್ದ ಅಂತ ಅನುಮಾನ ಬರುತ್ತೆ ಅಲ್ವಾ?"

"ಎಲ್ಲೋ ಮನೆಯಿಂದ ಒದ್ದು ಓಡಿಸಿದ್ದರು ಅಂತ ಕಾಣುತ್ತೆ. ಆದರೆ ಇವನಿಗಿಂತ ಧ್ರುವ ಎಷ್ಟೋ ವಾಸಿ. ಒಂದು ದಿನವೂ ನನ್ನ ಮೈ ಮುಟ್ಟಲು ಪ್ರಯತ್ನಿಸಿರಲಿಲ್ಲ. ಇವನು ಮಾತು ಮಾತಿಗೆ ಕೈ ಹಿಡಿಯುವುದು, ಮೈ ಮೇಲೆ ಬೀಳುವುದು... ಒಳ್ಳೇ ಬೀದಿ ಪೋಲಿಯ ತರಹ ಆಡ್ತಿದ್ದ..."

"ಅವನು ಧ್ರುವನ ತಮ್ಮ ಅಂತ ತಿಳಿದಾಗ ನಿನಗೆ ಏನೂ ಅನ್ನಿಸಲಿಲ್ವಾ?"

"ಇಲ್ಲ. ಏನೂ ಅನ್ನಿಸಲಿಲ್ಲ. ಒಳ್ಳೇ ಪತ್ತೇದಾರ ಪುರುಷೋತ್ತಮನ ತರಹ ತನಿಖೆ ಮಾಡ್ತಿದೀಯ. ಪ್ರಶ್ನೆ ಮೇಲೆ ಪ್ರಶ್ನೆ... ಏನು ಇದರ ಅರ್ಥ?"

"ಅವನು ನಿನ್ನನ್ನು ಮದುವೆಯಾಗ್ತೀನಿ ಅಂತ ಪ್ರಪೋಸ್ ಮಾಡಿದ್ದ ಅಂತಂದಿದ್ದೆ."

"ಮದುವೆ! ಅವನ ಜೊತೆ! ಮೈ ಫೂಟ್! ಅವನ ಶ್ರೀಮಂತಿಕೆಯನ್ನೆಲ್ಲ ನನ್ನ ಮೇಲೆ ಸುರಿದರೂ ನನಗೆ ಅವನ ಸಹವಾಸಬೇಡ" ಕೈ ಮುಗಿದು ನಕ್ಕಳು.

○ ○ ○

ಭಾರ್ಗವ ಅನುಮಾನಿಸುತ್ತಲೇ ಒಳಗೆ ಅಡಿಯಿಟ್ಟ. "ಮಧು ಇದಾನೋ ಹೊರಟು ಹೋದನೋ" ನಗುತ್ತಾ ಕೇಳಿದ.

"ಮಧುಗೆ ಯಾಕೆ ಹೆದರಬೇಕು? ಇದು ನಿನ್ನ ಮನೆಯೂ ಆಗಿತ್ತು ಅಲ್ವಾ?" ಮಾಲಾ ಕೇಳಿದಾಗ ಮತ್ತೆ ನಕ್ಕ.

"ಹೆದರಿಕೆ ಅಲ್ಲ. ದುರಭಿಮಾನ. ಅವನು ಆಡಿದ್ದ ಮಾತುಗಳನ್ನೆಲ್ಲಾ ನೆನೆಸಿಕೊಂಡರೆ, ಜೀವಮಾನದಲ್ಲಿ ಎಂದೂ ಇಲ್ಲಿಗೆ ಹೆಜ್ಜೆ ಇಡಬಾರದು.. ಆದರೆ ನಿನಗೋಸ್ಕರ, ಮನಸ್ಸನ್ನು ಬದಲಾಯಿಸಿಕೊಂಡು ಬಂದಿದೀನಿ."

"ಥ್ಯಾಂಕ್ ಯೂ ಭಾರ್ಗವ... ಅಂತೂ ನನ್ನನ್ನು ನೀನು ಈ ಜನ್ಮದಲ್ಲಿ ಮರೆಯೋಕೆ ಆಗುಲ್ಲ ಅಂತಾಯ್ತು."

"ನಿನ್ನನ್ನ ಮರೆಯೋಕೆ ಆಗುತ್ತಾ? ನನ್ನನ್ನು ಎಷ್ಟು ಗೋಳು ಹೋಯ್ದು ಕೊಂಡಿದೀಯ ಗೊತ್ತಾ? ಮಧು ನಿನ್ನ ಕೈಗೆ ಸಿಕ್ಕುತ್ತಲೇ ಇರಲಿಲ್ಲ."

"ಅವನು ಜಗಳ ಆಡಿ ರೇಗಿಸುತ್ತಿದ್ದ. ಜಡೆ ಎಳೆದು ನೋವು ಮಾಡುತ್ತಿದ್ದ."

"ಅಂದ್ಹಾಗೆ ನಿನ್ನ ಜಡೆ ಎಲ್ಲಿ? ಬಾಬ್ ಮಾಡಿಸಿಕೊಂಡೆಯಲ್ಲ ಯಾಕೆ?"

"ಅದು ಒಂದು ಕತೆ, ನನ್ನ ಇನ್ನೊಂದು ಅವತಾರ. ಬಾಬ್ ಮಾಡಿಸಿಕೊಂಡು, ಮಾಲಾ ಅನ್ನೋ ಹೆಸರನ್ನು 'ಜ್ವಾಲಾ' ಅಂತ ಬದಲಾಯಿಸಿಕೊಂಡು ಅಜ್ಞಾತವಾಸದಲ್ಲಿದ್ದೆ. ಆದರೂ ನನ್ನ ಗ್ರಹಚಾರ ಕಳೆದಿಲ್ಲ. ಮತ್ತೆ ಈ ಗ್ರಹಗಳ ಕೈಗೆ ಸಿಕ್ಕಿಬಿದ್ದೆ."

"ಇವರುಗಳಿಂದ ನಿನಗೆ ಬಿಡುಗಡೆ ಬೇಡ್ವಾ?"

"ಬೇಕು. ಧ್ರುವ ಅವನಾಗಿಯೇ ಡೈವೋರ್ಸ್ ಕೊಡೋಲ್ಲ. ಅಲ್ಲದೆ ಈ ಕೇಸು ಕೋರ್ಟು ಅಂತ ಓಡಾಡುಕ್ಕೆ ಮಧೂನೂ ರೆಡಿ ಇಲ್ಲ. ಅಲ್ಲದೇ ಎಲ್ಲರಿಗೂ ಮನೆಯ ಮರ್ಯಾದೆ ಬಯಲಿಗೆ ಬರುತ್ತದೆ ಅನ್ನೋ ಭಯ."

"ನಿನಗೂ ಆ ಭಯ ಇದೆಯಾ ಮಾಲಾ..."

"ಭಯ ಏನಿಲ್ಲ. ಏನೋ ಒಂದು ತರಹ ಅಸಹಾಯಕತೆ. ಮೊದಲ್ನಿಂದ ನಾನು ಕಳೆದುಕೊಂಡಿದ್ದೇ ಹೆಚ್ಚು. ಮಮ್ಮಿ, ಡ್ಯಾಡೀ, ಕಾವೇರಮ್ಮ, ಭಟ್ಟರು... [illegible]ರಾಗಿ ನನ್ನನ್ನು ಅನಾಥೆಯನ್ನಾಗಿ ಮಾಡಿಬಿಟ್ಟರು. ನೀನು ಆದರ್ಶದ

ಕುದುರೆಯನ್ನು ಹತ್ತಿ ಓಡಿ ಹೋದೆ. ನಾನು ನಾನಾಗಿಯೇ ಈ ಪಂಜರದಲ್ಲಿ ಸಿಕ್ಕಿಬಿದ್ದೆ. ಧ್ರುವನನ್ನು ಬಿಟ್ಟುಕೊಡಲು ಮಧು ಸಿದ್ಧನಿರಲಿಲ್ಲ. ನನ್ನನ್ನು ಬಿಟ್ಟು ಬಿಡಲು ಧ್ರುವ ಒಪ್ಪಲಿಲ್ಲ. ಇವರೆಲ್ಲ ಆ ಪ್ರತಾಪನ ಕೈಗೊಂಬೆಗಳು. ಪ್ರತಾಪನನ್ನೇ ಕೊಂದು ಹಾಕಿ ಬಿಡೋಣ ಅನ್ನುವಷ್ಟು ಕೋಪ ಬರುತ್ತೆ. ಆದರೆ ನನಗೆ ಜೈಲು ಅಂದರೆ ಭಯ."

"ಅವರೆಲ್ಲಾ ತಪ್ಪು ಮಾಡಿ ಹಾಯಾಗಿದಾರೆ. ಅವರುಗಳ್ನು ಹಾಗೇ ಬಿಟ್ಟುಬಿಡಬೇಕು ಅಂತ ನಿನಗನ್ನಿಸುತ್ತಾ?"

"ಇಲ್ಲ. ಆದರೆ ನನಗೆ ಒಬ್ಬನೇ ಒಬ್ಬ ಸಹಾಯ ಮಾಡುವ ವ್ಯಕ್ತಿ ಸಿಕ್ಕರೂ ಸಾಕು. ನಾನು ಅವರ ಮೇಲೆ ಕೇಸು ಹಾಕ್ತೀನಿ. ಆದರೆ ಎವಿಡೆನ್ಸ್‌ಗಳು ಬೇಕಲ್ಲ."

"ಎವಿಡೆನ್ಸ್ ಸಿಕ್ಕೇ ಸಿಗುತ್ತೆ. ನೀನು ಕಿಡ್ನಾಪ್ ಆದ ದಿನದವರೆಗೆ, ಯಾರ್‍ಯಾರನ್ನು ಭೇಟಿಯಾದೆ. ಎಲ್ಲೆಲ್ಲಿ ಹೋಗಿದ್ದೆ. ಏನೇನು ನಡೆಯಿತು ಅಂತ ನೆನಪಿಗೆ ತಂದುಕೋ. ಒಂದಲ್ಲ ಒಂದು ಕ್ಲೂ ಸಿಗಬಹುದು.

"ನಾನು ವಸುಧಾಳ ಚಿಕ್ಕಮ್ಮನ ಮನೆಯಲ್ಲಿದ್ದೆ. ಅಲ್ಲೇ ನನಗೆ ಆಕಾಶ ಹುಟ್ಟಿದ್ದು..." ಇದ್ದಕ್ಕಿದ್ದಂತೆ ಮಾತು ನಿಲ್ಲಿಸಿ ಅವನ ಕಡೆ ನೋಡಿದಳು. ಭಾರ್ಗವ ತನಗೆ ಕೇಳಿಸಲಿಲ್ಲವೆಂಬಂತೆ ಸುಮ್ಮನಿದ್ದ. ವಸುಧಾಳ ಕಡೆ ನೋಡಿದಳು. ಅವಳು ತಲೆ ತಗ್ಗಿಸಿದಳು.

"ಸಾರಿ ವಸುಧಾ... ಬಾಯಿ ತಪ್ಪಿ ಹೇಳಿಬಿಟ್ಟೆ."

"ಪರವಾಗಿಲ್ಲ ಬಿಡು... ನಿಜವಾದ ವಿಷಯಾನೇ ತಾನೆ..."

"ನಾನು ಅಲ್ಲಿಯ ಸಣ್ಣ ಆಫೀಸೊಂದರಲ್ಲಿ ಕೆಲಸಕ್ಕೆ ಸೇರಿಕೊಂಡಿದ್ದೆ ಭಾರ್ಗವ. ರಘು ನನ್ನ ಕಲೀಗ್ ಆಗಿದ್ದ. ವಿಪರೀತ ಜೆಲ್ಲು ಜೆಲ್ಲು. ನನಗೆ ಅವನ ಸ್ನೇಹ ಇಷ್ಟವಾಗುತ್ತಿರಲಿಲ್ಲ. ದೂರ ದೂರವೇ ಇಟ್ಟಿದ್ದೆ. ಒಂದೆರಡು ಬಾರಿ ನಾನು ಇದ್ದ ಮನೆಗೂ ಬಂದಿದ್ದ. ಏನಾದರೂ ನೆವ ಮಾಡಿಕೊಂಡು. ನನ್ನೊಡನೆ ಮಾತನಾಡಲು ಹಲ್ಲು ಕಿರಿದುಕೊಂಡು ಬರುತ್ತಿದ್ದ."

"ಏನು ಮಾತನ್ನಾಡಲು ಹವಣಿಸುತ್ತಿದ್ದ?"

"ಸುಮ್ಮನೇ ನನ್ನನ್ನು ಹೊಗಳುವುದು. ನನ್ನ ಡ್ರೆಸ್ ಬಗ್ಗೆ ಮೇಕಪ್ ಬಗ್ಗೆ ಕಾಮೆಂಟ್ಸ್ ಮಾಡುವುದು. ಸಜೆಷನ್ ಕೊಡುವುದು... ಹೀಗೇ... ಯಾಕೆ?"

"ಎಂದಾದ್ರೂ ಜಗಳ ಆಡಿದ್ರಾ?"

"ಜಗಳ ಆಡಿರಲಿಲ್ಲ. ನಾನು ಅವನನ್ನು ಇಗ್ನೋರ್ ಮಾಡ್ತಿದ್ದೆ. ಆದರೂ

ಅವನಿಗೆ ನಾಚಿಕೇನೇ ಇರಲಿಲ್ಲ."

"ತಾನು ಧ್ರುವನ ತಮ್ಮ ಅಂತ ಎಂದಾದ್ರೂ ಹೇಳಿಕೊಂಡಿದ್ನಾ? ನೀನು ಮಾಲಾ ಅಂತ ಅವನಿಗೆ ಗೊತ್ತಿತ್ತಾ?"

"ಏನೋ ನಂಗೊತ್ತಿಲ್ಲ."

"ಹ್ಞಾಂ. ನನಗೀಗ ನೆನಪಿಗೆ ಬಂತು... ಇದ್ದಕ್ಕಿದ್ದಂತೆ ವಸುಧಾ ನುಡಿದಾಗ ಇಬ್ಬರೂ ಬೆಚ್ಚಿ ಅವಳ ಕಡೆ ನೋಡಿದರು.

"ನಮ್ಮ ಮನೆ ಹತ್ತಿರ ಒಂದು ರೂಮು ಇತ್ತು. ಅಲ್ಲಿ ಇವನು ನಾಲ್ಕಾರು ಹುಡುಗರ ಜೊತೆ ವಾಸವಾಗಿದ್ದ. ಅಲ್ಲೇ ಹತ್ತಿರದಲ್ಲಿ ಅಂಜಲಿ ಎಂಬ ಹುಡುಗಿ ನೇಣು ಹಾಕಿಕೊಂಡು ಸತ್ತು ಹೋದಳು. ಅವಳನ್ನು ಇವರುಗಳು ರೇಪ್ ಮಾಡಿದರು ಎಂಬ ಆಪಾದನೆ ಮೇಲೆ ಪೋಲೀಸ್ ಅರೆಸ್ಟ್ ಮಾಡಿದರು. ಆಮೇಲೇನಾಯ್ತು ಅಂತ ನನಗೆ ತಿಳಿಯದು."

"ರೇಪಾ? ಈ ಕುಂಟ ರಘೂನಾ?"

"ಇವನಿಗೆ ಕುಂಟಾಪದ್ದು ಈಚೆಗೆ ತಾನೇ..."

"ಪ್ರತಾಪನಾಗಲೀ, ಧ್ರುವನಾಗಲೀ ಎಂದೂ ರಘು ಬಗ್ಗೆ ಹೇಳಿರಲಿಲ್ಲ. ಯಾವ ಜೈಲಿನಲ್ಲಿದ್ದನೋ... ಯಾರಿಗೆ ಗೊತ್ತು?" ಭಾರ್ಗವ ನುಡಿದ.

"ಈ ವಿಷಯ ಸುಮಿತ್ರಾ ದೇವಿಗೆ ಗೊತ್ತಿರಲಿಲ್ಲವೋ ಅಥವಾ ಸುಳ್ಳು ಹೇಳಿದರೋ ಧ್ರುವನ ತಮ್ಮ ಲಂಡನ್‌ನಲ್ಲಿ ಓದುತ್ತಿದ್ದಾನೆ ಅಂತ ಹೇಳಿದ್ದ ನೆನಪು" ವಸುಧಾ ಎಂದಳು.

"ನಿಮ್ಮ ಮದುವೆಗೆ ಅವನು ಬಂದಿದ್ನಾ?"

"ಇಲ್ಲ ಬಂದಿರಲಿಲ್ಲ. ಅಲ್ಲದೆ ನನ್ನ ಮದುವೆ ನಡೆದದ್ದೇ ಒಂದು ವಿಚಿತ್ರ ಸನ್ನಿವೇಶದಲ್ಲಿ. ಅವನನ್ನು ನಾನು ಎಂದೂ ಪತಿ ಎಂದು ಒಪ್ಪಿಕೊಳ್ಳಲಿಲ್ಲ... ಆದರೆ ಅವನು ಮಾತ್ರ ಪತಿಯ ಸ್ಥಾನವನ್ನು ಬಿಟ್ಟು ಬಿಡಲು ಸಿದ್ಧನಿಲ್ಲ."

"ಮುಸುಕಿನೊಳಗಿಂದ ಗುದ್ದು" ಅನ್ನೋ ಹಾಗೆ ಇದ್ರೆ ಏನೂ ಪ್ರಯೋಜನವಿಲ್ಲ. ನೀನು ಈಗಲೂ ಅವರುಗಳ ಮೇಲೆ ಕೇಸ್ ಹಾಕಿಸಿ ಗೆಲ್ಲಬಹುದು. ಅವರುಗಳನ್ನೆಲ್ಲಾ ತಪ್ಪಿತಸ್ಥರು ಅಂತ ಸಾಬೀತು ಪಡಿಸಬೇಕು. ಮೊದಲೇ ಹಣವಂತರು. ಚಾಣಾಕ್ಷರು. ಎಲ್ಲಾ ಪ್ಲಾನ್‌ಗಳನ್ನು ಸ್ಕೀಂಗಳನ್ನೂ ಸಿದ್ಧವಾಗಿಟ್ಟುಕೊಂಡಿರುತ್ತಾರೆ, ಡೈರೆಕ್ಟಾಗಿ ಲಾಯರ್ ನೋಟೀಸನ್ನು ಕಳಿಸೋಕೆ ಆಗುಲ್ಲ..."

"ನನಗೆ ಡೈವೋರ್ಸ್ ಬೇಕು, ಈ ಮಕ್ಕಳೂ ನನಗೆ ಬೇಕು ಅಂತ ನೊಟೀಸ್ ಕೊಟ್ಟರೆ, ನಾನೇ ಗೆಲ್ಲಬಹುದು ಅಲ್ವಾ?"

"ಗೆಲ್ಲದೆ ಏನು? ಆದರೆ ಅವನ ಗುಟ್ಟುಗಳು ಹೊರಬೀಳುತ್ತವೆ ಅಲ್ವಾ! ಅದಕ್ಕಾಗಿ ಅವನು ನಿನ್ನನ್ನೇ ಕೊಲ್ಲಿಸಬಹುದು."

"ಕೊಂದರೇ, ಪೊಲೀಸ್ನೋರು ಸುಮ್ಮನೆ ಬಿಡ್ತಾರಾ? ಹಿಡ್ಕೊಂಡು ಹೋಗ್ತಾರೆ."

"ಎಲ್ಲರಿಗೂ ಕಾಣುವ ಹಾಗೆ ಕೊಲ್ಲುತ್ತಾನಾ? ಆ ಪ್ರತಾಪ ಮಹಾ ಪ್ರಚಂಡ. ಕಿಲ್ಲರ್ಸ್‌ನ ಗೊತ್ತು ಮಾಡಿ ಕೊಲ್ಲಿಸ್ತಾನೆ. ಈಗಲೂ ನನಗೆ ಅವನ ಮೇಲೇ ಅನುಮಾನ. ಅವನೇ ನಿನ್ನನ್ನು ಕಿಡ್ನಾಪ್ ಮಾಡಿಸಿರಬಹುದು ಅಂತ..."

"ಅದ್ಹೇಗೆ ಅನುಮಾನ ಪಡ್ತೀಯ? ನಾನು ಯಾವುದೋ ಫ್ಲಾಟ್‌ನಲ್ಲಿ ಬಿದ್ದಿದ್ದೆನಂತೆ... ನೆನೆಸಿಕೊಂಡರೇ ಅಸಹ್ಯವಾಗುತ್ತೆ..."

"ಹಾಗಾದ್ರೆ ಆ ರೇಪಿಸ್ಟ್, ಕಿಡ್ನಾಪರ್ ಬೇರೆ ಬೇರೆ ಅಲ್ಲ ಅಂತೀಯಾ..."

"ನನಗೆ ಅನುಮಾನ ಅಷ್ಟೇ. ಪ್ರತಾಪನ ಮಾತಿಗೆ ಒಪ್ಪಿ ಈ ರಘು ನಿನ್ನನ್ನು ಕಿಡ್ನಾಪ್ ಮಾಡಿ ನಿನ್ನ ಮೇಲೆ ಅತ್ಯಾಚಾರ ಮಾಡಿರಬಹುದು ಅಂತ."

"ಆ ಧೈರ್ಯ ಅವನಿಗೆಲ್ಲಿದೆ? ಅವನು ಬೊಗಳುವ ನಾಯಿ."

"ಒಮ್ಮೊಮ್ಮೆ ಬೊಗಳುವ ನಾಯಿಯೂ ಕಚ್ಚುತ್ತೆ. ಆ ಜಾತಿಗೆ ಸೇರಿದವನು. ಅವನ ಚರಿತ್ರೆ ಏನೇನೂ ಚೆನ್ನಾಗಿಲ್ಲದಿರಬಹುದು."

"ಅವನಿಗೂ ಪ್ರತಾಪನಿಗೂ ಅಷ್ಟಕ್ಕಷ್ಟೇ... ಇವನಿಗೆ ಅವನನ್ನು ಕಂಡರೆ ಆಗುಲ್ಲ."

"ಇಂಥ ಸಮಯದಲ್ಲಿ ಅಂಥವರೆಲ್ಲಾ ಒಂದಾಗ್ತಾರೆ ಮಾಲಾ... ನೀನು ತುಂಬಾ ಮುಗ್ಧೆ. ನಿನಗೆ ತಿಳುವಳಿಕೆ ಸಾಲದು."

"ಅಂಥವರ ಕೈಯೊಳಗೆ ಸಿಕ್ಕಿ ಬೀಳುವುದಕ್ಕೆ ನೀವುಗಳೇ ಕಾರಣ."

"ನಾನಲ್ಲ. ನನ್ನ ನಿರ್ಧಾರ. ನಾನು ಜೈಲಿನಲ್ಲಿ ಇದ್ದರೂ ಪರವಾಗಿಲ್ಲ. ಒಂದಲ್ಲ ಒಂದು ದಿನ ನಾನು ಹೊರಕ್ಕೆ ಬರುತ್ತಿದ್ದೆ. ಅಷ್ಟೂ ತಿಳಿಯಬೇಡವಾ ನಿನಗೆ?" ರೇಗಿದ.

"ಈಗ ನನ್ನನ್ನು ಬೈಯುವ ಹಕ್ಕು ನಿನಗಿಲ್ಲವೇ ಇಲ್ಲ."

"ನನಗೆ ಯಾವ ಹಕ್ಕೂ ಇಲ್ಲ. ನನಗೆ ಗೊತ್ತು. ಆದರೆ ಅವರುಗಳು

ಅಪರಾಧವನ್ನು ಮಾಡಿದ್ದಾರೆ. ಅವರಿಗೆ ಶಿಕ್ಷೆ ಕೊಡಿಸುವುದು, ನಾಗರೀಕನಾದ ನನ್ನ ಹಕ್ಕು. ಈಗ ನಾವುಗಳು ಒಂದಾಗಿ, ಅವರ ಅಪರಾಧಗಳನ್ನು ಅವರ ಬಾಯಿಂದಲೇ ಹೊರಡಿಸಬೇಕು."

"ಅದೆಲ್ಲಾ ಹೇಗೆ ಸಾಧ್ಯ? ಅವರ ಗುಟ್ಟುಗಳನ್ನು ಅವರೇ ಬಿಟ್ಟು ಕೊಡ್ತಾರಾ ?"

"ಪ್ರೆಷರ್ ಹಾಕೋಣ. ಪ್ರಯತ್ನ ಪಡುವುದರಲ್ಲಿ ಏನೂ ನಷ್ಟವಿಲ್ಲ."

"ಸರಿಯಪ್ಪಾ. ಅದೇನು ಮಾಡ್ತೀಯೋ ಮಾಡು. ನಾನೇನು ಮಾಡಬೇಕು ಅಂತ ಹೇಳು."

"ನೀನು ನಿನ್ನ ಮಕ್ಕಳೊಂದಿಗೆ ಧ್ರುವನ ಮನೆಗೆ ಹೋಗು..." ಮಾಲಾ ಗೊಳ್ಳನೆ ಹಕ್ಕು ಬಿಟ್ಟಳು. "ನಾನು ಅಲ್ಲಿಗೆ ಹೋದರೆ ಅವರೆಲ್ಲ ಸತ್ಯವಂತರಾಗಿ ಬಿಡ್ತಾರಾ ?"

"ತಡೀ... ಅದು ಪ್ರಾರಂಭ. ಆಮೇಲೆ ಏನು ಮಾಡಬೇಕೂಂತ ನಾನು ಹೇಳ್ತೀನಿ."

"ಇಲ್ಲಪ್ಪಾ. ನಾನು ಅಲ್ಲಿಗ ಹೋಗುಲ್ಲ. ಅಲ್ಲಿಂದ ತಪ್ಪಿಸಿಕೊಂಡು ಬರೋಕೇ ಆಗದಿದ್ದರೆ..."

"ಆ ಕೆಲಸ ನನಗಿರಲಿ. ಅಲ್ಲಿಂದ ಬರುವ ಮಾರ್ಗವನ್ನು ನಾನು ತಿಳಿಸ್ತೀನಿ."

"ಮತ್ತೆ ಮೋಸ ಮಾಡುಲ್ಲ ತಾನೇ ?"

"ನಾನೆಂದೂ ಮೋಸಗಾರನಾಗಿರಲಿಲ್ಲ ಮಾಲಾ... ನಿನಗೆ ನನ್ನ ಮೇಲೆ ನಂಬಿಕೆ ಇಲ್ಲದಿದ್ದರೆ ಬೇಡ ಬಿಡು. ಈ ಕೆಲಸವನ್ನು ಭಾಸ್ಕರ ಬೇಕಾದರೂ ಮಾಡಬಹುದು. ನಾನು ಅವರಿಗೆ ವಹಿಸಿಕೊಡ್ತೇನೆ."

"ಭಾಸ್ಕರ ನಿನಗೆ ಗೊತ್ತಾ ?"

"ಗೊತ್ತಿಲ್ಲ ಪ ಚಯ ಮಾಡಿಕೊಂಡರಾಯ್ತು. ನಿನಗೆ ಅವರ ಮೇಲೆ ವಿಶ್ವಾಸ ಅಂತ ಿಯಿತು..." ಮಾಲಾ ಓರೆಗಣ್ಣಿನಿಂದ ವಸುಧಾಳ ಕಡೆ ನೋಡಿದಳು.

"ಬೇಡ. ಭಾಸ್ಕರನನ್ನು ಈ ವಿಷಯದಲ್ಲಿ ಎಳೆಯುವುದು ಬೇಡ. ಅವರಿಗೆ ಅವರದೇ ಆದ ಸಂಸಾರವಿದೆ. ಆಮೇಲೆ ಧ್ರುವ ಅವರನ್ನು ಬಿಡುವುದಿಲ್ಲ. ನಿನಗಾದರೆ ಯಾವ ಬೈಂಡಿಂಗ್ ಇಲ್ಲ. ನೀನೇ ಸರಿ."

"ನೀನು ಆದಷ್ಟು ಬೇಗ ಬಾಂಬೆಗೆ ಹೋಗು. ಒಂದೆರಡು ವಾರಗಳ ಒಳಗೆ

ನಾನು ಅಲ್ಲಿಗೆ ಬಂದು, ನಿನ್ನನ್ನು ನನ್ನ ಚಿಕ್ಕಮ್ಮನ ಮನೆಗೆ ಕರೆದುಕೊಂಡು ಹೋಗ್ತೀನಿ" ಎನ್ನುತ್ತಾ ತನ್ನ ಪ್ಲಾನನ್ನು ವಿವರಿಸಿದ. ನೀನು ವಸುಧಾಳಿಗೆ ಫೋನು ಮಾಡಿದರೆ ಉಳಿದ ವಿಷಯಗಳು ತಿಳಿಯುತ್ತವೆ.

ಮಾಲಾ ಗಂಭೀರವಾದಳು "ನನಗೇನೋ ಇದು ಸಕ್ಸಸ್ ಆಗುತ್ತೆ ಅಂತ ಅನ್ನಿಸುತ್ತಿಲ್ಲ"

"ನೀನು ಈಗಲೇ ಅಪಶಕುನವನ್ನು ನುಡಿಯಬೇಡ" ವಸುಧಾ ಗದರಿಸಿದಳು.

"ಶಿರಡಿ ಸಾಯಿಬಾಬಾರ ಆಶೀರ್ವಾದವಿದ್ದರೆ ಎಲ್ಲಾ ಸರಿ ಹೋಗುತ್ತದೆ. ಅವರನ್ನು ನಂಬು ನಿನ್ನ ಕಾರ್ಯದಲ್ಲಿ ಸಫಲವಾಗುತ್ತದೆ."

"ನನ್ನ ಕಾರ್ಯವನ್ನು ಮಾಡಿಕೊಡುತ್ತಿರುವವನು ನೀನು. ನಿನ್ನನ್ನು ಜಾಸ್ತಿ ನಂಬ್ತೀನಿ. ಬಾಬಾರ ದರ್ಶನ, ಆಶೀರ್ವಾದ ಅದನ್ನೆಲ್ಲಾ ನನ್ನ ತಲೆಗೆ ತುಂಬಬೇಡ."

"ಬಿಡು. ನಿನ್ನ ಪರವಾಗಿ ನಾನೇ ಕ್ಷಮೆಯನ್ನು ಕೇಳಿ, ಆಶೀರ್ವಾದವನ್ನು ಪಡೆಯುತ್ತೇನೆ. ನಾನಿನ್ನು ಬರ್ತೀನಿ. ಆಶ್ರಮಕ್ಕೆ ಹೋಗಬೇಕು ಅಂತ ಹೇಳಿ ಹೊರಟ. ವಸುಧಾ ಅವನಿಗೆ ಕಾಫಿ ತಿಂಡಿಯನ್ನು ಕೊಟ್ಟಳು. ಮಾಲಾ ಆಲೋಚನೆಯಲ್ಲೇ ಮುಳುಗಿದ್ದಳು.

○ ○ ○

ಮಕ್ಕಳಿಗೆ ಮೂರು ತಿಂಗಳು ತುಂಬುವುದರೊಳಗೆ ನಾಮಕರಣ ಶಾಸ್ತ್ರವನ್ನು ಮಾಡಿ ನೆಂಟರಿಷ್ಟರನ್ನೆಲ್ಲಾ ಕರೆಯಬೇಕೆಂದುಕೊಂಡಳು ಸುಮಿತ್ರಾ ದೇವಿ. ಅದೇ ವಿಷಯವಾಗಿ ವಸುಧಾಳೊಡನೆ ಮಾತನಾಡಿದಳು.

"ಎಲ್ಲಾ ಇಲ್ಲೇ ಬಂದು ಬಿಡಿ" ಎಂದು ಸಂತೋಷದಿಂದ ಆಮಂತ್ರಣ ವನ್ನಿತ್ತಳು. ವಸುಧಾ, ಮಾಲಾ ಇಬ್ಬರೂ ಹೊರಡುವ ತಯಾರಿ ನಡೆಸಿದಾಗ, ಮಧು ಹುಬ್ಬೇರಿಸಿದ.

"ಮಾಲಾ ಒಪ್ಪಿಕೊಂಡು ಹೊರಟಿರುವುದನ್ನು ನನ್ನಿಂದ ನಂಬೋಕೇ ಆಗ್ತಿಲ್ಲ. ನಿನಗೆ ಅಲ್ಲಿ ಸರಿ ಹೋಗುಲ್ಲ. ನೀನು ಹೋಗಬೇಡ" ಎಂದ ಮಾಲಾಳ ಕಡೆ ತಿರುಗಿ.

"ಹಾಗಾದ್ರೆ ಸದಾ ನಿನ್ನ ಮನೇಲೇ ಬಿದ್ದಿರಬೇಕಾ ?"

"ಹಾಗೆಲ್ಲಿ ಅಂದೆ ನಾನು! ಮನಸೊಡನೆ ನೀನು ಬಲವಂತವಾಗಿ

ಬಾಳಬೇಕಾಗಿಲ್ಲ. ಈ ಮಕ್ಕಳನ್ನು ಅವನ ವಶಕ್ಕೆ ಒಪ್ಪಿಸು. ನೀನೇನೂ ಅಲ್ಲಿ ಇರಬೇಕಾಗಿಲ್ಲ."

"ಈಗ ಈ ಮಕ್ಕಳ ಮೇಲೆ ಅಟ್ಯಾಚ್‌ಮೆಂಟ್ ಬೆಳೆದುಬಿಟ್ಟಿದೆ. ಮಕ್ಕಳನ್ನು ದೂರ ಮಾಡಿ ನಾನು ಇರಲಾರೆ."

"ಹಾಗಾದ್ರೆ ಕೊಡಬೇಡ. ಕೊಡುಲ್ಲ ಅಂತ ಹೇಳಿಬಿಡು."

"ಸುಲಭವಾಗಿ ಅವರು ಒಪ್ಪಿಕೊಳ್ತಾರಾ ?" ಗಲಾಟೆ ಮಾಡ್ತಾರೆ.

"ಲಾಯರ್ ನೋಟಿಸ್ ಕಳಿಸಿ, ಪೊಲೀಸ್ ಅರೆಸ್ಟ್ ಮಾಡಿಸ್ತೀನಿ"

"ಅಷ್ಟೆಲ್ಲಾ ಮಾಡಿದರೆ, ಮನೆಯ ವಿಷಯವೆಲ್ಲಾ ಬಯಲಾಗುತ್ತೆ ಪರವಾಗಿಲ್ವಾ ?"

"ಇನ್ನೇನು ಮಾಡೋದು, ನೀರಲ್ಲಿ ಮುಳುಗಿದ್ದಾಗಿದೆ. ಇಡಿಯಾಗಿ ಮುಳಗಿದವನಿಗೆ ಮಳೆಯೇನು ಚಳಿಯೇನು ?"

"ನಿಮ್ಮ ಬಿಸಿನೆಸ್ ವ್ಯವಹಾರ ಹಾಳಾಗುತ್ತೆ. ಲಕ್ಷಗಟ್ಟಲೆ ಹಣ ಖರ್ಚಾಗುತ್ತದೆ. ಜೀವಮಾನವೆಲ್ಲ ನೀನು, ನನ್ನ ಮಕ್ಕಳನ್ನು ಸಾಕಬೇಕಾಗುತ್ತದೆ."

"ನಿನ್ನ ಅಣ್ಣನಾದ ತಪ್ಪಿಗೆ ಎಲ್ಲಾ ಮಾಡ್ತೀನಿ."

"ಅಲ್ಲ. ಇದು ನೀನು ಮಾಡಿದ ತಪ್ಪಿಗೆ ತೆರುತ್ತಿರುವ ಬೆಲೆ. ನನಗೇನೂ ಬೇಡ."

"ಬೇಡ ಅಂದ್ರೆ... ನಿನ್ನಿಂದ, ಧ್ರುವನಿಂದ ಎಷ್ಟೆಷ್ಟು ಅವಮಾನವಾಗಿದೆ ನನಗೆ. ಆದರೂ, ನೀನು ನನ್ನ ತಂಗಿ ಎಂಬ ಕಾರಣದಿಂದ ನಿನಗೆ ನ್ಯಾಯವನ್ನು ದೊರಕಿಸಿಕೊಡಲು, ಕೋರ್ಟು ಕಚೇರಿಗೆ ಅಲೆಯಲು ಸಿದ್ಧನಾಗುತ್ತೇನೆ."

"ಬೇಡ ಬಿಡು. ನನ್ನಿಂದ ಮತ್ತೆ ಮತ್ತೆ ನಿನಗೆ ಅವಮಾನವಾಗುವುದು ಬೇಡ. ನಾನು ಧ್ರುವನ ಮನೆಯಲ್ಲಿ ಬದುಕಿರುವ ತನಕ ಇರುವ ತೀರ್ಮಾನ ಮಾಡಿದೀನಿ" ವಸುಧಾಳ ಕಡೆ ತಿರುಗಿ ಕಣ್ಣು ಹೊಡೆದು ನಕ್ಕಳು.

"ಬೇಡ ಮಾಲಾ... ನಿನ್ನನ್ನು ಅಲ್ಲಿಗೆ ಕಳಿಸಿದರೆ ಅಪ್ಪ ಅಮ್ಮ ಖಂಡಿತಾ ನನ್ನನ್ನು ಕ್ಷಮಿಸುವುದಿಲ್ಲ" ಮಧು ಬಿಕ್ಕಿ ಬಿಕ್ಕಿ ಅತ್ತಾಗ ಇಬ್ಬರಿಗೂ ವ್ಯಥೆಯಾಯಿತು.

"ಈಗ ಅತ್ತರೆ ಏನು ಪ್ರಯೋಜನ ?" ಮಾಲಾ ಹೇಳಿದಾಗ ಅವನು ಎದ್ದು ಒಳಗಿನ ರೂಮಿಗೆ ಹೋಗಿದ್ದ. ರಾತ್ರಿ ಮಲಗುವ ಸಮಯದಲ್ಲಿ ವಸುಧಾಗೆ ಹೇಳಿದ.

"ಮಾಲಾ ಒಂದೊದು ಸಾರಿ ಒಂದೊಂದು ತರಹ ಬಿಹೇವ್ ಮಾಡ್ತಾಳೆ. ಅವಳ ಬಿಹೇವಿಯರ್ ನಾರ್ಮಲ್ ಅಂತೂ ಖಂಡಿತಾ ಅಲ್ಲ. ಪ್ರತಾಪನಂತೂ ಎಷ್ಟೋ ಸಾರಿ, ಸೈಕಿಯಾಟ್ರಿಸ್ಟ್‌ಗೆ ತೋರಿಸು ಅಂತ ಸಹ ಹೇಳಿದಾನೆ. ಧ್ರುವನನ್ನು ದ್ವೇಷಿಸ್ತೀನಿ. ಅವನ ಮನೆಗೆ ಈ ಜನ್ಮದಲ್ಲಿ ಹೋಗುಲ್ಲ ಅಂಥ ಹಠ ಹಿಡಿದವಳಿಗೆ ಈಗ ಏನಾಗಿದೆ ? ಆ ರೇಪ್‌ನಿಂದ ಏನಾದರೂ ಆಘಾತವಾಗಿರ ಬಹುದೇ ?"

"ಆಘಾತವಾಗಿರಬಹುದು ನಿಜ. ಆದರೆ ಅದನ್ನೇ ನೆನೆಸಿಕೊಂಡು ಕೊರಗುತ್ತಿಲ್ಲ ಅವಳಿಗೆ ಈಗಲೂ ಧ್ರುವನ ಮನೆಗೆ ಹೋಗಲು ಇಷ್ಟವಿಲ್ಲ. ಆದರೆ ಒಂದು ತರಹದ ಅಸಹಾಯಕತೆ."

"ಏನು ಅಸಹಾಯಕತೆ! ನಾನು ದುಡ್ಡು ಕಾಸು ಕೊಡಲ್ಲ ಅಂತಂದ್ನಾ! ಮಕ್ಕಳನ್ನು ಅನಾಥಾಶ್ರಮಕ್ಕೆ ಸೇರಿಸು ಅಂತ ಅಂದ್ನಾ! ನನ್ನ ತಂಗಿ ನನಗೆ ಭಾರವಲ್ಲ. ನಿಮ್ಮಿಬ್ಬರ ಮಧ್ಯೆ ಏನಾದ್ರೂ ಮಾತುಕತೆ ನಡೆದಿದ್ರೆ ಅದಕ್ಕೆ ನಾನು ಜವಾಬ್ದಾರನಲ್ಲ."

"ನಿಮ್ಮ ತಂದೆ ಮನೆಯ ಆಸ್ತಿಗೆ ಅವಳಿಗೆ ಸಮಪಾಲು ಇದೆ ಅಂತ ನನಗೂ ಗೊತ್ತು. ನಾನು ಅವಳ ಆಪ್ತ ಸ್ನೇಹಿತೆ... ಅವಳ ಮನಸ್ಸಲ್ಲಿ ಏನು ನಡೀತಿದೆ ಅಂತ ಊಹಿಸಬಲ್ಲೆ... ಗಂಡನ ಮನೆಯಲ್ಲಿ ಇರುವುದು ಅವಳ ಕರ್ತವ್ಯ ಅಂತಂದುಕೊಂಡಿದ್ದಾಳೆ."

"ಏನು ಕರ್ತವ್ಯ ಎಂದೂ ಇಲ್ಲದ್ದು. ಒಂದು ಕಾಲದಲ್ಲಿ ನಾನೇ ಬಲವಂತ ಮಾಡಿದ್ದೂ ಉಂಟು. ಈಗ ಅವನು ಏಡ್ಸ್ ಪೇಷೆಂಟ್ ಅಂತ ತಿಳಿದದ್ದೂ ಅವನೊಡನೆ ಇರು ಅಂತ ಕಳಿಸುವಷ್ಟು ಕಟುಕ ನಾನಲ್ಲ."

"ನೀವು ಕಟುಕರಲ್ಲ. ಆದರೆ ಅವರ ಕಟುಕತನದಿಂದ ಇವಳನ್ನು ಹೇಗೆ ರಕ್ಷಿಸುತ್ತೀರಿ...? ಯಾರಿಗೂ ತಿಳಿಯದಂತೆ ನಮ್ಮ ಚಿಕ್ಕಮ್ಮನ ಮನೆಯಲ್ಲಿದ್ದ ವಳನ್ನು ಕಿಡ್ನಾಪ್ ಮಾಡಿಸಿ, ರೇಪ್ ಮಾಡಿಸಿ ಈಗ ಸಂಭಾವಿತರಂತೆ ನಾಟಕ ಆಡುವವರಿಂದ ಅವಳನ್ನು ಹೇಗೆ ರಕ್ಷಿಸುತ್ತೀರಿ ?" ಮಧು ನಂಬಲಿಲ್ಲ.

"ಏನು ಹೇಳ್ತಿದೀಯ ನೀನು ? ಧ್ರುವ ಇಂತಹ ಕೆಲಸ ಮಾಡಲಾರ..."

"ಧ್ರುವ ಸ್ವಲ್ಪ ಹೇಡಿ. ಆದರೆ ಪ್ರತಾಪ ಮಾಡಿಸಿರಬಹುದಲ್ವಾ ?"

"ಪ್ರತಾಪ ರೇಪ್ ಮಾಡಿದಾನೆ ಅಂತ ಅಂತೀಯಾ. ಅವನು ಆ ಮಟ್ಟಕ್ಕೆ ಇಳಿಯುವವನಲ್ಲ. ಅವನಿಗೆ ಹೆಣ್ಣುಗಳ ಮೇಲೆ ಯಾವ ಆಸಕ್ತಿಯೂ ಇಲ್ಲ."

"ಹೆಣ್ಣಿನ ಸಂಗ ಅವನಿಗೆ ಬೇಡದಿರಬಹುದು. ಆದರೆ ಕಿಡ್ನಾಪ್ ಮಾಡಿದ ವ್ಯಕ್ತಿ ರೇಪ್ ಮಾಡಿರಬಹುದು ತಾನೇ. ಪ್ರತಾಪನೇ ಬಾಡಿಗೆಗೆ ಗೊತ್ತು ಮಾಡಿರಬಹುದು. ಕೆಟ್ಟತನಕ್ಕೆ ಇತಿ ಮಿತಿ ಎಲ್ಲಿದೆ ?"

"ನಿನಗೆ ಯಾಕೆ ಇಂತಹ ಅನುಮಾನ ಬಂತು ?"

"ಮನೆಯ ಸ್ವಂತ ಹೆಂಗಸಿನ ಮೇಲೆ ಅತ್ಯಾಚಾರ ನಡೆದರೂ, ಎಷ್ಟು ಕೂಲ್ ಆಗಿದ್ದಾರಲ್ಲ. ಇದು ಸಾಧ್ಯಾನಾ ಅಂತ...?"

"ರೇಪ್ ಆಗಿರೋದು ಇತರರಿಗೆ ತಿಳಿಯದಿರಲಿ ಅಂತ ಮುಚ್ಚಿಡ್ತಾ ಇದಾರೆ."

"ಆದರೂ ಆ ಮಕ್ಕಳನ್ನು ತಮ್ಮ ಮಕ್ಕಳನ್ನಾಗಿ ಒಪ್ಪಿಕೊಳ್ಳುವಷ್ಟು ದೊಡ್ಡತನ ಇದಂತೂ ಸಾಧ್ಯವಿಲ್ಲ."

"ಧ್ರುವನಿಗೆ ಇನ್ನು ಮದುವೆ, ಮಕ್ಕಳು ಕನಸಿನ ಮಾತು. ಮನೆತನದ ಮರ್ಯಾದೆಯನ್ನು ಉಳಿಸಿಕೊಳ್ಳಲು, ಮಾಲಾಳ ಮಕ್ಕಳನ್ನು ಒಪ್ಪಿ ಕೊಂಡಿದಾರೆ. ಇದು ಸಹಜ. ಅಲ್ಲದೇ ಅವರಿಗೂ ವಾರಸುದಾರರು ಬೇಕಲ್ಲ. ಪ್ರತಾಪನೇ ಈ ಮಾತನ್ನು ನನಗೆ ಹೇಳಿದ."

"ನಾಚಿಕೆ ಇಲ್ಲದವನು ಇಂತಹ ಮಾತುಗಳನ್ನೆಲ್ಲ ನಿಮ್ಮ ಹತ್ತಿರ ಆಡ್ತಾನಲ್ಲ. ಕೆನ್ನೆಗೆ ಬಾರಿಸಬೇಕಾಗಿತ್ತು."

"ನಾನು ಅವನ ಕೆನ್ನೆಗೆ ಹೊಡೆದಿದ್ದರೆ, ನನ್ನನ್ನು ಜೇಲಿಗೆ ಹಾಕಿಸುತ್ತಿದ್ದ."

"ಅವನಿಗೆ ಹೆದರುತ್ತೀರಾ ?"

"ಹೆದರಿಕೆ ಅಂತಲ್ಲ. ಅವನೂ ಬಿಸಿನೆಸ್ ಪಾರ್ಟ್ನರ್ ಆಗಿದ್ದವನು. ನಮ್ಮ ವ್ಯವಹಾರಗಳನ್ನೆಲ್ಲಾ ಅರಿತವನು. ಅವನಿಂದ ನನಗೆ ಎಷ್ಟೋ ಸಹಾಯವಾಗಿದೆ."

"ಅದು ಬಿಸಿನೆಸ್ ವ್ಯವಹಾರ. ಇದು ಸಂಬಂಧ. ಹಾಗೆ ನೋಡ್ತಾ ಹೋದರೆ, ಅವನು ಧ್ರುವನಿಗೇ ಸ್ವಂತದವನಲ್ಲ. ಅವನನ್ನು ಕಂಡರೆ ರಘುಗೆ ಆಗುಲ್ಲವಂತೆ."

"ಹಾಗಂತ ಯಾರು ಹೇಳಿದ್ರು ?"

"ಮಾಲಾಳಿಗೆ ಅವನೇ ಹೇಳಿದ್ನಂತೆ. ಪ್ರತಾಪ ಒಳ್ಳೆಯವನಲ್ಲ. ಅವನು ಧ್ರುವನನ್ನು ತನ್ನ ಮುಷ್ಟಿಯಲ್ಲಿಟ್ಟುಕೊಂಡಿದಾನೆ. ಅವರಿಬ್ಬರೂ ಒಂದಾಗಿ ನನ್ನನ್ನು ದೂರ ಮಾ[illegible]ಟ್ಟಾರೆ. ನಾನೀಗ ಒಂಟಿ. ನನ್ನನ್ನು

ಮದುವೆಯಾಗಿ. ನಿಮಗೆ ಹುಟ್ಟುವ ಮಕ್ಕಳಿಗೆ ನಾನು ತಂದೆಯ ಹೆಸರನ್ನು ಕೊಡ್ತೀನಿ ಅಂದ್ನಂತೆ."

"ಏನು ಕೊಡ್ತಾನೆ ಈ ಅಯೋಗ್ಯ? ಅವನಿಗೇ ಒಳ್ಳೆಯ ಹೆಸರಿಲ್ಲ. ಯಾವುದೋ ರೇಪ್ ಕೇಸ್‌ನಲ್ಲಿ ಸಿಕ್ಕುಬಿದ್ದು ಮೂರು ವರ್ಷ ಜೈಲುವಾಸ ಅನುಭವಿಸಿದ್ದಾನೆ.

"ಇದೆಲ್ಲ ನಿಮಗೆ ಗೊತ್ತಿತ್ತಾ?"

"ಧ್ರುವನೇ ಹೇಳಿದ್ದು. ಇದನ್ನೆಲ್ಲಾ ಮಾಲಾಳಿಗೆ ಹೇಳಬೇಡ... ಮೊದಲೇ ಅವಳಿಗೆ ಕೋಪ... ಈಗ ನನಗೆ ಒಂದೊಂದಾಗಿ ಅರಿವಿಗೆ ಬರುತ್ತಿದೆ. ಆದರೆ ನಾನೂ ಅಸಹಾಯಕ."

"ಅವರು ವಿವಿಧ ನಾಟಕಗಳನ್ನಾಡಿ ನಮ್ಮನ್ನು ಅವರ ಬಲೆಯೊಳಗೆ ಬಂಧಿಸಿ ಇಟ್ಟಿದ್ದಾರೆ. ಅದೇ ತರಹ ನಾವೂ ಒಂದು ಬಲೆಯನ್ನು ತಯಾರಿಸಿ, ಅದರೊಳಗೆ ಅವರೇ ಬಂದು ಬೀಳುವಂತೆ ಮಾಡಿದರೆ?"

"ಪ್ರತಾಪ ಇದನ್ನೆಲ್ಲಾ ಯೋಚಿಸದೇ ಇರ್ತಾನಾ? ಎಚ್ಚರದಿಂದ ಇರುತ್ತಾನೆ."

"ಹಾಗಂತ, ನಾವು ಜೀವಮಾನವೆಲ್ಲಾ ಅವರು ಹೇಳಿದ ಹಾಗೆ ಕುಣಿಯ ಬೇಕಾಗಿಲ್ಲ. ಅವರಿಂದ ತಪ್ಪಿಸಿಕೊಳ್ಳುವ ದಾರಿ ಇದ್ದೇ ಇರುತ್ತೆ. ನೀವು ಬೈಯುಲ್ಲ ಅಂತಂದ್ರೆ ಒಂದು ವಿಷಯ ಹೇಳ್ತೀನಿ" ಎನ್ನುತ್ತಾ ಭಾರ್ಗವ ನೊಡನೆ ನಡೆಸಿದ ಸಮಾಲೋಚನೆಯನ್ನೆಲ್ಲಾ ತಿಳಿಸಿದಳು. ಅವನು ಎಗರಿಬಿದ್ದ.

"ಇದನ್ನೆಲ್ಲ ಅವನಿಗೇಕೆ ಹೇಳಿದ್ರಿ? ಧ್ರುವನಿಗೆ ಗೊತ್ತಾದ್ರೆ ಅವನನ್ನೂ ಕೊಲ್ಲಿಸಿ ಬಿಡ್ತಾನೆ ಅಷ್ಟೇ... ಅವನ್ಯಾಕೆ ಬಂದಿದ್ದ ಇಲ್ಲಿಗೆ?"

"ಧ್ರುವ ನಮ್ಮೆಲ್ಲರನ್ನೂ ಕೊಲ್ಲಿಸಬಹುದು. ಅದಕ್ಕೆ ಉಪಾಯವೇ ಇಲ್ಲವೇ? ಈಗಲೂ ಭಾರ್ಗವ ನಮ್ಮವರೇ. ಈಗಲೂ ಅವು ಮಾಲಾನ್ನ ಪ್ರೀತಿಸುತ್ತಾರೆ."

"ಸುಳ್ಳು. ಅವನೆಂದೂ ಮಾಲಾಳನ್ನು ಪ್ರೀತಿಸಲೇ ಇಲ್ಲ. ಇವಳು ಹಾಗೆ ತಿಳಿದುಕೊಂಡಿದ್ದಳು ಅಷ್ಟೇ. ನಿಜವಾದ ಪ್ರೇಮಿಯಾಗಿದ್ದರೆ ಧ್ರುವನೊಂದಿಗೆ ನಡೆದ ಮದುವೆಯನ್ನು ತಪ್ಪಿಸುತ್ತಿದ್ದ."

"ಸಧ್ಯ... ಅವರು ತನ್ನ ಆಪಾದನೆಯಿಂದ ತಪ್ಪಿಸಿಕೊಂಡರೆ ಸಾಕಾಗಿತ್ತು. ಆ ವಿಷಯವೆಲ್ಲಾ ನನಗೂ ಗೊತ್ತು."

"ಭಾರ್ಗವನನ್ನು ಈ ವಿಷಯದಲ್ಲಿ ಎಳೆಯೋಕೆ ನನಗೆ ಇಷ್ಟವಿಲ್ಲ."

"ಹಾಗಾದ್ರೆ ನೀವು ಏನು ಮಾಡಬೇಕು ಅಂತ ಇದೀರಿ ?"

"ಅವನ ಮೇಲೆ ಕೇಸ್ ಹಾಕಿದ್ರೆ, ನನ್ನ ಬಿಸಿನೆಸ್ ಹಾಳಾಗುತ್ತೆ. ನಾನು ಪಾಪರ್ ಆಗಿ ಹೋಗ್ತೀನಿ. ನಾನು ಪ್ರತಾಪನ್ನ ನಂಬಿ ಕೆಟ್ಟೆ."

"ಹಾಗಂತ ಎಷ್ಟು ವರ್ಷ ಹೀಗೇ ತಳ್ಳೋಕೆ ಆಗುತ್ತೆ. ಮಕ್ಕಳು ಬೆಳೆದು ದೊಡ್ಡವರಾಗ್ತಾರೆ. ಏನಾದ್ರೂ ಸೆಟ್ಲ್ ಆಗಬೇಡವೇ ?"

"ಇವರುಗಳೇ ಪಿತೂರಿ ನಡೆಸಿ, ಮಾಲಾಳ ದುರ್ಗತಿಗೆ ಅವರುಗಳೇ ಕಾರಣ ಅಂತ ಖಚಿತವಾದರೆ, ಅವರುಗಳಿಗೆ ಜೈಲು ಶಿಕ್ಷೆಯಾಗುವುದು ಖಂಡಿತಾ. ಮಾಲಾಳಿಗೆ ಕಾಂಪನ್ಸೇಷನ್ ಅಂತ ಲಕ್ಷಾಂತರ ರೂಪಾಯಿ ಸಿಗುತ್ತೆ. ನನ್ನ ಬಿಸೆನೆಸ್ ವ್ಯವಹಾರಕ್ಕೆ ಅವರಿಂದ ಮುಕ್ತಿ ಸಿಗುತ್ತದೆ. ಆದರೆ ಒಂದು ವೇಳೆ ಸಾಕ್ಷಾಧಾರಗಳಿಲ್ಲದೇ ನಾವು ಸೋತರೆ, ಪ್ರತಾಪ ನಮ್ಮನ್ನು ಭೂಗತ ಮಾಡಿಬಿಡ್ತಾನೆ. ಮಾಲಾಳ ಜೊತೆ ಜೊತೆಗೆ ನಾವೆಲ್ಲರೂ ನಿರ್ನಾಮವಾಗುವುದು ಖಂಡಿತಾ..."

"ನೀವು ಪ್ರತಾಪನಿಗೆ ಹೆದರುತ್ತೀರಿ. ಭಾರ್ಗವನಿಗೆ ಆ ಹೆದರಿಕೆಯಿಲ್ಲ. ನೀವು ಒಪ್ಪಿಗೆ ಕೊಟ್ಟರೆ, ಅವರ ಪ್ಲಾನ್ ಪ್ರಕಾರ ಮುಂದುವರೆಯೋಣ. ಗೆಲುವು ನಮ್ಮದಾಗುತ್ತದೆ. ಆ ನಂಬಿಕೆ ನನಗಿದೆ."

"ಆ ನಂಬಿಕೆ ನನಗಿಲ್ಲ ವಸುಧಾ. ಆದರೆ ಬೇಡವೇ ಬೇಡ ಅಂತ ಹೇಳಲಾರೆ. ಆದರೆ ಭಾರ್ಗವ ನಿಜಕ್ಕೂ ನಮಗೆ ಸಹಾಯ ಮಾಡ್ತಿದಾನಾ ? ಅಥವಾ ನನ್ನ ಮೇಲೆ ಏನಾದ್ರೂ ಸೇಡು ತೀರಿಸಿಕೊಳ್ಳುವ ಸಂಚಿಕೇನಾ ಅಂತ ತಿಳಿದುಕೊಳ್ಳಬೇಕು."

"ಭಾರ್ಗವನಿಗೆ ಯಾವತ್ತೂ ಸೇಡು ತೀರಿಸಿಕೊಳ್ಳಬೇಕೆಂಬ ಮನಸ್ಸು ಇರಲಿಲ್ಲ. ಹಾಗಿದ್ದಿದ್ದರೆ ಇದುವರೆಗೂ ಯಾಕೆ ಏನೂ ತೊಂದರೆ ಕೊಡಲಿಲ್ಲ! ಅಲ್ಲದೇ ಈಗ ಅವರು ಸಾಯಿಬಾಬಾನ ಭಕ್ತರಾಗಿದಾರೆ. ಭಕ್ತಿ ಮಾರ್ಗದಲ್ಲಿ ನಡೆಯುತ್ತಿದ್ದಾರ."

"ಆಧ್ಯಾತ್ಮಿಕ, ಭಕ್ತಿಮಾರ್ಗದವನಿಗೆ ಈ ಕೇಸಿನ ಬಗ್ಗೆ ಆಸಕ್ತಿ ಯಾಕೆ ?"

"ಪ್ರತಾಪನ ಸಹವಾಸದಿಂದ ಧ್ರುವ ಸಹ ಸರಿಯಿಲ್ಲ. ಅವರೆಲ್ಲಾ ಕ್ರಿಮಿನಲ್ಸ್. ಅದನ್ನೆಲ್ಲಾ ತಿಳಿದೂ ಅವರಿಗೆ ಶಿಕ್ಷೆ ಕೊಡಿಸದಿದ್ದರೆ, ಸಮಾಜಕ್ಕೆ ಅನ್ಯಾಯ ಮಾಡಿದಂತಾಗುತ್ತದೆ. ಈಗ ಸುಮ್ಮನಾಗಿಬಿಟ್ಟರೆ, ಮುಂದೆ ಮಾಲಾಳಿಗಾಗಲೀ

ಅಥವಾ ಬೇರೆ ಹೆಂಗಸರಿಗಾಗಲೀ ಅಥವಾ ಬೇರೆ ಯಾರಿಗೇ ಆಗಲಿ ಅವರಿಂದ ತೊಂದರೆಯಾಗುವುದಿಲ್ಲ. ಅಂತ ಏನು ಗ್ಯಾರಂಟಿ ? ಈಗಾಗಲೇ ಸಾಕಷ್ಟು ತಡವಾಗಿದೆ. ಆದಷ್ಟು ಬೇಗ ಕಾರ್ಯ ತತ್ಪರರಾಗಬೇಕು ಅಂತ ಅವರ ಅನಿಸಿಕೆ."

"ಸರಿ. ಏನು ಬೇಕಾದ್ರೂ ಮಾಡಲಿ. ಆದರೆ ಅವನ ಹತ್ತಿರ ದುಡ್ಡು ಕಾಸು ಎಲ್ಲಿದೆ ? ಖರ್ಚಿಗೆ ಹಣ ಬೇಡವಾ ?"

"ನಾವೇ ಕೊಡಬೇಕು..."

"ಇಲ್ಲ. ವಸುಧಾ.. ಈ ಖರ್ಚಿಗೆಲ್ಲ ನನ್ನ ಹತ್ತಿರ ಹಣವಿಲ್ಲ..."

"ಹಾಗಂದ್ರೆ ಹೇಗೆ ? ಮಾಲಾಳಿಗೆ ನೀವಲ್ಲದೆ ಇನ್ಯಾರು ಖರ್ಚು ಮಾಡೋಕೆ ಆಗುತ್ತೆ ? ಭಾರ್ಗವನ ಹತ್ತಿರ ಹಣ ಎಲ್ಲಿಂದ ಬರುತ್ತದೆ."

"ಅದೆಲ್ಲ ನನಗೆ ಗೊತ್ತಿಲ್ಲ. ಈ ಮನೇನ ಅಡವಿಟ್ಟು ಸಾಲ ತೆಗೆದುಕೊಂಡಿದ್ದೆ. ಅದರ ಬಡ್ಡಿಯೇ ಸಾಕಷ್ಟು ಬೆಳೆದಿದೆ. ಮೇಲೆ ಮೇಲೆ ನಾನೆಲ್ಲಿಂದ ತರಲಿ ! ಆ ಹಳ್ಳಿ ಮನೆ ಜಮೀನು ಸಹ ನಮ್ಮ ಕೈ ಬಿಟ್ಟಿದೆಯಂತೆ. ಧ್ರುವ, ಪ್ರತಾಪನ ಈ ಗಲಾಟೆಯಲ್ಲಿ ಬಿಸಿನೆಸ್ ವ್ಯವಹಾರ ಕೂಡಾ ಅಷ್ಟಕ್ಕಷ್ಟೆ. ಏನೇ ಮಾತನಾಡಿದರೂ ಅವರದ್ದು ಒಂದೇ ಮಂತ್ರ, "ಮಾಲಾ ನಮ್ಮ ಮನೆಗೆ ಬಂದು ಇರಲಿ. ಎಲ್ಲಾ ತಾನಾಗಿಯೇ ಸರಿ ಹೋಗುತ್ತೆ ಅಂತ ಇವಳು ಹೋಗುಲ್ಲ. ಯಾವುದೂ ಸರಿ ಹೋಗುಲ್ಲ. ನನಗೆ ಗೊತ್ತು" ಅವನು ಅವಳಿಗೆ ಬೆನ್ನು ಮಾಡಿ ಮಲಗಿದ. ಅವಳು ಬಲವಂತವಾಗಿ ಅವನನ್ನು ತನ್ನ ಕಡೆಗೆ ತಿರುಗಿಸಿಕೊಂಡಳು.

"ಸರಿ ಹಾಗದ್ರೆ ನಾನು ಮಾಲಾನ್ನ ಒಪ್ಪಿಸ್ತೀನಿ. ಆ ಕಟುಕರ ಮನೆಗೇ ಹೋಗಲಿ ಏನಾಗುತ್ತೋ ಆಗಲಿ."

"ಹಾಗೆಲ್ಲಿ ಹೇಳಿದೆ ನಾನು ? ನಾನೀಗ ಅವರನ್ನು ಎದರು ಹಾಕಿಕೊಳ್ಳಲು ಆಗುತ್ತಿಲ್ಲ. ಮಾಲಾಳನ್ನು ಬಿಡಲಾಗುತ್ತಿಲ್ಲ."

"ಯಾವುದಾದರೂ ಒಂದನ್ನು ಆರಿಸಿಕೊಳ್ಳಲೇಬೇಕು. ನನಗೇನೋ ಭಾರ್ಗವ ಹೇಳಿದ ಮಾರ್ಗ ಸರಿ ಎನ್ನಿಸುತ್ತದೆ. ಮಾಲಾ ನನ್ನ ಮಾತಿಗೆ ಇಲ್ಲ ಎನ್ನುವುದಿಲ್ಲ. ನೀವು ಯಾವ ಕಡೆಗೆ ಅಂತ ಆದಷ್ಟು ಬೇಗ ಡಿಸೈಡ್ ಮಾಡಿ. ಈಗಾಗಲೇ ಅವಳ ಜೀವನ ಸಾಕಷ್ಟು ಹಾಳಾಗಿದೆ. ಪೂರ್ತಿ ನರಕವಾಗುವಂತೆ ಮಾಡಬೇಡಿ" ಎನ್ನುತ್ತ ಅವನನ್ನು ಹಿಂದಕ್ಕೆ ತಳ್ಳಿ ತಾನೂ ಅವನಿಗೆ ಬೆನ್ನು

ಮಾಡಿ ಮಲಗಿದಳು. ಅವನು ನಯವಾಗಿ ಅವಳನ್ನು ತನ್ನೆಡೆಗೆ ತಿರುಗಿಸಿಕೊಂಡ.

"ನೀನೂ ಹೀಗೆ ಕೋಪಿಸಿಕೊಂಡರೆ, ನಾನೇನು ಮಾಡಲಿ? ನಾನೂ ಅಸಹಾಯಕನಾಗಿಬಿಟ್ಟಿದೀನಿ. ಭಾರ್ಗವನಿಗೆ ಅವಮಾನ ಮಾಡಿ ಕಳಿಸಿಬಿಟ್ಟೆ. ಈಗ ಅವನಿಂದ ಸಹಾಯ ಪಡೆಯಲು ಹಿಂಸೆಯಾಗುತ್ತದೆ. ನನ್ನ ಮನಃಸ್ಥಿತಿ ನಿನಗೇಕೆ ಅರ್ಥವಾಗುಲ್ಲ?"

"ಅರ್ಥವಾಗುತ್ತೆ ಮಧು. ಭಾರ್ಗವ ಅವರ ಸ್ವಾಭಿಮಾನವನ್ನು ಬದಿಗೊತ್ತಿ ತಾವು ಬೆಳೆದವರ ಮನೆಯ ಒಳಿತಿಗಾಗಿ ಹಸ್ತ ಚಾಚುತ್ತಿರುವಾಗ, ನೀವು ದುರಭಿಮಾನದಿಂದ ಕೈ ನೀಡದಿದ್ದರೆ, ನಿಮಗೇ ನಷ್ಟ. ಈಗಾಗಲೇ ನಿಮ್ಮ ದುರಭಿಮಾನದಿಂದ ನಾವು ಸಾಕಷ್ಟು ನಷ್ಟಗಳನ್ನು ಅನುಭವಿಸಿದ್ದೇವೆ." ಮಧು ಮಾತನಾಡಲಿಲ್ಲ. ಅವಳನ್ನು ತನ್ನೆಡೆಗೆ ಎಳೆದುಕೊಂಡ. "ವಸುಧಾ, ನೀನೂ ಇಲ್ಲದಿದ್ದರೆ, ನಾನು ಎಷ್ಟು ಒಂಟಿಯಾಗಿಬಿಡುತ್ತಿದ್ದೆ" ಎನ್ನುತ್ತಾ ಅವಳನ್ನು ತನ್ನ ಬಾಹುಗಳಲ್ಲಿ ಬಂಧಿಸಿದ.

ಮಧು ಧ್ರುವನಿಗೆ ಫೋನು ಮಾಡಿದ. ಮಾಲಾಳನ್ನು "ನೀನೇ ಬಂದು ಕರೆದುಕೊಂಡು ಹೋಗು. ನನಗೆ ಬಿಡುವಾಗುವುದಿಲ್ಲ" ಅಂತ. ಆ ಸಮಯಕ್ಕಾಗಿಯೇ ಕಾಯುತ್ತಿದ್ದವರಂತೆ ಧ್ರುವ ಹಾಗೂ ಸುಮಿತ್ರಾದೇವಿ ವಿಮಾನದಲ್ಲಿ ಬಂದಿಳಿದರು.

ಎರಡೂವರೆ ತಿಂಗಳಲ್ಲಿ ಮಕ್ಕಳು ಸಾಕಷ್ಟು ಬೆಳೆದಿರುವುದನ್ನು ಸುಮಿತ್ರಾ ದೇವಿ ಕಂಡು ಸಂತೋಷಗೊಂಡಳು. "ಮಕ್ಕಳು ತುಂಬಾ ಮುದ್ದಾಗಿವೆ ಮಾಲಾ... ಹೇಗೆ ಕೇಕೇ ಹಾಕಿ ನಗುತ್ತವೆ ನೋಡು."

"ಆಂಟೀ... ನಿಮಗೆ ಖಂಡಿತಾ ಬೇಸರವಿಲ್ವಾ?"

"ಒಂಥರಾ ಬೇಸರ, ಆದರೆ ಅದನ್ನು ಈ ಮಕ್ಕಳು ಮರೆಸಿ ಬಿಡುತ್ತವೆ. ಪಾಪ, ಇವುಗಳ ತಪ್ಪೇನಿದೆ ನೀನೇ ಹೇಳು."

"ಆದರೂ ಈ ಮಕ್ಕಳನ್ನು ನೋಡಿದಾಗಲೆಲ್ಲ ನನಗೆ ಆ ಘಟನೆ ನೆನಪಿಗೆ ಬರುತ್ತೆ. ಆ ಪಾಪಿ ಯಾರು ಅಂತ ಹುಡುಕಿ ಅವನ ಮುಖದ ಮೇಲೆ ಉಗುಳಬೇಕು ಅಂತ ಅನ್ನಿಸುತ್ತೆ."

"ನನಗೂ ಹಾಗೇ ಅನ್ನಿಸುತ್ತೆ. ಆದರೆ ಧ್ರುವನ ಹೆಂಡತಿಗೆ ಹೀಗಾಯ್ತು ಅಂತ ಊರಿಗೆಲ್ಲ ತಿಳಿಯುತ್ತಲ್ಲ."

"ನೀವು ಒಬ್ಬ ಹೆಂಗಸು. ಒಂದು ಮಹಿಳಾ ಸಂಸ್ಥೆಯ ಅಧ್ಯಕ್ಷೆ. ಇಂತಹ ಅನ್ಯಾಯಗಳನ್ನು ಪ್ರತಿಭಟಿಸಬೇಕು ಅಲ್ವಾ? ನೀವ್ಯಾಕೆ ಸುಮ್ಮನಾಗಿಬಿಟ್ಟಿರಿ ?"

"ಪ್ರತಾಪ, ಧ್ರುವ ಇಬ್ಬರೂ ಬೇಡಾಂತ ಅಂದುಬಿಟ್ಟರು. ನಮ್ಮ ಮನೆಯ ವಿಷಯ ಹೊರಕ್ಕೆ ಬರುತ್ತಲ್ಲ. ಅಂತ ನಾನೂ ಹೆದರಿಬಿಟ್ಟೆ."

"ಇದು ತಪ್ಪಲ್ವಾ ಆಂಟೀ... ಸಮಾಜ ಸೇವಕಿಯಾಗಿ ಹೀಗೆ ಹೇಳ್ತೀರಲ್ಲಾ ?"

"ಹೌದಮ್ಮ ತಪ್ಪು... ಈಗಲೂ ನಿನಗೆ ಅನ್ನಿಸಿದರೆ, ಪೊಲೀಸ್ ಫೈಲ್‌ನಲ್ಲಿ ರಿಜಿಸ್ಟರ್ ಮಾಡಿಸೋಣ. ನಮ್ಮ ಪ್ರಯತ್ನವನ್ನೂ ಮಾಡೋಣ."

"ನೀವೂ ಸಾಕ್ಷಿ ಹೇಳಬೇಕಾಗುತ್ತದೆ."

"ಹೇಳ್ತೀನಿ. ನನಗೆ ಏನೇನು ಗೊತ್ತಿದೆಯೋ ಅದನ್ನೆಲ್ಲ ಹೇಳ್ತೀನಿ."

"ಥ್ಯಾಂಕ್ ಯೂ ಅಂಟಿ. ನನಗೂ ತಲೆ ಕೆಟ್ಟು ಹೋದ ಹಾಗಾಗಿತ್ತು. ಅಲ್ಲದೇ ಅಬಾರ್ಷನ್‌ಗೆ ಸಮಯ ಮೀರಿ ಹೋಗಿತ್ತು."

"ಅದೇನು ಈಗ ಇದ್ದಕ್ಕಿದ್ದ ಹಾಗೆ ಈ ಆಲೋಚನೆ ಬಂತು ?"

"ಇಷ್ಟೆಲ್ಲಾ ಆಲೋಚನೆಗಳು ಆಗಾಗ್ಗೆ ಬರುತ್ತಲೇ ಇದ್ದವು ಮಧು ನನಗೆ ಸಹಾಯಕನಾಗಿದ್ದರೆ, ಆ ಮಾತೇ ಬೇರೆ ಆಗಿತ್ತು. ಅವನಿಗೂ ಮನೆತನದ ಮರ್ಯಾದೆಯ ಚಿಂತೆ. ನೀವೇ ಸರಿ ಅಂತ ಅನ್ನಿಸ್ತು."

"ಈ ನೆನಪಲ್ಲಾದರೂ ನಮ್ಮ ಮನೆಗೆ ಬರಲು ಒಪ್ಪಿಕೊಂಡೆಯಲ್ಲ. ನನಗೆ ಅದೇ ಸಂತೋಷ. ಮುಂದಿನ ಭಾನುವಾರ ದಿನ ಪ್ರಶಸ್ತವಾಗಿದೆ. ಮಕ್ಕಳ ನಾಮಕರಣ ಸಮಾರಂಭಕ್ಕೆ ಎಲ್ಲ ಸಿದ್ಧವಾಗಿದೆ. ನಾನು ಹೆಸರನ್ನು ಕೂಡಾ ಸೆಲೆಕ್ಟ್ ಮಾಡಿಟ್ಟಿದೀನಿ"

"ನಾನು ಈಗಾಗಲೇ ಹೆಸರನ್ನು ಇಟ್ಟಾಗಿದೆ."

"ಹೌದಾ ? ಹೇಳಲೇ ಇಲ್ಲ. ಏನು ಹೆಸರು ? ಅವಳು ಉತ್ಸಾಹದಿಂದ ಕೇಳಿದಳು. ಮಾಲಾ ಮನದಲ್ಲೇ ನಕ್ಕಳು.

"ಇವನು ಸದನ್, ಇವಳು ಕಾವ್ಯ."

"ನನಗೆ ಹೆಸರು ಇಷ್ಟವಾಗಲಿಲ್ಲ."

"ನನಗೆ ಇಷ್ಟವಾಗಿದೆ. ನನ್ನ ತಂದೆ ಸದಾಶಿವ ಹಾಗು ನನ್ನ ಸಾಕು ತಾಯಿ ಕಾವೇರಮ್ಮನ ನೆನಪಾಗಿ ಈ ಹೆಸರನ್ನು ಆರಿಸಿ ಇಟ್ಟಿದ್ದೇನೆ." ಆಕೆ ಮಂಕಾದಳು. ಮತ್ತೆ ಮಾತನಾಡುವ ಮನಸ್ಸಿಲ್ಲದೆ ಎದ್ದು ಹೋದಳು. ಎಷ್ಟೋ ಹೊತ್ತಿನ ನಂತರ ಧ್ರುವ ಒಳಗೆ ಬಂದ. ಅಂಜಿಕೆ ಅವನ ಮುಖದಲ್ಲಿ ಎದ್ದು ಕಾಣುತ್ತಿತ್ತು.

"ಹಲೋ ಮಾಲಾ... ಹೇಗಿದೀಯಾ ?" ಧ್ವನಿ ಸಸುಗಿತ್ತು. ಅವಳು ಸುಮ್ಮನೇ ನಕ್ಕಳು ನೀನು ಹೇಗಿದೀಯ ಅಂತ ವಿಚಾರಿಸಲಿಲ್ಲ ಎನ್ನುವುದನ್ನು ಗಮನಿಸಿದ. ಮನಸ್ಸು ಅಳುಕಿತ್ತು. ತಾನೇ ಅಲ್ಲಿದ್ದ ಖುರ್ಚಿಯಲ್ಲಿ ಕುಳಿತು, ತೊಟ್ಟಿಲಲ್ಲಿ ಮಲಗಿದ್ದ ಮಕ್ಕಳನ್ನು ಎವೆ ಇಕ್ಕದೆ ನೋಡಿದ. ಒಂದು ಮಗು ಥೇಟ್ ಮಾಲಾಳ ತದ್ರೂಪು. ಇನ್ನೊಂದು ಮಗು ಯಾರ ಹಾಗಿದೆಯೋ ತಿಳಿಯಲಿಲ್ಲ."

"ನಾನು ಎತ್ತಿಕೊಳ್ಳಲಾ ?" ಎನ್ನುತ್ತಾ ಬಾಗಿದವನನ್ನು ಅವಳು ಎಚ್ಚರಿಸಿದಳು.

"ಪ್ಲೀಸ್ ಧ್ರುವ... ಡಾಕ್ಟರನ್ನು ಕೇಳಬೇಕು" ಎಂದಳು. ಅವನ ಮುಖ ಕೆಂಪಾಯಿತು. ಆದರೂ ಸಾವರಿಸಿಕೊಂಡು,

"ಯಾಕೆ ಭಯಾನಾ ? ಎತ್ತಿಕೊಂಡರೆ ಏನೂ ಆಗೊಲ್ಲ."

"ಏನೋ ನಂಗೊತ್ತಿಲ್ಲ. ಮಕ್ಕಳು ಅಂದರೆ ಯಾಕೆ ಅಷ್ಟು ಇಷ್ಟ ನಿಮಗೆ ?" ವ್ಯಂಗ್ಯವಾಗಿ ಕೇಳಿದಳು.

"ಐ ಲೈಕ್ ಯೂ ಮಾಲಾ.... ನಿನ್ನ ಮಕ್ಕಳೂ ನನಗೆ ಇಷ್ಟ... ತುಂಬಾ ಇಷ್ಟ."

"ಯಾವುದೋ ರೇಪ್‌ಗೆ ಹುಟ್ಟಿದೋವು ಅಂತ ಅಸಹ್ಯವಾಗುಲ್ವಾ ?" ಅಂತ ಅವಳು ನೇರವಾಗಿ ಕೇಳಿದಾಗ ಅವನು ಎದ್ದು ನಿಂತ.

"ನಾನು ಯಾವುದನ್ನು ಮರೆಯಬೇಕು ಅಂತ ಅಂದುಕೊಳ್ತೀನೋ, ಅದನ್ನೇ ಯಾಕೆ ನೆನಪಿಸ್ತೀಯ ?" ಅವನು ಕೋಪವನ್ನು ನಟಿಸಿದ. ಅವಳು ವಿಚಿತ್ರವಾಗಿ ನಕ್ಕಳು.

"ನನ್ನ ಕೈಲಿ ಮರೆಯೋಕೇ ಆಗ್ತಿಲ್ಲ ಧ್ರುವ. ಮಕ್ಕಳ ಮುಖವನ್ನು ನೋಡಿದಾಗಲೆಲ್ಲಾ ಆ ಘಟನೆಯೇ ಜ್ಞಾಪಕಕ್ಕೆ ಬರುತ್ತೆ."

"ಹಾಗಾದ್ರೆ ನಿನ್ನ ಮಕ್ಕಳು ನಿನಗೆ ಅಸಹ್ಯವಾಗಿ ಕಾಣ್ತಾರಾ ?"

"ನನ್ನ ರಕ್ತವನ್ನು ಹಂಚಿಕೊಂಡು ಹುಟ್ಟಿರುವ ಮಕ್ಕಳು ನನಗೆ ಖಂಡಿತಾ ಅಸಹ್ಯವಿಲ್ಲ. ಆದರೆ ನಿಮ್ಮ ಕಡೆಯಿಂದ ಯೋಚಿಸುವಾಗ ಹಾಗೆ ಅನ್ನಿಸ್ತು."

"ಹೇಳಿದ್ನಲ್ಲ. ನಿನಗೋಸ್ಕರ, ನಿನ್ನ ಮಕ್ಕಳನ್ನು ಅಕ್ಸೆಪ್ಟ್ ಮಾಡಿಕೊಳ್ತಿದೀನಿ ಅಂತ."

"ಒಂದು ವೇಳೆ ನಾನು ಏಡ್ಸ್ ರೋಗಿಯಾಗಿದ್ದು, ನೀವು ಆರೋಗ್ಯವಂತ

ರಾಗಿದ್ದರೆ ಏನು ಮಾಡ್ತಿದ್ರಿ?"

"ಇದೆಂತಹ ಪ್ರಶ್ನೆ?" ಏನೇನೋ ಕೇಳ್ತಾ ಇದೀಯ ನೀನು."

"ನಾನು ಎಂದೂ ನಿಮ್ಮ ಹತ್ತಿರ ಇಷ್ಟು ಮಾತನಾಡಿದ ನೆನಪಿಲ್ಲ ನನಗೆ. ಈಗ ಕೆಲವು ಸಂದೇಹಗಳನ್ನು ನಿವಾರಿಸಿಕೊಳ್ಳಬೇಕಾಗಿದೆ. ಹೋಗಲಿ ಬಿಡಿ. ನನಗೆ ಉತ್ತರ ಗೊತ್ತು. ನನಗೆ ಡೈವೋರ್ಸ್ ಕೊಟ್ಟು ಮತ್ತೆ ಬೇರೆ ಮದುವೆಯಾಗ್ತಿದ್ರಿ ತಾನೆ..."

"ಇರಬಹುದು,. ಈಗ ನಾನೇನು ನಿನ್ನ ಸಂಬಂಧವನ್ನು ಬೆಳೆಸಿಲ್ಲ. ನಿನ್ನಿಂದ ದೂರವೇ ಇದೇನಲ್ಲ."

"ತುಂಬಾ ಥ್ಯಾಂಕ್ಸ್. ನಾನು ಕ್ಷೇಮವಾಗಿದೀನಿ. ಆದರೆ ನನಗೆ ಬಿಡುಗಡೆ ಕೊಟ್ಟು ನಾನು ಸುಖವಾಗಿರಲಿ ಅಂತ ಯಾಕೆ ಅನ್ನಿಸಲಿಲ್ಲ ನಿಮಗೆ?"

"ಡೈವೋರ್ಸ್ ಕೊಡುವಾಗ ಎಲ್ಲಾ ವಿಷಯವೂ ಹೊರಕ್ಕೆ ಬರುತ್ತಲ್ಲ. ಅದು ನನಗೆ ಇಷ್ಟವಿಲ್ಲ."

"ಅಂದರೆ, ನೀವು ಸ್ವಾರ್ಥಿಯಾಗಿಬಿಟ್ಟಿರಿ... ನನ್ನ ಜೀವನವೇ ಹಾಳಾಯ್ತು. ನಿಮಗೆ ಏನೂ ಅನ್ನಿಸೋಲ್ವಾ?"

"ನೀನು ಇಲ್ಲೇ ತೆಪ್ಪಗೆ, ಇಲ್ಲೇ ನಿನ್ನ ಅಣ್ಣನ ಮನೆಯಲ್ಲೇ ಇದ್ದಿದ್ದರೆ, ಹೀಗೆಲ್ಲಾ ಯಾಕೆ ನಡೀತಿತ್ತು. ಇದು ನಿನ್ನದೇ ತಪ್ಪಲ್ವಾ?"

"ಯಾವುದು ತಪ್ಪು? ನನ್ನ ಪಾಡಿಗೆ ನಾನು ನಿಮ್ಮಿಂದ ದೂರ ಇದ್ದುದು ತಪ್ಪಾ? ಆ ರೇಪಿಸ್ಟ್‌ನ ನಾನು ಕೇಳಿಕೊಂಡಿದ್ನಾ ಬಾ... ನನ್ನನ್ನ ಕಿಡ್ನಾಪ್ ಮಾಡು ಅಂತ..."

"ಹೀಗೆಲ್ಲಾ ಏನೇನೋ ಆಡಿ ನನ್ನನ್ನು ಕೆರಳಿಸಬೇಡ ಮಾಲಾ. ನಡೆದ ಅಚಾತುರ್ಯವನ್ನು ಮರೆತು ಹೊಸ ಜೀವನ ನಡೆಸುವ ಆಸೆಯಿಂದ ಬಂದಿದೀನಿ. ನಿನ್ನನ್ನು ನಿನ್ನ ಮಕ್ಕಳನ್ನು ಚೆನ್ನಾಗಿಟ್ಟುಕೊಳ್ತೀನಿ ಪ್ರಾಮಿಸ್."

"ಹಾಗಾದರೆ ಒಂದು ವಿಷಯ ಈಗಲೇ ಇತ್ಯರ್ಥವಾಗಬೇಕು. ನಿಮ್ಮ ಆಸ್ತಿಯನ್ನೆಲ್ಲಾ ನನ್ನ ಮಕ್ಕಳ ಹೆಸರಿಗೆ ಬರೆಯಬೇಕು. ಅದಕ್ಕೆ ಒಪ್ತೀರಾ?"

"ನನ್ನ ಮಕ್ಕಳು ಅಂತ ಒಪ್ಪಿಕೊಂಡ ಮೇಲೆ, ಆಸ್ತಿಯೆಲ್ಲಾ ಇವರದ್ದೇ ತಾನೆ..."

"ಪ್ರತಾಪ, ರಘು ಎಲ್ಲಾ ಒಪ್ತಾರಾ?" ಅವನು ಒಂದು ಗಳಿಗೆ ತಡೆದ.

"ಮೊದಲು ಪ್ರತಾಪ ಹಾಗೂ ರಘು ಹತ್ತಿರ ಮಾತನಾಡಿ. ಅವರ

ಅಬ್ಜೆಕ್ಷನ್ ಇದ್ದರೇ...?"

"ಪ್ರತಾಪನ ಆಸ್ತಿಯೆಲ್ಲಾ ನನಗೇ ಸೇರಿದ್ದು. ನಾವಿಬ್ಬರೂ ಶ್ರಮಪಟ್ಟು ಸಂಪಾದನೆಯ ಆದಾಯವನ್ನು ಹೆಚ್ಚಿಸಿದ್ದೇವೆ. ಇದರಲ್ಲಿ ರಘುಗೆ ಪಾಲು ಇಲ್ಲ."

"ಮುಂದೆ ರಘು ತಕರಾರು ತೆಗೆದರೆ ?"

"ಹಾಗೆಲ್ಲಾ ಏನೂ ಆಗುಲ್ಲ. ನಾನು ಗ್ಯಾರಂಟಿ ಕೊಡ್ತೀನಿ. ನಿನಗೆ ನನ್ನ ಮೇಲೆ ನಂಬಿಕೆ ಇಲ್ಲದಿದ್ದರೆ, ಬಾಂಡ್ ಪೇಪರ್ ಮೇಲೆ ಬರೆದುಕೊಡ್ತೀನಿ. ಸರಿ ತಾನೇ ?" ಮಾಲಾ ಒಳಗೊಳಗೇ ನಕ್ಕೊಂಡಳು.

"ಅಲ್ಲಿ ನಿಮ್ಮ ಮನೆಯಲ್ಲಿ ಪ್ರತಾಪನಿಂದಾಗಲೀ, ರಘುವಿನಿಂದಾಗಲೀ ನನಗೆ ಯಾವ ತೊಂದರೆಯೂ ಬಾರದಂತೆ ನೀವು ನೋಡಿಕೊಳ್ಳಬೇಕು. ನನ್ನ ಬಗ್ಗೆಯಾಗಲೀ, ನನ್ನ ಮಕ್ಕಳ ಬಗ್ಗೆಯಾಗಲೀ ಕೀಳಾಗಿ ಮಾತನಾಡಬಾರದು."

"ತುಂಬಾ ಕಂಡೀಷನ್ಸ್ ಹಾಕ್ತಾ ಇದೀಯ ಮಾಲಾ... ಅವರೆಲ್ಲಾ ನನ್ನವರೇ. ರಘುಗೆ ನೀನು ಅತ್ತಿಗೆ ಸಮಾನ. ಪ್ರತಾಪನಿಗೆ ನೀನು ತಂಗಿ ಇದ್ದ ಹಾಗೆ. ಸಲುಗೆಯಿಂದ ಒಂದೆರಡು ಮಾತುಗಳನ್ನಾಡಿರಬಹುದು. ಇನ್ನು ಮುಂದೆ ಹಾಗಾಗದಿರುವಂತೆ ನೋಡಿಕೊಳ್ಳುವ ಜವಾಬ್ದಾರಿ ನನ್ನದು."

"ನನಗೆ ಅಡಿಗೆ ಕೆಲಸ, ಮನೆ ಕೆಲಸ ಏನೂ ಬರಲ್ಲ. ಇಲ್ಲಿ ಹೇಗೆ ಬೆಳೆದೆನೋ ಅಲ್ಲಿಯೂ ಹಾಗೇ ಇರುತ್ತೀನಿ. ನಿಮ್ಮ ತಾಯಿ ಆಕ್ಷೇಪಣೆ ಮಾಡಬಾರದು."

ಧ್ರುವ ನಕ್ಕ "ನಮ್ಮ ಮನೆಯಲ್ಲಿ ಅಡುಗೆಯವರಿದ್ದಾರೆ. ಮಮ್ಮೀನೇ ಅಡಿಗೆ ಕೆಲಸ ಮಾಡುಲ್ಲ. ಈಗಿರುವ ಕೆಲಸದವಳ ಜೊತೆ ಇನ್ನೂ ಒಬ್ಬಳನ್ನು ಗೊತ್ತು ಮಾಡಿಕೊಂಡರಾಯ್ತು. ನೀನು ಯಾವ ಕೆಲಸವನ್ನೂ ಮಾಡಬೇಕಾಗಿಲ್ಲ."

"ಥ್ಯಾಂಕ್ಸ್ ನಾನು ನೇರವಾಗಿ ಮಾತನಾಡುವವಳು. ನನಗೂ ನೇರವಾಗಿ ಮಾತನಾಡುವವರನ್ನು ಕಂಡರೆ ಇಷ್ಟ. ಮುಚ್ಚು ಮರೆ ನನಗೆ ಇಷ್ಟವಿಲ್ಲ."

"ಪರವಾಗಿಲ್ಲ. ನನಗೆ ಏನೂ ಬೇಸರವಿಲ್ಲ. ನಾನು ನಿನಗೆ ಥ್ಯಾಂಕ್ಸ್ ಹೇಳಬೇಕು ಮಾಲಾ. ನನ್ನ ಜೀವನ ಒಣಗಿದ ಮರದಂತೆ, ಎಲೆ, ಹೂವು, ಹಣ್ಣು ಏನೂಇಲ್ಲ. ಇನ್ನು ಚಿಗುರುವುದೂ ಸಾಧ್ಯವಿರಲಿಲ್ಲ. ಆದರೆ ಕಡೇ ಪಕ್ಷ ಕೃತಕ ಎಲೆ, ಹೂವು, ಹಣ್ಣುಗಳನ್ನು ಅಂಟಿಸಿಕೊಂಡು ಇರೋಕ್ಕೆ ನೀನು ಅವಕಾಶ ಕೊಡ್ತಾ ಇದೀಯ.."

"ಒಣಗಿದ ಮರಕ್ಕೆ ಸುತ್ತಿಕೊಳ್ಳುವ ಹಸಿರು ಬಳ್ಳಿ ನಾನಾಗಲಾರೆ...

ಸುತ್ತಿಕೊಳ್ಳದಂತೆ ದೂರವೇ ಇದ್ದು ನಿನ್ನಿಂದ ಬಿಡುಗಡೆ ಪಡೆಯಲು ನಾನು ಅಲ್ಲಿಗೆ ಬರುವ ನಾಟಕವನ್ನಾಡುತ್ತಿದ್ದೇನೆ" ಎಂದು ತನ್ನಲ್ಲೇ ಹೇಳಿಕೊಂಡಳು. ಅವಳ ಮನದ ಮಾತು ಅವನಿಗೆ ಗೊತ್ತಾಗಲಿಲ್ಲ. ಮಕ್ಕಳನ್ನು ಕಣ್ತುಂಬಾ ನೋಡಿ, ಎದ್ದು ಹೊರಕ್ಕೆ ಬಂದ. ಮಾಲಾ ನಕ್ಕಳು.

o o o

ಮಾಲಾ, ವಸುಧಾಳನ್ನು ಹೊರಡಿಸಿದಳು. ಮೊದಲನೇ ಸಲ ಅತ್ತೆ ಮನೆಗೆ ಹೋಗುತ್ತಿರುವ ಅಧೈರ್ಯ ಉಂಟಾಗುತ್ತಿದೆ. ನೀನಿದ್ದರೆ ನನಗೆ ಎಷ್ಟೋ ಧೈರ್ಯ."

"ನಾನು ಆಕಾಶನನ್ನು ಕರೆದುಕೊಂಡು ಬರುತ್ತೇನೆ. ಆದರೆ ನಿಮ್ಮತ್ತೆ ಏನಂತಾರೋ ? ಆಮೇಲೆ ಕೆಟ್ಟ ಮುಖ ಮಾಡಿದರೆ ?"

"ಕೆಟ್ಟ ಮುಖ ಗಿಟ್ಟ ಮುಖ ಮಾಡಿದರೆ, ನಾನು ನನ್ನ ಜರ್ನೀನೇ ಕ್ಯಾನ್ಸಲ್ ಮಾಡಿಬಿಡ್ತೀನಿ. ಆ ಭಯ ಅವರಿಗೂ ಇರುತ್ತೆ."

ಧ್ರುವ ಹಾಗೂ ಸುಮಿತ್ರಾದೇವಿ ಷಾಪಿಂಗ್ ಅಂತ ಹೊರಗೆ ಹೋಗಿದ್ದಾಗ, ಮಾಲಾ ಸಾಯಿಬಾಬಾ ಮಂದಿರಕ್ಕೆ ಹೋಗಿ ಬರುತ್ತೇನೆಂದು ಹೊರಟಳು. "ಹಾಗೆ ಬರುವಾಗ ನಮ್ಮ ಮನೆಗೆ ಹೋಗಿ ಆಕಾಶನನ್ನು ಕರೆದುಕೊಂಡು ಬರ್ತೀಯಾ ?"

"ನನ್ನ ಜೊತೆ ಕಳಿಸ್ತಾರಾ ?"

"ಯಾಕೆ ? ನೀನೇ ಅವನ ತಾಯಿ ಅಂತ ಅವರಿಗೆ ಗೊತ್ತು."

"ಆಗಿನ ವಿಚಾರವೇ ಬೇರೆ... ಈಗಿನ ವಿಚಾರವೇ ಬೇರೆ..."

"ನಿನಗೇ ಅಳುಕು ಇದ್ದರೆ ಹೋಗಬೇಡ. ಅದರೆ ಹೀಗೇ ಇರೋಕೆ ಆಗುತ್ತಾ. ಈ ಗೊಂದಲದಿಂದ ಹೊರ ಬರಬೇಕು ಅಲ್ವಾ? ನಾನು ಬೇಕಾದ್ರೆ ಅಮ್ಮನಿಗೆ ಫೋನು ಮಾಡಿ ಹೇಳ್ತೀನಿ."

"ಸರಿ. ನಾನು ಹೋಗಿ ಬರ್ತೀನಿ. ಅದೇನಾಗುತ್ತೋ ಆಗಲಿ" ಎಂದು ಹೇಳಿ ಮುಂಬಾಗಿಲನ್ನು ದಾಟಿದಳು. ಭಾರ್ಗವ ಇನ್ನೂ ಬಂದಿರಲಿಲ್ಲ. ಅಲ್ಲಿಯೇ ಮಂದಿರದ ಸುತ್ತ ಅತ್ತಿತ್ತ ಓಡಾಡಿದಳು. ಭಾರ್ಗವ ಬಳಿ ಬಂದು ನಿಂತಾಗ ಬೆಚ್ಚಿದಳು. ಅವನು ಅವಳನ್ನೇ ನೋಡಿದ. "ನಿನಗೆ ಈ ಬಿಳಿ ಸೀರೆ ಒಂದು ಚೂರೂ ಒಪ್ಪಲ್ಲ" ಎಂದ.

"ನಿನಗೂ ಈ ಬಿಳಿ ಉಡುಪು ಒಪ್ಪಲ್ಲ. ಆವತ್ತು ಭಾಷಣ ಬಿಗಿದೆ. ಬಿಳಿ

ಉಡುಪು ಶಾಂತಿಯ ಸಂಕೇತ ಮನದ ನಿಚ್ಚಳತೆಯನ್ನು ತೋರಿಸುತ್ತದೆ" ಅಂತ.

"ಹಾಗೆ ಹೇಳಿದ್ದು ನಿಜ. ಅದು ಸತ್ಯವೂ ಹೌದು. ಯಾಕೋ ನಿನ್ನನ್ನು ಈ ಬಿಳಿಯ ಸೀರೆಯಲ್ಲಿ ನೋಡಿದಾಗ ಹೀಗೆ ಅನ್ನಿಸ್ತು. ನೀನು ಯಾವಾಗಲೂ ಬಣ್ಣ ಬಣ್ಣದ ಬಟ್ಟೆಯನ್ನೇ ಉಡುತ್ತಿದ್ದುದು ಅಲ್ವಾ?"

"ಬಾಬಾನ ದರ್ಶನಕ್ಕೆ ಬರುವಾಗ ಬಿಳಿ ಉಡುಪು ಧರಿಸಿ ಬಾ ಅಂತ ನೀನು ಹೇಳಿದ್ದೆಯಲ್ಲ ಅಂತ... ನಾನು ಬಿಳಿ ಸೀರೆಯನ್ನು ಉಟ್ಟೆ. ಇಲ್ಲದಿದ್ದರೆ, ನನಗೂ ಇಷ್ಟವಿಲ್ಲ."

"ನಿನಗೆ ಹೇಗೆ ಇಷ್ಟವೋ ಹಾಗೇ ಇರು ಮಾಲಾ... ಇನ್ನೊಬ್ಬರಿಗಾಗಿ ನಿನ್ನ ಇಷ್ಟಗಳನ್ನು ಬದಲಾಯಿಸಿಕೊಳ್ಳಬೇಡ."

"ಒಂದೊಂದು ಸಾರಿ ಒಂದೊಂದು ತರಹ ಮಾತನಾಡ್ತೀಯ ಬಿಡು. ನಾನು ನಾಡಿದ್ದು ಬೆಳಗಿನ ಫ್ಲೈಟ್‌ನಲ್ಲಿ ಬಾಂಬೆಗೆ ಹೋಗ್ತಾ ಇದೀನಿ. ಇನ್ನು ಅಲ್ಲಿನ ಸೆಷನ್ ಪ್ರಾರಂಭವಾಗುತ್ತದೆ."

"ವಸುಧಾ ಇರ್ತಾರಲ್ಲ. ಏನು ಭಯ?"

"ಎಷ್ಟು ದಿನ ನನ್ನ ಜೊತೆಯಲ್ಲಿ ಇರುತ್ತಾಳೆ? ಮುಂದಿನ ಭಾನುವಾರ ಹೋಟೆಲಿನಲ್ಲಿ ಫಂಕ್ಷನ್ ಇಟ್ಟುಕೊಂಡಿದ್ದಾರೆ. ಬೆಳಿಗ್ಗೆ ನಾಮಕರಣ ಸಮಾರಂಭ. ರಾತ್ರಿ ಪಾರ್ಟಿ."

"ಸರಿ, ಯಾವ ಹೋಟೆಲ್ಲು?"

"ನನಗೆ ಗೊತ್ತಿಲ್ಲ. ನಾನು ಕೇಳಲಿಲ್ಲ."

"ಪರವಾಗಿಲ್ಲ ಬಿಡು. ಈ ವಿಷಯದಲ್ಲಿ ಭಾಸ್ಕರ್ ಹೆಲ್ಪ್ ಮಾಡ್ತಾರಾ? ಬಾಂಬೆಯಲ್ಲೇ ಇದಾರಲ್ಲ."

"ಮಾಡಬಹುದೇನೋ ನನಗೆ ಹೇಗೆ ಗೊತ್ತು."

"ನನಗೆ ಅವರ ಫೋನು ನಂಬರನ್ನು ಕೊಡು. ನಾನು ಮಾತನಾಡ್ತೀನಿ. ಅವರು ರಿಲೈಯಬಲ್ ಪರ್ಸನ್ ತಾನೇ?"

"ಹೂಂ. ಆದರೆ ಅವರು ಧ್ರುವನ ಆಫೀಸಿನಲ್ಲೇ ಕೆಲಸ ಮಾಡ್ತಾರೆ. ಅವರ ಕೆಲಸಕ್ಕೆ ತೊಂದರೆ ಆದರೆ?"

"ಹಾಗೇನೂ ಆಗೊಲ್ಲ. ಅವರು ಅಲ್ಲೇ ಕೆಲಸದಲ್ಲಿರುವುದರಿಂದ ನಮಗೆ ಎಷ್ಟೋ ವಿಚಾರದಲ್ಲಿ ಅನುಕೂಲವಾಗುತ್ತದೆ. ಪಾರ್ಟಿಗೆ ಅವರೂ ಬರ್ತಾರೆ ತಾನೇ?"

"ಏನೋ ನಂಗೊತ್ತಿಲ್ಲ. ಅವರು ಬರದಿದ್ದರೇ ವಾಸಿ... ಯಾಕೋ ನನಗೆ ದಿಗಿಲಾಗುತ್ತೆ."

"ನೋಡೋಣ. ನಾನು ಮೊದಲು ಅವರ ಹತ್ತಿರ ಮಾತನಾಡ್ತೀನಿ. ನನಗೂ ಬಾಂಬೆ ಹೆಚ್ಚಿಗೆ ಗೊತ್ತಿಲ್ಲ.ನೀನೂ ಹೊಸಬಳು. ಊರು ತಿಳಿದೋರು ಒಬ್ಬರು ನಮ್ಮ ಸಹಾಯಕ್ಕೆ ಬೇಕು."

"ಸರಿ. ಎನ್ನುತ್ತಾ ಅವನ ಫೋನು ನಂಬರನ್ನು ಬರೆದುಕೊಟ್ಟಳು. ನಾನು ನಿನ್ನ ಪ್ರೀತಿಸಿದೆ. ನನ್ನಿಂದ ನಿನಗೆ ತೊಂದರೆಯೇ ಆಯಿತು. ಹಾಗೇ ಭಾಸ್ಕರನಿಗೂ ನನ್ನಿಂದ ತೊಂದರೆಯಾದರೆ ಅಂತ ಭಯ."

"ನಿನ್ನ ಭಾಸ್ಕರನಿಗೆ ಏನೂ ಆಗದಂತೆ ನಾನು ನೋಡಿಕೊಳ್ತೀನೆ." ಅವನು ಆಶ್ವಾಸನೆಯಿತ್ತ. "ನಿನ್ನ ಭಾಸ್ಕರ ಅಂತ ಯಾಕೆ ಹೇಳ್ತೀಯ? ಅವನೀಗ ನನ್ನವನಲ್ಲ."

"ಹಾಗೆ ಹೇಳಿದರೆ ನಿನಗೆ ಖುಷಿಯಾಗಬಹುದು ಅಂತ ಅನ್ನಿಸ್ತು. ಭಾಸ್ಕರನ ಪ್ರೀತೀಲಿ ನನ್ನನ್ನ ಮರೆತೇ ಬಿಟ್ಟಿದ್ದೆ ಅಲ್ವಾ?"

"ನಿಜ ಹೇಳಲಾ ಭಾರ್ಗವ. ಭಾಸ್ಕರನಲ್ಲಿ ನಿನ್ನ ಪ್ರೀತಿಯನ್ನು ಹುಡುಕಿದೆ. ನಿನ್ನ ಜಾಗಕ್ಕೆ ಬಂದವನು ಅಂತ ಕುತೂಹಲದಿಂದ ಅವನ ಸ್ನೇಹವನ್ನು ಬೆಳೆಸಿದೆ. ಆ ಸ್ನೇಹ ಪ್ರೀತಿಯಾಗಿ ಬೆಳೆಯಿತು. ಆದರೆ ಅದೆಲ್ಲಾ ತಪ್ಪು ಅಂತ ಮಾತ್ರ ಉಪದೇಶ ಮಾಡಬೇಡ. ಐ ಹೇಟ್ ಇಟ್."

"ಸರಿಯಮ್ಮ. ನನ್ನ ಉಪದೇಶ ಯಾವತ್ತೂ ನಿನಗೆ ಹಿಡಿಸಿಲ್ಲ."

"ನನಗೆ ಯಾರ ಉಪದೇಶವೂ ಹಿಡಿಸುಲ್ಲ. ನಾನಿನು ಬರ್ಲಾ?"

"ಬಾ. ಅಲ್ಲಿಯ ತನಕ ಬರ್ತೀನಿ" ಎಂದ. ಇಬ್ಬರೂ ಗೇಟಿನ ತನಕ ಬಂದರು. ಅವಳು ಕೈಯಾಡಿಸಿ ಬೈ ಬೈ ಎಂದಳು.

"ಮರೆತೇ ಹೋಯ್ತು. ನೀನು ಬಾಬಾನ ದರ್ಶನ ಮಾಡಲೇ ಇಲ್ಲವಾ?"

"ನನ್ನ ಪರವಾಗಿ ನೀನೇ ದರ್ಶನ ಮಾಡು. ಆಶೀರ್ವಾದ ಪಡೆದುಕೋ. ಹಾಗೇ ನಾನು ಸಾರಿ ಕೇಳಿದೆ ಎಂದು ಹೇಳಿಬಿಡು ನಿಮ್ಮ ಬಾಬಾರಿಗೆ" ಅವಳು ನಕ್ಕಾಗ, ಅವನು ಅವಳ ಕೂದಲನ್ನು ಜುಂಗಿಸಿದ.

"ನಿನಗೆ ಗಂಭೀರವೇ ಇಲ್ಲ. ಅದೇ ಹಳೆಯ ಮಾಲಾನೇ..."

"ಹುಟ್ಟುಗುಣ ಸುಟ್ಟರೂ ಹೋಗದು" ಅನ್ನೋ ಗಾದೇನೇ ಇದೆ. ನಾನು ಹೀಗೆ ಇರೋದ್ರಿಂದಲೇ, ನನಗೂ ಯಾರೂ ಸರಿ ಹೋಗುಲ್ಲ; ನಾನೂ

ಯಾರಿಗೂ ಸರಿ ಹೋಗುಲ್ಲ" ಅವಳು ನಕ್ಕರೂ, ಆ ನಗುವಿನ ಹಿಂದೆ ವ್ಯಥೆ ಅಡಗಿದೆ ಎಂದು ಅವನಿಗೆ ಅರ್ಥವಾಗಿತ್ತು. ಬಾಗಿಲ ಬಳಿಯೇ ಇದ್ದ ಆಟೋ ಹಿಡಿದು ಹತ್ತಿದಳು. ಅವನ ಕಣ್ಣಂಚಿನಲ್ಲಿ ನೀರು ಜಿನುಗಿತ್ತು.

"ನಿನ್ನನ್ನ ಮತ್ತೆ ನೋಡೋದೇ ಇಲ್ಲ ಅಂತ ಅಂದ್ಕೊಂಡಿದ್ದೆ... ಬಾಬಾರ ಲೀಲೆ ಹೇಗಿದೆಯೋ ?" ಎಂದುಕೊಂಡು ನಿಟ್ಟುಸಿರುಬಿಟ್ಟ.

ೱ ೱ ೱ

ಅದೇ ರಾತ್ರಿ ಭಾರ್ಗವ ಭಾಸ್ಕರನಿಗೆ ಫೋನು ಮಾಡಿ, ತನ್ನ ಪರಿಚಯವನ್ನು ಹೇಳಿಕೊಂಡ. ಮಾಲಾಳಿಂದ ಭಾರ್ಗವನ ಹೆಸರನ್ನು ಮಾತ್ರ ಕೇಳಿದ್ದ. ಇವನೇಕೆ ತನಗೆ ಫೋನು ಮಾಡಿದ ಅಂತ ಗಾಬರಿಯೇ ಆಗಿತ್ತು. ಸೂಟ್‌ಕೇಸನ್ನು ಕೊಡಲು ಹೋಗಿದ್ದು ನೆನಪಾಗಿತ್ತು. "ನಾನು ನಿಮ್ಮನ್ನು ಭೇಟಿಯಾಗಬೇಕು. ಇನ್ನೊಂದೆರಡು ದಿನಗಳ ನಂತರ ನಾನು ಬಾಂಬೆಗೆ ಬರ್ತಿದೀನಿ. ಎಲ್ಲಿ ಸಿಗ್ತೀರಿ ?" ಅಂತ ಕೇಳಿದ.

"ನಾನು ನಾಳೆಯ ದಿನ ಬೆಂಗಳೂರಿಗೆ ಬರ್ತಿದೀನಿ. ಅಲ್ಲೇ ಭೇಟಿಯಾಗೋಣ. ನೀವು ಎಲ್ಲಿ ಸಿಗ್ತೀರಿ ?" ಅವನೂ ಪ್ರಶ್ನಿಸಿದ. ಭಾರ್ಗವ ತನ್ನ ಫೋನು ನಂಬರನ್ನು, ಮನೆಯ ವಿಳಾಸವನ್ನು ಕೊಟ್ಟ. "ನನ್ನ ನಿಮ್ಮ ಪರಿಚಯ, ಭೇಟಿ ಸದ್ಯಕ್ಕೆ ಗುಟ್ಟಾಗಿರಲಿ. ಬೇರೆ ಯಾರಿಗೂ ತಿಳಿಯುವುದು ಬೇಡ. ಇದು ನನ್ನ ರಿಕ್ವೆಸ್ಟ್." ಅಂತಂದ.

"ಹಾಗೇ ಆಗಲಿ ನಾನು ಯಾರಿಗೂ ಹೇಳುಲ್ಲ" ಎಂದ ಭಾಸ್ಕರ. ಭಾಸ್ಕರ ಯಾರು ಅಂತ ತಿಳಿಯದಿದ್ದರೂ, ಭಾರ್ಗವ ಅವನನ್ನು ಕಾಣಲು ಉತ್ಸುಕನಾಗಿದ್ದ.

"ನಾನು ಭಾಸ್ಕರ" ಬಾಗಿಲ ಬಳಿ ಇದ್ದ ವ್ಯಕ್ತಿ ತನ್ನ ಪರಿಚಯವನ್ನು ಹೇಳಿಕೊಂಡಾಗ, ಭಾರ್ಗವ ಅವನನ್ನೇ ಎವೆ ಇಕ್ಕದೆ ನೋಡಿದ. ಆಕಾಶ ಇವನ ತದ್ರೂಪು ಎಂದು ಆ ಗಳಿಗೆಯಲ್ಲೇ ಅನ್ನಿಸಿತು. ಈ ಮನಮೋಹಕ ರೂಪಕ್ಕೆ ಮಾಲಾ ಮರುಳಾಗಿರಬಹುದೇ ಅಂತ ಅನ್ನಿಸಿದಾಗ, ಅಸೂಯೆಯ ಮುಳ್ಳು ಚುಚ್ಚಿತು. ಅಪರೆ ಕ್ಷಣದಲ್ಲಿ ಸರಿ ಮಾಡಿಕೊಂಡ. ಈ ಮೊದಲು ಸೂಟಕೇಸನ್ನು ಕೊಡಲು ಬಂದಿದ್ದ ವ್ಯಕ್ತಿ ಎಂದು ನೆನಪಾಗಿತ್ತು.

"ಬನ್ನಿ. ನಾನೇ ಭಾರ್ಗವ" ಎಂದು ಕೈ ಚಾಚಿದ. ಭಾಸ್ಕರನ ಕೈ ಕುಲುಕಿದ. ಭಾಸ್ಕರ ಒಳ ಬಂದು ಕುಳಿತು ಸುತ್ತಲೂ ನೋಡಿದ.

"ಮಾಲಾ ನನ್ನ ಬಗ್ಗೆ ನಿಮ್ಮ ಬಗ್ಗೆ ಹೇಳಿರಬೇಕಲ್ಲವೇ ?" ಕೇಳಿದ.

"ಇಲ್ಲ. ನಿಮ್ಮ ಬಗ್ಗೆ ನಾವುಗಳು ಎಂದೂ ಮಾತಾಡಿಲ್ಲ."

"ಹಾಗಾದರೆ ನಾನೇ ನನ್ನ ವಿವರಗಳನ್ನು ಹೇಳಿಕೊಳ್ಳಬೇಕು" ಎಂದು ಕೊಂಡು ತಾನು ಅವಳ ಮನೆಯಲ್ಲೇ ಬೆಳೆದುದು. ಅವಳು ಅವನನ್ನು ಪ್ರೀತಿಸಿದ್ದು, ಮಧು ಮದುವೆಗೆ ಅಡ್ಡಿ ತಂದದ್ದು, ಧ್ರುವನನ್ನು ಮಾಲಾ ಮದುವೆಯಾದುದನ್ನೆಲ್ಲಾ ವಿವರವಾಗಿ ತಿಳಿಸಿದ. ಆ ಮನೆಯ ಋಣ, ನನ್ನ ಸ್ವಾಭಿಮಾನ, ಮಾಲಾ ನನ್ನಿಂದ ದೂರವಾಗುವಂತೆ ಮಾಡಿದವು. ಆದರೆ ಅದರಿಂದ ಮಾಲಾ ಅನುಭವಿಸಿದ ಕಷ್ಟಗಳು ಅನೇಕ. ಧ್ರುವ ಅವಳನ್ನು ಸುಖವಾಗಿಟ್ಟುಕೊಳ್ಳಲಾರ. ಅವರುಗಳು ಹೇಗೆ ಅಂತ ನಿಮಗೂ ತಿಳಿದಿರಬೇಕು ಅಲ್ವಾ ?"

"ಸ್ವಲ್ಪ ಸ್ವಲ್ಪ ತಿಳಿದಿದೆ. ಎಷ್ಟಾಗಲೀ ನಾನು ಅಲ್ಲಿ ಕೆಲಸದಲ್ಲಿರುವವನು."

"ಸರಿ ಬಿಡಿ ನಾನೇ ಹೇಳ್ತೇನೆ" ಎನ್ನುತ್ತಾ ಪ್ರತಾಪ ಧ್ರುವ ಮಾಡಿದ ಸಂಚನ್ನು ತಿಳಿಸಿ, ನನ್ನ ಮೇಲೆ ಅಪವಾದ ಹೊರಿಸಿ ನನ್ನನ್ನು ಜೈಲಿಗೆ ಕಳಿಸಿದ್ದರು. ಈಗ ಅವರುಗಳೇ ನಿಜವಾದ ಅಪರಾಧಿಗಳು ಅಂತ ಅನ್ನಿಸ್ತಿದೆ. ಆದರೆ ನನ್ನ ಹತ್ತಿರ ಎವಿಡೆನ್ಸ್ ಇಲ್ಲ. ಅದಕ್ಕೆ ನಾನೊಂದು ಪ್ಲಾನ್ ಮಾಡಿದ್ದೀನಿ ಅಂತ ಹೇಳಿ, ತನ್ನ ಪ್ಲಾನನ್ನು ವಿವರಿಸಿದ.. ನೀವೂ ನಮ್ಮ ಜೊತೆಗೆ ಇರಬೇಕು ಅಂತ ಹೇಳಿದ.

"ನನಗೂ ಅವರ ವರ್ತನೆ, ನಡೆವಳಿಕೆ ವಿಚಿತ್ರವಾಗಿಯೇ ಕಂಡಿತು. ಆದರೆ ನಿಮ್ಮಷ್ಟು ಆಳವಾಗಿ ಯೋಚಿಸಲಿಲ್ಲ. ಅಲ್ಲದೆ ಮಾಲಾ ತವರುಮನೆಗೆ ವಾಪಸ್ಸು ಬಂದುಬಿಟ್ಟಿದ್ದರು."

"ನಿಮ್ಮ ಮಾಲಾಳ ಸ್ನೇಹದಲ್ಲಿ ಅತಿ ಸಲುಗೆ ಇತ್ತು. ಆದರೂ ಬಹುವಚನದಲ್ಲಿ ಕರೀತೀರಲ್ಲ ಯಾಕೆ ?"

"ಅವರು ನನ್ನ ಬಾಸ್ ತಂಗಿಯಾಗಿದ್ದರು. ಮೇಡಂ ಅಂತಲೇ ಕರೀತಿದ್ದೆ. ಅದೇ ಅಭ್ಯಾಸ. ಅಲ್ಲದೇ ನಾನಾಗಿಯೇ ಅವರೊಡನೆ ಸಲುಗೆಯಿಂದಿರಲಿಲ್ಲ. ಅವರ ಇಷ್ಟಕ್ಕೆ ವಿರೋಧಿಸಲಾಗದೇ ಅವರೊಡನೆ...."

"ಹೋಗಲಿ ಬಿಡಿ ಆ ಮಾತು ಈಗ ಯಾಕೆ ?" ಅಂತ ಬಾಯಿ ಹೇಳಿದರೂ, ಅವಳು ತನ್ನೊಡನೆಯೂ ಹೀಗೇ ವರ್ತಿಸಿದ್ದಳು, ತನ್ನನ್ನು ಪ್ರೀತಿಸುತ್ತಿದೀನಿ ಅಂತ ಅವಳೇ ಮೊದಲು ಹೇಳಿದ್ದು... ಎಂದು ಚಿಂತಿಸುತ್ತಿದ್ದ. ಭಾಸ್ಕರ ಮಾತನಾಡುತ್ತಿದ್ದ.

"ನನಗೂ ಮದುವೆಯಾಗಿತ್ತು. ಇಲ್ಲದಿದ್ದರೆ ನಾವಿಬ್ಬರೂ ಮದುವೆಯಾಗ ಬಹುದಾಗಿತ್ತು." ಭಾರ್ಗವ ನಕ್ಕ. ಭಾಸ್ಕರನೂ ನಕ್ಕಂತೆ ಮಾಡಿದ.

"ಅವಳೇನೂಂತ ನನಗೆ ಗೊತ್ತು. ಅವಳು ಎಂದಾದ್ರೂ ಮದುವೆಗೆ ಪ್ರಪೋಸ್ ಮಾಡಿದ್ದ ನೆನಪಿದೆಯಾ ನಿಮಗೆ ?"

"ಇಲ್ಲ. ಅವರೆಂದೂ ಮದುವೆಯಾಗೋಣ ಅಂತ ಹೇಳಲಿಲ್ಲ. ನಾನೂ ಆ ಬಗ್ಗೆ ತಲೆ ಕೆಡಿಸಿಕೊಳ್ಳಲಿಲ್ಲ. ನನಗೂ ನನ್ನದೇ ಆದ ಸಂಸಾರವಿತ್ತು..."

"ಆ ಸಂಸಾರವನ್ನು ಹಾಳು ಮಾಡಲು ಮಾಲಾಳಿಗೆ ಇಷ್ಟವಿರಲಿಲ್ಲ ಅಂತ ಕಾಣುತ್ತೆ. ಅವಳ ಉದ್ದೇಶವೇ ಬೇರೆಯಾಗಿತ್ತು. ಧ್ರುವನಿಂದ ದೂರ ದೂರವೇ ಇರಲು ಮಾಡಿದ ಪ್ಲಾನು. ಅದು ನಿಮ್ಮಿಬ್ಬರನ್ನು ಹತ್ತಿರಕ್ಕೆ ತಂದಿಳು. ನೀವು ಇಬ್ಬರೂ ಮಾಡಿದ್ದು ತಪ್ಪು ಅಂತಲೂ ಹೇಳಲಾರೆ; ಸರಿ ಅಂತಲೂ ಹೇಳಲಾರೆ. ಈಗ ಮಾಲಾ ಕೇಳಿದರೆ ನೀವು ಅವಳನ್ನು ಮದುವೆಯಾಗಲು ಸಿದ್ಧರಾಗಿದೀರಾ ?"

"ನಂಗೊತ್ತಿಲ್ಲ. ನಾನು ಆ ಬಗ್ಗೆ ಯೋಚಿಸಿಯೇ ಇಲ್ಲ. ಅವರು ಮಾತ್ರ ನಾನು ಅಪವಿತ್ರ ತನ್ನ ಹತ್ತಿರಕ್ಕೇ ಬರಬಾರದೆಂದು ಒರಟಾಗಿ ಹೇಳಿಬಿಟ್ಟರು."

"ನೀವು ಅದನ್ನು ನಂಬಿ ಬಿಟ್ರಾ ?"

"ಹಾಗಾದ್ರೆ ಕಿಡ್ನಾಪ್, ರೇಪ್ ಎಲ್ಲಾ ಸುಳ್ಳಾ ?" ಮಾಲಾ ಯಾಕೆ ಸುಳ್ಳು ಹೇಳಿದ್ರು ? ಧ್ರುವನ ಜೊತೆ ಸಂಸಾರ ಮಾಡೋಕೆ ಆಗೋಲ್ಲ ಅಂತ ಹೇಳಿದ್ದೆಲ್ಲಾ ಕತೇನ ?"

"ಇಲ್ಲ. ಎಲ್ಲವೂ ನಿಜ. ಈಗಲೂ ಅವಳಿಗೆ ಧ್ರುವನ ಜೊತೆ ಸಂಸಾರ ಮಾಡಲು ಸುತರಾಂ ಇಷ್ಟವಿಲ್ಲ. ಆದರೆ ಈ ಕಿಡ್ನಾಪ್, ರೇಪ್ ಹಿಂದೆ ಇವರುಗಳದ್ದೇ ಕೈವಾಡವಿದೆ ಅಂತ ನನಗೆ ಅನುಮಾನ..."

"ಹಾಗಾದ್ರೆ... ಇವರುಗಳೇ ಕಿಡ್ನಾಪ್ ಮಾಡಿಸಿದಾರಾ ? ಧ್ರುವ ರೇಪ್ ಮಾಡಿದನಾ ? ಧ್ರುವನಿಗೆ ಏಡ್ಸ್‌ನಂತಹ ಕೆಟ್ಟ ಕಾಯಿಲೆ ಅಂಟಿದೆ... ಅದಕ್ಕೇ ಮಾಲ ಅಪವಿತ್ರ ಅಪವಿತ್ರ ಅಂತ ನನಗೆ ಹೇಳಿದ್ದು."

"ಇಲ್ಲ. ಧ್ರುವ ಎಂದೂ ಬಲಾತ್ಕಾರಕ್ಕೆ ಪ್ರಯತ್ನ ಮಾಡಿಲ್ಲ. ಹೆಂಡತಿಯ ಮೇಲೆ ಹಕ್ಕನ್ನು ಚಲಾಯಿಸಿಲ್ಲ. ಅದು ಅವನ ಪರ್ಸನಲ್ ಪ್ರಾಬ್ಲಂ... ಅದೇ ಅವನು ಅವಳಿಗೆ ಮಾಡಿದ ಅವಮಾನ. ರೇಪ್ ಮಾಡಿದ ವ್ಯಕ್ತಿ ಬೇರೆ ಯಾರೂ ಅಲ್ಲ. ರಘು !"

"ರಘು ! ಧ್ರುವನ ತಮ್ಮ! ನಿಮಗೆ ಹೇಗೆ ಗೊತ್ತಾಯಿತು."

"ಅವನ ಬ್ಯಾಕ್‌ಗ್ರೌಂಡ್ ಚೆನ್ನಾಗಿಲ್ಲ. ಅವನಿಗೆ ಜೈಲು ಶಿಕ್ಷೆ ಆಗಿತ್ತು. ಪ್ರತಾಪ ಸಿಕ್ಕಾಬಟ್ಟೆ ಹಣ ಖರ್ಚು ಮಾಡಿ ಅವನನ್ನು ಖುಲಾಸೆ ಮಾಡಿಸಿದ."

"ಇದೆಲ್ಲಾ ನಿಮಗೆ ಹೇಗೆ ತಿಳಿಯಿತು."

"ನಾನು ಮಾಹಿತಿಗಳನ್ನೆಲ್ಲಾ ಸಂಗ್ರಹಿಸಿದೆ. ಆದರೂ ಸಾಕಷ್ಟು ಪುರಾವೆಗಳಿಲ್ಲ. ಸುಮ್ಮನೆ ಆರೋಪ ಹೊರಿಸಿ, ಕೇಸ್ ಹಾಕಿದರೂ, ಸಾಕ್ಷಿಗಳು ಬೇಕು. ಇಲ್ಲದಿದ್ದರೆ, ಅವರ ಕೋಪ ಇನ್ನೂ ಹೆಚ್ಚುತ್ತೆ. ಮುಂದೆ, ಮಾಲಾ, ಮಧು ಅವರುಗಳ ಜೀವಕ್ಕೇ ಅಪಾಯವಾಗುತ್ತದೆ. ಪ್ರತಾಪ ಎಂತಹ ಕೆಲಸವನ್ನು ಬೇಕಾದರೂ ಮಾಡಿಸಬಲ್ಲ. ಅವನ ಬಳಿ ಸಾಕಷ್ಟು ಹಣವಿದೆ. ಸುಳ್ಳು ಸಾಕ್ಷಿಗಳನ್ನು ಸೃಷ್ಟಿಸಿ, ನಮ್ಮನ್ನೇ ತಪ್ಪಿತಸ್ಥರನ್ನಾಗಿ ಮಾಡುವ ಚಾಕಚಕ್ಯತೆ ಅವನಲ್ಲಿದೆ."

"ಮಧುಕರ್ ಸಾರ್‌ಗೆ ಈ ವಿಷಯಗಳು ಗೊತ್ತಿಲ್ಲವಾ ?"

"ಗೊತ್ತಿಲ್ಲದೇ ಏನು ? ಎಲ್ಲಾ ಗೊತ್ತಿದ್ದೂ ಸುಮ್ಮನಿದ್ದಾನೆ. ಅವನಿಗೆ ಭಯ. ಒಂದು ಪ್ರತಾಪನದ್ದು. ಇನ್ನೊಂದು ಮನೆತನದ ಮರ್ಯಾದೆ ಪ್ರಶ್ನೆ. ನೀವೇ ಹೇಳಿ ಭಾಸ್ಕರ್. ಒಂದು ವೇಳೆ ನಿಮ್ಮ ಮನೆಯಲ್ಲೇ ಇಂತಹ ಕೇಸು ನಡೆದಿದ್ದರೆ ಏನು ಮಾಡ್ತಿದ್ರಿ ?" ಭಾಸ್ಕರ ತಬ್ಬಿಬ್ಬಾದ. ಒಂದು ಗಳಿಗೆ ತಡೆದು ನುಡಿದ.

"ಬಹುಶಃ ಪೋಲೀಸ್ ಕಂಪ್ಲೆಂಟ್ ಕೊಡುತ್ತಿದ್ದೆ."

"ಅದು ಕರೆಕ್ಟ್. ಇಲ್ಲಿ ನೋಡಿ, ಮಾಲಾಳ ಮೇಲೆ ಅತ್ಯಾಚಾರ ನಡೆದಿದೆ. ಧ್ರುವನ ಮನೆಯವರೂ ಸುಮ್ಮನಿದ್ದಾರೆ ಯಾಕೆ ? ಅವರೇ ಕಳ್ಳರು... ಇನ್ನು ಈ ಮಧು, ಮೊದಲ್ನಿಂದ ಧ್ರುವನ ಬಾಲದ ತರಹ ಆಗಿ ಬಿಟ್ಟಿದಾನೆ. ಅವರುಗಳ ವಿರುದ್ಧ ಹೋರಾಡಲು ಹೆದರುತ್ತಾನೆ. ತಾನು ಸಾಕಷ್ಟು ತಪ್ಪುಗಳನ್ನೂ ಮಾಡಿದ್ದಾನೆ. ಆ ಭಯ ಇವನಿಗೆ..."

"ಹಾಗಂತ, ತಂಗಿಗೆ ಆದ ಅನ್ಯಾಯವನ್ನು ಸಹಿಸಿಕೊಂಡು ಯಾರಾದ್ರೂ ಸುಮ್ಮನಿರ್ತಾರಾ ? ನೀವು ಕೇಳಬೇಕಾಗಿತ್ತು."

"ನನಗೂ ಅವನಿಗೂ ಮಾತಿಲ್ಲದೇ ವರ್ಷಗಳು ಕಳೆದು ಹೋಗಿವೆ. ನನಗೆ ಅವನೊಡನೆ ಮಾತು ಬೇಕಿಲ್ಲ. ಅವನಿಗೆ ನನ್ನೊಡನೆ ಮಾತನಾಡಲು ಮುಖವಿಲ್ಲ... ಹೋಗಲಿ ನೀವು ಹೇಳ್ತೀರಾ ?"

"ನಾನಾ ? ನನಗೆ ಆ ಸಲುಗೆಯಿಲ್ಲ. ಅಲ್ಲದೆ ನಾನು ಈಗ ಧ್ರುವನ

ಕಂಪೆನಿಯಲ್ಲಿ ಕೆಲಸದಲ್ಲಿರುವವನು. ಇನ್ನೂ ಒಂದು ವಿಷಯ, ನನ್ನ ಮಾಲಾರ ಸ್ನೇಹದಿಂದ ಅವರಿಗೆ ನನ್ನ ಮೇಲೆ ಒಳ್ಳೆಯ ಅಭಿಪ್ರಾಯವಿಲ್ಲ."

"ನಿಮಗೂ ಅವರಿಗೂ ಎಂದಾದ್ರೂ ಮಾತುಕತೆ ನಡೀತಾ ?"

"ಹೂಂ. ಮಾಲಾ ಪ್ರೆಗ್ನೆಂಟ್ ಆಗಿದಾಗ ಕರೆಸಿ, ಮಾಲಾಳನ್ನು ಮದುವೆಯಾಗುವಂತೆ ಒತ್ತಾಯ ಮಾಡಿದ್ದರು. ಆದರೆ ಆಮೇಲೆ ಅದೇನೆನ್ನಿಸಿತೋ ಏನೋ, ನನ್ನ ರೆಸಿಗ್ನೇಷನ್‌ನೂ ಅಕ್ಸೆಪ್ಟ್ ಮಾಡಿಕೊಳ್ಳಲಿಲ್ಲ. ಯಾರಿಗೂ ಈ ವಿಷಯವನ್ನು ತಿಳಿಸಬಾರದು. ಅದರಲ್ಲೂ ಧ್ರುವನ ಮನೆಯವರಿಗೆ ಈ ವಿಷಯ ತಿಳಿಯಬಾರದು ಅಂತ ನನ್ನಿಂದ ಮಾತನ್ನು ತೆಗೆದುಕೊಂಡರು."

"ನೋಡಿದ್ರಾ.... ಅದೇ ಭಯ. ಧ್ರುವನಿಗೆ ತಿಳಿದು ಏನಾದರೂ ಗಲಾಟೆಯಾದರೆ ಮನೆಯ ಮರ್ಯಾದೆ ಹೋಗುತ್ತದೆ ಅನ್ನೋ ಸಂಕಟ."

"ಎಲ್ಲಾ ರಹಸ್ಯವಾಗಿರಲಿ ಅಂತ ಅನ್ನಿಸಿದ್ದರೆ ಅದರಲ್ಲಿ ತಪ್ಪೇನು ಸಾರ್ ? ಮಾಲಾಳ ಮಗುವನ್ನು ಅವರೇ ಸಾಕಿಕೊಳ್ಳುತ್ತಿದ್ದಾರೆ.... ಅದೂ ದೊಡ್ಡತನ ಅಲ್ವಾ ?"

"ನೋಡೋರ ಕಣ್ಣಿಗೆ ದೊಡ್ಡತನ. ಧ್ರುವ ಬಂದು ಮಗೂನ ಎಲ್ಲಿ ಕಿತ್ತಕೊಂಡು ಬಿಡ್ತಾನೋ ಅನ್ನುವ ಭಯ. ಧ್ರುವ ಬೆದರಿಕೆ ಹಾಕಿದ್ನಂತೆ."

"ಹೌದಾ ? ಈ ವಿಷಯ ನನಗೆ ಗೊತ್ತಿರಲಿಲ್ಲ."

"ಒಟ್ಟಿನಲ್ಲಿ ಧ್ರುವನಿಗೆ, ತನ್ನ ಹೆಂಡತಿಗೆ ಹುಟ್ಟುವ ಮಕ್ಕಳು ಬೇಕು.ಆಗ ನಿಮ್ಮಿಬ್ಬರ ಮಗು ಸಿಕ್ಕಿದ್ದರೆ, ಕತೆ ಅಷ್ಟಕ್ಕೇ ಮುಗಿಯುತ್ತಿತ್ತೋ ಏನೋ. ಮಾಲಾ ತಾನು ಪ್ರೆಗ್ನೆಂಟ್ ಆಗಿರಲಿಲ್ಲ ಅಂತ ಹೇಳಿದಳಂತೆ. ಅದಕ್ಕೇ ರಘೂನ ಅವಳಿದ್ದ ಊರಿಗೆ ಕಳಿಸಿದ್ದ. ಮಾಲಾ ಅವನ ಮಾತಿಗೆ ಒಪ್ಪಲಿಲ್ಲವೇನೋ... ಆಮೇಲೆ ಪ್ಲಾನ್ ಮಾಡಿ, ಏನೇನೋ ಮಾಡಿಬಿಟ್ಟರು. ಅನ್ಯಾಯವಾದದ್ದು ಮಾಲಾಳಿಗೆ ತಾನೇ ?"

"ನಾನು, ನೀವು, ಮಧು ಎಲ್ಲರಿಂದಲೂ ಅವಳಿಗೆ ಒಂದಲ್ಲ ಒಂದು ರೀತಿಯಲ್ಲಿ ಮೋಸವಾಗಿದೆ. ಅದನ್ನು ನಾವು ಈಗ ಸರಿಪಡಿಸಲಾಗುವುದಿಲ್ಲ. ಆದರೆ ನ್ಯಾಯವನ್ನು ದೊರಕಿಸಿಕೊಡುವ ಪ್ರಯತ್ನವನ್ನಾದರೂ ಮಾಡಬೇಕು. ಮಧು ಹತ್ತಿರ ಮಾತನಾಡಿದೀನಿ ಅಂತ ವಸುಧಾ ಹೇಳಿದಾರೆ... ಈಗ ನೀವೂ ನಮ್ಮ ಕಡೆಗೆ ಇದೀರಿ ಅಂತ ಅಂದುಕೊಳ್ತೀನಿ."

"ಸರಿ. ನಾನೇನೋ ನಿಮ್ಮ ಕಡೆಗೇ. ಆದರೆ ನಮ್ಮ ಮನೆಯವರಿಗೆ ಯಾವ

ವಿಷಯವೂ ತಿಳಿಯಬಾರದು. ನನ್ನ ತಾಯಿ ವಯಸ್ಸಾದವರು. ನನ್ನ ಅಕ್ಕನ ಮಗಳೇ ನನ್ನ ಹೆಂಡತಿ. ನನಗೂ ಒಬ್ಬ ಮಗನಿದಾನೆ. ಏನೋ ತಕ್ಕಮಟ್ಟಿಗೆ ಇದೀವಿ."

"ಆದರೆ ಮಾಲಾಳ ಸ್ನೇಹ ಬೆಳೆಸಿದಾಗ, ಈ ಆಲೋಚನೆಗಳಿರಲಿಲ್ಲ ಅಲ್ವಾ?"

"ಆಗಿನ ಸ್ಥಿತಿಯೇ ಬೇರೆಯಾಗಿತ್ತು. ಮದುವೆ ಆದದ್ದು ನನ್ನ ತಂದೆಯ ಬಲವಂತಕ್ಕೆ. ಆ ಕಾರಣದಿಂದ ನಾನು ನನ್ನ ಪತ್ನಿಯೊಡನೆ ಸಂಬಂಧವನ್ನೇ ಇಟ್ಟುಕೊಂಡಿರಲಿಲ್ಲ. ಆದರೆ ಮಾಲಾ ಮೇಡಂ ಜೊತೆ ಸಂಬಂಧ ಬೆಳೆಸಿದಾಗ, ಪತ್ನಿಗೆ ದ್ರೋಹ ಮಾಡ್ತಿದೀನಿ ಅಂತ ಅನ್ನಿಸ್ತು."

"ಆದರೆ ನಿಜ ಹೇಳಲು ಹೆದರಿದಿರಿ ಅಲ್ವಾ?"

"ನಿಜ ಹೇಳಿದ್ರೆ, ನನ್ನ ತಾಯಿ ಎದೆ ಒಡೆದು ಸತ್ತು ಹೋಗ್ತಿದ್ರು."

"ಹಾಗಾದರೆ ಇದುವರೆಗೂ ಯಾರಿಗೂ ಯಾವ ಅನುಮಾನವೂ ಬಂದಿಲ್ವಾ?"

"ಇಲ್ಲ. ಒಂದು ವೇಳೆ ಈಗ ಅನುಮಾನ ಬಂದ್ರೂ ಯಾರೂ ನಂಬುಲ್ಲ."

"ಆಕಾಶನನ್ನು ನೋಡಿದೂ ನಂಬುಲ್ಲ ಅಂತೀರಾ? ಅವನು ನಿಮ್ಮ ತದ್ರೂಪು. ನಿಮ್ಮ ಹೆಂಡತಿಗೆ ಹೊಟ್ಟೆ ಕಿಚ್ಚು ಬರದೇ ಇರುತ್ತಾ?"

"ಅವಳಿಗೂ ಒಬ್ಬ ಮಗನನ್ನು ಕೊಟ್ಟಿದೀನಿ. ಅವನ ಹೆಸರು ಆದಿತ್ಯ ಅಂತ. ಅವನೂ ನನ್ನ ರೂಪವನ್ನೇ ಹೋತಿದಾನೆ. ಆಕಾಶ, ಆದಿತ್ಯ ಅವಳಿ ಮಕ್ಕಳಂತೆ ಕಾಣುತ್ತಾರೆ." ಅವನು ಹೆಮ್ಮೆಯಿದ ಹೇಳಿಕೊಂಡಾಗ ಭಾರ್ಗವ ಓರೆಗಣ್ಣಿನಿಂದ ಅವನನ್ನೇ ನೋಡಿದ.

"ಓ.ಕೇ. ನೀವು ಯಾವಾಗ ವಾಪಸ್ಸು ಹೊರಟಿದೀರಿ! ಅಂದ್ಹಾಗೆ ಧ್ರುವನ ಮನೆಯಲ್ಲಿ ಒಂದು ಪಾರ್ಟಿ ಮಾಡ್ತಾ ಇದಾರಂತೆ. ನಿಮಗೂ ಆಹ್ವಾನ ಬಂದಿರಬಹುದು ಅಲ್ವಾ?"

"ಹುಂ ಬಂದಿದೆ. ಆದರೆ ಹೋಗೋಕೆ ನನಗೆ ಮನಸ್ಸಿಲ್ಲ."

"ಹಾಗೆ ಮಾಡಬೇಡಿ ದಯವಿಟ್ಟು ಅಟೆಂಡ್ ಮಾಡಿ. ನಿಮ್ಮ ಹತ್ತಿರ ಮೊಬೈಲ್ ಫೋನು ಇದೆ ಅಲ್ವಾ? ಅಲ್ಲಿ ಪಾರ್ಟೀಲಿ ನೀವೇನು ಮಾಡಬೇಕು ಅಂತ ನಾನು ನಿಮಗೆ ಫೋನಲ್ಲಿ ತಿಳಿಸ್ತೀನಿ."

"ಇಷ್ಟು ಹೊತ್ತು ಬರೀ ಮಾತಿನಲ್ಲೇ ಕಾಲ ಕಳೆದಾಯ್ತು. ಕಾಫಿ ಇಲ್ಲ ,

ತಿಂಡಿ ಇಲ್ಲ. ಬನ್ನಿ ಅಲ್ಲಿ ಕೆಳಗೆ ಹೋಟೆಲಿದೆ ಊಟ ಮಾಡೋಣ" ಮುಂಬಾಗಿಲಿಗೆ ಬೀಗ ಹಾಕಿದ. ಇಬ್ಬರೂ ಕೆಳಗಿಳಿದು ಬಂದರು. "ಇಲ್ಲಿ ನಿಮ್ಮ ಪರಿಚಯದವರು ಯಾರೂ ಇಲ್ಲ ತಾನೇ ?"

"ಇಲ್ಲ ಅಂತ ಕಾಣುತ್ತೆ. ಒಂದು ವೇಳೆ ಇದ್ರೂ ನಾನು ಹ್ಯಾಂಡಲ್ ಮಾಡ್ತೀನಿ. ಯೂ ಡೋಂಟ್ ವರಿ."

"ನನಗೆ ಮಾಲಾಳದ್ದೇ ವರಿ. ಅವಳಿಗೇನಾದರೂ ಅಪಾಯವಾದರೆ ಅಂತ..." ಅವನು ಲೊಚಗುಟ್ಟಿದ. ಈಗಲೂ ಭಾರ್ಗವ ಮಾಲಾಳನ್ನು ಪ್ರೀತಿಸುತ್ತಿರಬಹುದು ಅಂತೆನಿಸಿತ್ತು.

ಇಬ್ಬರೂ ಊಟ ಮುಗಿಸಿದರು. "ನೀವು ಆ ದಿನ ಅದಲು ಬದಲಾಗಿದ್ದ ಸೂಟ್‌ಕೇಸನ್ನು ಹಿಂತಿರುಗಿಸಲು ಬಂದಿದ್ರಿ. ಅವರು ನೀವೇ ಇರಬಹುದು ಅಂತ ನನಗೆ ಗೊತ್ತಿರಲಿಲ್ಲ" ಎಂದ.

"ನನಗೂ ಅಷ್ಟೇ ನೀವು ಅದೇ ಭಾರ್ಗವ ಅಂತ ಗೊತ್ತಿರಲಿಲ್ಲ" ಈಗ ನೀವು ಏನು ಮಾಡ್ತಿದೀರಿ !"

"ನಿಮ್ಮ ಎದುರಿಗೆ ಕುಳಿತು ಊಟ ಮಾಡ್ತಾ ಇದೀನಿ" ತನ್ನ ಜೋಕಿಗೆ ತಾನೇ ನಕ್ಕ. "ಸಾರಿ ತಮಾಷೆ ಮಾಡಿದೆ. ಒಂದು ಕಂಪೆನಿಯಲ್ಲಿ ಸೇಲ್ಸ್ ಎಕ್ಸಿಕ್ಯೂಟಿವ್ ಆಗಿದೀನಿ. ಸಾಯಂಕಾಲದ ಹೊತ್ತು ಸಾಯಿಬಾಬಾ ಮಂದಿರಕ್ಕೆ ಹೋಗ್ತೀನಿ. ಅದು ನನ್ನ ವೃತ್ತಿ. ಇದು ನನ್ನ ಪ್ರವೃತ್ತಿ" ಎಂದ ಮತ್ತೆ ನಗುತ್ತ.

"ನೀವು ತುಂಬಾ ಚೆನ್ನಾಗಿ ಮಾತನಾಡ್ತೀರ" ಇವನು ಹೊಗಳಿದ.

"ಅದೇ ನನ್ನ ಬಂಡವಾಳ. ಸೇಲ್ಸ್ ಅಂತ ಹೊರಟ ಮೇಲೆ ಬಾಯಿ ತೆಗೆಯದೇ ಇದ್ದರೆ ಆಗುತ್ಯೇ ?" ಮತ್ತೆ ನಕ್ಕ.

"ಬಾಂಬೆಗೆ ಬಂದಾಗ ನಮ್ಮ ಮನೆಗೆ ಬನ್ನಿ. ನಮ್ಮ ತಾಯಿಗೆ ನೀವು ತುಂಬಾ ಮೆಚ್ಚುಗೆ ಆಗ್ತೀರಿ."

"ಬರ್ತೀನಿ. ಆದರೆ ಈ ಸಾರಿ ಬೇಡ. ನನಗೆ ನಿಮಗೆ ಪರಿಚಯವಾಗಿರುವುದು ಹೆಚ್ಚಿನ ಜನಕ್ಕೆ ತಿಳಿಯದಿದ್ದರೇ ಒಳ್ಳೆಯದು."

"ಊಟ ಚೆನ್ನಾಗಿತ್ತು. ಥ್ಯಾಂಕ್ಸ್."

"ಏನ್ರೀ ನೀವು ಹೋಟೆಲ್ಲಿನ ಊಟವನ್ನು ಚೆನ್ನಾಗಿತ್ತು ಅಂತ ಅಂತೀರಲ್ಲ. ಮುಂದಿನ ಸಾರಿ ನೀವು ಬಂದಾಗ, ನಾನೇ ಅಡಿಗೆ ಮಾಡಿ ಬಡಿಸ್ತೀನಿ. ನಿಮಗೆ ಗೊತ್ತಾ ? ನಾನು ಅಡಿಗೆಯವರ ಮಗ. ನನ್ನ ಮಾವ, ಮಾಲಾಳ ಮನೆಯಲ್ಲಿ

ಅಡಿಗೆಯವರಾಗಿದ್ದರು. ಆದರೆ ಆ ಭೇದವನ್ನು ಅವಳ ತಂದೆ ಎಂದೂ ತೋರಿದವರಲ್ಲ. ನನ್ನನ್ನು ತಮ್ಮ ಸ್ವಂತ ಮಗನಿಗಿಂತ ಹೆಚ್ಚಾಗಿ ಬೆಳೆಸಿದರು. ಅವನ ಪ್ರೀತಿ ನನಗೆ ಶಾಪವಾಗಿ ಪರಿಣಮಿಸಿತು. ಅಲ್ಲಿಂದ ಶುರುವಾಯಿತು ನನ್ನ ದುರಂತ."

"ಆ ಬೇಸರವಿದ್ದರೂ, ಈಗ ಮಾಲಾಳಿಗೆ ನ್ಯಾಯವನ್ನು ದೊರಕಿಸಿ ಕೊಡಲು ಸಜ್ಜಾಗಿದೀರಿ, ಇದು ನಿಮ್ಮ ದೊಡ್ಡ ಗುಣ."

"ಮಾಲಾ ಆ ತಂದೆಯ ಮಗಳು. ಅವರು ನನಗೆ ಮಾಡಿದ ಸಹಾಯಕ್ಕೆ, ಉಪಕಾರಕ್ಕೆ ನಾನು ಏನು ಮಾಡಿದರೂ ಸಾಲದು. ಮಧು ಒಂದು ದಾರಿ ಹಿಡಿದ. ಮಾಲಾ ಇನ್ನೊಂದು ದಾರಿ ಹಿಡಿದಳು. ಆದರೂ ನಾನು ನಿಸ್ಸಹಾಯಕನಾದೆ. ಯಾಕೆ ಗೊತ್ತಾ?"

"ಬಹುಶಃ ಮಧು ಕಠೋರವಾದ ಮಾತುಗಳಿಂದ ನೋಯಿಸಿರ ಬಹುದು."

"ನಿಮಗೂ ಅದರ ಅನುಭವವಾಗಿದೆ ಅಲ್ವಾ? ಮಧು ಕೋಪಿಷ್ಠ. ಮಾಲಾ ಹಠವಾದಿ. ಇಬ್ಬರನ್ನೂ ತಿದ್ದಲು ನನಗೆ ಅವಕಾಶವಾಗಲಿಲ್ಲ. ಮಧುಗೆ ವಸುಧಾಳಂತಹ ಪತ್ನಿ ಸಿಕ್ಕಿದಳು... ಅವನು ಅದೃಷ್ಟ ಮಾಡಿದ್ದ. ಆದರೆ ಮಾಲಾ...? ಹುಂ. ನಿಟ್ಟುಸಿರು ಬಿಟ್ಟ.

"ಏಳೋಣ. ಈಗಾಗ್ಲೇ ಹೊತ್ತಾಗಿದೆ" ಇಬ್ಬರೂ ಹೊರಬಂದರು.

ಂ ಂ ಂ

ಬೆಳಿಗ್ಗೆ ಮನೆಯಲ್ಲೇ ನಾಮಕರಣ ಸಮಾರಂಭವನ್ನು ನೆರವೇರಿಸಿದರು. ಮಧುಕರ ಅದೇ ದಿನ ಬೆಳಿಗ್ಗೆ ಬಂದ. ಭಾಸ್ಕರ ತನ್ನ ಫ್ಯಾಮಿಲಿ ಯವರೊಂದಿಗೆ ಸಮಾರಂಭಕ್ಕೆ ಆಗಮಿಸಿದ. ಎಲ್ಲರಿಗೂ ಆಶ್ಚರ್ಯ ಮತ್ತು ಕುತೂಹಲ. ಆದಿತ್ಯ, ಆಕಾಶ ಇಬ್ಬರೂ ಅವಳಿ ಮಕ್ಕಳಂತೆ ಇದಾರೆ. ಒಂದೇ ರೂಪು. ಒಂದೇ ಎತ್ತರ! ಒಳ್ಳೆಯ ಸುಂದರ ರೂಪ. ನಕ್ಕರೆ ಬಲಗೆನ್ನೆಯ ಮೇಲೆ ಗುಳಿ ಬೀಳುತ್ತದೆ. ಆ ಮಕ್ಕಳು ಎಲ್ಲರ ಆಕರ್ಷಕ ಕೇಂದ್ರವಾಗಿದ್ದವು. ಎಲ್ಲರ ನೋಟ ತನ್ನ ಮಕ್ಕಳಮೇಲೆ ಇರುವುದನ್ನು ಭಾಸ್ಕರ ಗಮನಿಸಿದ್ದ. ಆಗಾಗ್ಗೆ ಬೆವರನ್ನು ಒರೆಸಿಕೊಳ್ಳುತ್ತಿದ್ದ. ರಘು ಸ್ವಲ್ಪ ಹೆಚ್ಚಿನ ಕುತೂಹಲವನ್ನೇ ತೋರಿದ. ವಸುಧಾಳ ಬಳಿಗೆ ಬಂದ.

"ಭಾಸ್ಕರ ನಿಮಗೆ ಸಂಬಂಧಿಯಾಗಬೇಕಾ?... ಅವನ ಮಗ, ನಿಮ್ಮ ಮಗ

ಇಬ್ಬರೂ ಒಂದೇ ತರಹ ಇದಾರೆ. ಅದು ಹೇಗೆ ಅಂತ ಯೋಚಿಸ್ತಿದ್ದೆ...."

"ಪ್ರಪಂಚದಲ್ಲಿ ಏಳು ವ್ಯಕ್ತಿಗಳು ಒಂದೇ ತರಹ, ಒಂದೇ ರೂಪವನ್ನು ಹೊತ್ತಿರುತ್ತಾರಂತೆ. ಇದರಲ್ಲಿ ಹೆಚ್ಚಿಗೆ ಯೋಚಿಸುವಂಥಾದ್ದು ಏನಿಲ್ಲ."

"ನೋಡಿ. ಕೆನ್ನೆಯ ಮೇಲೆ ಹೇಗೆ ಗುಳಿ ಬೀಳುತ್ತದೆ. ನೀವು ಪರವಾಗಿಲ್ಲ ನೋಡೋಕೆ ಸುಂದರವಾಗಿದೀರಿ. ಅದೇ ಭಾಸ್ಕರನ ಹೆಂಡತಿ ಭಾರತೀ... ಏನೇನೂ ಚೆನ್ನಾಗಿಲ್ಲ. ಅದೇನು ಅಂತ ಮದುವೆಯಾದನೋ..?"

"ನೋಡಿ. ಹಾಗೆಲ್ಲ ಬೇರೆ ಹೆಂಗಸರ ಬಗ್ಗೆ ಕಾಮೆಂಟ್ಸ್ ಮಾಡಬಾರದು."

"ನೀವು ಹೆಂಗಸರು, ಗಂಡಸರ ಬಗ್ಗೆ ಕಾಮೆಂಟ್ಸ್ ಮಾಡುಲ್ವಾ?"

"ನಾವು ಇನ್ನೊಬ್ಬ ಗಂಡಸಿನೊಂದಿಗೆ ಕಾಮೆಂಟ್ಸ್ ಮಾಡುಲ್ಲ. ಆಪ್ತ ಗೆಳತಿಯರು, ಕ್ಲೋಸ್‌ನೆಸ್ ಇದ್ದಾಗ ಮಾತನಾಡ್ತೀವಿ. ಕಾಮೆಂಟ್ಸ್ ಮಾಡ್ತೀವಿ ಅಷ್ಟೇ."

"ಹಾಗಾದ್ರೆ ನಾನು ನಿಮ್ಮ ಆಪ್ತ ಅಲ್ಲ ಅಂತಾನಾ? ನಿಮಗೆ ಇಷ್ಟವಿದ್ದರೆ ಹೇಳಿ ಆಪ್ತರಾಗೋಣ" ವಸುಧಾ ಅವನನ್ನು ಕೆಟ್ಟದಾಗಿ ನೋಡಿ ಅಲ್ಲಿಂದ ಸರಿದಳು. ರಘು ಕೊಳಕ್ಕಾಗಿ ನಕ್ಕ.

ಮಧ್ಯಾಹ್ನದ ಊಟದ ನಂತರ ಎಲ್ಲರೂ ಸುಧಾರಿಸಿಕೊಂಡು, ನಂತರ ಏಳು ಗಂಟೆಯೊಳಗೆ ಹೋಟೆಲ್ಲಿಗೆ ಹೋಗುವುದೆಂದು ತೀರ್ಮಾನವಾಗಿತ್ತು. ಮನೆಯವರ್‍ಯಾರಿಗೂ ಹೆಚ್ಚಿಗೆ ಕೆಲಸವಿರಲಿಲ್ಲ. ಹಸೆ ಮಣೆಯ ಸಮೀಪದಲ್ಲಿ ಧ್ರುವ, ಮಾಲಾ ಇಬ್ಬರೂ ಕುರ್ಚಿಯ ಮೇಲೆ ಕುಳಿತಿದ್ದರು. ಸಮೀಪದಲ್ಲೇ ತೊಟ್ಟಿಲುಗಳಲ್ಲಿ ಮಕ್ಕಳನ್ನು ಮಲಗಿಸಲಾಗಿತ್ತು. ಪುರೋಹಿತರು ಚಿಕ್ಕದಾಗಿ ಚೊಕ್ಕವಾಗಿ ಆಯುಷ್ಯ ಹೋಮವನ್ನು ನೆರವೇರಿಸಿದರು. ಮಕ್ಕಳಿಗೆ ದೇವರ ಹೆಸರನ್ನು, ನಕ್ಷತ್ರ ನಾಮವನ್ನು ಹಾಗೂ ವ್ಯವಹಾರ ನಾಮವನ್ನೂ ಇಡುವುದೆಂದು ಹೇಳಿದ್ದರು.

ಸುಮಿತ್ರಾದೇವಿ ಮಕ್ಕಳಿಗೆ ತನ್ನ ತಂದೆ ಹಾಗೂ ತಾಯಿಯ ಹೆಸರನ್ನಿಡಬೇಕೆಂದು ಆಗ್ರಹಪಡಿಸಿದಳು. ಮಾಲಾ ತಾನು ಸುಚಿಸಿರುವ ಹೆಸರುಗಳೇ ಸರಿಯಾಗಿದೆಯೆಂದು ವಾದ ಮಾಡಿದಳು. ಅವರವರಲ್ಲಿ ಮಾತುಕತೆ ನಡೆಯಿತು. ಪ್ರತಾಪ ಬಾಯಿ ಹಾಕಿದ.

"ಆಂಟೀ ಈ ಮನೆಗೆ ದೊಡ್ಡವರು. ಅವರು ಹೇಳಿದ್ದೇ ನಡೆಯಬೇಕು" ಎನ್ನುವಂತೆ ನುಡಿದಾಗ ಮಾಲಾ ಪ್ರತಾಪನನ್ನು ಕೆಕ್ಕರಿಸಿ ನೋಡಿದಳು.

"ನಾನು ಹೆತ್ತ ತಾಯಿ, ನನ್ನ ಆಸೆಗೆ ಬೆಲೆ ಇಲ್ವಾ? ಯಾರು ಯಾವುದೇ ಹೆಸರನ್ನಿಟ್ಟರೂ ಸರಿ, ನಾನು ಈ ಹೆಸರಿನಲ್ಲೇ ನನ್ನ ಮಕ್ಕಳನ್ನು ಕರೆಯೋದು."

"ಏನು ನನ್ನ ಮಕ್ಕಳು. ನನ್ನ ಮಕ್ಕಳು ಅಂತಾನೇ ಹೇಳ್ತೀಯಲ್ಲಮ್ಮ. ಈ ಮಕ್ಕಳು ನಮ್ಮ ಮನೆಯ ಮಕ್ಕಳೇ ತಾನೇ ?" ಸುಮಿತ್ರಾದೇವಿ ಕೇಳಿದಳು.

"ಯಾರಿಗೆ ಗೊತ್ತು?" ಎಂದು ಮಾಲಾ ಗೊಣಗಿದ್ದು ಧ್ರುವನಿಗೆ ಕೇಳಿಸಿತ್ತು. "ಪ್ಲೀಸ್ ಮಾಲಾ..." ಸುಮ್ಮನಿರು ಎನ್ನುವಂತೆ ಸಂಜ್ಞೆ ಮಾಡಿದ.

ಮಾಲಾ, ಭಾಸ್ಕರನನ್ನಾಗಲೀ, ಭಾರತಿಯನ್ನಾಗಲೀ ಹೆಚ್ಚು ಮಾತನಾಡಿಸಲಿಲ್ಲ. ಆದರೆ ಭಾಸ್ಕರನನ್ನು ಅವನ ಕೈಯಲ್ಲಿದ್ದ ಮಗುವನ್ನು ಪದೇ ಪದೇ ನೋಡುತ್ತಿದ್ದಳು. ಇದು ಭಾಸ್ಕರನ ಗಮನಕ್ಕೆ ಬಂದಿತ್ತು. ಅವನಿಗೆ ಮುಜುಗರವಾಗಿತ್ತು. ಈ ಮಾಲಾ ಒಂದು ತರಹ ವಿಚಿತ್ರ ಹೆಂಗಸು, ಯಾವಾಗ ಏನು ಆಡಿಬಿಡುವಳೋ ಎಂದು ಚಡಪಡಿಸುತ್ತಿದ್ದ. ಮಾಲಾಳಿಗೆ ಅದು ಅರ್ಥವಾಗಿತ್ತು. ತನ್ನೊಳಗೇ ನಕ್ಕಳು.

ಭಾಸ್ಕರ ಆಗಾಗ್ಗೆ ತನ್ನ ಮೊಬೈಲ್ ಫೋನಿನಲ್ಲಿ ಯಾರೊಡನೆಯೋ ಮಾತನಾಡುವುದನ್ನು ರಘು ಗಮನಿಸಿದ್ದ. 'ಮಹಾ ದೊಡ್ಡ ಮನುಷ್ಯ. ಫೋನಿನಲ್ಲಿ ಮಾತಾಡಿದ್ದೇ ಮಾತಾಡಿದ್ದು' ಎಂದುಕೊಂಡು ಅವನ ಬಳಿಗ ಬಂದ.

"ಹಲೋ ಭಾಸ್ಕರ್.. ಬಿಸ್ಸೀನಾ ಯಾರದ್ದು ಅಷ್ಟು ಫೋನು ಕಾಲ್ ?" ರಘುವಿನ ಮಾತು ಭಾರ್ಗವನಿಗೆ ಕೇಳಿಸಿತ್ತು. ಅವನೇ ಲೈನ್ ಕಟ್ ಮಾಡಿದ.

"ಸಾರಿ ಭಾಸ್ಕರ್ ನಾನು ಡಿಸ್ಟರ್ಬ್ ಮಾಡಿದೆ."

"ಏನೂ ಪರವಾಗಿಲ್ಲ. ಈಗ ಹೇಗಿದೀರಿ."

"ನೋಡಿ ಹೀಗಿದೀನಿ. ಈ ಊರುಗೋಲುಇಲ್ಲದೆ ನಡೆಯೋಕೆ ಆಗುಲ್ಲ. ಆದರೆ ನನ್ನ ದಿನದ ಚಟುವಟಿಕೆಗೆ ಹೆಚ್ಚಿನ ತೊಂದರೆ ಆಗಿಲ್ಲ... ಎನಿವೇ ನಿಮಗೆ ಬಾಂಬೆ ಹೇಗೆ ಹಿಡಿಸ್ತು? ನಿಮ್ಮ ಮನೆಯವರೆಲ್ಲಾ ಸಂಪ್ರದಾಯಸ್ಥರು ಅಂತ ಕೇಳಿದೆ. ನಿಮ್ಮನ್ನು ನಮ್ಮ ಧ್ರುವ ತುಂಬಾ ಹೊಗಳ್ತಾನೆ" ಏನೇನೋ ಮಾತನಾಡಿದ.

"ನೀವು ಲಂಡನ್‌ನಿಂದ ಯಾವಾಗ ಬಂದ್ರಿ?" ಇದ್ದಕ್ಕಿದ್ದಂತೆ ಭಾಸ್ಕರ ಕೇಳಿದಾಗ ರಘು ಬೆಚ್ಚಿದ. ಬೆವರಿನ ಸಾಲುಗಳು ಹಣೆಯ ಮೇಲೆ ಹರಿದವು.

"ನಾನು ಅಲ್ಲಿ ಇದ್ದೆ ಅಂತ ನಿಮಗೆ ಯಾರು ಹೇಳಿದ್ರು."

"ನಿಮ್ಮ ಬ್ರದರ್.... ಮತ್ತೆ ಯಾವಾಗ ಹೋಗ್ತೀರಿ ?" ಕೇಳಿದ.

"ಇನ್ನು ಹೇಗೆ ಹೋಗೋದು ? ಈಗ ಕಾಲಿಲ್ಲ... ಎಲ್ಲಿಗೂ ಹೋಗುಲ್ಲ."

"ಹಾಗಂತ ನಿಮ್ಮ ಚಟುವಟಿಕೆಗಳನ್ನೆಲ್ಲಾ ಬಿಡುಕ್ಕೆ ಆಗುತ್ತಾ? ಬುದ್ಧಿಗೆ ತುಕ್ಕು ಹಿಡಿದುಬಿಡುತ್ತದೆ. ಎಂತೆಂಥ ಅಂಗವಿಕಲರೆಲ್ಲ ಎಂತೆಂಥ ಸಾಧನೆಗಳನ್ನು ಮಾಡಿದಾರೆ, ವಿದೇಶದಲ್ಲಿ ವ್ಯಾಸಂಗ ಮಾಡಿ, ಸುಮ್ಮನೆ ಕಾಲಕಳೆಯೋದಾ ?"

"ನನಗೆ ಈ ಬಿಸಿನೆಸ್ ವ್ಯವಹಾರದಲ್ಲಿ ಆಸಕ್ತಿ ಇಲ್ಲ. ನನಗೂ ಪ್ರತಾಪನಿಗೂ ಸರಿ ಹೋಗುಲ್ಲ. ಮನೇಲಿ ಹಾಯಾಗಿ ಕಾಲ ಕಳೆಯುತ್ತಿದೀನಿ. ಮುಂದೆ ನೋಡೋಣ" ಎನ್ನುತ್ತಾ ಅವನು ಮಾತನ್ನು ಕತ್ತರಿಸಿ ಅತ್ತ ಸರಿದ. ವಸುಧಾ ಭಾಸ್ಕರನ ಪಕ್ಕದಲ್ಲಿ ಬಂದು ನಿಂತಳು. ರಘು ಅವರಿಬ್ಬರ ಕೈಯಲ್ಲಿದ್ದ ಅವಳಿ ಮಕ್ಕಳಂತಿದ್ದ ಮಕ್ಕಳನ್ನೇ ನೋಡಿದ. ಅಲ್ಲಿಂದ ನಿಧಾನವಾಗಿ ತೊಟ್ಟಿಲ ಬಳಿಗೆ ಬಂದು ಮಲಗಿದ್ದ ಅವಳಿ ಮಕ್ಕಳನ್ನೇ ಮತ್ತೆ ಮತ್ತೆ ನೋಡಿದ. ಒಂದು ಗಂಡು, ಒಂದು ಹೆಣ್ಣು ಯಾವ ಹೋಲಿಕೆಯೂ ಇಲ್ಲ. ಒಂದು ಮಾಲಾಳಂತೆ ಅಂತ ಅನ್ನಿಸಿತು. ಇನ್ನೊಂದು ಮಗು ತನ್ನಂತೆಯೇ ಇರಬಹುದೇ ಎಂದುಕೊಂಡು, ತನ್ನ ಹೋಲಿಕೆಯನ್ನು ಆ ಮಗುವಿನ ಮುಖದಲ್ಲಿ ಹುಡುಕುವ ಪ್ರಯತ್ನ ಮಾಡಿದ. ತೊಟ್ಟಿಲ ಬಳಿ ಬಾಗಿದವನು ಆಯತಪ್ಪಿ ಬಿದ್ದುಬಿಟ್ಟ. ಬಳಿಯಲ್ಲೇ ಇದ್ದ ಧ್ರುವ, ಎದ್ದು ಎಬ್ಬಿಸಲು ಬಂದ. "ಷ್... ನಾನೇ ಏಳಬಲ್ಲೆ... ನನಗೆ ಆ ಶಕ್ತಿ ಇದೆ" ಎಂದು ಅವನನ್ನು ಹಿಂದಕ್ಕೆ ಸರಿಸಿದ. ಧ್ರುವನ ಮುಖ ಕಪ್ಪಾಗಿತ್ತು.

"ಮೊಸಾಯಿಕ್ ಫ್ಲೋರ್ ಜಾರುತ್ತೆ. ನೀನು ಒಂದು ಕಡೆ ಕೂತಿರ ಬಾರದಾ ?" ಸುಮಿತ್ರಾದೇವಿ ಮಗನನ್ನು ಗದರಿದಳು. ರಘು ಸಾವರಿಸಿ ಕೊಂಡು ಎದ್ದು ಕಂಕುಳಿಗೆ ಊರುಗೋಲನ್ನು ಸಿಕ್ಕಿಸಿ ಊರಿ ಮಾಲಾಳ ಕಡೆ ನೋಡಿದ. ಅವಳು ನಗುತ್ತಿರುವಂತೆ ಅನ್ನಿಸಿತ್ತು. ಇರಲಿ ನಿನ್ನನ್ನು ಮತ್ತೆ ವಿಚಾರಿಸಿಕೊಳ್ಳದೇ ಬಿಡುವವನಲ್ಲ ನಾನು" ಎಂದು ತನ್ನಲ್ಲೇ ಹೇಳಿಕೊಂಡು ಹಲ್ಲು ಕಡಿದ.

○ ○ ○

ಸಾಯಂಕಾಲದ ಹೊತ್ತಿಗೆ ಎಲ್ಲರೂ ಸಿದ್ಧರಾಗಬೇಕಾಗಿತ್ತು. ಸುಮಿತ್ರಾ ದೇವಿ, ಬ್ಯೂಟಿ ಪಾರ್ಲರ್‌ನಿಂದ ಇಬ್ಬರು ಬ್ಯೂಟಿಷಿಯನ್ನರನ್ನು ಮನೆಗೇ ಕರೆಸಿದ್ದಳು. ಮಾಲಾಳನ್ನು ವಿಶೇಷವಾಗಿ ಅಲಂಕಾರಗೊಳಿಸಬೇಕೆಂದು

ಹೇಳಿದ್ದಳು. ಅಲ್ಲೇ ಸಮೀಪದಲ್ಲಿದ್ದ ವಸುಧಾಳಿಗೆ ರಘು ಹೇಳಿದ.

"ನೀವು ಅಲಂಕಾರ ಮಾಡಿಕೊಳ್ಳಲ್ವಾ ?"

"ಇಲ್ಲ. ನನಗೆ ಅದೆಲ್ಲ ಇಷ್ಟವಿಲ್ಲ."

"ನನಗೂ ಇಷ್ಟವಿಲ್ಲ. ಹೆಂಗಸರಿಗೆ ಈ ಕೃತಕ ಅಲಂಕಾರ ಎಲ್ಲಾ ಯಾಕೆ ? ನೀವು ಹೇಗೇ ಇದ್ದರೂ ಚೆನ್ನಾಗಿ ಕಾಣ್ತೀರಿ ?"

"ಇದು ಕಾಂಪ್ಲಿಮೆಂಟ್ಸೋ ? ಕ್ರಿಟಿಸಿಸಮ್ಮೋ..?"

"ಯಾಕೆ ? ನನ್ನ ಹೊಗಳಿಕೆ ನಿಮಗೆ ಇಷ್ಟವಾಗಲಿಲ್ಲವಾ ?"

"ಇಲ್ಲ ರಘು. ಒಬ್ಬ ಪರ ಪುರುಷ, ಇನ್ನೊಬ್ಬ ಪರಸ್ತ್ರೀಯನ್ನು ಕಾರಣವಿಲ್ಲದೇ ಹೊಗಳುವುದಿಲ್ಲ. ನಿಮ್ಮ ಮನಸ್ನಲ್ಲಿ ಏನಿದೆ ಅಂತ ನೇರವಾಗಿ ಹೇಳಿ ಪರವಾಗಿಲ್ಲ."

"ನಾನು ಸ್ವಲ್ಪ ಶೋಕಿ ಮನುಷ್ಯ... ಫ್ಲರ್ಟ್ ಮಾಡುವುದು ನನ್ನ ಸ್ವಭಾವ"

"ಇದು ಆರೋಗ್ಯಕ್ಕೆ ಒಳ್ಳೇದಲ್ಲ."

"ಯಾವ ಆರೋಗ್ಯದ ಬಗ್ಗೆ ಹೇಳ್ತಿದೀರಿ.· ಕಾಲು ಊನ ಅನ್ನೋದನ್ನ ಬಿಟ್ಟರೆ·ನಾನು ಪರ್ಫೆಕ್ಟ್ ಆಗಿದೀನಿ." ತನ್ನನ್ನು ತಾನು ಸಮರ್ಥಿಸಿಕೊಂಡ. ಆಕಾಶನನ್ನು ಎತ್ತಿಕೊಂಡ ಮಧು ಅಲ್ಲಿಗೆ ಬಂದ ಕೂಡಲೇ ರಘು ಅಲ್ಲಿಂದ ಬೇಗಬೇಗನೆ ಹೊರಟ.

"ನಿಧಾನ ರಘು... ಮತ್ತೆ ಬಿದ್ದೀಯಾ... ಇನ್ನೊಂದು ಕಾಲಿಗೂ ಪೆಟ್ಟಾದೀತು."

"ಮಧು... ನೀನೂ ನನ್ನನ್ನು ಗೇಲಿ ಮಾಡ್ತಿದೀಯಾ... ಇರಲಿ ನಿನ್ನನ್ನು ನೋಡಿಕೊಳ್ಳುತ್ತೇನೆ" ಎಂದು ಹೇಳಿಕೊಂಡು ಕೆಕ್ಕರಿಸಿ ನೋಡಿದ.

ಮಾಲಾಳ ಅಲಂಕಾರ ಮುಗಿದಿತ್ತು. ಅಲ್ಲಿದ್ದವರಿಗೇ ಅವಳ ಗುರುತು ಸಿಗದಷ್ಟು ಅವಳು ಬದಲಾಗಿದ್ದಳು. ಪ್ರತಾಪ ಕೂಡ ಅವಳನ್ನು ಮೆಚ್ಚುಗೆಯಿಂದ ನೋಡಿದ. ಧ್ರುವ ಅವಳ ಬಳಿಗೆ ಬಂದ. ಅವಳು ಉಸಿರನ್ನು ಬಿಗಿ ಹಿಡಿದಳು.

"ನೀನು ತುಂಬಾ ಚೆನ್ನಾಗಿ ಕಾಣ್ತಾ ಇದೀಯ ಮಾಲಾ... ನಮ್ಮ ಮದುವೆಯ ದಿನ ಸಹ ನೀನು ಇಷ್ಟು ಸುಂದರವಾಗಿರಲಿಲ್ಲ.. ನೀನೀಗ ಎರಡು ಮಕ್ಕಳ ತಾಯಿ ಅಂತ ಹೇಳೋಕೆ ಆಗುಲ್ಲ. ತುಂಬಾ ಯಂಗಾಗಿದೀಯ..." ಅವನ ಹೊಗಳಿಕೆ ಅವಳಿಗೆ ಬೇಕೆನಿಸಲಿಲ್ಲ.

"ಈ ಮಾತೆಲ್ಲ ಫನ್ನಿಯಾಗಿದೆ..." ಮಾತನ್ನು ತುಂಡರಿಸಿದಳು.

"ಇಲ್ಲ. ಇದೆಲ್ಲಾ ನಿಜ. ನನಗೆ ಎಷ್ಟು ದುಃಖವಾಗ್ತಿದೆ ಗೊತ್ತಾ? ನಿನ್ನನ್ನ ಮುಟ್ಟುವ ಅಧಿಕಾರವೇ ನನಗೆ ಸಿಗಲಿಲ್ಲವಲ್ಲ..." ಮಾಲಾ ಆಕಳಿಸಿದಳು.

"ಸಾರಿ ಮಾಲಾ... ಏನೇನೋ ಮಾತನಾಡಿ ಬಿಟ್ಟೆ... ಈ ರಾತ್ರಿ ನನ್ನಿಂದ ದೂರವಾಗಿಯೇ ಇರು... ನನ್ನಿಂದ ಏನಾದರೂ ಅಪಚಾರ ನಡೆದೀತು" ಮಾಲಾ ವಿಚಿತ್ರವಾಗಿ ನಕ್ಕಾಗ, ತನ್ನ ಮಾತು ಸ್ವಲ್ಪ ಅತಿಯಾಯಿತು ಎಂದೆನಿಸಿರಬೇಕು. ಅಲ್ಲಿಂದ ಮೆಲ್ಲನೆ ಸರಿದ. ವಸುಧಾ ಒಳಕ್ಕೆ ಬಂದಳು.

"ಮಾಲಾ ನೀನು ಇವತ್ತು ತುಂಬ ಹುಷಾರಾಗಿರಬೇಕು. ಎಲ್ಲ ಗಂಡಸರ ಕಣ್ಣು ನಿನ್ನ ಮೇಲೇ ಇದೆ." ರಘು ಅಂತೂ ಹುಲಿಯ ತರಹ ನಿನ್ನನ್ನು ನೋಡ್ತಾನೇ ಇದಾನೆ."

"ನೋಡಿದ್ರೆ ನೋಡಿದ. ಈಗ ಕಾಲು ಊನವಾಗಿದೆ. ಕಣ್ಣೂ ಸುಟ್ಟು ಹೋಗುತ್ತೆ ಅಷ್ಟೇ. ಕುಂಟನಿಗೆ ನಾನಾ ಚೇಷ್ಟೆ ಅನ್ನೋ ಹಾಗೆ ಅವನ ಚೇಷ್ಟೆ ಜಾಸ್ತಿಯಾಗಿದೆ. ಅವನು ನಿನ್ನ ಮೇಲೂ ಕಣ್ಣು ಹಾಕಿರುವ ಹಾಗಿದೆ."

"ಹೂಂ. ಏನೇನೋ ಅಶ್ಲೀಲವಾಗಿ ಮಾತಾಡ್ತಾನೆ. ಮಧುಗೆ ತಿಳಿಸಿದರೆ ತದುಕಿ ಹಾಕಿಬಿಡ್ತಾರೆ ಅಷ್ಟೇ."

"ಸಧ್ಯ ನಿನ್ನ ಗಂಡ, ಹೆಂಡತಿಯ ರಕ್ಷಣೆಗಾದ್ರೂ ಬರ್ತಾನಲ್ಲ. ಅದೇ ಒಂದು ದೊಡ್ಡ ವಿಷಯ. ಅದಿರಲಿ ಭಾಸ್ಕರ ಮನೆಗೆ ಹೊರಟು ಹೋದ್ರಾ?"

"ಹೂಂ... ಯಾಕೆ? ಪಾರ್ಟಿಗೆ ಬರಬಹುದೋ ಏನೋ?"

"ಅವರು ಒಂದು ಸಾರಿ ನನ್ನನ್ನು ಈ ಗೆಟಪ್‌ನಲ್ಲಿ ನೋಡಿದ್ರೆ, ನನ್ನ ಈ ಅಲಂಕಾರ ಸಾರ್ಥಕವಾಗುತ್ತೆ."

"ಅವರ ಹಂಬಲ ಇನ್ನೂ ಯಾಕೆ? ಪಾರ್ಟೀಲಿ ಅವರು ನಿನ್ನನ್ನು ನೋಡಿ ಫೈಂಟ್ ಆದರೆ ಕೆಲಸ ಕೆಡುತ್ತೆ ಅಷ್ಟೇ."

"ನಾಗಾದರೆ ನನಗೆ ಈ ಅಲಂಕಾರವೇ ಬೇಡ. ಎಲ್ಲವನ್ನೂ ತೆಗೆದು ಬಿಡ್ತೀನಿ."

"ಹುಚ್ಚಿ ಹಾಗೆ ಆಡ್ಬೇಡ. ಸುಮ್ಮನೆ ಹಾಗೆ ಹೇಳಿದೆ ಅಷ್ಟೆ. ಇವತ್ತು ರಾತ್ರಿ ನೀನು ತುಂಬಾ ಕೇರ್‌ಫುಲ್ಲಾಗಿರಬೇಕು. ಭಾಸ್ಕರ ನಿನಗೆ ಕೆಲವು ಇನ್‌ಸ್ಟ್ರಕ್ಷನ್ಸ್‌ಗಳನ್ನು ಕೊಡ್ತಾರೆ. ಅದನ್ನು ಸರಿಯಾಗಿ ಫಾಲೋ ಮಾಡಬೇಕು."

"ವಸುಧಾ... ನನ್ನ ಮಕ್ಕಳಿಗೆ ಏನೂ ಅಪಾಯ ಇಲ್ಲ ತಾನೇ...?"

"ಏನೂ ಆಗುಲ್ಲ. ನಾನು ನೋಡಿಕೊಳ್ತೇನೆ." ಕೈ ಹಿಡಿದು ಒತ್ತಿದಳು. ಮಾಲಾ ವಸುಧಾ ಒಬ್ಬರನ್ನೊಬ್ಬರು ತಬ್ಬಿಕೊಂಡರು. ದೂರದಲ್ಲಿ ನಿಂತು ರಘು ಅವರಿಬ್ಬರನ್ನೇ ನೋಡಿತ್ತಿದ್ದ. ಈ ಹೆಂಗಸರೇಕೆ ಇಷ್ಟು ಆಕರ್ಷಕವಾಗಿ ರುತ್ತಾರೆ ? ವಸುಧಾಳನ್ನು ತಾನೊಮ್ಮೆ ಅನುಭವಿಸಬೇಕಲ್ಲ. ಅವನು ಅವಳನ್ನೇ ಪದೇ ಪದೇ ನೋಡಿದ.

"ಆ ಕುಂಟ ಕಪಿ ನಿನ್ನನ್ನೇ ನೋಡ್ತಿದೆ. ಅವನೇನಾದ್ರೂ ನಿನ್ನ ತಂಟೆಗೆ ಬಂದರೆ ಸುಮ್ಮನೆ ಮಾತ್ರ ಬಿಬೇಡ. ಅವನ ಇನ್ನೊಂದು ಕಾಲನ್ನು ಕತ್ತರಿಸಿ ಹಾಕು" ಇಬ್ಬರೂ ಕಾರಣವಿಲ್ಲದೇ ನಕ್ಕಾಗ ಅವನು ಅತ್ತಲಿಂದ ಸರಿದ.

o o o

ಪಾರ್ಟಿಗೆ ಭಾಸ್ಕರ ಒಬ್ಬನೇ ಬಂದ. ಬರುವುದಕ್ಕೆ ಮುಂಚೆ ವಸುಧಾಳ ಮೊಬೈಲ್ ಫೋನ್‌ಗೆ ಫೋನ್ ಮಾಡಿದ್ದ ಹಾಗೂ ನನಗೆ ಭಾರ್ಗವನಿಂದ ಫೋನು ಬಂದಿತ್ತು ಎಂದು ತಿಳಿಸಿದ. ಮಧುಗೆ ತಿಳಿಸುವುದೋ ಬೇಡವೋ ಎಂದು ವಸುಧಾ ಅನುಮಾನಿಸುತ್ತಿದ್ದಳು. ಒಂದು ಕಾರಿನಲ್ಲಿ ಪ್ರತಾಪ, ಧ್ರುವ, ಸುಮಿತ್ರಾದೇವಿ ಹಾಗೂ ಮಾಲಾ. ತನ್ನ ಮಕ್ಕಳೊಂದಿಗೆ ಹೊರಟುಬಿಟ್ಟಳು. ಇನ್ನೊಂದು ಕಾರಿನಲ್ಲಿ ವಸುಧಾ, ಮಧು, ಆಕಾಶ್ ಹಾಗೂ ಅವರುಗಳೊಂದಿಗೆ ರಘು ಹೋಗುವುದೆಂದು ತೀರ್ಮಾನಿಸಿದ್ದರು. ರಘು ತಾನು ಅಲ್ಲಿಗೆ ಬರುವುದಿಲ್ಲವೆಂದ. "ನನಗೆ ಈ ಅವಸ್ಥೆಯಲ್ಲಿ ಪಾರ್ಟಿಗೆ ಬರಲು ಇಷ್ಟವಿಲ್ಲ ಎಂದಿದ್ದ. ಮಧು ಬಲವಂತ ಮಾಡಲಿಲ್ಲ. ಅವನೊಬ್ಬನನ್ನೇ ಮನೆಯಲ್ಲಿ ಬಿಟ್ಟು ಅವರ ಪಾಡಿಗೆ ಅವರುಗಳು ಹೊರಟುಬಿಟ್ಟರು.

ಪಾರ್ಟಿ ಹಾಲ್ ಸಜ್ಜಾಗಿತ್ತು. ಕೆಲವು ಆಹ್ವಾನಿತರು ಹಾಜರಾಗಿದ್ದರು. ಅವರುಗಳಿಗೆ ತಂಪಾದ ಪಾನೀಯ, ಐಸ್‌ಕ್ರೀಂನ್ನು ಹಾಗೂ ಬೇಕೆನಿಸಿದವರಿಗೆ ವೈನ್‌ನ್ನು ಸಹ ಸಿದ್ಧವಾಗಿಟ್ಟಿದ್ದರು. ಒಂದು ಕಡೆ ಆರ್ಕೆಸ್ಟ್ರಾದವರು ಇಂಪಾಗಿ ಹಾಡುತ್ತಿದ್ದರು. ಧ್ರುವ ತನ್ನ ಪತ್ನಿಯನ್ನು ಆಹ್ವಾನಿತರಿಗೆ ಪರಿಚಯ ಮಾಡಿ ಕೊಟ್ಟ ಹಾಗೂ ತನ್ನ ಅವಳಿ ಮಕ್ಕಳನ್ನೂ ಪರಿಚಯಿಸಿದ. ತನಗೆ ಬೇಕಾದ ಕೆಲವು ಸ್ನೇಹಿತರನ್ನು ಮಾತ್ರ ಕರೆದಿದ್ದ ಹಾಗೂ ತನ್ನ ಆಫೀಸಿನವರಿಗೂ ಪ್ರತ್ಯೇಕ ಆಹ್ವಾನವನ್ನು ಕೊಟ್ಟಿದ್ದ. ಸುಮಿತ್ರಾದೇವಿ ಉಬ್ಬಿ ಹೋಗಿದ್ದಳು. ತನ್ನ ಮಗ ಹಾಗೂ ಮೊಮ್ಮಕ್ಕಳ ವರ್ಣನೆಯನ್ನು ಮಾಡಿದ್ದೇ ಮಾಡಿದ್ದು. ಅವಳು ತನ್ನ ಸಂಘದ ಸದಸ್ಯೆಯರನ್ನು ಪಾರ್ಟಿಗೆ ಆಹ್ವಾನಿಸಿದ್ದಳು. ಎಲ್ಲರೂ

ಮಾಲಾಳನ್ನು ಹೊಗಳುವವರೇ. ಮಾಲಾ ಸಹ ಸ್ವಲ್ಪ ಗರ್ವಿತಳಾಗಿದ್ದಳು. ಬಂದಿದ್ದವರೆಲ್ಲಾ ಮಕ್ಕಳಿಗೆ ಬೆಲೆ ಬಾಳುವ ಉಡುಗೊರೆಯಗಳನ್ನಿತ್ತಿದ್ದರು. ವಸುಧಾ ಆಗಾಗ್ಗೆ ತನ್ನ ಕೈ ಗಡಿಯಾರದಲ್ಲಿ ಸಮಯವನ್ನು ನೋಡಿ ಕೊಳ್ಳುತ್ತಿದ್ದಳು. ಅತ್ತಿತ್ತ ಕಣ್ಣು ಹಾಯಿಸುತ್ತಿದ್ದಳು. ಮಧು ಆಕಾಶನನ್ನು ಎತ್ತಿಕೊಂಡು ಬಲೂನ್‌ಗಳನ್ನು ಮುಟ್ಟಿಸುತ್ತಿದ್ದ. ಅದೇ ತಾನೇ ಆಗಮಿಸಿದ ಭಾಸ್ಕರನನ್ನು ಕಂಡು ವಸುಧಾಳಿಗೆ ಸಮಾಧಾನವಾಯಿತು. ಅವನು ಅಲ್ಲಿಯೇ ನಿಂತು ಮಾಲಾಳನ್ನೇ ನೋಡುತ್ತಿದ್ದ. "ಈ ಬ್ಯೂಟಿ, ತನ್ನ ತೆಕ್ಕೆಯೊಳಗೆ ಬಿದ್ದು, ತನ್ನನ್ನು ತಾನೇ ಸಮರ್ಪಿಸಿಕೊಂಡಿದ್ದಳು. ಇಂದು ಧ್ರುವನ ಪತ್ನಿಯಾಗಿ ಮೆರೆಯುತ್ತಿದ್ದಾಳಲ್ಲ. ಅದಕ್ಕೇ ಏನೋ ಸ್ತ್ರೀಮೂಲವನ್ನು ಹುಡುಕಬಾರದು ಎನ್ನುವುದು" ಎಂದುಕೊಂಡು ಅವರಿಬ್ಬರ ಬಳಿಗೆ ಬಂದು ಶುಭಾಶಯ ಗಳನ್ನು ಕೋರಿದ. ಮಕ್ಕಳಿಗಾಗಿ ತಂದಿದ್ದ ಉಡುಗೊರೆಯನ್ನು ಕೊಟ್ಟಿದ್ದ. ಮಾಲಾ ಅವನ ನೋಟಕ್ಕೆ ಕೆಂಪಾದಳು. ರಾಗರಂಜಿತ ಕದಪುಗಳನ್ನು ಭಾಸ್ಕರ ನೋಡಿ ಮೈಮರೆತ. "ಲವ್ಲೀ" ಎಂದ ತನಗೇ ಅರಿವಿಲ್ಲದೆ. ಮಾಲಾ ಮೆಲ್ಲಗೆ ಯಾರಿಗೂ ಅರಿಯದಂತೆ ಅವನ ಕೈಯನ್ನು ಹಿಡಿದಳು. ಅವಳ ಮೈ ಶಾಖ ಅವನನ್ನು ತಟ್ಟಿತು. ವಸುಧಾ ಅವರಿಬ್ಬರನ್ನು ಸಮೀಪಿಸಿ, ನಯವಾಗಿ ಕೆಮ್ಮಿದಳು. ಮಾಲಾ ಅವನ ಕೈಬಿಟ್ಟಳು. ಭಾಸ್ಕರ ದೂರ ಸರಿದು ನಿಂತ. ಆದರೂ ಅವನ ದೃಷ್ಟಿ ಮಾಲಾಳ ಮೇಲೆ. ಅವಳೆಂದೂ ತನಗಾಗಿ ಹೀಗೆ ಅಲಂಕರಿಸಿಕೊಂಡು ಬಂದಿರಲಿಲ್ಲವೆಂದು ನೆನಪಾಗಿತ್ತು. ದಂತದ ಬಣ್ಣದ ಝರಿ ಸೀರೆ, ಒಡಲಲ್ಲಿ ನೀಲಿ ಹೂಗಳು, ನೀಲಿ ಬಣ್ಣದ ಅಂಚು, ನೀಲಿ ಸೆರಗು...ಅದಕ್ಕೆ ಒಪ್ಪುವಂತೆ ದಂತದ ಬಣ್ಣದ ತೋಳಿಲ್ಲದ ರವಿಕೆ... ಕತ್ತಿನಲ್ಲಿ ವಜ್ರದ ನೆಕ್ಲೇಸ್... ಕಿವಿಯಲ್ಲಿ ಫಳಫಳನೆ ಹೊಳೆಯುವ ವಜ್ರದ ಓಲೆ... ಮಹಾರಾಣಿಯಂತೆ ಕಂಗೊಳಿಸುತ್ತಿರುವವಳನ್ನು ಕಣ್ತುಂಬಾ ನೋಡಿದ. ಈ ಚೆಲುವೆ ತಾನಾಗಿಯೇ ನನ್ನ ಬಳಿಗೆ ಒಲಿದು ಬಂದಿದ್ದಳು. ಆ ಭಾಗ್ಯ ಮತ್ತೆ ಒದಗೀತೇ... ಎನ್ನುವಂತೆ ಆಸೆ ಕಣ್ಣುಗಳಿಂದ ಅವಳನ್ನೇ ನೋಡಿದ. ಮಾಲಾ ಅವನ ಆಸೆಯ ನೋಟವನ್ನು ಗಮನಿಸಿ ಮುಗುಳ್ನಕ್ಕಳು. ಮಂದಹಾಸವನ್ನು ಬೀರುವ ಆ ಚೆಂದುಟಿಗಳನ್ನು ಮುದ್ದಿಸಬೇಕೆಂಬ ಬಯಕೆ ಮೂಡಿತು. ಅಷ್ಟರಲ್ಲಿ ಅವನ ಮೊಬೈಲ್ ಸಂಗೀತವನ್ನು ಹಾಡಿತು. ಭಾರ್ಗವ ಫೋನು ಮಾಡಿದ್ದ. ಅವನಿಗೆ ರಸಭಂಗವಾಗಿತ್ತು. ವಸುಧಾ ಅವನನ್ನು ಎಚ್ಚರಿಸಿದಳು.

ಆಕಾಶ ತಾರೆಯನ್ನು ಎವೆ ಇಕ್ಕದೆ ನೋಡುತ್ತಿದ್ದವನನ್ನು ಭೂಮಿಗೆ ಎಳೆದಿದ್ದಳು. "ಈ ಪ್ರತಾಪ ಎಲ್ಲಿ ಹೋದ ?" ಎನ್ನುತ್ತಾ ಧ್ರುವ ಅವನನ್ನು ಹುಡುಕಿಕೊಂಡು ಹೋದ. ವಸುಧಾ ಮಾಲಾಳ ಕಿವಿಯಲ್ಲಿ ಏನನ್ನೋ ಉಸುರಿದಳು. ಮಾಲಾ ಗಟ್ಟಿಯಾಗಿ ಅವಳ ಕೈ ಹಿಡಿದಳು. ವಸುಧಾ ಮಾಲಾ ಇಬ್ಬರೂ ಲೇಡಿಸ್ ರೂಮಿಗೆ ಬಂದರು.

ರಘು ಬಂದಿಲ್ಲವೆನ್ನುವುದನ್ನು ಗಮನಿಸಿದ ಸುಮಿತ್ರಾದೇವಿ ಮನೆಗೆ ಫೋನು ಮಾಡಿಸಿದಳು. ಆದರೆ ರಘು ಫೋನೆತ್ತಿರಲಿಲ್ಲ. "ಡಿನ್ನರ್ ಸಮಯ ವಾಯಿತು. ಅವನೇಕೋ ಬಂದೇ ಇಲ್ಲ... ನನಗೆ ಆತಂಕವಾಗುತ್ತಿದೆ' ಎಂದಳು.

"ನೀವು ವರಿ ಮಾಡ್ಕೋಬೇಡಿ ಆಂಟಿ... ನಾನು ಹೋಗಿ ಕರೆದುಕೊಂಡು ಬರ್ತೀನಿ" ಎಂದು ಪ್ರತಾಪ ಹೊರಟುಬಿಟ್ಟ.

ಮಾಲಾ ಸರಸರನೆ ತನ್ನ ಒಡವೆಗಳನ್ನು ಕಳಚಿದಳು. ಉಟ್ಟಿದ್ದ ರೇಶಿಮೆ ಸೀರೆಯನ್ನು ಬಿಚ್ಚಿ ಸಾಧಾರಣವಾದ ಸೀರೆಯನ್ನು ಉಟ್ಟಳು. ಮೇಲೆ ಒಂದು ಬುರ್ಖಾ ಧರಿಸಿದಳು. ವಸುಧಾ ತನ್ನ ಕೈಲ್ಲಿದ್ದ ಬ್ಯಾಗನ್ನು ಅವಳ ಕೈಗೆ ಕೊಟ್ಟಳು. ಇನ್ನೊಂದು ಬ್ಯಾಗ್‌ಗೆ ಒಡವೆಗಳನ್ನು, ಬಟ್ಟೆಗಳನ್ನು ತುಂಬಿದಳು. ಅದನ್ನು ತಾನು ಎತ್ತಿಕೊಂಡಳು.

"ನೀನು ಇಲ್ಲೇ ಇರು. ಭಾಸ್ಕರ ಬಂದು ನಿನ್ನನ್ನು ಕರೆದುಕೊಂಡು ಹೋಗ್ತಾನೆ" ಎಂದು ಹೇಳಿ ತಾನು ಹೊರಗೆ ಬಂದಳು. ಕೆಲವೇ ನಿಮಿಷಗಳಲ್ಲಿ ಭಾಸ್ಕರ ಬಂದ. "ಮಾಲಾ, ನನ್ನ ಹಿಂದೆ ಹಿಂದೇನೇ ಬನ್ನಿ. ಅಲ್ಲಿ ಮೆಟ್ಟಲು ಗಳಿವೆ ಇಳಿದು ಹೋಗಿ" ಅಲ್ಲಿ ನಿಮಗೆ ಭಾರ್ಗವ ಸಿಗ್ತಾನೆ" ಎಂದು ಹೇಳಿ, ಅವಳನ್ನು ಮೆಟ್ಟಲುಗಳ ತನಕ ಕರೆತಂದು ಬಿಟ್ಟು, ಅವಳು ಮೆಟ್ಟಲು ಗಳನ್ನು ಇಳಿಯುವವರೆಗೂ ನಿಂತಿದ್ದು, ಪುನಃ ಕಾರಿಡಾರ್‌ಗೆ ಬಂದು ಭಾರ್ಗವನಿಗೆ ಫೋನು ಮಾಡಿದ. "ಎಸ್ ಬಂದಿದಾಳೆ" ಎಂದಷ್ಟೇ ಹೇಳಿದ. ಭಾಸ್ಕರ ಕಾರಿಡಾರಿನಿಂದ ಮತ್ತೆ ಪಾರ್ಟಿ ಹಾಲಿಗೆ ಬಂದ. ಅಲ್ಲಿ ವಸುಧಾ ಕಂಡಳು. ಇವನು ತಲೆಯಾಡಿಸಿ ಸಂಜ್ಞೆ ಮಾಡಿದ. ಪ್ರತಾಪನನ್ನು ಹುಡುಕುತ್ತಿದ್ದ ಧ್ರುವ ಬಂದು "ಮಾಲಾ ಎಲ್ಲಿ ಹೋದಳು ?" ಅಂತ ಕೇಳಿದ. "ಲೇಡಿಸ್ ರೂಮ್‌ಗೆ ಹೋಗಿದಾಳೆ" ಎಂದಳು. ಅವಳ ಧ್ವನಿ ನಡುಗಿತ್ತು. ಅದನ್ನು ಧ್ರುವ ಗಮನಿಸಲಿಲ್ಲ.

ಮನೆಯಿಂದ ಪ್ರತಾಪ ಧ್ರುವನಿಗೆ ಫೋನು ಮಾಡಿದ "ರಘು ಮನೆಯಲ್ಲಿ

ಇಲ್ಲ. ಅಲ್ಲಿಗೆ ಬಂದಿದಾನಾ ?" ಅಂತ ವಿಚಾರಿಸಿದ.

"ಇಲ್ಲ ಅವನು ಬಂದಂತಿಲ್ಲ. ನೋಡಿ, ಮತ್ತೆ ನಾನೇ ಫೋನು ಮಾಡ್ತೀನಿ" ಅಂದ.

ರಘು ಎಲ್ಲಿಯೂ ಕಾಣಲಿಲ್ಲ. ಅದನ್ನು ತಿಳಿಸಲು ಮತ್ತೆ ಫೋನು ಮಾಡಿದಾಗ ಪ್ರತಾಪ ಮನೆಯಲ್ಲಿರಲಿಲ್ಲ. ಅಲ್ಲಿಂದ ಹೊರಟು ಬಿಟ್ಟಿದ್ದ. ಮಾಲಾ ಸಹ ಕಾಣದಾದಾಗ, ಧ್ರುವ ಗಾಬರಿಯಾದ. ಮಧುಕರನ ಬಳಿಗೆ ಬಂದ.

"ನೋಡು ಮಾಲಾ ಸಹ ಕಾಣ್ತಾ ಇಲ್ಲ. ಎಲ್ಲಿಗೆ ಹೋದಳು ? ನಿನಗೇನಾದ್ರೂ ಗೊತ್ತಾ ?"

"ನಂಗೊತ್ತಿಲ್ಲ ಧ್ರುವ. ಲೇಡಿಸ್ ರೂಂಗೆ ಹೋದಳು ಅಂತ ವಸುಧಾ ಹೇಳಿದಳು."

"ಅಲ್ಲಿಯೂ ಇಲ್ಲ..." ಅವನು ಚಡಪಡಿಸಿದ.

"ಇಲ್ಲೇ ಎಲ್ಲೋ ಇರುತ್ತಾಳೆ. ನೀನ್ಯಾಕೆ ಗಾಬರಿಯಾಗ್ತೀಯ...?"

"ಎಷ್ಟು ಹೊತ್ತಾಯ್ತು. ಡಿನ್ನರ್‌ಗೆ ರೆಡಿಯಾಗಿದಾರೆ ಇವಳೇ ಇಲ್ಲ."

"ನೀನು ಅತಿಥಿಗಳ ಕಡೆ ಗಮನ ಕೊಡು. ಅವಳು ಕಂಡ ಕೂಡಲೇ ಕಳಿಸ್ತೀನಿ."

"ನನಗೆ ಒಂದೂ ಗೊತ್ತಾಗ್ತಾ ಇಲ್ಲ. ಪ್ರತಾಪ ಮನೆಗೆ ಅಂತ ಹೋದವನು ಅವನೂ ಬಂದಿಲ್ಲ" ಧ್ರುವ ಉದ್ವೇಗಗೊಂಡು ಬೆವರಲಾರಂಭಿಸಿದ್ದ.

"ನೀನು ರೆಸ್ಟ್ ತೊಗೋ ಧ್ರುವ, ನಾನು, ಭಾಸ್ಕರ ಅತಿಥಿಗಳನ್ನು ವಿಚಾರಿಸಿ ಕೊಳ್ತೀವೆ. ಅಂತ ಹೇಳಿ ಇಬ್ಬರೂ ಡೈನಿಂಗ್ ಹಾಲ್‌ಗೆ ಬಂದರು. ಬಫೆ ಪ್ರಾರಂಭವಾಗಿತ್ತು. ಬಂದಿದ್ದ ಅತಿಥಿಗಳು ಆಗಲೇ ತಟ್ಟೆ ಹಿಡಿದು ತಿನ್ನಲಾರಂಭಿಸಿದ್ದರು. ಸುಸ್ತಾಗಿ ಕುಳಿತಿದ್ದ ಧ್ರುವನನ್ನು ಕಂಡು ಸುಮಿತ್ರಾದೇವಿ ಗಾಬರಿಗೊಂಡಳು.

"ಏನಾಯ್ತೋ ಧ್ರುವ, ಡಾಕ್ಟರನ್ನು ಕರೆಸಲಾ ?"

"ಯಾಕೋ ಸುಸ್ತು... ಮಮ್ಮೀ ನೀನು ಮಾಲಾಳನ್ನು ಕಂಡ್ಯಾ ?"

"ಹೂಂ ಈಗ್ತಾನೇ ಇಲ್ಲೇ ಇದ್ದಳು. ಅವಳನ್ನು ಕರೆಯಬೇಕಾ ?"

"ಹೂಂ. ಪ್ಲೀಸ್ ನಾನು ಅವಳ ಹತ್ತಿರ ಮಾತನಾಡಬೇಕು." ಅಷ್ಟರಲ್ಲಿ ಪ್ರತಾಪ ಏದುಸಿರು ಬಿಡುತ್ತಾ ಬಂದ.

"ರಘು ಮನೇಲಿಲ್ಲ. ಇಲ್ಲಿಗೆ ಬರಲಿಲ್ವಾ?"

"ಇಲ್ಲ. ಇಲ್ಲಿ ಮಾಲಾನೂ ಅರ್ಧಗಂಟೆಯಿಂದ ಕಾಣುತ್ತಿಲ್ಲ."

"ವಸುಧಾಳ ಬಳಿ ಹರಟೆ ಹೊಡೆಯುತ್ತಿರಬೇಕು."

"ಇಲ್ಲ. ಅವಳು ಲೇಡಿಸ್ ರೂಂನಿಂದ ಹೊರಕ್ಕೆ ಬಂದೇ ಇಲ್ಲ... ಅಂತಾಳೆ ವಸುಧಾ."

"ನಾನು ವಸುಧಾಳನ್ನು ವಿಚಾರಿಸ್ತೀನಿ" ಎಂದು ಪ್ರತಾಪ ಅವಳನ್ನು ಹುಡುಕಿಕೊಂಡು ಬಂದ. ಮಧು, ವಸುಧಾ ಅತಿಥಿಗಳನ್ನು ಉಪಚರಿಸುತ್ತಿದ್ದುದನ್ನು ಕಂಡ. ಅವನನ್ನು ಕಂಡು ವಸುಧಾಳ ಎದೆ ಢವ ಢವ ಹೊಡೆದುಕೊಂಡಿತು. ಮಧುಕರನ ಕೈಯನ್ನು ಬಲವಾಗಿ ಹಿಡಿದಳು. ಭಾಸ್ಕರ ಸಮೀಪದಲ್ಲೇ ಆಕಾಶನನ್ನು ಎತ್ತಿಕೊಂಡು ನಿಂತಿದ್ದ. ಅಲ್ಲಿ ಎಲ್ಲಿಯೂ ಮಾಲಾಳನ್ನು ಕಾಣದೆ ಪ್ರತಾಪ ಮತ್ತೆ ಹೊರಕ್ಕೆ ಬಂದ. ಮಾಲಾ ನಾಪತ್ತೆ! ಅಲ್ಲಿ ರಘುವೂ ಇಲ್ಲ. ಅವನೇ ಇವಳನ್ನು ಮತ್ತೆ ಅಪಹರಿಸಿರಬಹುದೆಂದು ಪ್ರತಾಪನಿಗೆ ಅನ್ನಿಸಿತು. ಧ್ರುವ ಬಳಿ ಬಂದ. ಗೊಂದಲದಲ್ಲಿ ಸಿಕ್ಕಿಬಿದ್ದವನಂತೆ ಕಣ್ಣುಗಳನ್ನು ಅಲುಗಾಡಿಸಿದ.

"ಇದು ರಘೂದೇ ಕೆಲಸ. ಅವನು ಇವತ್ತೇ ಹೀಗೆ ಮಾಡ್ತಾನೆ ಅಂತ ನಾನು ಅಂದುಕೊಂಡಿರಲಿಲ್ಲ" ಧ್ರುವ ವ್ಯಥೆಯಿಂದ ಹೇಳಿದ.

"ಅವನು ರುಚಿ ಕಂಡ ಹುಲಿ. ನಿನ್ನ ಹೆಂಡತಿಯೋ, ಗಂಡಸರ ಕಣ್ಣು ಸೆಳೆಯುವಂತೆ ಅಲಂಕರಿಸಿಕೊಂಡಿದ್ದಳು. ಅದಕ್ಕೇ ರಘು ನಮ್ಮ ಜೊತೆ ಬರಲಿಲ್ಲ."

"ಮನೆಯಲ್ಲಿಯೂ ಇಲ್ಲ ಅಂತ ಅಂತೀಯಲ್ಲ."

"ಯಾವುದೋ ಹೋಟೆಲಿಗೆ ಎಳೆದುಕೊಂಡು ಹೋಗಿರ್ತಾನೆ. ಬೆಳಿಗ್ಗೆ ಎದ್ದು ಬರ್ತಾನೆ."

"ಮಾಲಾಳ ಗತಿ ?" ಧ್ರುವ ಬೆವರನ್ನು ಒರೆಸಿಕೊಳ್ಳುತ್ತಲೇ ಇದ್ದ.

"ಅದೇ ನಂಗೊತ್ತಿಲ್ಲ. ರಘು ದುಡುಕಿದ. ಈ ವಿಷಯ ಮಧುಗೆ ತಿಳಿದರೆ ಸುಮ್ಮನಿರ್ತಾನಾ ?" ಈಗ ಅವನು ಕೇಳಿದರೆ ಏನು ಮಾಡೋದು."

"ಮೊದಲು ಈ ಅತಿಥಿಗಳನ್ನು ಕಳಿಸಿಬಿಡೋಣ..." ಎನ್ನುತ್ತಾ ಮತ್ತೆ ಡಿನ್ನರ್ ಹಾಲ್‌ಗೆ ಇಬ್ಬರೂ ಬಂದರು. ಅವರಿಬ್ಬರ ಮುಖದ ಕಳೆ ಇಳಿದು ಹೋದುದನ್ನು ವಸುಧಾ ಗಮನಿಸಿದಳು. ಮೊಣಕೈ ತಿವಿದು ಗಂಡನನ್ನು

ಎಚ್ಚರಿಸಿದಳು. ಅವನು ಅವರ ಬಳಿಗೆ ಬಂದ.

"ಧ್ರುವ, ಮಾಲಾ ಎಲ್ಲಿ? ಮಕ್ಕಳು ಎಲ್ಲಿ? ಕಾಣ್ತಾನೇ ಇಲ್ಲ" ಮಧು ತೊದಲಿದ.

"ಮಕ್ಕಳಿಗೆ ಬಟ್ಟೆ ಬದಲಾಯಿಸ್ತಿದಾಳೆ. ನಿಮ್ಮಿಬ್ಬರದ್ದೂ ಊಟ ಆಯ್ತಾ?"

"ಮಾಲಾನೂ ಬರಲಿ. ಎಲ್ಲರೂ ಒಟ್ಟಿಗೆ ತೆಗೆದುಕೊಳ್ಳೋಣ."

"ನೀವು ಅವಳಿಗಾಗಿ ಯಾಕೆ ಕಾಯಬೇಕು? ನೋಡಿ ಆಕಾಶ ತೂಕಡಿಸ್ತಾ ಇದಾನೆ. ಭಾಸ್ಕರ್, ನೀವೆಲ್ಲಾ ಊಟ ಮಾಡಿ, ಆಮೇಲೆ ನಾವುಗಳು ಮಾಡ್ತೀವಿ. ರಘು ಸಹ ಬಂದಿಲ್ಲ."

"ರಘು ಮನೇಲಿ ಇದ್ರಲ್ಲ. ಬರುಲ್ಲ ಅಂತಂದ್ರು" ವಸುಧಾ ನುಡಿದಾಗ ಪ್ರತಾಪ ಕೆಂಗಣ್ಣು ಬಿಟ್ಟ."

"ಇಲ್ಲ. ಅವನು ಮನೇಲಿಲ್ಲ. ನಾನು ಈಗ್ತಾನೇ ಮನೆಯಿಂದ ಬರ್ತಿದೀನಿ."

"ಹಾಗಾದರೆ ಬರಬಹುದು. ನಾವುಗಳು ಕಾಯೋಣ..."

"ಪ್ಲೀಸ್ ನೀವುಗಳು ಊಟ ಮಾಡಿ. ಯಾರಿಗೂ ಕಾಯುವುದು ಬೇಡ. ಭಾಸ್ಕರ್ ನಿಮಗೆ ಹೊತ್ತಾಗಬಹುದು" ಎಂದು ಹೇಳಿ ಧ್ರುವನನ್ನು ಎಳೆದುಕೊಂಡು ಹೊರಕ್ಕೆ ಬಂದ.

"ನಾವು ಈಗ ಯಾರಿಗೆ ಏನು ಹೇಳೋಣ. ರಘು ಎಲ್ಲಿದಾನೆ ಅಂತ ಲೊಕೇಟ್ ಮಾಡೋಣ?" ಅತಿಥಿಗಳು ಬೇಗ ಹೋದರೆ ಸಾಕು ಎಂದು ಕಾಯತೊಡಗಿದರು.

"ಇಲ್ಲೇ ಯಾವುದಾದರೂ ಹೋಟೆಲ್ಲಿನ ರೂಮಿನಲ್ಲಿರಬಹುದು. ಆದರೆ ಯಾವ ರೂಮು ಅಂತ ಹುಡುಕಿಸುವುದು?" ಅಷ್ಟರಲ್ಲಿ ಮಧು ಅಲ್ಲಿಗೆ ಬಂದ.

"ಮಾಲಾ ಸಿಕ್ಕಿದಳಾ?" ಮತ್ತೆ ಪ್ರಶ್ನಿಸಿದ.

"ಇಲ್ಲ ಮಧು ಅವಳು ಯಾಕೆ ಹೀಗೆ ಮಾಡಿದಳು? ಹೇಳದೆ ಕೇಳದೆ ಎಲ್ಲಿಗೆ ಹೋದಳು?" ಧ್ರುವ ಗಡಬಡಿಸಿ ಮಾತನಾಡಿದ.

"ನನಗೂ ಅದೇ ಆಶ್ಚರ್ಯ. ಈ ಮಕ್ಕಳನ್ನು ಬಿಟ್ಟು ಹೇಳದೇ ಎಲ್ಲಿಗೆ ಹೋಗ್ತಾಳೆ?" ಮತ್ತೆ ಯಾರಾದ್ರೂ ಕಿಡ್ನಾಪ್ ಮಾಡಿರಬಹುದೇ?" ಅನುಮಾನವನ್ನು ಪ್ರಕಟಿಸಿದ.

"ಛೇ. ಛೇ. ಹಾಗೇನಿಲ್ಲ. ಸೆಕ್ಯೂರಿಟಿ ಎಲ್ಲಾ ಇದ್ರಲ್ಲ" ಪ್ರತಾಪನೆಂದ.

"ಹಾಗಾದ್ರೆ ತಡ ಯಾಕೆ ? ಪೊಲೀಸ್‌ಗೆ ತಿಳಿಸಿ ಹುಡುಕಿಸೋಣ."

"ಪೊಲೀಸ್‌ಗೆ ತಿಳಿದರೆ ಎನ್‌ಕ್ವೈರಿ ನಡೆಯುತ್ತೆ. ನಾಳೆ ಪೇಪರ್‌ನಲ್ಲಿ ಬರುತ್ತೆ."

"ಅದಕ್ಯಾಕೆ ಹೆದರಬೇಕು ? ನಮಗೆ ಮಾಲಾ ಸಿಗುವುದು ಮುಖ್ಯ."

"ಈ ರಾತ್ರಿ ಕಳೆಯಲಿ. ಅವಳೇ ಎಲ್ಲಿಗಾದರೂ ಹೋಗಿದ್ದರೆ ವಾಪಸ್ಸು ಬರ್ತಾಳೆ."

"ಎಲ್ಲಿಗೆ ಹೋಗ್ತಾಳೆ ? ಈ ಊರಿನಲ್ಲಿ ಯಾರ ಪರಿಚಯವೂ ಇಲ್ಲ."

"ನಿನ್ನ ತಂಗಿಯ ವಿಷಯಾನ ಹೀಗೆ ಅಂತ ಹೇಳುಕ್ಕಾಗುಲ್ಲ. ಮನಸ್ಸಿಗೆ ಬಂದಹಾಗೆ ಬಿಹೇವ್ ಮಾಡ್ತಾಳೆ. ಸೈಕಿಯಾಟ್ರಿಸ್ಟ್‌ಗೆ ತೋರಿಸು ಅಂತ ಹೇಳಿರಲಿಲ್ವಾ ?" ಪ್ರತಾಪ ಆ ಸಮಯದಲ್ಲೂ ಒರಟಾಗಿ ಮಾತಾಡಿದ.

"ಹಾಗೆಲ್ಲಾ ಮಾತನಾಡಬೇಡ ನೀನು. ಈಗ ಏನು ಮಾಡಬೇಕೂಂತ ಯೋಚಿಸು. ಹೋಟೆಲ್ ಮ್ಯಾನೇಜರ್ ಹತ್ತಿರ ಮಾತನಾಡಿ, ಪೊಲೀಸರನ್ನು ಕರೆಸು."

"ಆಗಲಿ ನಾನು ಮಾತನಾಡ್ತೀನಿ. ನಾನು ಅವಳು ಎಲ್ಲೇ ಇದ್ದರೂ ಹುಡುಕಿಸ್ತೀನಿ. ನೀವುಗಳು ಮನೆಗೆ ಹೋಗಿ... ಅತಿಥಿಗಳೆಲ್ಲ ಹೋಗಿ ಆಯ್ತಲ್ಲ."

"ನಾನೂ ಇಲ್ಲೇ ನಿಮ್ಮಗಳ ಜೊತೆಯಲ್ಲಿ ಇರ್ತೀನಿ. ಮೊದಲು ಹೆಂಗಸರನ್ನು ಮಕ್ಕಳನ್ನು ಮನೆಗೆ ತಲುಪಿಸು.

"ಬೇಡ ಮಧು. ನಾವು ಎಲ್ಲಾ ಹ್ಯಾಂಡಲ್ ಮಾಡ್ತೀವಿ. ಇಲ್ಲಿಯ ಪೊಲೀಸರ ಸಹವಾಸ ಕೆಟ್ಟದ್ದು.... ನಿನಗೆ ಅರ್ಥವಾಗುಲ್ಲ."

"ನೀನು ಇಷ್ಟು ಹೇಳ್ತಿದೀಯಾಂತ ಹೋಗ್ತೀವಿ. ಆದರೆ ಬೆಳಗಾಗುವುದ ರೊಳಗೆ ನನ್ನ ತಂಗಿ ಮನೆಗೆ ಬರಬೇಕು.

"ನಾವೇನು ಮಂತ್ರವಾದಿಗಳೇ ? ಎಲ್ಲಿ ಹೋಗಿದಾಳೆ ಅಂತ ತಿಳಿದುಕೊಳ್ಳೋಕೆ ? ಅದಕ್ಕೂ ಎಲ್ಲಾ ಪ್ರೊಸೀಜರ್ ಇರುತ್ತೆ" ಪ್ರತಾಪ ರೇಗಿದ.

"ಆಗಲಿ. ಅದೇನೇನು ಮಾಡ್ತೀಯೋ ಮಾಡು. ನಾಳೆ ಅವಳು ವಾಪಸ್ಸು ಸಿಗದಿದ್ದರೇ, ನಾನು ಏನು ಆಕ್ಷನ್ ತಗೋಬೇಕೋ ತಗೋತೀನಿ." ಮಧು ವಸುಧಾಳನ್ನು ಕರೆದುಕೊಂಡು ಸುಮಿತ್ರಾದೇವಿ ಹಾಗೂ ಮಕ್ಕಳೊಂದಿಗೆ ಮನೆಗೆ ಹಿಂತಿರುಗಿದ. ಮಧು ತನ್ನ ಮೊಬೈಲ್‌ನಿಂದ ಭಾಸ್ಕರನಿಗೆ ಫೋನು ಮಾಡಿ, ಭಾರ್ಗವನಿಂದ ಫೋನು ಬಂದಿತ್ತಾ ಎಂದು ವಿಚಾರಿಸಿದ. "ರಘು

ಮನೇಲೂ ಇಲ್ಲ.. ಅವನು ಪಾರ್ಟಿಗೂ ಬಂದಿರಲಿಲ್ಲ. ಎಲ್ಲಿ ಹೋದ ಅಂತ ಯಾರಿಗೂ ಗೊತ್ತಿಲ್ಲ. ಅವನಿಗೇನಾದರೂ ಸುಳಿವು ಸಿಕ್ಕಿ, ಭಾರ್ಗವನನ್ನು ಫಾಲೋ ಮಾಡಿರಬಹುದೇ ಅಂತ. ಹೇಗಾದರಾಗಲೀ ಎಚ್ಚರಿಕೆಯಿಂದ ಇರು ಅಂತ ಅವನಿಗೆ ತಿಳಿಸಬೇಕು" ಎಂದು ತಿಳಿಸಿದ.

ೋ ೋ ೋ

ಭಾಸ್ಕರ ತೋರಿಸಿದ ಮೆಟ್ಟಿಲುಗಳನ್ನಿಳಿದು ಬೇಸ್‌ಮೆಂಟ್‌ಗೆ ಬಂದ ಮಾಲಾಳನ್ನು ಭಾರ್ಗವ ಅಲ್ಲಿಂದ ಸರಸರನೆ ಹೊರಕ್ಕೆ ಕರೆತಂದ. "ಯಾರು ನೀನು ? ಎಂದು ಕೇಳಿದ ವಾಚ್‌ಮನ್ ಕೈಗೆ ಒಂದಿಷ್ಟು ನೋಟುಗಳನ್ನು ತುರುಕಿ ರಸ್ತೆಗೆ ಬಂದ. ರಸ್ತೆ ಬದಿಯಲ್ಲಿ ಬುರ್ಖಾವನ್ನು ಕಳಚಿ, ಒಂದು ಚೀಲದೊಳಗೆ ತುರುಕಿದಳು.

"ಈಗ ನಾವು ಎಲ್ಲಿಗೆ ಹೋಗ್ತಾ ಇದೀವಿ ?" ಅವಳು ಕೇಳಿದಳು.

"ಷ್... ಈಗ ಯಾವ ಮಾತೂ ಬೇಡ" ಎಂದ. ಅಲ್ಲಿಂದ ಬಸ್ ಸ್ಟ್ಯಾಂಡ್‌ಗೆ ಬಂದು ಚಿಕ್ಕಮಗಳೂರಿನ ಕಡೆಗೆ ಹೋಗುವ ಬಸ್ಸನ್ನು ಹತ್ತಿದರು. ಬಸ್ಸು ಹೊರಟಿತು.

ಕಿಟಕಿಯ ಬಳಿಯ ಸೀಟಿನಲ್ಲಿ ಕೂತಿದ್ದವಳು ತೂಕಡಿಸಲಾರಂಭಿಸಿದಳು. ಭಾರ್ಗವ ಅವಳ ಪಕ್ಕದಲ್ಲಿ ಕುಳಿತಿದ್ದ. ಆಗಾಗ್ಗೆ ಅವಳನ್ನೇ ನೋಡುತ್ತಿದ್ದ. ಅವಳನ್ನು ಎಚ್ಚರಗೊಳಿಸಿ ಮಾತನಾಡಿಸುವ ಮನಸ್ಸಾದರೂ ತಡೆದುಕೊಂಡ. ಬೆಳಗಿನ ಝಾವ ಇನ್ನೂ ಕತ್ತಲೆ ಕತ್ತಲೆಯಾಗಿರುವಾಗಲೇ ಬಸ್ಸು ಚಿಕ್ಕಮಗಳೂರಿನ ಬಸ್‌ಸ್ಟ್ಯಾಂಡ್‌ನ್ನು ತಲುಪಿತ್ತು. ಅವಳ ಬಳಿ ಇದ್ದ ಬ್ಯಾಗನ್ನು ಹಿಡಿದು, ಅವಳ ಕೈಯನ್ನು ಹಿಡಿದು ಸರಸರನೆ ಟ್ಯಾಕ್ಸಿ ಸ್ಟ್ಯಾಂಡ್ ಬಳಿಗೆ ಬಂದ. "ನೀನು ಬುರ್ಖಾ ಧರಿಸಿದ್ದರೇ ಚೆನ್ನಾಗಿತ್ತು. ಯಾರಾದ್ರೂ ಗುರುತು ಹಿಡಿದರೆ ?"

"ಈ ಊರು ಯಾವುದು ಅಂತಲೇ ಗೊತ್ತಿಲ್ಲ. ಇಲ್ಲಿ ನನ್ನ ಪರಿಚಯದವರು ಯಾರು ಸಿಗ್ತಾರೆ ?" ಭಾರ್ಗವ ಸುತ್ತ ಮುತ್ತ, ಹಿಂದೆ, ಮತ್ತೆ ಮತ್ತೆ ನೋಡಿದ. ಯಾರಾದರೂ ಫಾಲೋ ಮಾಡುತ್ತಿರಬಹುದೇ ಎಂಬ ಸಂಶಯ ಅವನಿಗೆ.

"ಇದು ಯಾವ ಊರು ಅಂತ ನೀನು ಹೇಳಲೇ ಇಲ್ಲವಲ್ಲ"

"ಇದು ಚಿಕ್ಕಮಗಳೂರು. ಇಲ್ಲಿಂದ ಸುಮಾರು ಹದಿನೈದು ಕಿಲೋ

ಮೀಟರ್ ದೂರದಲ್ಲಿ ಒಂದು ಹಳ್ಳಿ ಇದೆ. ನಾವು ಅಲ್ಲಿಗೆ ಹೋಗ್ತಾ ಇದೀವಿ."

"ಹಳ್ಳೀನಾ ! ಟಾಯ್ಲೆಟ್ ಎಲ್ಲಾ ಕ್ಲೀನ್ ಆಗಿರುತ್ತಾ ?"

"ಟಾಯ್ಲೆಟನ್ನು ಯೂಸ್ ಮಾಡುವುದೇ ಕೊಳಕು ಕೆಲಸಕ್ಕೆ. ಅದು ಕ್ಲೀನ್ ಆಗಿ ಹೇಗಿರುತ್ತೆ ? ಈಗ ಮಾತನಾಡಬೇಡ. ಸುಮ್ಮನೆ ಬಾ."

"ನನಗೆ ಹೊಟ್ಟೆ ಹಸಿಯುತ್ತಿದೆ. ನಾನು ರಾತ್ರಿ ಸಹ ಊಟ ಮಾಡಿರಲಿಲ್ಲ."

"ಆಂ. ಊಟ ಮಾಡಲಿಲ್ವಾ ? ಮೊದಲೇ ಹೇಳಬಾರದಿತ್ತಾ ಮಾಲಾ..." ಎನ್ನುತ್ತ ಸಮೀಪದಲ್ಲಿದ್ದ ಚಾಯ್ ಅಂಗಡಿಯಲ್ಲಿ ಬಾಳೆಹಣ್ಣು, ಬಿಸ್ಕತ್ತುಗಳನ್ನು ಕೊಂಡು ತಂದ. ಸದ್ಯಕ್ಕೆ ಇದನ್ನು ತಿಂದಿರು. ಮಾಲಾ ಕುರು ಕುರು ಸದ್ದು ಮಾಡುತ್ತಾ ಬಿಸ್ಕತ್ತನ್ನು ಅಗಿದು ತಿಂದಳು. ಭಾರ್ಗವ ಟ್ಯಾಕ್ಸಿಯನ್ನು ಗೊತ್ತುಮಾಡಿದ.

"ಕುಡಿಯೋಕೆ ಕಾಫಿ ಇದ್ದಿದ್ದರೆ ಚೆನ್ನಾಗಿತ್ತು" ಎಂದಳು.

"ಇಲ್ಲಿಯ ಕಾಫಿ ಏನೇನೂ ಚೆನ್ನಾಗಿರುಲ್ಲ. ಹಳ್ಳಿಯನ್ನು ತಲುಪಿದ ಕೂಡಲೇ ಬಿಸಿ ಬಿಸಿ ಸ್ಟ್ರಾಂಗ್ ಕಾಫಿ ಕೊಡಿಸ್ತೀನಿ. ಈಗ ಸ್ವಲ್ಪ ಬಾಯಿ ಮುಚ್ಚಿ ಕೊಂಡು ಸುಮ್ನಿರು" ಗದರಿದ. ಅವಳು ಸಪ್ಪಗಾದಳು. ಟ್ಯಾಕ್ಸಿ ವೇಗವಾಗಿ ಚಲಿಸಿತು. ಅವಳು ಕಣ್ಣು ಮುಚ್ಚಿ ಕುಳಿತಳು. ಮತ್ತೆ ಅವಳು ಕಣ್ಣು ಬಿಟ್ಟಾಗ ಒಂದು ಭವ್ಯವಾದ ಬಂಗಲೆಯ ಮುಂದೆ ಟ್ಯಾಕ್ಸಿ ನಿಂತಿತ್ತು. "ಮಾಲಾ... ಮನೆ ಬಂತು ಇಳಿ" ಎಂದ ಮುಗುಳ್ನಗುತ್ತಾ.

"ಇದು ಯಾರ ಮನೆ ?"

"ಸಧ್ಯಕ್ಕೆ ನಿನ್ನದೇ ಮನೆ ಅಂತ ತಿಳಕೋ..."

"ತಮಾಷೆ ಬೇಡ ಸರಿಯಾಗಿ ಹೇಳು."

"ಇದು ನನ್ನ ಚಿಕ್ಕಮ್ಮನ ಮನೆ. ಬಾ ಒಳಗೆ ಹೋಗೋಣ" ಎಂದ. ಅವಳು ಅನುಮಾನದ ಹೆಜ್ಜೆಗಳನ್ನಿಡುತ್ತಾ ಬಾಗಿಲ ಬಳಿಗೆ ಬಂದಳು. ಬಾಗಿಲ ಬಳಿ, ಚೈನಿಗೆ ಕಟ್ಟಿದ್ದ ಆಲ್‌ಸೇಷನ್ ನಾಯಿ ಅವರಿಬ್ಬರನ್ನು ಕಂಡು ಬೌ ಎಂದು ಬೊಗಳಿದಾಗ, ಅವಳು ಹೆದರುತ್ತಾ ಚಿರುತ್ತಾ ಭಾರ್ಗವನನ್ನು ಬಲವಾಗಿ ಅಪ್ಪಿಕೊಂಡಳು. ಅವನು ಮೆಲ್ಲಗೆ ಸರಿಸಿದ. ಅಷ್ಟರಲ್ಲಿ ಅವನ ಚಿಕ್ಕಮ್ಮ ಹೊರಕ್ಕೆ ಬಂದಿದ್ದಳು. ಅವಳ ಪಕ್ಕ ಮತ್ತೊಂದು ನಾಯಿ !

ಅವರಿಬ್ಬರಿಗಾಗಿಯೇ ಕಾಯುತ್ತಾ ಇದ್ದ ಚಿಕ್ಕಮ್ಮ ಮುಗುಳ್ನಗುತ್ತಾ ಸ್ವಾಗತಿಸಿದಳು.

"ಇವಳು ನನ್ನ ಚಿಕ್ಕಮ್ಮ ವತ್ಸಲಾ ಅಂತ ಹೆಸರು.... ಇವಳು ಮಾಲಾ... ಹೇಳಿದ್ದೆನಲ್ಲಾ" ಇಬ್ಬರನ್ನು ಪರಿಚಯ ಮಾಡಿಕೊಟ್ಟ. ನಾಯಿಗಳು ಬೊಗಳುತ್ತಲೇ ಇದ್ದವು.

"ಬಾಮ್ಮ ಬಾ... ಒಳಗೆ ಬಾ... ಅವು ಏನೂ ಮಾಡುಲ್ಲ. ಸ್ವಲ್ಪ ಸ್ನೇಹವಾದ ಮೇಲೆ ನಿನ್ನನ್ನು ಕಂಡರೆ ಬೊಗಳೋದೇ ಇಲ್ಲ. ಹೋಗು ಕೈ ಕಾಲು ತೊಳೆದು ಮುಖ ತೊಳೆದು ಬಾ... ಬಿಸಿ ಬಿಸಿ ಕಾಫಿ ರೆಡಿಯಾಗಿದೆ ಕೊಡ್ತೀನಿ" ಮಾಲಾ ಅವನ ಕಡೆ ನೋಡಿದಳು.

"ಹೋಗ್ಲೋ ಭಾರ್ಗವ, ಬಚ್ಚಲು ಮನೆ ತೋರಿಸು" ಅವಳು ಮನೆಯ ಅಂದ ಚಂದವನ್ನೇ ವೀಕ್ಷಿಸುತ್ತಾ ಒಳ ನಡೆದಳು.

ಹಳೆಯ ಕಾಲದ ವಿಶಾಲವಾದ ಭವ್ಯವಾದ ಬಂಗಲೆ. ದೊಡ್ಡ ಹಾಲ್. ಅದಕ್ಕೆ ಅಂಟಿಕೊಂಡಂತೆ ನಾಲ್ಕು ಬೆಡ್ ರೂಂಗಳು. ಗೋಡೆಗಳ ಮೇಲೆ ತೂಗು ಹಾಕಿದ್ದ ಸೀನರಿಗಳು, ಹಳೆಯ ಫೋಟೋಗಳು. ಇಷ್ಟು ದೊಡ್ಡ ಮನೆಯಲ್ಲಿ ಇವರೊಬ್ಬರೇ ಇದಾರೆಯೇ? ಭಾರ್ಗವ ಎಂದೂ ತನ್ನ ಚಿಕ್ಕಮ್ಮನ ಬಗ್ಗೆ ಹೇಳಿರಲಿಲ್ಲವಲ್ಲ ಎಂದುಕೊಂಡು ಪ್ರಯಾಣದ ಆಯಾಸವೆಲ್ಲಾ ಪರಿಹಾರ ವಾಗುವಂತೆ, ಬೆಚ್ಚನೆಯ ನೀರಿನಲ್ಲಿ ಮುಖ ತೊಳೆದು ಬಂದಳು. ಭಾರ್ಗವ ಅವಳ ಕೈಗೆ ಒಂದು ಟವೆಲ್ಲನ್ನು ಇತ್ತ.

ಅವಳು ಒಂದು ಸೋಫಾದಲ್ಲಿ ಕುಳಿತಳು. ವತ್ಸಲಾ ಬಿಸಿ ಬಿಸಿ ಹೊಗೆಯಾಡುವ ಕಾಫಿಯನ್ನು ತಂದಿತ್ತಳು. "ಮಕ್ಕಳು ಇನ್ನೂ ಎದ್ದಿಲ್ವಾ?" ಭಾರ್ಗವ ಪ್ರಶ್ನಿಸಿದ.

"ಇನ್ನೂ ಎದ್ದಿಲ್ಲ. ಬೇಗ ಎದ್ದು ಏನು ಮಾಡಬೇಕಾಗಿದೆ!" ಎಂದು ನುಡಿದ ವತ್ಸಲಾಳನ್ನೇ ಗಮನಿಸಿದಳು. ನುಡಿಯಲ್ಲಿ ಉತ್ಸಾಹವಿರಲಿಲ್ಲ ವೆನಿಸಿತು. ಎತ್ತರವಾದ, ಅದಕ್ಕೆ ತಕ್ಕಂತೆ ದೇಹದ ವತ್ಸಲಾಳ ಪರ್ಸನಾಲಿಟಿ ಸ್ವಲ್ಪ ಜೋರು ಎನ್ನುವಂತೆಯೇ ಇತ್ತು. ಗುಂಗುರು ಮುಖದ ಮೇಲೆ ಮುತ್ತಿ ಕೊಳ್ಳುತ್ತಿತ್ತು. ಕಪ್ಪನೆಯ ಆ ಕೇಶರಾಶಿಯನ್ನು ಕಂಡು ಮಾಲಾಳಿಗೆ ತನ್ನ ಜಡೆ ನೆನಪಾಗಿತ್ತು. ಉಟ್ಟಿದ್ದು ನೂಲಿನ ಸೀರೆಯೇ ಆದರೂ ದುಬಾರಿಯದು ಎಂದು ಗೊತ್ತಾಗುತ್ತಿತ್ತು. ಕಿವಿಯಲ್ಲಿ ವಜ್ರದ ಓಲೆಗಳು, ಮೂಗಿನಲ್ಲಿ ಹೊಳೆಯುವ ವಜ್ರದ ಮೂಗುಬೊಟ್ಟು. ಆಕೆಯ ಶ್ರೀಮಂತಿಕೆಯನ್ನು ತೋರಿಸುತ್ತಿತ್ತು. ಆದರೆ ಹಣೆಯಲ್ಲಿ ಕಂಡರೂ ಕಾಣದಂತೆ ಇಟ್ಟುಕೊಂಡಿದ್ದ

ಕುಂಕುಮದ ಬೊಟ್ಟು, ಕೈಯಲ್ಲಿ ಒಂದೊಂದೇ ಚಿನ್ನದ ಬಳೆಗಳು. ಅವಳು ವಿಧವೆ ಎನ್ನುವುದನ್ನು ಸೂಚಿಸುತ್ತಿದ್ದವು. ಇಬ್ಬರೂ ನಿಧಾನವಾಗಿ ಕಾಫಿಯನ್ನು ಕುಡಿದರು.

"ನೀವಿಬ್ಬರೂ ಒಂದು ಗಳಿಗೆ ಮಲಗಿ ಸುಧಾರಿಸಿಕೊಳ್ಳಿ. ನಾನು ಸ್ವಲ್ಪ ಆಶ್ರಮದ ಕಡೆ ಹೋಗಿಬರ್ತೀನಿ" ಎಂದು ಹೇಳಿ ಹೊರಟಳು. ಭಾರ್ಗವ ಅಲ್ಲೇ ಹಾಗೇ ಸೋಫಾದ ಮೇಲೆ ಉರುಳಿಕೊಂಡ.

"ಅಲ್ಲಿ ರೂಮುಗಳಿವೆ ಬೇಕಾದರೆ ಅಲ್ಲಿ ಹೋಗಿ ಮಲಗು" ಎಂದ.

"ನನಗೆ ಸಂಕೋಚವಾಗುತ್ತಪ್ಪಾ. ಇಲ್ಲೇ ಕೂತಿರುತ್ತೀನಿ" ಎಂದು ಹೇಳಿ ಹಾಗೇ ತಲೆಯನ್ನು ದಿಂಬಿಗೆ ಒರಗಿಸಿದಳು. ಕಣ್ಣು ಹತ್ತಿದಂತಾಗಿತ್ತು. ಯಾರೋ ಮೈಮುಟ್ಟಿದಂತೆ ಅನ್ನಿಸಿತು ಬೆಚ್ಚಿ ಕಣ್ಣು ಬಿಟ್ಟು ಕಿರುಚಿದಳು. ಭಾರ್ಗವನಿಗೂ ಎಚ್ಚರವಾಯಿತು.

ಎದುರಿಗೆ ಇಬ್ಬರು ಯುವಕರು ನಿಂತಿದ್ದರು. ಮಾಲಾ ಹೆದರಿ, ಎದ್ದು ಭಾರ್ಗವನ ಬಳಿಗೆ ಬಂದು ನಿಂತಳು.

"ನೀನೇನೂ ಹೆದರಬೇಡ ಮಾಲಾ. ಇವರಿಬ್ಬರೂ ನನ್ನ ಚಿಕ್ಕಮ್ಮನ ಮಕ್ಕಳು. ಒಬ್ಬ ನಾಗೇಶ, ಇನ್ನೊಬ್ಬ ಯೋಗೇಶ. ಇಬ್ಬರೂ ಅವಳಿ ಮಕ್ಕಳು." ಮಾಲಾ ಬೆರಗಿನಿಂದ ನೋಡುತ್ತಿದ್ದಳು. ತಾಯಿಯ ತದ್ರೂಪು. ಇಬ್ಬರದೂ ಒಳ್ಳೆಯ ಪರ್ಸನಾಲಿಟಿ. ತಲೆಯ ತುಂಬಾ ಹಾರಾಡುವ ಗುಂಗುರು ಕೂದಲು. ನೈಟ್ ಸೂಟ್‌ನಲ್ಲಿದ್ದರು. ಮೀಸೆ ಬಂದ ಯುವಕರು ಅವಳನ್ನೇ ತದೇಕನಾಗಿ ನೋಡಿದಾಗ, ಅವಳ ಕೆನ್ನೆ ರಂಗೇರಿತು. ಮೈಯಲೆಲ್ಲಾ ಏನೋ ಹರಿದಾಡಿದಂತಾಯಿತು. ಇಲ್ಲಿ ಈ ಯುವಕರಿಂದ ಅಪಾಯ ಒದಗಿದರೇ... ಈ ಭಾರ್ಗವ ಹೇಳದೆ ಕೇಳದೆ ಕಾಡಿನ ಮಧ್ಯೆ ಇರುವ ಬಂಗಲೆಗೆ ತನ್ನನ್ನು ಕರೆದುಕೊಂಡು ಬಂದಿದಾನೆ. ಇವನ ಉದ್ದೇಶ ಏನಿರಬಹುದು? ಅವಳ ಮನಸ್ಸನ್ನು ಓದಿದವನಂತೆ ಭಾರ್ಗವ ನುಡಿದ.

"ನೀನು ಗಾಬರಿ ಪಡಬೇಕಾಗಿಲ್ಲ. ಈ ಹುಡುಗರು ತುಂಬಾ ಮುಗ್ಧರು. ಮಾತು ಬಾರದ ಮೂಕರು" ಮಾಲಾ ನಂಬದವಳಂತೆ ಭಾರ್ಗವನ ಕೈ ಹಿಡಿದಳು.

"ಇವರಿಬ್ಬರೂ ಹುಟ್ಟು ಕಿವುಡರು...." ಆ ಕ್ಷಣದಲ್ಲಿ ಅವಳಿಗೆ ತನ್ನ ಮಕ್ಕಳ ನೆನಪಾಗಿತ್ತು. ಅವರೂ ಅವಳೀ ಮಕ್ಕಳೇ... ಮೊದಲೇ ನನ್ನ ಅದೃಷ್ಟ

ಚೆನ್ನಾಗಿಲ್ಲ. ಈ ಮಕ್ಕಳಂತೆ ನನ್ನ ಮಕ್ಕಳಿಗೆ ಕಿವುಡಾಗಿದ್ದರೆ... ಮಾತು ಬಾರದಿದ್ದರೇ...." ಆ ಅನಿಸಿಕೆಯೇ ಅವಳನ್ನು ಬೆಚ್ಚಿಸಿತು. "ನೋ" ಎಂದು ಕಿರುಚಿದಳು. ಭಾರ್ಗವ ಗಾಬರಿಯಿಂದ ಅವಳನ್ನೇ ನೋಡಿದ. ಆದರೆ ಆ ಯುವಕರು ಯಾವ ಪ್ರತಿಕ್ರಿಯೆಯನ್ನೂ ತೋರಿರಲಿಲ್ಲ.

"ನೋಡಿದ್ಯಾ ನೀನು ಕಿರುಚಿದರೂ, ಅವರು ಬೆಚ್ಚಿ ಬೀಳಲಿಲ್ಲ. ನನ್ನ ಮಾತಿನ ಮೇಲೆ ನಿನಗೆ ನಂಬಿಕೆ ಇರಲಿಲ್ಲ ಅಲ್ವಾ ?"

"ನನಗೆ ನನ್ನ ಮಕ್ಕಳನ್ನು ನೋಡಬೇಕು. ಮಾತನಾಡಿಸಬೇಕು ಅಂತ ಅನ್ನಿಸ್ತಿದೆ ಭಾರ್ಗವ. ಇಷ್ಟು ದೂರ, ಈ ಕಾಡಿಗೇಕೆ ನನ್ನನ್ನು ಕರೆದುಕೊಂಡು ಬಂದೆ ?"

"ಇದು ಕಾಡಲ್ಲ. ಕಾಫಿ ಎಸ್ಟೇಟ್.... ಇದು ನನ್ನ ಚಿಕ್ಕಮ್ಮನ ಮನೆ. ಸಧ್ಯಕ್ಕೆ ನೀನು ಇಲ್ಲಿರುವುದು ಕ್ಷೇಮ."

"ಏನು ಕ್ಷೇಮವೋ... ನೋಡು, ನಿನ್ನ ಕಸಿನ್ಸ್ ಹೇಗೆ ನನ್ನನ್ನೇ ತಿಂದು ಹಾಕುವ ಹಾಗೆ ನೋಡ್ತಾ ಇದಾರೆ..."

"ಏನೋ ಕುತೂಹಲ. ಹಾಗೆ ನೋಡ್ತಾ ಇದಾರೆ. ಅದಕ್ಕೆಲ್ಲ ಕೆಟ್ಟ ಅರ್ಥವನ್ನು ಕಲ್ಪಿಸಬೇಡ."

"ನನಗೆ ನಂಬಿಕೆಯೇ ಹೊರಟುಹೋಗಿದೆ. ಇವರಿಬ್ಬರನ್ನು ನೀನು ಎದುರಿನಿಂದ ಕರೆದುಕೊಂಡು ಹೋಗು ಇಲ್ಲದಿದ್ದರೆ ನಾನು ಮತ್ತೆ ಕಿರುಚಿಕೊಳ್ತೀನಿ."

"ಕಿರುಚ್ಕೋ ನಿನ್ನ ಕಿರುಚಾಟ ಇವರಿಗೆ ಕೇಳುಲ್ಲ. ನನಗೆ ಅಭ್ಯಾಸವಾಗಿದೆ. ಇನ್ನು ಈ ಸುತ್ತ ಮುತ್ತ ಹತ್ತಿರದಲ್ಲಿ ಜನಸಂಚಾರವಿಲ್ಲ. ಯಾವುದಾದ್ರೂ ಕಾಡು ಪ್ರಾಣಿಗಳು ಓಡಿ ಬರಬೇಕು ಅಷ್ಟೇ..." ಅವನು ನಕ್ಕಾಗ ಅವಳು ಸೊಟ್ಟ ಮೂತಿ ಮಾಡಿದಳು.

"ಹುಲಿ, ಕರಡಿ, ಚಿರತೆ ಇದ್ದರೂ ಇರಬಹುದು. ಆದರೆ ಬೆಳಗಿನ ಹೊತ್ತು ಹೊರಕ್ಕೆ ಬರುಲ್ಲ.. ಧೈರ್ಯವಾಗಿರು."

"ಇಲ್ಲೇ ಎರಡು ಬಿಳಿ ಕರಡಿಗಳಿವೆಯಲ್ಲಾ... ಇದಕ್ಕೇನು ಮಾಡಲಿ ?"

"ಕಾರು ನಿಂತ ಸದ್ದು ಕೇಳಿಸಿತು" ಚಿಕ್ಕಮ್ಮ ಬಂದಳು ಅಂತ ಕಾಣುತ್ತೆ. ಪ್ಲೀಸ್ ಅವಳ ಎದುರಿಗೆ ಹೀಗೆಲ್ಲಾ ಮಾತನಾಡಬೇಡ. ತಾಯಿಯ ನೆರಳನ್ನು ಕಂಡ ಕೂಡಲೇ ಆ ಹುಡುಗರಿಬ್ಬರೂ ಓಡಿ ಹೋಗಿ ಅವಳನ್ನು

ತಬ್ಬಿಕೊಂಡರು. ಅವಳು ಅವರ ತಲೆಯ ಮೇಲೆ ಕೈಯಾಡಿಸಿ ಪ್ರೀತಿಯನ್ನು ಪ್ರದರ್ಶಿಸಿದಳು. ಮುಂಬಾಗಿಲಲ್ಲಿದ್ದ ನಾಯಿಗಳು ಬೌ ಬೌ ಎಂದವು.

"ನೋಡು ಎಷ್ಟು ಹೊಟ್ಟೆ ಕಿಚ್ಚು ಇವುಗಳಿಗೆ ? ಏನೋ ಬ್ರೌನೀ... ಏನೋ ಕ್ರೌನೀ... ಎನ್ನುತ್ತಾ ನಾಯಿಗಳನ್ನು ಮುದ್ದಾಡಿದಳು. ಮಾಲಾ ಬೇಸರದ ಮುಖವನ್ನು ಮಾಡಿದಳು. ಭಾರ್ಗವನಿಗೆ ಪಿಚ್ಚೆನಿಸಿತು. 'ಇವಳನ್ನು ಇಲ್ಲಿಗೆ ಕರೆತಂದು ತಪ್ಪು ಮಾಡಿದೆನೇನೋ... ಇವಳಿಗೋಸ್ಕರ ಅಲ್ಲವೇ ನಾನು, ರಜ ಹಾಕಿ ಇಲ್ಲಿಗೆ ಕರೆತಂದದ್ದು... ಅಷ್ಟೂ ತಿಳಿಯಬೇಡವೇ ? ಇನ್ನೂ ಇವಳ ಬುದ್ಧಿ ಬೆಳೆದೇ ಇಲ್ಲ... ಬರೀ ಕಸಕಟ್ಟೆ ಕಾಯಿ' ಎಂದು ತನ್ನಲ್ಲೇ ಬೈದುಕೊಂಡ. ವತ್ಸಲಾ ಒಳಗೆ ಬಂದಳು. ಅವಳ ಹಿಂದೆಯೇ ಅಡಿಗೆ ಹೆಂಗಸೂ ಒಳಗೆ ಬಂದಳು.

"ಏನು ತಿಂಡಿ ಮಾಡಿಸ್ಲೋ... ನಿಂಗೇನು ಇಷ್ಟ ಹೇಳು."

"ಯಾವುದಾದರೂ ಆಗುತ್ತೆ... ತಕ್ಷಣಕ್ಕೆ ಏನಿದೆ ಹೇಳು... ರಾತ್ರಿ ನಾವಿಬ್ಬರೂ ಊಟವನ್ನೇ ಮಾಡಿಲ್ಲ."

"ಅಯ್ಯೋ ಹೌದಾ ? ಮೊದಲೇ ಹೇಳಬಾರದಾಗಿತ್ತಾ ನೀನು ಬ್ರೆಡ್ಡು, ಬಿಸ್ಕತ್ತು, ಹಾಲು ಹಣ್ಣು ಎಲ್ಲಾ ಇತ್ತು."

"ನನಗೇನು ಗೊತ್ತು ! ಅದೆಲ್ಲಾ ನಾಯಿಗಳಿಗೆ ಅಂತ ಅಂದ್ಕೊಂಡೆ."

"ಥೂ ನೀನೊಬ್ಬ ! ನಾಯಿ ಬಿಸ್ಕತ್ತನ್ನು ನಿನಗೆ ಕೊಡ್ತೀನಾ ! ಈ ಹುಡುಗಿ ಎದುರಿಗೆ ನನ್ನ ಮಾನವನ್ನು ಕಳೆಯಬೇಡ."

"ಈ ಹುಡುಗೀನ ನಾನು ಚಿಕ್ಕ ವಯಸ್ಸಿಂದ ಬಲ್ಲೆ... ಅವಳು ಅಂಥೋಳಲ್ಲ."

"ನೀನು ಅಷ್ಟೇ ಕಣೇ ಅಮ್ಮ... ನೀನು ಈ ಮನೆಗೆ ಅತಿಥಿ ಇರಬಹುದು. ಆದರೆ ನೀನು ಇಲ್ಲಿ ಇರುವ ತನಕ ಇದು ನಿನ್ನ ಮನೇ ಅಂತಲೇ ಅಂದುಕೋ... ಯಾವ ಸಂಕೋಚವೂ ಬೇಡ."

"ನೀನು ಅಷ್ಟು ಹೇಳಿದೆಯಲ್ಲಾ ಅಷ್ಟೇ ಸಾಕು ಇವಳಿಗೆ ಸ್ವತಂತ್ರವಾಗಿರಬೇಕು ಅಂತ ತುಂಬಾ ತುಂಬಾ ಇಷ್ಟ."

"ಈ ಮನೆಯಲ್ಲಿ ನಿನಗೆ ಸಂಪೂರ್ಣ ಸ್ವತಂತ್ರವಿದೆ. ನೀನೇ ನೋಡಿದೆಯಲ್ಲ. ನನ್ನ ಮಕ್ಕಳು ಯಾವ ತಂಟೆಗೂ ಬರೋರಲ್ಲ." ಅವಳ ಕಣ್ಣಿನಲ್ಲಿ ವ್ಯಥೆ ತುಂಬಿಕೊಂಡಿತು. ಮಾಲಾಳಿಗೆ ಪಿಚ್ಚೆನಿಸಿತು.

ಅಷ್ಟರಲ್ಲಿ ಭಾರ್ಗವ ಬಿಸ್ಕತ್ತು, ಬಾಳೆಹಣ್ಣುಗಳನ್ನು ತಂದ. ಅಡಿಗೆಯಾಕೆ ಬಿಸಿ ಬಿಸಿ ಕಾಫಿಯನ್ನು ತಂದಿತ್ತರು. "ರಾತ್ರಿಯೂ ಇದನ್ನೇ ತಿನ್ನಿಸಿದ್ದೆಯಲ್ಲೋ ಭಾರ್ಗವ" ಮಾಲಾ ಗೊಣಗಿದಳು.

"ಸುಮ್ಮನೆ ತಿನ್ನು. ಇಲ್ಲದಿದ್ರೆ ನಾಯಿಗಳಿಗೆ ಹಾಕಿಬಿಡ್ತೀನಿ. ಆಮೇಲೆ ನಿನಗೆ ಅದೂ ಇಲ್ಲ."

"ನೀನೇ ತಿನ್ನು ನನಗೆ ಬರೀ ಕಾಫಿ ಸಾಕು. ಆಮೇಲೆ ತಿಂಡೀನೇ ತಿಂತೀನಿ" ಎನ್ನುತ್ತಾ ಕಾಫಿಯ ಬಟ್ಟಲನ್ನು ಎತ್ತಿಕೊಂಡಳು. ವತ್ಸಲಾ ಆಗಾಗ್ಗೆ ಮಾಲಾಳನ್ನೂ, ಭಾರ್ಗವನನ್ನೂ ಗಮನಿಸುತ್ತಿದ್ದುದು ತಿಳಿಯಿತು. 'ಈಕೆಯ ಮನಸ್ಸಿನಲ್ಲಿ ಏನಿದೆಯೋ ?' ಎಂತಂದುಕೊಂಡಳು.

o o o

ಎರಡು ರಾತ್ರಿಯ ನಂತರ ರಘು ಮನೆಗೆ ವಾಪಸ್ಸಾಗಿದ್ದ. ಅಷ್ಟರೊಳಗೆ ಪ್ರತಾಪ ಮಧುಕರನ ಬಲವಂತಕ್ಕೆ ಪೋಲೀಸರಿಗೆ ತಿಳಿಸಿದ್ದ. "ಎರಡು ದಿನಗಳಿಂದ ನನ್ನ ತಮ್ಮ ಕಾಣೆಯಾಗಿದಾನೆ. ಹಾಗೆ ನನ್ನ ತಮ್ಮನ ಪತ್ನಿಯೂ ನಾಪತ್ತೆಯಾಗಿದ್ದಾಳೆ... ಹುಡುಕಿಸಿ ಕೊಡಿ ಎಂದಿದ್ದ."

"ನೀವು ಪೋಲಿಸ್ ಸ್ಟೇಷನ್ನಿಗೆ ಬಂದು ಒಂದು ಕಂಪ್ಲೆಂಟ್ ಬರೆದು ಕೊಡಿ. ಹಾಗೇ ಅವರಿಬ್ಬರ ಫೋಟೋ ಇದ್ದರೆ ತಂದುಕೊಡಿ. ಕೆಲವೇ ಗಂಟೆಗಳಲ್ಲಿ ಪತ್ತೆ ಹಚ್ಚಿಬಿಡ್ತೀವಿ" ಎಂದಿದ್ದ ಪೋಲೀಸ್ ಆಫೀಸರ್.

"ರಘು ಎಲ್ಲಿಗೆ ಹೋಗಿದಾನೋ.. ಇದಕ್ಕೂ ಮಾಲಾಗೂ ಏನು ಸಂಬಂಧ ? ನೀನೇ ಅವಳನ್ನು ಮುಚ್ಚಿಟ್ಟಿರಬೇಕು" ಮಧು ತನ್ನ ಸಂದೇಹವನ್ನು ತೋರಿಸಿದ.

"ನಾನ್ಯಾಕೆ ಅವಳನ್ನು ಮುಚ್ಚಿಡಲಿ ? ನನ್ನ ತಲೆ ಕೆಟ್ಟಿದೆಂತಾ ?"

"ನಿಮಗೆ ಬೇಕಾಗಿದ್ದುದು ಈ ಮಕ್ಕಳೂ. ನಿನಗೆ ಮೊದಲೇ ಅವಳನ್ನು ಕಂಡರೆ ಆಗುತ್ತಿರಲಿಲ್ಲ. ನಿಮ್ಮ ಕೆಲಸವಾದ ಮೇಲೆ ಏನು ಮಾಡಿದಿರೋ ! ಅವಳು ಬದುಕಿದಾಳೋ ಇಲ್ಲವೋ ನನಗೆ ಅದೇ ಅನುಮಾನ."

"ನೋಡು ಮಧು ಹೀಗೆಲ್ಲಾ ಅಪವಾದ ಹೊರಿಸಬೇಡ. ರಘು ಸಹ ಮನೆಗೆ ಬಂದಿಲ್ಲ. ಅವರಿಬ್ಬರೂ ಎಲ್ಲಿಗೆ ಹೋಗಿರಬಹುದು ಅಂತ ನಾವು ಆತಂಕ ಪಡುತ್ತಿದ್ದೇವೆ. ನೀನುಯಾಕೆ ಹೀಗೆಲ್ಲಾ ಮಾತನಾಡ್ತೀಯ...?"

"ರಘು ಗಂಡಸು. ಅವನು ಏನು ಮಾಡಿದ್ರೂ, ಎಲ್ಲಿದ್ರೂ ಜನ ಹೊಟ್ಟು

ಮಾಡಲ್ಲ. ಮಾಲಾಳ ತಲೆ ಮೇಲೆ ಈಗಾಗಲೇ ಅಪವಾದವಿದೆ. ಮತ್ತೆ ಅದೇ ಕತೆ ರಿಪೀಟ್ ಆಗಬೇಕಾ ?"

"ಅದೇ ವಿಷಯ ನಮಗೂ ತಿಳೀತಿಲ್ಲ. ಆಗ ನಾವು ಅವಳನ್ನು ರಕ್ಷಿಸಿದೆವು. ಈಗ ಯಾರು ಕಿಡ್ನಾಪ್ ಮಾಡಿದಾರೋ ? ಎಲ್ಲಿದಾಳೋ ?"

"ಅವಳು ಈ ರಾತ್ರಿಯೂ ಬರದಿದ್ದರೆ ನಾನು ನಾಳೆ ಬೆಳಿಗ್ಗೆ ನಿಮ್ಮ ಮೇಲೆ ಪೋಲೀಸ್ ಕಂಪ್ಲೆಂಟ್ ಕೊಡ್ತೀನಿ. ಅವರೇ ನಿಮ್ಮ ಬಾಯಿ ಬಿಡಿಸ್ತಾರೆ."

"ಒಳ್ಳೇ ಚೆನ್ನಾಯ್ತಲ್ಲ. ನೀನೇ ಯಾಕೆ ನಿನ್ನ ತಂಗೀನ ಬಚ್ಚಿಟ್ಟಿರಬಾರದು ? ನಮ್ಮ ಮೇಲೆ ಅಪವಾದ ಹೊರಿಸೋಕೆ ?" ಪ್ರತಾಪ ಕೆಣಕಿದ.

"ನಿನ್ನ ಮೇಲೆ ಅಪವಾದ ಹೊರಿಸಿದರೆ ನನಗೇನು ಸಿಕ್ಕುತ್ತೆ? ಹಾಗೆ ಮಾಡೋನಾಗಿದ್ರೆ ನಮ್ಮ ಮನೆಯಿಂದ ಇಲ್ಲಿಗೆ ಕಳಿಸುತ್ತಲೇ ಇರಲಿಲ್ಲ. ನಿಮ್ಮ ಮನೆಗೆ ಬಂದ ಮೇಲೆ, ನಿಮ್ಮದೇ ಪಾರ್ಟಿಯಿಂದ ಅವಳು ನಾಪತ್ತೆಯಾಗಿದ್ದಾಳೆ ಅಂತಂದ್ರೆ..." ಅವನೂ ಉತ್ತರದ ಧ್ವನಿಯಲ್ಲಿ ನುಡಿದ.

"ಸರಿ ಸರಿ ನಾವು ಕಚ್ಚಾಡಿ ಏನು ಪ್ರಯೋಜನ ? ನಾಳೆ ಬೆಳಿಗ್ಗೆಯವರೆಗೆ ಕಾಯೋಣ. ಬರದೇ ಇದ್ದರೆ ಟೀವಿಲಿ, ಅನೌನ್ಸ್ ಮಾಡಿಸೋಣ. ಪೇಪರ್ನಲ್ಲಿ ಹಾಕಿಸೋಣ."

"ಆ ರಾತ್ರಿ ಪ್ರತಾಪ, ಧ್ರುವ ಹಾಗೂ ಸುಮಿತ್ರಾದೇವಿ ಬಹಳ ಹೊತ್ತು ಗುಸುಪಿಸು ಮಾತನಾಡುತ್ತಿದ್ದುದನ್ನು ಮಧು, ವಸುಧಾ ಇಬ್ಬರೂ ಗಮನಿಸಿದರು. ಇವರುಗಳಿಗೆ ರಘು ಮೇಲೇ ಅನುಮಾನ. ಅಂದರೆ ರಘು ಈ ಮುಂಚೆ ಆ ಕೆಲಸ ಮಾಡಿದಾನೆ. ಅದಕ್ಕೇ ಇವರುಗಳು ಬಾಯಿ ಬಿಡುತ್ತಿಲ್ಲ. ಸ್ಕೌಂಡ್ರಲ್‌ಗೆ ಎಷ್ಟು ಧೈರ್ಯ... ರೇಪಿಸ್ಟ್‌ನ್ನು ಫ್ರೀಯಾಗಿ ಬಿಡಬಾರದು. ಅವನು ಬರಲಿ.. ಮೊದಲು ಲಾಕಪ್‌ಗೆ ಕಳಿಸ್ತೀನಿ" ಮಧು ಹಲ್ಲು ಕಡಿದ.

"ಆದರೆ ಈಗ ರಘು ಮಾಲಾಳ ಜೊತೆಯಲ್ಲಿ ಇಲ್ಲ ಅನ್ನುವುದು ನಮಗೆ ಗೊತ್ತಲ್ಲ. ನಾವು ಅವನ ಮೇಲೆ ಹೇಗೆ ಕಂಪ್ಲೆಂಟ್ ಕೊಡೋಕೆ ಆಗುತ್ತೆ ?"

"ಸರಿ. ಬೆಳಿಗ್ಗೆ ಮಾತಾಡೋಣ. ಪ್ರತಾಪ ನಮ್ಮ ಮಾತುಗಳನ್ನು ಕೇಳಿಸಿಕೊಂಡರೆ ನಮಗೇ ತೊಂದರೆ" ಇಬ್ಬರೂ ಮಲಗಿದರು.

ಬೆಳಿಗ್ಗೆ ಅವರಿಬ್ಬರೂ ಎದ್ದು ಹೊರಗೆ ಬಂದಾಗ, ರಘು ಅಲ್ಲಿ ಕುಳಿತಿದ್ದ. ಪ್ರತಾಪ ಅವನನ್ನು ದಬಾಯಿಸುತ್ತಿದ್ದ. ಇವರಿಬ್ಬರನ್ನು ಕಂಡು ಮಾತನ್ನು ನಿಲ್ಲಿಸಿದ. ಮಧು ರಘು ಬಳಿಗೆ ಬಂದ. ಒದೆಯಬೇಕೆನ್ನಿಸಿತ್ತು. ಕೋಪವನ್ನು

ತುಂಬಿಕೊಂಡು ಕೇಳಿದ.

"ಎಲ್ಲಿ ಮಾಲಾ ?... ಮಾಲಾ ಎಲ್ಲಿ ?" ಗರ್ಜಿಸಿದ.

"ನನಗೇನು ಗೊತ್ತು ? ಮನೇಲಿಲ್ವಾ ?"

"ನಿನ್ನನ್ನು ಕೇಳಿದ್ರೆ ನನಗೆ ತಿರುಗಿ ಕೇಳ್ತೀಯಾ ?" ಎನ್ನುತ್ತಾ ಹೊಡೆಯಲೆಂದು ಕೈ ಎತ್ತಿದ. ಪ್ರತಾಪ ಅವನ ಕೈ ಹಿಡಿದ.

"ನಾನು ಆಗಲೇ ಕೇಳಿದೆ. ಅವಳು ಇವನ ಜೊತೆಯಲ್ಲಿ ಹೋಗಿಲ್ಲ. ಇವನಿಗೂ ಮಾಲಾಳ ನಾಪತ್ತೆಗೂ ಸಂಬಂಧವಿಲ್ಲ."

"ಅದ್ಹೇಗೆ ಹೇಳ್ತೀಯ ? ಅದೆಲ್ಲಿ ಮುಚ್ಚಿಟ್ಟಿದೀಯ ಅವಳನ್ನು ಅಂತ ಬೊಗಳು."

"ನನಗೇನು ಗೊತ್ತು? ನಾನು ಎರಡು ರಾತ್ರಿ ನನ್ನ ಫ್ರೆಂಡ್ ಒಬ್ಬರ ಮನೆಯಲ್ಲಿ ಇದ್ದೆ..."

"ಯಾರು ಆ ಫ್ರೆಂಡು... ಫೋನ್ ತಗೋ... ನಾನು ಮಾತನಾಡಬೇಕು."

"ನನ್ನ ಮಾತನ್ನು ನಂಬಿ. ನಾನು ರೂಬಿ ಅನ್ನೋ ಗರ್ಲ್‌ಫ್ರೆಂಡ್ ಜೊತೇಲಿದ್ದೆ" ಪ್ರತಾಪ ಚಟ್ಟನೆ ಅವನ ಕೆನ್ನೆಗೆ ಹೊಡೆದ.

"ನಾವುಗಳೆಲ್ಲ ನಿನಗೇನಾಗಿ ಹೋಯ್ತೋ ಅಂತ ಚಡಪಡಿಸುತ್ತಿದ್ದರೆ. ಅದ್ಯಾವಳೋ ರೂಬಿ ಅಂತೆ... ಅವಳ ಜೊತೆ ಮಲಗಿದ್ದೆಯಾ ?"

"ನೋಡು ಪ್ರತಾಪ... ಇದು ನನ್ನ ಪರ್ಸನಲ್ ವಿಷಯ. ನೀನು ನನ್ನ ಮೇಲೆ ಕೈ ಮಾಡಿದರೆ, ನಾನು ಪೊಲೀಸರನ್ನ ಕರೆಸಬೇಕಾಗುತ್ತದೆ."

"ಸರಿ. ಕರೆಸು. ಎಲ್ಲರೂ ಲಾಕಪ್‌ನಲ್ಲಿ ಕುಳಿತುಕೊಳ್ಳೋಣ. ಎರಡು ದಿನದಿಂದ ಮಾಲಾ ನಾಪತ್ತೆಯಾಗಿದಾಳೆ. ನೀನೂ ಇರಲಿಲ್ಲ. ನಾವು ಏನಂದು ಕೊಳ್ಳಬೇಕು ! ಈ ಮಧೂನೋ ನಾವೇ ಅಪರಾಧಿಗಳು ಅನ್ನೋ ತರಹ ಮಾತನಾಡ್ತಾನೆ."

"ನೀವು ಅಪರಾಧಿಗಳೋ ಅಲ್ಲವೋ ಅನ್ನೋದನ್ನ ಕೋರ್ಟು ಡಿಸೈಡ್ ಮಾಡುತ್ತೆ. ನೀನು ಅಪರಾಧ ಮಾಡಿಲ್ಲದಿದ್ದರೆ ನಿನಗೇನು ಭಯ ?"

"ನನಗೇನೂ ಭಯವಿಲ್ಲ... ಆದರೆ ನಾವೂ ಇಲ್ಲದಿದ್ದರೆ ಮಾಲಾನ್ನ ಹುಡುಕಿಸೋರು ಯಾರು ?"

"ಪೊಲೀಸರು ಹುಡುಕಿಸಲಿ. ಅದು ಅವರ ಕೆಲಸ ತಾನೇ..."

"ಅವರಿಗೆ ಸಾಕಷ್ಟು ಖರ್ಚು ಮಾಡಬೇಕಾಗುತ್ತದೆ. ಹಣ ಎಷ್ಟು ಬೇಕು ?"

"ನಿನ್ನ ಹಣ ನನಗೆ ಬೇಕಿಲ್ಲ. ನಾನು ಪೋಲೀಸರಿಗೆ ಫೋನು ಮಾಡ್ತೀನಿ."

"ಆಮೇಲೆ ಪಶ್ಚಾತ್ತಾಪ ಪಡಬೇಕಾಗುತ್ತದೆ ಮಧು. ನಾನು ನಿನ್ನನ್ನು ಸುಮ್ಮನೇ ಬಿಡ್ತೀನಾ ? ನಿಮ್ಮೆಲ್ಲರನ್ನೂ ಇಲ್ಲ ಅಂತ ಅನ್ನಿಸಿಬಿಡ್ತೀನಿ."

ಇದುವರೆಗೂ ಸುಮ್ಮನಿದ್ದ ಧ್ರುವ ಮಾತನಾಡಿದ. "ಹೀಗೆಲ್ಲ ಯಾಕೆ ಮಾತನಾಡ್ತೀಯ ಪ್ರತಾಪ. ಮೊದಲೇ ಇವನಿಗೆ ನಂಬಿಕೆ ಇಲ್ಲ. ನಾನು ಮಧು ಹತ್ತಿರ ಮಾತನಾಡ್ತೀನಿ" ಎನ್ನುತ್ತಾ ಅವನ ಬಳಿಗೆ ಬಂದ.

"ವಸುಧಾ ಜೊತೆ ರಿಫ್ರೆಷ್ ರೂಂಗೆ ಮಾಲಾ ಹೋಗಿದ್ದಳು. ಅಲ್ಲಿಂದ ಮಾಲಾ ನಾಪತ್ತೆಯಾದರೆ ಪ್ರತಾಪನ ತಪ್ಪೇನು ? ಅವನೂ ನಮ್ಮ ಜೊತೆಗೇ ಇದ್ದನಲ್ಲ."

"ಇಲ್ಲ. ನಾನು ಅಲ್ಲಿರಲಿಲ್ಲ. ರಘೂನ ಕರೆದುಕೊಂಡು ಬರೋಕೆ ಅಂತ ಮನೆಗೆ ಬಂದಿದ್ದೆ. ಅಲ್ಲೇನು ನಡೆಯಿತು ಅಂತ ನನಗೇನು ಗೊತ್ತು."

"ರಘು ಅವನ ಗರ್ಲ್‌ಫ್ರೆಂಡ್ ಜೊತೆ ಇದ್ದೆ ಅಂತ ಹೇಳ್ತಾನೆ. ಆದ್ದರಿಂದ ನಮಗ್ಯಾರಿಗೂ ಗೊತ್ತಿಲ್ಲ. ಹೇಗೆ ಏನಾಯ್ತು ಅಂತ. ಇವತ್ತೇ ದೂರದರ್ಶನದಲ್ಲಿ ಪ್ರಸಾರ ಮಾಡಿಸೋಣ. ಪೇಪರ್ರ್‌ಗೆ ಹಾಕಿಸೋಣ."

"ಇನ್ನು ಮಾಡಿಸಿಲ್ವಾ? ಇದುವರೆಗೆ ಏನು ಮಾಡ್ತಿದ್ರಿ?" ಮಧು ಕೂಗಾಡಿದ.

"ಇಬ್ಬರಿಗೂ ನನ್ನ ಮೇಲೆ ಅನುಮಾನವಿತ್ತು. ನಾನು ಬರಲಿ ಅಂತ ಕಾಯ್ತಾ ಇದ್ರು" ರಘು ವ್ಯಂಗ್ಯವಾಗಿ ನುಡಿದ.

"ಸರಿ. ನಿಮಗ್ಯಾರಿಗೂ ಗೊತ್ತಿಲ್ಲ ತಾನೇ... ಹುಡುಕಿಸಿಕೊಡುವುದು ಪೋಲೀಸರ ಕೆಲಸ. ನಾವು ಈಗಲೇ ಪೊಲೀಸ್ ಸ್ಟೇಷನ್‌ಗೆ ಹೋಗೋಣ" ಮಧು ಒತ್ತಿ ಒತ್ತಿ ನುಡಿದಾಗ, ವಿಧಿ ಇಲ್ಲದೆ ಎಲ್ಲರೂ ಪೊಲೀಸ್ ಸ್ಟೇಷನ್‌ಗೆ ಹೊರಟರು.

ಸುಮಿತ್ರಾದೇವಿ ತಲೆ ನೋವೆಂದು ಮಲಗಿದ್ದಳು. ವಸುಧಾ ಭಾಸ್ಕರನಿಗೆ ಫೋನು ಮಾಡಿ ಬರುವಂತೆ ಕರೆದಳು. ಅರ್ಧಗಂಟೆಯೊಳಗೆ ಅವನು ಬಂದಿದ್ದ. ವಸುಧಾ ನಡೆದ ವಿಷಯವನ್ನೆಲ್ಲಾ ಅವನಿಗೆ ಹೇಳಿ ಪಿಸು ದನಿಯಲ್ಲಿ "ಫೋನು ಬಂದಿತ್ತಾ ?" ಅಂತ ಕೇಳಿದಳು.

"ಅವಳಿಗೆ ಮಕ್ಕಳದ್ದೇ ಚಿಂತೆ. ಮಕ್ಕಳು ಹೇಗಿವೆ ಅಂತ ವಿಚಾರಿಸಿದಳು" ಎಂದ.

"ಕೆಲಸದವಳು ನೋಡಿಕೊಳ್ಳುತ್ತಿದಾಳೆ. ಏನೂ ವರಿಯಿಲ್ಲ ಅಂತ ಹೇಳಿಬಿಡಿ."

"ನಾವು ಇವತ್ತೇ ಊರಿಗೆ ಹೋಗ್ತೀವಿ. ಅದನ್ನು ತಿಳಿಸಿಬಿಡಿ" ಎಂದಳು.

"ಸುಮಿತ್ರಾದೇವಿ ಎದ್ದು ಆಕಳಿಸುತ್ತಾ ಹೊರಬಂದಳು. ಭಾಸ್ಕರ ಯಾಕೆ ಬಂದಿದಾನೆ? ಇವರುಗಳೆಲ್ಲ ಎಲ್ಲಿ? ನಾನು ಮಾಲಾ ವಾಪಸ್ಸು ಬಂದಳೇನೋ ಅಂತ ಅಂದುಕೊಂಡೆ.

"ಅವಳೇ ಎಲ್ಲಿಗಾದ್ರೂ ಹೋಗಿದ್ದಿದ್ರೆ ವಾಪಸ್ಸು ಬಂದಿರೋಳು. ಅವಳಿಗೆ ಈ ಊರೇ ಹೊಸದು... ಈಗ ಇವರೆಲ್ಲಾ ಪೊಲೀಸ್ ಸ್ಟೇಷನ್‌ಗೆ ಹೋಗಿದಾರೆ..."

"ಪೊಲೀಸಾ ?" ಸುಮಿತ್ರಾದೇವಿ ತಣ್ಣಗಾದಳು. ಪೊಲೀಸ್ನೋರು ಯದ್ವಾ ತದ್ವಾ ಪ್ರಶ್ನೆ ಕೇಳ್ತಾರೆ. ನಮ್ಮ ಸೊಸೆ ನಾಪತ್ತೆಯಾಗಿದಾಳೆ ಅಂತಾದರೆ ಅದೇ ಒಂದು ಸ್ಕ್ಯಾಂಡಲ್ ಆಗುತ್ತೆ. ನಮ್ಮ ಮಾಲಾಗೆ ಯಾರ ದೃಷ್ಟಿ ತಗುಲಿತೋ ? ಕಣ್ಣು ಕುಕ್ಕುವ ಹಾಗೆ ಅಲಂಕರಿಸಿಕೊಂಡಿದ್ದಳು. ಎಲ್ಲಿದಾಳೋ ? ಹೇಗಿದಾಳೋ ? ಹೋದ ವರ್ಷ ನಡೆದ ಆ ಅನಾಹುತವೇ ಸಾಕಾಗಿತ್ತು." ಸುಮಿತ್ರಾದೇವಿ ಅಳತೊಡಗಿದಳು. ವಸುಧಾ ಭಾಸ್ಕರ ಮುಖ ಮುಖ ನೋಡಿಕೊಂಡರು. ಆಕಾಶ ಅತ್ತ ಸದ್ದು ಕೇಳಿಸಿತು. ವಸುಧ ಎದ್ದು ಒಳಗೆ ಹೋದಳು.

"ಭಾಸ್ಕರ ಹೊರಟಾಗ, ಸುಮಿತ್ರಾ ದೇವಿ ತಲೆಯಾಡಿಸಿದಳು. ಅವಳ ತಲೆ ಸಿಡಿದು ಹೋಗುವಷ್ಟು ನೋಯುತ್ತಿತ್ತು. ವಸುಧಾ ಹೊರಬಂದಾಗ ಸುಮಿತ್ರಾ ದೇವಿ ಕೆಳಕೆ ಬಿದ್ದು ಬಿಟ್ಟಿದ್ದಳು. ಅವಳ ಜ್ಞಾನ ಹೋಗಿತ್ತು. ವಸುಧಾ ಗಾಬರಿಯಿಂದ, ಭಾಸ್ಕರನನ್ನು ಕರೆದಳು. ಮೆಟ್ಟಿಲ ಬಳಿ ಇದ್ದ ಭಾಸ್ಕರ ಮತ್ತೆ ಹಿಂತಿರುಗಿದ. ಭಾಸ್ಕರ ತಕ್ಷಣ ಡಾಕ್ಟರಿಗೆ ಫೋನು ಮಾಡಿದ. ಹಾಗೇ ಧ್ರುವನ ಮೊಬೈಲ್‌ಗೆ ಫೋನು ಮಾಡಿದ.

ಡಾಕ್ಟರು ಬಂದು, ಆಕೆಯನ್ನು ನರ್ಸಿಂಗ್ ಹೋಂಗೆ ಸೇರಿಸುವುದು ಒಳ್ಳೆಯದೆಂದು ಹೇಳಿದರು. ಭಾಸ್ಕರ ಆಂಬ್ಯುಲೆನ್ಸ್‌ಗೆ ಫೋನು ಮಾಡಿದ. ಅಷ್ಟರಲ್ಲಿ ಪೊಲೀಸ್ ಸ್ಟೇಷನ್‌ಗೆ ಹೋಗಿದ್ದವರೆಲ್ಲ ವಾಪಸ್ಸಾದರು. ಅಂಬ್ಯುಲೆನ್ಸ್‌ನಲ್ಲಿ ಕರೆದೊಯ್ದು ನರ್ಸಿಂಗ್ ಹೋಂಗೆ ಸೇರಿಸಿದರು. ಎಲ್ಲರ ಮುಖದ ಮೇಲೆ ಚಿಂತೆಯ ಗೆರೆಗಳು ಮೂಡಿದ್ದವು.

"ನಿಮ್ಮ ತಾಯಿಗೆ ಮೈಲ್ಡ್ ಆಗಿ ಸ್ಟ್ರೋಕ್ ಆಗಿದೆ. ಈಗ ಅವರಿಗೆ ಇಂಜೆಕ್ಷನ್ ಕೊಟ್ಟಿದೇವೆ. ಜ್ಞಾನ ಯಾವಾಗ ಬರುತ್ತೋ ಗೊತ್ತಿಲ್ಲ. ಬಂದರೂ ಅವರು ಸುಧಾರಿಸಿಕೊಳ್ಳಲು ತಿಂಗಳುಗಳೇ ಬೇಕಾಗುತ್ತದೆ." ಡಾಕ್ಟರು ನುಡಿದಾಗ ಎಲ್ಲರೂ ಮುಖ ಮುಖ ನೋಡಿಕೊಂಡರು ಎಲ್ಲರೂ ಇನ್ನೊಬ್ಬರ ಮೇಲೆ ತಪ್ಪನ್ನು ಹಾಕಲು ಹವಣಿಸುತ್ತಿದ್ದರು ಅಂತ ಅನ್ನಿಸಿತ್ತು.

"ನಾನು ಇಲ್ಲಿ ಇರ್ತೀನಿ. ನೀವುಗಳು ಮನೆಗೆ ಹೋಗಿ ತಿಂಡಿ ಕಾಫಿಯನ್ನು ಮುಗಿಸಿ ಬನ್ನಿ" ಪ್ರತಾಪ ಧ್ರುವ ಇಬ್ಬರೂ ಅಲ್ಲೇ ಇರುವುದಾಗಿ ಹಠ ಹಿಡಿದಾಗ ಭಾಸ್ಕರ ತಾನು ಆಫೀಸಿಗೆ ಹೋಗುವುದಾಗಿ ಹೊರಟ. ಮದು ಜೊತೆ ಹೊರಡಲು ರಘು ಹೆದರಿದ. ಮಧು ನಕ್ಕು. ಅಲ್ಲಿಂದ ಸೀದಾ ಮನೆಗೆ ಬಂದ.

"ವಸುಧಾ, ನಾವುಗಳು ಆದಷ್ಟೂ ಬೇಗ ಇಲ್ಲಿಂದ ಹೊರಟು ಹೋಗೋಣ. ಇಲ್ಲಿದ್ದರೆ ನನಗೆ ಹಚ್ಚು ಹಿಡಿಯುತ್ತೆ" ಅಂತಂದ.

"ಅಂಥದ್ದೇನಾಯ್ತು ಈಗ ?"

"ಏನಾಗುದಾ ? ನಾವು ಆಡುತ್ತಿರುವ ನಾಟಕ ನಮಗೆ ವಿಚಿತ್ರವಾಗಿ ಕಾಣ್ತಿದೆ. ಮಾಲಾ ಇಲ್ಲಿ ಇಲ್ಲ ಎನ್ನುವುದು ನಮಗೆ ಗೊತ್ತೇ ಇದೆ. ಅವಳ ಮಕ್ಕಳನ್ನು ಕರೆದುಕೊಂಡು ಹೋಗೋಣ. ಇವರುಗಳು ಏನಾದ್ರೂ ಮಾಡಿಕೊಳ್ಳಲಿ."

"ಆಕೆಗೆ ಸ್ಟ್ರೋಕ್ ಆಗಿದ್ದಕ್ಕೆ ನಿಮಗೇಕೆ ಭಯವೋ ?"

"ಅಂದ್ರೆ... ಆಕೆ ನರ್ಸಿಂಗ್ ಹೋಂನಿಂದ ಮನೆಗೆ ಬರೋವರೆಗೂ ನಾವು ಇಲ್ಲಿರಬೇಕಾ ?"

"ನಾನೆಲ್ಲಿ ಹಾಗೆಂದೆ ? ಧ್ರುವ ಪ್ರತಾಪ ಇಬ್ಬರೂ ಮನೆಗೆ ಬರಲಿ. ಮಾತನಾಡಿ ಹೋಗೋಣ. ಹೀಗೆ ಏಕಾಏಕಿ ಹೋಗುವುದು ಸರಿಯಲ್ಲ."

"ಅವರು ಏನಾದ್ರೂ ಅಂದುಕೊಳ್ಳಲಿ."

"ಮಧು ಎಕ್ಸೈಟ್ ಆಗಬೇಡಿ, ನಿಮ್ಮ ಬಿ.ಪಿ. ಏರುತ್ತೆ."

"ಈ ನಾಟಕ ಎಲ್ಲಾ ನನ್ನ ಕೈಲಿ ಆಡುಕ್ಕೆ ಆಗುಲ್ಲ. ನನಗೆ ನನ್ನ ಮನೆ, ನನ್ನ ಬಿಸಿನೆಸ್ಸು ಸರಿ. ಅಲ್ಲಿಗೇ ಮಾಲಾಳನು ಕರೆಸಿಕೊಳ್ಳೋಣ."

"ಮತ್ತೆ ಇವರುಗಳೆಲ್ಲ ಸೇರಿ ನಾಟಕವನ್ನಾಡಿ ಅವಳನ್ನು ಇಲ್ಲಿಗೆ ಕರೆಸಿ ಕೊಳ್ಳುತ್ತಾರೆ. ಆಗ ಅವಳು ಅತ್ತೆಯ ಸೇವೆಯನ್ನೂ ಮಾಡಬೇಕಾಗುತ್ತದೆ."

ಪೊಲೀಸ್ ಸ್ಟೇಷನ್‌ನಲ್ಲಿ ಕಾಣೆಯಾಗಿದ್ದಾಳೆ ಅಂತ ಮಾಲಾಳ ವಿವರಣೆ

ಯನ್ನು ಕೊಟ್ಟು, ಒಂದು ಫೋಟೋವನ್ನು ಕೊಟ್ಟು ದೂರದರ್ಶನದಲ್ಲಿ, ಆಕಾಶವಾಣಿಯಲ್ಲಿ ಪ್ರಕಟಣೆಗೆ ಕೊಡಬೇಕೆಂದು ಹೇಳಿದರು. ಹಾಗೆ ಪ್ರಮುಖ ದಿನಪತ್ರಿಕೆಗಳಲ್ಲೂ ಫೋಟೋ ಸಮೇತ ಪ್ರಕಟಣೆ ಕೊಟ್ಟರು.

"ಆ ದಿನವೆಲ್ಲ ಸುಮಿತ್ರಾದೇವಿಗೆ ಪ್ರಜ್ಞೆ ಬರಲಿಲ್ಲ. ಮಧು ಧ್ರುವನಿಗೆ ಫೋನು ಮಾಡಿ, ತಾನು ಆದಷ್ಟು ಬೇಗ ಊರಿಗೆ ವಾಪ್ಸಾಗಬೇಕೆಂದ. ಸ್ವಲ್ಪ ಹೊತ್ತಿಲ್ಲಿಯೇ ಅವನು ಮನೆಗೆ ಬಂದ.

"ನಾನು, ಮಾಲಾಳ ಮಕ್ಕಳನ್ನು ಕರೆದುಕೊಂಡು ಹೋಗುತ್ತಿದ್ದೇನೆ" ಅಂತ ಮಧು ಹೇಳಿದಾಗ ಧ್ರುವ ಬೇಡ ಅನ್ನಲಿಲ್ಲ.

"ಇಲ್ಲಿ ಮಾಲಾಳೇ ಇಲ್ಲ. ನನ್ನ ಅಮ್ಮನೂ ಮನೆಯಲ್ಲಿಲ್ಲ. ಕೆಲಸದವ ಳೊಂದಿಗೆ ಮಕ್ಕಳನ್ನು ಬಿಡಲಾಗುವುದಿಲ್ಲ. ಅಲ್ಲದೇ ಮಾಲಾ ಮತ್ತೆ ಈ ಮನೆಗೆ ಬರುವುದಿಲ್ಲವೆಂದು ನನಗೆ ಗೊತ್ತು. ಅವಳು ಪತ್ತೆಯಾದ ಮೇಲೆ ಮತ್ತೆ ಈ ವಿಷಯವನ್ನು ಚರ್ಚಿಸೋಣ. ನನಗೆ ಈಗ ಅಮ್ಮನದೇ ಚಿಂತೆ."

"ಮಾಲಾ ನಿನ್ನ ಪತ್ನಿ. ಅವಳ ಚಿಂತೆ ಬೇಡವಾ ನಿಮಗೆ"

"ಅವಳ ಚಿಂತೆಯೂ ನನಗಿದೆ. ಸಧ್ಯಕ್ಕೆ ಅದನ್ನು ಪೊಲೀಸರಿಗೆ ಒಪ್ಪಿಸಿದೀನಿ ತಾನೇ... ಅಮ್ಮನಿಗೆ ಜ್ಞಾನ ಬಂದಿಲ್ಲ. ನಮ್ಮ ಮನೆಯ ದುರಂತ ಗಳಿಂದ ಅಮ್ಮನ ಬಿಪಿ ಹೆಚ್ಚಾಗಿತ್ತು. ಈಗ ಮಾಲಾ ಬಂದರೂ ಅಮ್ಮ ವಾಸಿಯಾಗ್ತಾಳಾ ?"

"ನಿನ್ನ ಮಾತಿನ ಅರ್ಥ ಏನೂ ಅಂತ ?"

"ಏನೂ ಇಲ್ಲ. ಬೆಳಗಿನ ಫ್ಲೈಟ್‌ನಲ್ಲಿ ನಿಮ್ಮನ್ನೆಲ್ಲ ಕಳಿಸಿಕೊಡ್ತೀನಿ. ಬೇಕಾದರೆ ನಮ್ಮ ಮನೆಯ ಕೆಲಸದ ಹುಡುಗಿಯೂ ಕರೆದುಕೊಂಡು ಹೋಗು."

"ಬೇಡಪ್ಪಾ ಬೇರೆ ಮನೆಯವರ ಹೆಣ್ಣು ಮಕ್ಕಳ ಸಹವಾಸ... ಕಿಡ್ನಾಪ್, ರೇಪ್ ಇದೆಲ್ಲಾ ಸರ್ವೇಸಾಮಾನ್ಯವಾಗಿದೆ." ಧ್ರುವನ ಮುಖ ಬಿಳಿಚಿ ಕೊಂಡಿರುವುದನ್ನು ಮಧು ಗಮನಿಸಿದ.

○ ○ ○

ಬೆಂಗಳೂರಿಗೆ ವಾಪಸ್ಸಾಗಿ ಎರಡು ದಿನಗಳು ಕಳೆದಿದ್ದವು. ಭಾರ್ಗವ ವಸುಧಾಳೊಂದಿಗೆ ಫೋನಿನಲ್ಲಿ ಮಾತನಾಡಿದ. ವಸುಧಾ ಅಲ್ಲಿಯ ವಿಷಯ ಗಳನ್ನೆಲ್ಲಾ ತಿಳಿಸಿ, ತಾನೇ ಮಕ್ಕಳನ್ನು ನೋಡಿಕೊಳ್ಳುತ್ತಿರುವ ವಿಷಯ ತಿಳಿಸಿದಳು.

"ದೂರದರ್ಶನದಲ್ಲಿ ಇವತ್ತು ಸಾಯಂಕಾಲದೊಳಗೆ ಪ್ರಕಟಣೆ ಬರುತ್ತೆ. ಮರೆಯ ಬೇಡಿ ನೋಡಿ" ಎಂದಳು. ಭಾರ್ಗವ ಹೂಂಗುಟ್ಟಿದ. ಅದೇ ವರ್ತಮಾನವನ್ನು ಭಾರ್ಗವ ವತ್ಸಲಳಿಗೂ, ಮಾಲಾಳಿಗೂ ಹೇಳಿದ.

"ಸದ್ಯ ಈ ಕಾಡಿನಿಂದ ಆದಷ್ಟು ಬೇಗ ಹೋದರೆ ಸಾಕೆನಿಸಿದೆ" ಮಾಲಾ ಬೇಸರದಿಂದ ನುಡಿದಾಗ, ಭಾರ್ಗವ ಉತ್ತರಿಸಲಿಲ್ಲ. ಮೂರು ನಾಲ್ಕು ದಿನಗಳಿಂದ ಮನೆಯೊಳಗೇ ಇದ್ದು ಅವನಿಗೂ ಬೇಸರವಾಗಿತ್ತು.

"ಇವತ್ತು ಎಸ್ಟೇಟ್‌ನ್ನೆಲ್ಲಾ ಸುತ್ತಾಡಿ ಬರೋಣ... ಬರ್ತೀಯಾ ?" ಕೇಳಿದ. ಹೊರಗೆ ಹೋದರೆ ಸಾಕೆಂದು ಕಾಯುತ್ತಿದ್ದ ಮಾಲಾ ಹೂಂಗುಟ್ಟಿದಳು. ಕಾಫಿ ತಿಂಡಿಯ ನಂತರ, ಹೊರಟರು ಅವರಿಬ್ರ ಜೊತೆ ನಾಗೇಶ, ಯೋಗೇಶನೂ ಹೊರಟಾಗ ಮಾಲಾಳಿಗೆ ಸರಿ ಬೀಳಲಿಲ್ಲ.

"ನಾವಿಬ್ರೇ ಸುತ್ತಾಡಿ ಬರೋಣ ಭಾರ್ಗವ. ಇವರಿಬ್ಬರೂ ಯಾಕೆ ?"

"ಎಸ್ಟೇಟ್‌ನ ದಾರಿಗಳು ನನಗಿಂತ ಚೆನ್ನಾಗಿ ಇಬ್ಬರಿಗೂ ಗೊತ್ತಿದೆ. ನಾವು ಬೇಡ ಅಂತಂದ್ರೂ ಅವರು ತಿರುಗಾಡಲು ಹೋಗ್ತಾರೆ. ಇವರುಗಳಿಂದ ನಮಗೆ ತೊಂದರೆಯೇನು / ನಮ್ಮ ಮಾತು ಇವರುಗಳಿಗೆ ಕೇಳಿಸುವುದಿಲ್ಲ. ನಡೀ ಹೊರಡೋಣ ಹೊತ್ತಾಗುತ್ತೆ."

"ಕಿವಿ ಕೇಳಿಸದಿದ್ದರೇನಂತೆ ? ಕಣ್ಣು ಕಾಣಿಸುತ್ತಲ್ಲ. ನನ್ನನ್ನೇ ನೋಡ್ತಾ ಇರುತ್ತವೆ.ನನಗೆ ಇಷ್ಟವಿಲ್ಲ" ಇಬ್ಬರೂ ಆಚೆ ಕಾಲಿಟ್ಟರು. ಇವರಿಬ್ಬರಿಗಿಂತ ಮುಂದೆ ಅವರಿಬ್ಬರು ಇದ್ದರು.

"ಏನೋ ಕುತೂಹಲ. ಕಾಡಿನಲ್ಲಿ ಪ್ರಾಣಿಗಳನ್ನು ಮಾತ್ರ ನೋಡಿರುತ್ತವೆ. ನೀನು ಹೊಸ ಅತಿಥಿ ಸ್ವಲ್ಪ ಬೆರಗಾಗಿರಬಹುದು."

"ನಾನು ಪ್ರಾಣೀ ತರಹ ಕಾಣ್ತೀನಾ ಅವರುಗಳ ಕಣ್ಣಿಗೆ ?"

"ಇಲ್ಲ. ದೇವತೆ ತರಹ ಕಾಣಿಸುತ್ತಿರಬಹುದು. ನೋಡಲಿ ಬಿಡು ತಪ್ಪೇನು ?"

"ನನಗೆ ಈ ಮನೆಯಲ್ಲಿ ಪ್ರೈವೆಸಿಯೇ ಇಲ್ಲ."

"ಯಾರಿಂದ ಪ್ರೈವೆಸಿ ಬೇಕು ?"

"ನಿಮ್ಮ ಚಿಕ್ಕಮ್ಮ ಒಂದು ತರಹ ನೋಡ್ತಾರೆ. ಅವರಿಗೆ ನನ್ನ ಮೇಲೆ ಏನೋ ಅನುಮಾನವಿರುವ ಹಾಗೆ ಅಂತ ಅನ್ನಿಸುತ್ತೆ."

"ಇದೆಲ್ಲ ನಿನ್ನ ಭ್ರಮೆ. ಇನ್ನಷ್ಟು ದಿನಗಳು ಇಲ್ಲಿರಬೇಕು. ಇನ್ನೊಂದೆರಡು

ದಿನಗಳಲ್ಲಿ ನಮ್ಮ ಉಪಾಯ ಫಲಿಸುತ್ತೆ."

"ನನಗ್ಯಾಕೋ ಭಯ ಆಗುತ್ತೆ ಭಾರ್ಗವ. ಪ್ರತಾಪ ಮತ್ತೆ ನನ್ನನ್ನು ಆ ಮನೆಗೆ ಎಳೆದುಕೊಂಡುಹೋದರೆ ?"

"ಮತ್ತೆ ಕರೆದುಕೊಂಡು ಬಂದರಾಯ್ತು!"

"ನಾನೇನು ಬೊಂಬೇನಾ ? ಅಲ್ಲಿಂದಿಲ್ಲಿಗೆ ಎಳೆದಾಡುಕ್ಕೆ."

"ಅದೆಲ್ಲಾ ಮುಗಿಯಲಿ ಅಂತಲೇ ಅಲ್ಲವಾ ? ಈ ಪ್ಲಾನ್ ಮಾಡಿರುವುದು."

"ಸಧ್ಯ. ಆದಷ್ಟು ಬೇಗ ಇಲ್ಲಿಂದ ಹೋಗಿ, ನನ್ನ ಮಕ್ಕಳನ್ನು ನೋಡಿದರೆ ಸಾಕು"

"ಮಕ್ಕಳು ಅನ್ನುತ್ಲೇ ನೆನಪಿಗೆ ಬಂದು ನೋಡು. ನಿನ್ನ ಮಕ್ಕಳು ಈಗ ವಾಧು ಮನೆಯಲ್ಲಿ ಇದಾರಂತೆ. ವಸುಧಾ ನೋಡಿಕೊಳ್ಳುತ್ತಿದ್ದಾರೆ. ನಿನಗೆ ಚಿಂತೆಯೇ ಬೇಡ."

"ಒಟ್ಟಿನಲ್ಲಿ ನನ್ನ ಮಕ್ಕಳು, ನನ್ನ ಮಡಿಲಿನಲ್ಲಿ ಬೆಳೆಯುವುದಕ್ಕಿಂತ ಹೆಚ್ಚಾಗಿ ವಸುಧಾಳ ಮಡಿಲನ್ನೇ ಆಸೆ ಪಡುತ್ತವೆ."

"ವಸುಧಾ ತುಂಬಾ ಒಳ್ಳೆಯವರು. ಯಾವ ಅಸೂಯೆ ಬೇಸರ ಏನೂ ಇಲ್ಲ."

"ಹೌದು ಭಾರ್ಗವ. ನನಗೆ ಒಮ್ಮೊಮ್ಮೆ ಅವಳ ಮೇಲೆ ಅಸೂಯೆ ಉಂಟಾಗುತ್ತೆ. ನಾನು ಅವಳಷ್ಟು ಒಳ್ಳೆಯವಳಲ್ಲ. ಅನ್ನೋ ಬೇಸರವೂ ನನಗಿದೆ."

"ಯಾವುದೇ ಬೇಸರವಿದ್ದರೂ, ಅಲ್ಲಿ ಎಲ್ಲಾ ಕಳೆದು ಹೋಗುತ್ತೆ. ನಡೀ, ಬೇಗ ಬೇಗ ಹೆಜ್ಜೆ ಹಾಕು.. ಎನ್ನುತ್ತಾ ಬೆಳ್ಳಗೆ ಕಾಣುತ್ತಿದ್ದ ಮಂದಿರವನ್ನು ತೋರಿದ.

"ಅದೇ ಮಂದಿರ..." ನೋಡು ಅವರಿಬ್ಬರೂ ಆಗಲೇ ಮೆಟ್ಟಲು ಹತ್ತುತ್ತಿದಾರೆ."

"ಇನ್ನು ಅಲ್ಲಿಯವರೆಗೆ ನಡೆಯಬೇಕಾ ? ನನ್ನ ಕೈಲಿ ಸಾಧ್ಯವಿಲ್ಲಪ್ಪಾ."

"ಸಾಧ್ಯವಿಲ್ಲ ಅಂದರೆ ಬಿಡ್ತೀನಾ ? ಎತ್ಕೊಂಡು ಹೋಗ್ತೀನಿ" ಹಾಗೆ ಹೇಳುತ್ತಾ ಅವಳ ಬೆನ್ನಿಗೆ ಕೈ ಹಾಕಿ ಎತ್ತಿದ. ಮಾಲಾ ಸಣ್ಣಗೆ ಚೀರಿದಳು. ಅವನು ಮುಗುಳ್ನಕ್ಕ. ಅವಳು ಲಜ್ಜೆಯಿಂದ ಕೆಂಪಾಗಿದ್ದಳು. ಅವನು ಸರಸರನೆ ಇಳಿಜಾರಿನಲ್ಲಿ ನಡೆದ. ಬೀಳುವಂತಾದಾಗ ಅವಳು ಅವನ ಕತ್ತಿಗೆ ಕೈಗಳನ್ನು ಸುತ್ತಿದಳು. ಮತ್ತೆ ಅವನು ಅವಳನ್ನು ಇಳಿಸಿದ್ದು ಮಂದಿರದ ಬಾಗಿಲ ಬಳಿಯೇ.

"ಅಬ್ಬಾ... ಸಖತ್ ಭಾರ... ಕೈ ನೋಯುತ್ತಿದೆ" ಏದುಸಿರು ಬಿಡುತ್ತಿದ್ದವನನ್ನೇ ನೋಡಿದಳು.

"ಯಾಕೆ ಹಾಗೆ ನೋಡ್ತಾ ಇದೀಯ... ಏನು ಅಪರಾಧ ಮಾಡಿದೆ ?"

"ಒಂದು ಕಾಲದಲ್ಲಿ ನಾನು ಇದನ್ನು ಅಪೇಕ್ಷಿಸಿದ್ದೆ. ಆಗ ನೀನು ನನ್ನ ಕೈ ಬೆರಳನ್ನು ಮುಟ್ಟುತ್ತಿರಲಿಲ್ಲ. ಈಗ ಯಾಕೆ ಹಾಗೆ ಅನ್ನಿಸ್ತು ?"

"ಆಗ ನನಗೆ ಮನೆಯವರ, ಸಮಾಜದ ಭಯವಿತ್ತು. ಈಗ ಈ ಸ್ವಚ್ಛಂದ ಕಾಡಿನಲ್ಲಿ ನನಗೆ ಯಾರ ಭಯವೂ ಇಲ್ಲ."

"ನಿನ್ನ ಮಾತುಗಳನ್ನು ಕೇಳುತ್ತಿದ್ದರೆ ನನಗೆ ಭಯವಾಗುತ್ತೆ."

"ನನ್ನ ಮೇಲೆ ನಂಬಿಕೆ ಇಲ್ವಾ ಮಾಲಾ ?"

"ನಂಬಿಕೆ ಇದೆ. ಆದರೆ ನನ್ನ ಈಗಿನ ಸ್ಥಿತಿ. ನಂಬಿದವರ ಮೇಲೂ ಅನುಮಾನ ಪಡುವಂತಿದೆ ಅಲ್ವಾ ?"

"ನೋಡು ಮಂದಿರ ಬಂತು... ಒಳಗೆ ಹೋಗೋಣ."

"ನಿನ್ನ ಕಸಿನ್ಸ್ ಎಲ್ಲಿ ?"

"ಅವರುಗಳೇ ಬರ್ತಾರೆ. ಕರೆದರೂ ಕೇಳಿಸೋಲ್ಲ." ಇಬ್ಬರೂ ಒಳಗೆ ಬಂದರು. ಒಂದು ದೊಡ್ಡ ಧ್ಯಾನ ಮಂದಿರ. ಅಲ್ಲಿ ಕೆಲವು ದೇವರುಗಳ ಹಾಗೂ ಕೆಲವು ಮಹಾತ್ಮರ ಫೋಟೋಗಳಿದ್ದವು.

"ಇಲ್ಲಿ ದಿನವೂ ಬಂದು ಸ್ವಲ್ಪ ಸಮಯ ಧ್ಯಾನ ಮಾಡುತ್ತಾಳೆ ವತ್ಸಲಾ..."

"ಹೌದಾ ! ಆಶ್ರಮ ಎಲ್ಲಿದೆ ?"

"ಇಲ್ಲೇ ಪಕ್ಕದಲ್ಲಿ ಒಂದು ಮನೆ. ಅದೇ ಎಸ್ಟೇಟ್ ಮನೆ. ಅದನ್ನೇ ಆಶ್ರಮ ಅಂತಾರೆ. ಒಳಗೇನಿದೆಯೋ ನಾನೂ ಸರಿಯಾಗಿ ನೋಡಿಲ್ಲ."

"ಇಷ್ಟು ದೊಡ್ಡ ಎಸ್ಟೇಟ್... ಯಾರೂ ಕೆಲಸಗಾರರೇ ಕಾಣುವುದಿಲ್ಲ."

"ಇರುತ್ತಾರೆ. ಅವರವರ ಕೆಲಸದಲ್ಲಿ ಮಗ್ನರಾಗಿರುತ್ತಾರೆ. ಬೆಳೆ ಫಸಲಿಗೆ ಬಂದಿರುವಾಗ, ಪಕ್ಕ ಪಕ್ಕದ ಹಳ್ಳಿಯಿಂದ ಅನೇಕ ಕೆಲಸಗಾರರು ಬರುತ್ತಾರೆ. ಇಲ್ಲೇ ಒಂದು ಆಫೀಸಿದೆ. ಅಲ್ಲಿಗೆ ಮ್ಯಾನೇಜರ್, ಅಕೌಂಟೆಂಟ್ ಎಲ್ಲಾ ದಿನವೂ ಬರುತ್ತಾರೆ. ಈ ಕೆಲಸಗಳನ್ನೆಲ್ಲಾ ಅವರುಗಳೇ ನೋಡಿಕೊಳ್ಳುವುದು."

"ಯಾರೂ ನಿಮ್ಮ ಚಿಕ್ಕಮ್ಮನಿಗೆ ಮೋಸ ಮಾಡುವುದಿಲ್ಲವಾ ?"

"ಮೋಸ ಮಾಡಬಹುದು. ಹಾಗಾದಾಗ ವತ್ಸಲಾ ಸುಮ್ಮನಿರುವುದಿಲ್ಲ. ಯಾವುದಕ್ಕೂ ಹೆದರುವುದಿಲ್ಲ. ಪೋಲೀಸ್ ಅಧಿಕಾರಿಗಳನ್ನು ಕರೆಸಿ ಕೈಗೆ

ಕೋಳ ತೊಡಿಸುತ್ತಾಳೆ..."

"ನಿಜವಾಗಿಯೂ? ಒಂಟಿ ಹೆಂಗಸು, ಈ ಕಿವುಡ ಮಕ್ಕಳು..."

"ಜಯ ಇರುವವರೆಗೆ ಭಯವಿಲ್ಲ ಅಂತ ಹೇಳ್ತಾರೆ. ಹಾಗೆ ಇಲ್ಲಿಯವರೆಲ್ಲರೂ ಕೆಟ್ಟವರಾಗಿರುವುದಿಲ್ಲ. ಚೆನ್ನಾಗಿ ಸಂಬಳ ಕೊಡ್ತಾಳೆ. ಬೋನಸ್ ಕೊಡ್ತಾಳೆ. ಹಬ್ಬ ಹರಿದಿನಗಳಲ್ಲಿ ಊಟ ಹಾಕಿಸಿ, ವಸ್ತ್ರಗಳನ್ನು ಕೊಡುತ್ತಾಳೆ. ಇನ್ನೇನು ಬೇಕು ? ಎಷ್ಟೋ ಜನ ಇವಳಿಗಾಗಿ ಪ್ರಾಣ ಕೊಡಲು ಸಹ ಸಿದ್ಧರಾಗಿದಾರೆ."

"ಹಾಗಾದರೆ ಗ್ರೇಟ್ ಚಿಕ್ಕಮ್ಮ ಅನ್ನು" ನಕ್ಕಳು.

"ಒಂದು ವೇಳೆ ಇದೇ ಸ್ಥಿತಿ ನಿನಗೆ ಒದಗಿದರೆ ಏನು ಮಾಡ್ತೀಯ ?"

"ಸೂಯಿಸೈಡ್ ಮಾಡಿಕೊಳ್ತೀನಿ" ತಟ್ಟನೆ ನುಡಿದಳು.

"ಥೂ ಅದು ಹೇಡಿಗಳ ಲಕ್ಷಣ."

"ನನಗೆ ಒಬ್ಬಳೇಇರುವ ಧೈರ್ಯವೇ ಇಲ್ಲ. ಜನರ ಸಹವಾಸವೂ ಇಷ್ಟ ಆಗುಲ್ಲ. ಅಥವಾ ಇಂಥೋರಿಂದ ಟ್ರೈನಿಂಗ್ ತಗೋಬೇಕು ಅಷ್ಟೇ."

"ಇದೆಲ್ಲಾ ಟ್ರೈನಿಂಗ್‌ನಿಂದ ಬರೋಲ್ಲ. ಹುಟ್ಟಿನಿಂದ ಬರಬೇಕು. ವತ್ಸಲ ಛಲಗಾತಿ. ಅವಳು ಎಷ್ಟೆಷ್ಟು ಕಷ್ಟಗಳನ್ನು ದಾಟಿ ಬಂದಿದಾಳೆ ಅಂತ ನಿನಗೇನು ಗೊತ್ತು ?"

"ನೀನು ಹೇಳಿದ್ರೆ ತಾನೆ ಗೊತ್ತಾಗೋದು ?"

"ನಿನಗೆ ತಿಳಿದುಕೊಳ್ಳುವ ಸಹನೆ ಇದ್ದರೆ ಖಂಡಿತಾ ಹೇಳ್ತೀನಿ. ನನ್ನ ಚಿಕ್ಕಮ್ಮ ಅಂತ ಹೊಗಳುತ್ತಿಲ್ಲ. ಈ ಧೈರ್ಯ, ಸ್ಥೈರ್ಯ ಎಲ್ಲಾ ಹೆಂಗಸರಿಗೂ ಬೇಕು. ಆಗ ಅವರನ್ನು ಅವರೇ ರಕ್ಷಿಸಿಕೊಳ್ಳಲು ಸಾಧ್ಯವಾಗುತ್ತದೆ."

"ಸಧ್ಯ ಹೆಂಗಸರನ್ನು ಈ ದರಿದ್ರ ಗಂಡಸರು ಅವರ ಪಾಡಿಗೆ ಅವರು ಬಿಟ್ಟರೆ ಸಾಕಾಗಿದೆ. ತಿಂದು ಹಾಕಿಬಿಡ್ತಾರೆ. ಇನ್ನು ಏನನ್ನು ರಕ್ಷಿಸಿಕೊಳ್ಳುವುದು ?"

"ಎಲ್ಲಾ ಗಂಡಸರೂ ಹಾಗಿರುವುದಿಲ್ಲ." ಕಿರುನಗೆಯನ್ನು ನಕ್ಕ.

"ಆದ್ದರಿಂದಲೇ ನಿಮ್ಮ ಚಿಕ್ಕಮ್ಮ ಸರ್ವೈವ್ ಆಗಿರುವುದು. ಇಲ್ಲದಿದ್ದರೆ, ಕಾಗೆ ನಾಯಿಗಳಂತೆ ಕಿತ್ತು ತಿಂದುಹಾಕಿಬಿಡುತ್ತಿದ್ದರು."

"ನಿನಗೆ ಗೊತ್ತಿಲ್ಲ ಅವಳ ಕತೆ... ನಿಟ್ಟುಸಿರು ಬಿಟ್ಟ. ಇಬ್ಬರೂ ಅಲ್ಲಿದ್ದ ಕಟ್ಟೆಯ ಮೇಲೆ ಕುಳಿತರು.

○ ○ ○

"ಈ ಎಸ್ಟೇಟ್ ವತ್ಸಲ ಮಾವನವರ ತಂದೆಗೆ, ಮಹಾರಾಜರಿಂದ ಸಿಕ್ಕಿದ ಭೂಮಿ. ಹೊರಗಿನಿಂದ ಕಾಫಿ ಬೀಜಗಳನ್ನು ತರಿಸುತ್ತಿದ್ದ ಕಾಲ ಅದು. ಆದರೆ ಇವರು ಇಲ್ಲಿ ಸಸಿಗಳನ್ನು ನೆಡಿಸಿ, ಕಾಫಿ ಬೀಜಗಳ ಉತ್ಪಾದನೆಯನ್ನು ಪ್ರಾರಂಭಿಸಿದರು. ಕಾಫಿಯ ಬೀಜಕ್ಕೆ ಬೇಡಿಕೆ ಇದ್ದುದರಿಂದ ಈ ವ್ಯಾಪಾರ ಲಾಭದಾಯಕವಾಯಿತು. ಕೆಲಗಾರರೂ ನಿಯತ್ತಿನವರಾಗಿದ್ದರು. ಆ ಕಾಲದಲ್ಲೇ ಈ ಮನೆಯವರು ಶ್ರೀಮಂತರಾದರು. ದೇವಸ್ಥಾನದ ಅರ್ಚಕರಾಗಿದ್ದವರು, ಅನುಕೂಲಸ್ಥರಾದರು. ಆಗ, ಈ ಮನೆ ಮಾತ್ರ ಇತ್ತಂತೆ" ಭಾರ್ಗವ ಆ ದಿಕ್ಕಿಗೆ ನೋಡಿದ. ಅವರಿಗೆ ಕಾಣುವಷ್ಟು ದೂರದಲ್ಲಿ ಆ ಅವಳಿ ಜವಳಿ ಮಕ್ಕಳು ಒಬ್ಬರನ್ನೊಬ್ಬರು ಅಟ್ಟಿಸಿಕೊಂಡು ತಿರುಗಾಡುತ್ತಿದ್ದರು.

"ನೋಡು ಈ ಹುಡುಗರ ದುರಾದೃಷ್ಟವನ್ನು. ಎಲ್ಲಾ ಇದೆ. ಯಾವುದಕ್ಕೂ ಕೊರತೆ ಇಲ್ಲ ಮನೆಯಲ್ಲಿ. ಆದರೆ ವತ್ಸಲರಿಗೆ ಈ ಕೊರಗು ಇಲ್ಲದೇ ಇರುತ್ತಾ ?"

"ಡಾಕ್ಟರುಗಳಿಗೆ ತೋರಿಸಬಹುದಾಗಿತ್ತಲ್ವಾ ?"

"ತೋರಿಸಿದ್ದು ಬಹಳ ತಡವಾಗಿ... ಅಲ್ಲದೆ ಆಗ ಈಗಿನಷ್ಟು ಅನುಕೂಲಗಳಿರಲಿಲ್ಲ. ಇವಳಿಗೆ ಹೆಚ್ಚು ಸ್ವತಂತ್ರವಿರಲಿಲ್ಲ."

"ನಿಮ್ಮ ಚಿಕ್ಕಮ್ಮ ಅಂತೀಯ... ಈ ಮನೆಗೆ ಸೊಸೆಯಾಗಿ ಬಂದದ್ದು ಹೇಗೆ ?"

"ನನ್ನ ತಾಯಿಯ ತಂದೆ, ಈ ಮನೆಯಲ್ಲಿ ಅಡಿಗೆಯವರಾಗಿದ್ದರು. ಅವರಿಗೆ ಮೂರುಜನ ಮಕ್ಕಳು, ನನ್ನ ಮಾವ, ನನ್ನ ತಾಯಿ, ಎಲ್ಲರಿಗಿಂತ ಚಿಕ್ಕವಳು ವತ್ಸಲಾ...

"ನನ್ನ ಮಾವ ಬೇರೊಬ್ಬರ ಮನೆಯಲ್ಲಿ ಅಡಿಗೆಯವರಾಗಿ ಸೇರಿಕೊಂಡಿದ್ದರು. ನನ್ನ ತಾಯಿಗೆ ಮದುವೆಯಾಗಿತ್ತು. ವತ್ಸಲಂಗೆ ಮದುವೆಯಾಗಿರಲಿಲ್ಲ. ಹಬ್ಬ ಹುಣ್ಣಿಮೆಗಳಲ್ಲಿ ತಂದೆಗೆ ಸಹಾಯ ಮಾಡಲೆಂದು ಇಲ್ಲಿಗೆ ಬರುತ್ತಿದ್ದಳಂತೆ. ಆಗಿನ್ನೂ ಚಿಕ್ಕವಳು. ಇವಳ ಅತ್ತೆ ಮಾವನಿಗೆ ಮೂರು ಜನ ಗಂಡುಮಕ್ಕಳು. ಹಿರಿಯವನೇ ವತ್ಸಲಳ ಗಂಡನಾಗಿದ್ದವನು. ಅವನೂ ನೋಡಲು ಚೆನ್ನಾಗಿದ್ದ. ಆದರೆ ಅವನೂ ಹುಟ್ಟು ಕಿವುಡ. ಮಾತು ಬರುತ್ತಿರಲಿಲ್ಲ. ಅವನಿಗೆ ವತ್ಸಲಳಂತಹ ಚುರುಕು ಹುಡುಗಿಯ ಅಗತ್ಯವಿತ್ತು. ನಮ್ಮ ತಾತನನ್ನು ಒಪ್ಪಿಸಿ ಇವರಿಬ್ಬರ ಮದುವೆಯನ್ನು ನೆರವೇರಿಸಿದರು.

ಅವನ ತಮ್ಮಂದಿರಿಬ್ಬರಿಗೆ ಇದು ಇಷ್ಟವಿರಲಿಲ್ಲ. ಪಟ್ಟಣಕ್ಕೆ ಹೋಗಿ ವಿದ್ಯಾಭ್ಯಾಸವನ್ನು ಮಾಡಿ ಬಂದಿದ್ದರು."

"ಅವರಿಬ್ಬರೂ ಸರಿಯಾಗಿದ್ರಾ?"

"ಹೂಂ. ಸರಿಯಾಗಿದ್ರು, ಇವನು ಎಷ್ಟು ಮುಗ್ಧನೋ ಅವರು ಅಷ್ಟೇ ಧೂರ್ತರಾಗಿದ್ದರು. ಅವನಿಗೆ ಹೇಗೂ ಕೇಳಿಸುವುದಿಲ್ಲವೆಂದು, ಇವಳನ್ನು ಹಂಗಿಸಿ, ತಮಾಷೆ ಮಾಡಿ ಗೋಳು ಹೊಯ್ದುಕೊಳ್ಳುತ್ತಿದ್ದರಂತೆ. ಇದನ್ನೆಲ್ಲ ಗಂಡನಿಗೆ ಹೇಳುವಂತೆಯೇ ಇಲ್ಲ. ಅತ್ತೆ ಮಾವನಿಗೆ ಹೇಳಿದರೆ ಚಾಡಿ ಮಾತಾಗುತ್ತಿತ್ತು. ಹೇಗೋ ಸಹಿಸಿಕೊಂಡಿದ್ದಳು. ಅವರಿಬ್ಬರ ಮದುವೆಯಾಗಿ ವರ್ಷವಾಗಿತ್ತು. ವತ್ಸಲ ಗರ್ಭಿಣಿಯಾಗಿದ್ದಳು. ಅತ್ತೆ ಮಾವಂದಿರು ಸಂಭ್ರಮಪಟ್ಟರೆ ಈ ಮೈದುನರಿಬ್ಬರು ಕರುಬಿದರು. ಮುಂದೆ ಈ ಆಸ್ತಿಯಲ್ಲಿ ಅಡಿಗೆಯವಳ ಮಕ್ಕಳಿಗೂ ಪಾಲು ಕೊಡಬೇಕಲ್ಲ ಅಂತ ಹೊಟ್ಟೆ ಉರಿದಿರಬೇಕು. ಇಬ್ಬರೂ ಸೇರಿ ವತ್ಸಳನ್ನು ಮುಗಿಸಿಬಿಡುವ ಹೊಂಚು ಹಾಕಿದರು.

ಆ ವೇಳೆಗಾಗಲೇ ಈ ಬಂಗಲೆಯನ್ನು ಕಟ್ಟಿಸಿ ಆಗಿತ್ತು. ಆದರೂ ವತ್ಸಲಾ ಹಾಗೂ ಅವಳ ಗಂಡ ಆಗಾಗ ಈ ಆಶ್ರಮದ ಮನೆಗೆ ಬಂದು ಇರುತ್ತಿದ್ದರಂತೆ. ಅವನು ಹುಟ್ಟಿದ್ದು ಇದೇ ಮನೆಯಲ್ಲಿ. ಇದು ಅವನಿಗೆ ಪ್ರಿಯವಾದ ಸ್ಥಳ. ಇಲ್ಲಿ ಇವರಿಬ್ಬರೂ ಆರಾಮವಾಗಿರುತ್ತಿದ್ದರು. ಈ ವಿಷಯ ಮನೆಯವರಿಗೆಲ್ಲಾ ಗೊತ್ತಿತ್ತು.

ಒಂದು ಬೆಳದಿಂಗಳ ರಾತ್ರಿ ವತ್ಸಲ ಹಾಗೂ ಅವಳ ಗಂಡ ಈ ಮನೆಯಲ್ಲಿ ಇದ್ದ ಸಮಯದಲ್ಲಿ ಅವನ ತಮ್ಮಂದಿರಿಬ್ಬರೂ ಬಂದರಂತೆ. ಅಣ್ಣನ ಹತ್ತಿರ ಏನೂ ಮಾತಿರಲಿಲ್ಲ. ಬರೀ ಸಂಜ್ಞೆ... ವತ್ಸಲಳ ಹತ್ತಿರ ಏನೇನೋ ಅಸಂಬದ್ಧ ಮಾತುಗಳನ್ನಾಡಿ, ಇವತ್ತು ನಿನ್ನನ್ನು ಮುಗಿಸಿ ಬಿಡಬೇಕು ಅಂತ ಬಂದಿದೀನಿ..." ಅಂತ ಹೆದರಿಸಿದರಂತೆ. ವತ್ಸಲ ಹೆದರಿ ಗಂಡನನ್ನು ಬಿಗಿಯಾಗಿ ಹಿಡಿದುಕೊಂಡಳಂತೆ. ಈ ಮೂಗ ನಿನ್ನನ್ನು ಹೇಗೆ ರಕ್ಷಿಸುತ್ತಾನೆ ನಾವೂ ನೋಡ್ತೀವಿ ಅಂತ ಅವರಿಬ್ಬರೂ ಅವಳ ರೆಟ್ಟೆಗೆ ಕೈ ಹಾಕಿದರಂತೆ. ಒಬ್ಬ ಹೆಣ್ಣಿನ ಮೈ ಮುಟ್ಟಿದೊಡನೆ ಅವರ ಮನಸ್ಸಲ್ಲಿ ನಾನಾ ಆಲೋಚನೆಗಳು ಮೂಡಿರಬೇಕು.

"ಈ ಮೂಗನ ಜೊತೆ ಕಾಮಕೇಳಿ ಆಡಿದ್ದು ಸಾಕು. ಬೆಳದಿಂಗಳ ರಾತ್ರಿ

ಹಿತವಾಗಿದೆ ಹೊರಗೆ ಬಾ... ಅಲ್ಲಿ ನಮ್ಮನ್ನು ಯಾರೂ ನೋಡುವುದಿಲ್ಲ" ಎನ್ನುತ್ತಾ ಒಬ್ಬ ಅವಳನ್ನು ಎಳೆದನಂತೆ. ಅವಳನ್ನು ಬಿಡಿಸಲು ಹೋದ ಗಂಡಸನ್ನು ಇನ್ನೊಬ್ಬ ಹಿಡಿದುಕೊಂಡು ಅಲ್ಲಿದ್ದ ಮರದ ಕಂಬಕ್ಕೆ ಗಟ್ಟಿಯಾಗಿ ಘಟ್ಟಿಸಿದನಂತೆ. ಅವನು ಅಲ್ಲಿಯೇ ಜ್ಞಾನತಪ್ಪಿ ಬಿದ್ದುಬಿಟ್ಟನಂತೆ. ಹೊರಕ್ಕೆ ಅವಳನ್ನು ಎಳೆದುಕೊಂಡು ಹೋದವನು ಇವಳ ಮೇಲೆ ಬಲಾತ್ಕಾರ ಮಾಡಿದ. ನಂತರ ಇನ್ನೊಬ್ಬನೂ ಬಲಾತ್ಕಾರ ಮಾಡಿದಾನೆ. ನಂತರ ಅವಳನ್ನು ಕೊಲ್ಲುವ ಆಲೋಚನೆಯನ್ನು ಬಿಟ್ಟು ಅವರಿಬ್ಬರೂ ಮನೆಗೆ ಹೋಗದೆ ಬೇರೆಲ್ಲಿಗೋ ಹಾಗೇ ಓಡಿ ಹೋದರು.

ಸ್ವಲ್ಪ ಹೊತ್ತಿನಲ್ಲಿ ಚೇತರಿಸಿಕೊಂಡ ವತ್ಸಲ ಒಳಗೆ ಬಂದು ನೋಡಿದರೆ, ಅವಳ ಗಂಡ ಇನ್ನಿಲ್ಲವಾಗಿದ್ದ. ತಲೆಗೆ ಬಲವಾಗಿ ಏಟು ಬಿದ್ದ ಕಾರಣದಿಂದ ಸ್ಥಳದಲ್ಲೇ ಸತ್ತು ಹೋಗಿದ್ದ. ಅವನ ತಲೆಯನ್ನು ತೊಡೆಯ ಮೇಲೆ ಇಟ್ಟುಕೊಂಡು, ಆ ರಾತ್ರಿಯೆಲ್ಲಾ ಅಲ್ಲೇ ಕುಳಿತಿದ್ದಳಂತೆ. ಬೆಳಿಗ್ಗೆ ಕೆಲಸಗಾರರು ಬಂದ ಎಷ್ಟೋ ಹೊತ್ತಿನ ನಂತ, ಈ ದುರ್ಘಟನೆ ನಡೆದದ್ದು ಮನೆಯವರಿಗೆ ತಿಳಿಯಿತು. ಪೊಲೀಸರು ಕೇಸ್ ರಿಜಿಸ್ಟರ್ ಮಾಡಿಕೊಂಡರು. ವತ್ಸಲಾ ಏನನ್ನೂ ಹೇಳುವ ಪರಿಸ್ಥಿತಿಯಲ್ಲಿರಲಿಲ್ಲ. ಆಘಾತದಿಂದ ಅವಳು ಮೂಕಳಾಗಿದ್ದಳು. ಮಹಜರು ನಡೆಸಿ, ಶವ ಪರೀಕ್ಷೆ ಮಾಡಿ ಶವವನ್ನು ವಾಪಸ್ಸು ಕೊಟ್ಟರು. ವತ್ಸಲಳ ಎದುರಿನಲ್ಲಿ ಇದೇ ಎಸ್ಟೇಟ್‌ನಲ್ಲಿ ಶವ ಸಂಸ್ಕಾರ ನಡೆಯಿತು. ವತ್ಸಲ ಒಂದು ಹನಿ ಕಣ್ಣೀರನ್ನೂ ಸುರಿಸಲಿಲ್ಲವಂತೆ.

ಪಟ್ಟಣದಿಂದ ತಮ್ಮಂದಿರಿಬ್ಬರೂ ವಾಪಸ್ಸಾಗಿದ್ದರು. ಅವರಿಗೂ ಅವರ ಅಣ್ಣ ಸತ್ತಿರುವ ವಿಷಯ ತಿಳಿದದ್ದು ಆಗಲೇ. ವತ್ಸಲಳ ಕಡೆ ನೋಡಿದರು. ಅವಳು ಕತ್ತು ಬಗ್ಗಿಸಿ ಕುಳಿತಿದ್ದಳು. ಅವಳು ಹೆದರಿದ್ದಾಳೆ ಎಂದುಕೊಂಡು ಸುಮ್ಮನಾದರಂತೆ. ಆಗ ಈಗ ಪೊಲೀಸರು ವಿಚಾರಿಸಲು ಬಂದಾಗ, ಇವಳು ಏನನ್ನೂ ಹೇಳಿರಲಿಲ್ಲ ಅಂತ ತಿಳಿದಾಗ ಇಬ್ಬರಿಗೂ ಸಮಾಧಾನವಾಗಿತ್ತು.

ಒಂದು ಗಳಿಗೆ ಮಾತನ್ನು ನಿಲ್ಲಿಸಿದ "ಊಟದ ಹೊತ್ತಾಯ್ತು. ಮನೆಗೆ ಹೋಗೋಣ್ವಾ?" ಎಂದು ಕೇಳಿದ.

"ಹುಂ. ಹೋಗೋಣ. ಆದರೆ ಈ ಕತೆಯ ಎಂಡ್ ಏನಾಯ್ತು ಅಂತ ಕುತೂಹಲ. ಬೇಗ ಬೇಗ ಹೇಳು."

"ಇದು ಕತೆಯಲ್ಲ; ವ್ಯಥೆ. ನನ್ನ ಚಿಕ್ಕಮ್ಮನ ಜೀವನದಲ್ಲಿ ನಡೆದ ಘಟನೆ..."

"ಸರಿ ಹೇಳೋದಾದ್ರೆ ಹೇಳು... ಇಲ್ಲದಿದ್ದರೆ ಬಿಡು..."

"ಆಶ್ರಮವನ್ನು ನೋಡಿ ಹೋಗೋಣ..."

"ಬೇಡ ನನಗೆ ಭಯವಾಗುತ್ತೆ. ಅಲ್ಲೇ ಕೊಲೆಯಾದದ್ದು ಅಂತೀಯ..."

"ಕೊಲೆ ಆದ್ರೇನು ? ಅಲ್ಲಿ ಈಗ ರಕ್ತದ ಕಲೆ ಕೂಡ ಇಲ್ಲ. ಇಲ್ಲಿ ದಿನವೂ ಬಂದು ಗಂಡ ಆತ್ಮಕ್ಕೆ ಶಾಂತಿ ಕೋರುತ್ತಾಳೆ. ಈಗ ಇದು ಪವಿತ್ರವಾದ ಸ್ಥಳ."

"ಕೊಲೆ ನಡೆದ ಸ್ಥಳ, ರೇಪ್ ನಡೆದ ಜಾಗ ಹೇಗೆ ಪವಿತ್ರವಾಗುತ್ತೆ? ಏನೇನೋ ಆಡಬೇಡ."

"ಇಲ್ಲಿಯ ಜನರು ನಂಬುತ್ತಾರೆ. ಪ್ರಾರ್ಥನೆ ಮಾಡುತ್ತಾರೆ."

"ಅವರು ಪ್ರಾರ್ಥಿಸಿದರೆ, ನಿಮ್ಮ ಚಿಕ್ಕಮ್ಮನ ಜೀವನ ಸರಿ ಹೋಗುತ್ತಾ... ಈ ಮಕ್ಕಳಿಗೆ ಮಾತು ಬಂದು ಬಿಡುತ್ತಾ ?"

"ವತ್ಸಲಳ ಮೇಲೆ ಅತ್ಯಾಚಾರದಿಂದ ಅವಳಿಗೆ ಆಘಾತವಾಗಿತ್ತು. ಅದೇ ಕಾರಣವಿರಬಹುದು ಅಥವಾ ತಂದೆ ಮೂಕನಾದುದರಿಂದಲೋ ಏನೋ ಈ ಮಕ್ಕಳು ಹುಟ್ಟು ಕಿವುಡರು."

"ಪಾಪ, ಹೀಗಾಗಬಾರದಿತ್ತು. ನಿಮ್ಮ ಚಿಕ್ಕಮ್ಮ ಸುಮ್ಮನಿರಬಾರದಿತ್ತು. ಅವರಿಬ್ಬರ ಮೇಲೆ ಆಕ್ಷನ್ ತಗೋಬೇಕಾಗಿತ್ತು."

"ಹೇಗೆ ತಗೋತಾಳೆ ? ಅವಳು ಹೇಳೋದನ್ನ ಮನೆಯವರು ಖಂಡಿತಾ ನಂಬುತ್ತಿರಲಿಲ್ಲ. ಅಲ್ಲದೆ ಅವರಿಬ್ಬರೂ ಬಂದು ಹೆದರಿಸಿದ್ದರಂತೆ. ಯಾರಿಗಾದರೂ ಏನಾದರೂ ಹೇಳಿದರೆ ನಿನಗೆ ಹುಟ್ಟುವ ಮಗುವನ್ನು ಕೊಂದು ಹಾಕಿಬಿಡ್ತೀವಿ ಅಂದಿದ್ರಂತೆ. ಗಂಡನನ್ನು ಕಳೆದುಕೊಂಡಿದ್ದವಳಿಗೆ ಮಗುವನ್ನು ಕಳೆದುಕೊಳ್ಳುವ ಧೈರ್ಯವಿರಲಿಲ್ಲ. ಆಗ ಹೊಟ್ಟೆಯಲ್ಲಿ ಅವಳಿ ಮಕ್ಕಳಿವೆ ಅಂತ ಯಾರಿಗೂ ಗೊತ್ತಿರಲಿಲ್ಲ."

"ಆಮೇಲೆ ಅವರುಗಳು ಮತ್ತೆ ಕಿರುಕುಳ ಕೊಡಲಿಲ್ವಾ ?"

"ಇಲ್ಲ. ಆಮೇಲೆ ಅವಳು ಇದೇ ಮನೆಯಲ್ಲಿದ್ದುಬಿಟ್ಟಳು. ಇಲ್ಲಿ ಅವಳು ಏಕಾಂಗಿಯಾಗಿರಲಿಲ್ಲ. ಒಬ್ಬರಲ್ಲ ಒಬ್ಬರು ಅವಳ ಜೊತೆಗಿರುತ್ತಿದ್ದರು. ನಾನೂ ನನ್ನ ತಾಯಿಯ ಜೊತೆಯಲ್ಲಿ ಇಲ್ಲಿಗೆ ಬಂದಿದ್ದ ನೆನಪು."

"ನೀನು ಇದನ್ನೆಲ್ಲ ನನಗೆ ಹೇಳಿರಲೇ ಇಲ್ಲ."

"ಈ ದುರಂತ ಕತೆಯನ್ನು ನೀನು ನಂಬುತ್ತಿದ್ದೆಯಾ ? ಅಡಿಗೆಯವರು, ಅಡಿಗೆಯವರೇ, ಅವರಿಗೆ ಆಗುವುದು ಅನ್ಯಾಯವೇ..."

"ನಾನೇನೂ ಅಡಿಗೆಯವಳಾಗಿರಲಿಲ್ಲ. ನನಗೇಕೆ ಅನ್ಯಾಯವಾಯಿತು ?"

"ಯಾಕೆ ಅಂದ್ರೆ... ಈ ಅಡಿಗೆಯವಳ ಮಗನನ್ನು ಪ್ರೀತಿಸಿದ ತಪ್ಪಿಗೆ. ವತ್ಸಲನ್ನ ಪ್ರೀತಿಸಿದ ತಪ್ಪಿಗೆ ಅವಳ ಗಂಡ ಸತ್ತೇ ಹೋದನಲ್ಲ."

"ಹೀಗಾಗಬಾರದಿತ್ತು. ಅವರಿಬ್ಬರನ್ನು ಫ್ರೀಯಾಗಿ ಬಿಡಬಾರದಾಗಿತ್ತು."

"ಹೌದು. ಆದರೆ ಯಾವುದೇ ಎವಿಡೆನ್ಸ್ ಇರಲಿಲ್ಲವಲ್ಲ. ಹೇಳಿದ್ದರೆ ಅವಳನ್ನೇ ಮನೆಯಿಂದ ಹೊರಹಾಕಿರುತ್ತಿದ್ದರು."

"ಈಗ ನನ್ನ ಕೇಸು ಆಗಿದೆಯಲ್ಲ ಹಾಗೇ... ಆಲ್ವೇಸ್, ಹಿಸ್ಟರಿ ರಿಪೀಟ್ಸ್."

"ಹೆಚ್ಚು ಕಡಿಮೆ ಹಾಗೇ.... ಅದರೆ ವತ್ಸಲಳ ಧೈರ್ಯ ನಿನಗಿಲ್ಲ."

"ಹೌದು. ಜಿರಲೆ, ಇರುವೆಗೆ ಕೂಡ ನಾನು ಹೆದರ್ತೀನಿ... ಅವರಾದರೆ ಇಲ್ಲಿ ಹಾವು, ಮುಂಗಸಿ, ಚಿರತೆ, ಹುಲಿಗಳ ನಡುವೆ ಅದು ಹೇಗೆ ಇದಾರೋ ?"

"ಆ ದುರಂತಗಳನ್ನೇ ಎದುರಿಸಿದವಳಿಗೆ ಅದೇನು ಮಹಾ ?"

"ಹೇಗೂ ಧೈರ್ಯವಿತ್ತಲ್ಲ ಇಬ್ಬರನ್ನು ಕೊಂದು ಹಾಕಿಬಿಡಬೇಕಾಗಿತ್ತು."

"ಎಕ್ಸಾಕ್ಟ್ಲೀ, ಅದೇ ಕೆಲಸವನ್ನು ವತ್ಸಲ ಮಾಡಿದ್ದು."

"ಹೌದಾ ?... ಹೇಗೆ ಕೊಂದರು ?" ಅಚ್ಚರಿಯಿಂದ ಕೇಳಿದಳು.

"ಅದನ್ನು ಇನ್ನೊಂದು ದಿನ ಹೇಳ್ತೀನಿ... ಈಗ ಹೊತ್ತಾಯ್ತು ನಡಿ" ಎನ್ನುತ್ತಾ ಅವಳ ಕೈ ಹಿಡಿದೆಳೆದ.

"ನನ್ನನ್ನು ಈಗಲೂ ಪ್ರೀತಿಸ್ತೀಯಾ ಭಾರ್ಗವ ?"

"ನನ್ನ ಪ್ರೀತಿ ಪ್ರಾರಂಭವಾದದ್ದು ನಿನಗಾಗಿ, ಅದು ಮುಗಿಯುವುದೂ ನಿನಗಾಗಿಯೇ."

"ಪ್ರೀತಿ ಅಂತ್ಯವಾಗಬಾರದು. ಅನಂತವಾಗಿರಬೇಕು."

"ಈಗ ಮೊದಲು ನಿನ್ನ ವೈರಿಗಳ ಅಂತ್ಯವಾಗಬೇಕು. ನಿನ್ನ ಲಿಸ್ಟ್‌ನಲ್ಲಿ ಮೊದಲು ಯಾರು ?"

"ಮೊದಲು ಪ್ರತಾಪ. ನಂತರ ಉಳಿದವರು. ನಿನಗೇನನ್ನಿಸುತ್ತೆ ?"

"ಮೊದಲು ರಘು... ಮೊದಲು ಅವನನ್ನು ಕೊಚ್ಚಿ ಹಾಕಬೇಕು."

"ಅವನ ಮೇಲೆ ನನಗೆ ವಿಪರೀತ ಕೋಪ. ಈಗಾಗಲೇ ಅವನಿಗೆ ಶಿಕ್ಷೆಯಾಗಿದೆ. ಆ ಕುಂಟನ ಕೈಲಿ ಇನ್ನೇನು ಸಾಧ್ಯ ?"

"ಕುಂಟನಿಗೆ ನೂರೊಂದು ಚೇಷ್ಟೆ ಅಂತ. ಅವನನ್ನು ಹೀಗೆ ಫ್ರೀಯಾಗಿ

ಬಿಡಬಾರದು. ಅವನೇ ರೇಪಿಸ್ಟ್ ಅಂತ ನನಗೆ ಬಲವಾದ ಅನುಮಾನ. ಇನ್ನೊಂದೆರಡು ದಿನಗಳಲ್ಲಿ ಎವಿಡೆನ್ಸ್ ಸಹ ಸಿಕ್ಕುತ್ತೆ. ಆಗ ನಿನಗೇ ಗೊತ್ತಾಗುತ್ತೆ" ಮಾಲಾ ಕೆಂಡವಾದಳು.

"ಇದನ್ನು ಮೊದಲೇ ಯಾಕೆ ಹೇಳಲಿಲ್ಲ. ನಾನು ಚೆನ್ನಾಗಿ ಉಗಿದು ಒದ್ದು ಬುದ್ಧಿ ಕಲಿಸುತ್ತಿದ್ದೆ. ಜೀವಾವಧಿ ಶಿಕ್ಷೆಯಾಗುವ ಹಾಗೆ ಮಾಡುತ್ತಿದ್ದೆ."

"ಈಗಲೂ ಸಮಯ ಮೀರಿಲ್ಲ. ಎವಿಡೆನ್ಸ್ ಇದ್ದರೆ, ಕೇಸು ಸುಲಭವಾಗಿ ನಿನ್ನ ಕಡೆಗೆ ಆಗುತ್ತದೆ. ನೀನು ಸ್ವಲ್ಪ ದಡ್ಡಿ , ಅಲ್ಲದೆ ಮೊಂಡಿ ಸಹ.;;

"ನನ್ನನ್ನು ರೇಗಿಸಬೇಡ ನೋಡು. ನಿನ್ನದೆ ಇದೆಲ್ಲ ಪ್ಲಾನ್ ಅಂತ ಪೊಲೀಸರಿಗೆ ಹೇಳಿಬಿಡ್ತೀನಿ."

"ಯಾಕೆ ನಿನಗೂ ನನ್ನನ್ನು ಜೈಲಿಗೆ ಕಳಿಸಬೇಕೂಂತ ಆಸೇನಾ ?"

"ಇಲ್ಲ. ಭಾರ್ಗವ ನಾನು ನಿನ್ನನ್ನು ರೇಗಿಸಿದೆ. ಅಷ್ಟೇ... ನಾನು, ನೀನಿಲ್ದೇ ಇರಲಾರೆ. ಮತ್ತೆ ನನ್ನ ಕೈಗೆ ಸಿಕ್ಕಿರುವಾಗ, ನಾನು ನಿನ್ನನ್ನು ಕಳೆದುಕೊಳ್ಳಲಾರೆ" ಎನ್ನುತ್ತಾ ಅವನ ಎದೆಗೆ ಒರಗಿಕೊಂಡಳು.

"ನೋಡು, ಹಕ್ಕಿ, ಪಕ್ಷಿ ಗಿಡಮರಗಳೆಲ್ಲಾ ನಮ್ಮನ್ನೇ ನೋಡುತ್ತಿವೆ" ನಕ್ಕ.

"ನಾವು ಇದೇ ಮಂದಿರದಲ್ಲಿ ಮದುವೆಯಾಗೋಣ. ನಿನ್ನ ಚಿಕ್ಕಮ್ಮನ ಹತ್ತಿರ ಮಾತನಾಡು."

"ಆಗಲಿ. ಆ ಸಮಯ ಬರಲಿ. ನಾನು ಮಾತನಾಡ್ತೀನಿ."

"ನಾನು ಅಲ್ಲಿಯವರೆಗೂ ಕಾಯ್ತೀನಿ" ಎನ್ನುತ್ತ ಅವನ ಕೆನ್ನೆಯನ್ನು ಚುಂಬಿಸಿದಳು.

"ನಿನಗೆ ತಿಳುವಳಿಕೆ ಸಾಲದು ಅಂತ ಇದಕ್ಕೇ ಹೇಳೋದು. ಇದು ಸಮಯವಲ್ಲ"

"ನೀನೂ ಅಷ್ಟೇ ಬದಲಾಗೇ ಇಲ್ಲ. ಅದೇ ತರಹ ಮಾತನಾಡ್ತೀಯ. ರೊಮಾನ್ಸ್‌ಗೆ ಇದಕ್ಕಿಂತ ಬೇರೆ ಸಮಯ, ಬೇರೆ ಸ್ಥಳ ಎಲ್ಲಿ ಹುಡುಕಲಿ! ಎನ್ನುತ್ತಾ ಅವನನ್ನು ತಬ್ಬಿಕೊಂಡಾಗ ಅವನು ಅವಳನ್ನು ಸರಿಸಿದ.

"ಅಲ್ಲಿ ನೋಡು. ಎರಡು ಜೋಡಿ ಕಣ್ಣುಗಳು ನಮ್ಮನ್ನೇ ನೋಡುತ್ತಿವೆ" ಮಾಲಾ ಹಿಂದಕ್ಕೆ ತಿರುಗಿದಳು. ನಾಗೇಶ, ಯೋಗೇಶ ಕೈ ಕಟ್ಟಿ ನಿಂತು, ಅವರ ಸರಸವನ್ನೆ ನೋಡುತ್ತಿದ್ದರು. ಅವಳಿಗೆ ನಾಚಿಕೆಯಾಗಿತ್ತು. ಅವನು ಹೋಗಿ ಎನ್ನುವಂತೆ ಸಂಜ್ಞೆ ಮಾಡಿದ.

"ನೀನೇನು ಭಯ ಪಡಬೇಡ. ಅವರು ಕಂಡಿದ್ದನ್ನು ಅವರ ತಾಯಿಗೆ ಹೇಳುವ ಶಕ್ತಿ ಅವರಲ್ಲಿಲ್ಲ" ಅಷ್ಟರಲ್ಲಿ ಅವರಿಬ್ಬರೂ ಓಡಿ ಹೋಗಿದ್ದರು.

"ನನಗೆ ಆ ಭಯವಿಲ್ಲ ಭಾರ್ಗವ. ಅವರಿಬ್ಬರೂ ವಯಸ್ಸಿಗೆ ಬಂದ ಯುವಕರು. ಅವರಿಂದ ನನಗೇನಾದರೂ ತೊಂದರೆ ಆದರೆ..."

"ಛೆ. ನೀನು ಹಾಗೆಲ್ಲಾ ಯೋಚಿಸುವುದೂ ತಪ್ಪು... ಅದಕ್ಕೇ ಹೇಳಿದ್ದು ನೀನು ಹೀಗೆಲ್ಲಾ ವರ್ತಿಸಬಾರದು ಅಂತ. ಇದು ನೋಡುವವರನ್ನು ತಪ್ಪು ದಾರಿಗೆ ಎಳೆಯುತ್ತದೆ" ಮಾಲಾ ಕೋಪದಿಂದ ದೂರ ಸರಿದಳು. ಈಗ ಅವನೇ ಅವಳನ್ನು ಹತ್ತಿರಕ್ಕೆಳೆದುಕೊಂಡ.

"ಕೋಪಿಸ್ಕೊಂಡು ದೂರ ಸರಿಯಬೇಡ ಮಾಲಾ... ನೀನಿಲ್ಲದೆ ನಾನೂ ಇರಲಾರೆ... ಆದರೆ ಸಹನೆ, ಸಂಯಮವನ್ನು ನಾವು ಮೀರಬಾರದು."

"ಸರಿ. ಸರಿ. ಉಪದೇಶ ಸಾಕು. ಹೊಟ್ಟೆ ಹಸಿಯುತ್ತಿದೆ ಹೋಗೋಣ" ಇಬ್ಬರೂ ಕೈ ಕೈ ಹಿಡಿದು ಕಾಲುದಾರಿಯಲ್ಲಿ ನಡೆದು ಮನೆಯನ್ನು ಸೇರಿದರು. ಅಡಿಗೆಯವರು ಎಲ್ಲರನ್ನೂ ಒಟ್ಟಿಗೇ ಕೂಡಿಸಿ ಬಡಿಸಿದರು. ಎಷ್ಟೋ ದಿನಗಳ ನಂತರ ಮಾಲಾ ಹೊಟ್ಟೆ ತುಂಬಾ ಉಂಡಳು. ತನಗಿಂತ ಹೆಚ್ಚು ಕಷ್ಟವನ್ನು ಅನುಭವಿಸಿದವಳು ವತ್ಸಲ ಅಂತಲೋ ಅಥವಾ ಇವಳ ಧೈರ್ಯ ತನಗೂ ಬರಲಿ ಅನ್ನೋ ಹಂಬಲವೋ, ಅವಳಲ್ಲಿ ಉದಿಸಿತ್ತು.

ದೂರದರ್ಶನದಲ್ಲಿ ಮಾಲಾಳ ಫೋಟೋ ಹಾಗೂ ವಿವರಣೆಯೊಂದಿಗೆ ಈ ಮಹಿಳೆ ಕಾಣೆಯಾಗಿದ್ದಾಳೆ. ಇವರ ಬಗ್ಗೆ ತಿಳಿದವರು, ಸಂಪರ್ಕಿಸ ಬೇಕಾದ ನಂಬರುಗಳು ಎಂದು, ಪೋಲೀಸ್ ಸ್ಟೇಷನ್ ಹಾಗೂ ಧ್ರುವ, ಪ್ರತಾಪನ ಫೋನು ನಂಬರ್‍ರುಗಳನ್ನು ಪ್ರಕಟಿಸಿದ್ದರು. ಭಾರ್ಗವ ಮಾಲಾಳ ಕಡೆ ನೋಡಿ ಕಿರುನಗೆ ನಕ್ಕ.

"ಈಗ ನೀನು ಇಲ್ಲಿ ಇದೀಯ ಅಂತ ಚಿಕ್ಕಮ್ಮನಿಂದ ಅವರುಗಳಿಗೆ ತಿಳಿಯುತ್ತೆ. ನಿನ್ನನು ಕರೆದೊಯ್ಯಲು ಬರುತ್ತಾರೆ" ಎಂದ. ವತ್ಸಲಾ ಫೋನೆತ್ತಿಕೊಂಡು ಧ್ರುವನ ಮನೆಯ ನಂಬರನ್ನು ಡಯಲ್ ಮಾಡಿದಳು. ಧ್ರುವನೇ ಮಾತನಾಡಿದ.

"ದೂರದರ್ಶನದಲ್ಲಿ ನಿಮ್ಮ ಪ್ರಕಟಣೆಯನ್ನು ನೋಡಿದೆ. ನಮ್ಮ ಮನೆಯಲ್ಲಿ ಆ ಹೋಲಿಕೆಯ ಹೆಂಗಸು ಇದಾಳೆ. ನೀವು ಖುದ್ದಾಗಿ ಬಂದು ನೋಡಿ ಕರೆದುಕೊಂಡು ಹೋಗಬಹುದು" ಎಂದು ತನ್ನ ವಿಳಾಸವನ್ನು,

ಫೋನು ನಂಬರನ್ನು ತಿಳಿಸಿದಳು.

"ಅವಳು ಅಲ್ಲಿಗೆ ಹೇಗೆ ಬಂದಳು ? ಅವಳು ಅಲ್ಲಿದ್ದರೆ ಅವಳಿಗೆ ಕೊಡಿ. ನಾನು ಅವಳ ಹತ್ತಿರ ಮಾತನಾಡಬೇಕು" ಅಂತಂದ.

"ಅವಳ ಮನಃಸ್ಥಿತಿ ಸರಿಯಿಲ್ಲ. ಬಹುಶಃ ಮರೆವಾಗಿದೆ ಅಂತ ಕಾಣುತ್ತೆ... ಏನೋ ಆಘಾತವಾಗಿರಬೇಕು. ನೀವು ಬಂದರೆ ಗುರುತಿಸಬಹುದು."

"ನೀವು ಪೊಲೀಸರಿಗೆ ತಿಳಿಸಿದ್ದೀರಾ ? ಡಾಕ್ಟರಿಗೆ ತೋರಿಸಿದ್ದೀರಾ ?"

"ಇಲ್ಲ ತಿಳಿಸಿಲ್ಲ. ಪೊಲೀಸು, ಕೇಸು ಇದೆಲ್ಲ ನನಗೆ ಒಗ್ಗದ ಕೆಲಸ. ನಮ್ಮ ಎಸ್ಟೇಟ್ ಹತ್ತಿರದಲ್ಲಿ ಯಾವ ಡಾಕ್ಟರೂ ಇಲ್ಲ. ಅಲ್ಲದೆ ಡಾಕ್ಟರು ಕೇಳುವ ಪ್ರಶ್ನೆಗಳಿಗೆ ಉತ್ತರಿಸಲು ನನ್ನ ಬಳಿ ಸಮಯವಿಲ್ಲ. ದಯವಿಟ್ಟು ನೀವೇ ಬಂದು ಅದೇನು ಮಾಡ್ತೀರೋ ಮಾಡಿ ಎಂದು ಒರಟಾಗಿ ಹೇಳಿ, ಲೈನ್ ಕಟ್ ಮಾಡಿದಳು. ಮಾಲಾ ಗೊಂದಲದಲ್ಲಿ ಸಿಕ್ಕಿ ಬಿದ್ದಳು.ಈ ವತ್ಸಲಾ, ಮತ್ತೆ ಧ್ರುವನ ಮನೆಗೆ ಕಳಿಸುವ ಆಲೋಚನೆಯಲ್ಲಿದ್ದಾಳೆ. ತಾನು ಇಲ್ಲಿಂದಲೂ ತಪ್ಪಿಸಿಕೊಂಡು ಹೋಗಬೇಕೆನ್ನಿಸಿತ್ತು.

"ನಾನಿಲ್ಲಿದೀನಿ ಅಂತ ತಿಳಿಸಬಾರದಿತ್ತು ಭಾರ್ಗವ. ಅವರುಗಳು ಬಂದು ನನ್ನನ್ನು ಮತ್ತೆ ಎಳೆದುಕೊಂಡು ಹೊಗುವುದು ಖಂಡಿತಾ."

"ಹಾಗೇನೂ ಆಗುವುದಿಲ್ಲ. ನಾನಿದೀನಿ ಧೈರ್ಯವಾಗಿರು" ಎಂದ.

"ಪೋಲಿಸ್ನೋರು ಬಂದು ಎಳೆದುಕೊಂಡು ಹೋದರೆ..."

"ಪೊಲೀಸಿನವರಿಗೆ ವಿಷಯವನ್ನು ಯಾರೂ ತಿಳಿಸುವುದಿಲ್ಲ. ಮೊದಲು ಧ್ರುವ ಮಧುಗೆ ಫೋನ್ ಮಾಡ್ತಾನೆ. ಮಧು, ವಸುಧಾ ನಾಳೆಯೇ ಬಂದರೂ ಬಂದರೇ...."

"ನಾನು ಅವರುಗಳ ಜೊತೆ ಅವರ ಮನೆಗೆ ಹೊರಟು ಹೋಗ್ತೀನಿ."

"ಹೋಗುವಂತೆ. ನಾನೇ ಕರೆದುಕೊಂಡು ಹೋಗ್ತೀನಿ. ಆದರೆ ಮೊದಲು ಇವರುಗಳು ಬರಲಿ. ಅವರ ಯೋಜನೆ ಏನೂಂತ ಗೊತ್ತಾಗುತ್ತೆ."

"ನನಗೆ ಭಯವಾಗ್ತಿದೆ ಭಾರ್ಗವ."

"ಭಯ ಪಟ್ಟರೆ ಪ್ರಯೋಜನವಿಲ್ಲಮ್ಮಾ. ಧೈರ್ಯದಿಂದಿದ್ದರೆ, ಇವರುಗಳಿಗೆ ಬುದ್ಧಿ ಕಲಿಸಬಹುದು" ಎಂದಾಗ ಮಾಲಾ ಪೆಚ್ಚಾದಳು. ವತ್ಸಲ ಅವಳ ಮಗ್ಗುಲಲ್ಲಿ ಕುಳಿತು ಅವಳ ಬೆನ್ನ ಮೇಲೆ ಕೈಯಾಡಿಸಿದಳು.

"ಕೆಲವಾರು ವರ್ಷಗಳ ಹಿಂದೆ, ನನಗೂ ಒಂದು ಇಂಥದೇ ಪರೀಕ್ಷೆ

ಒದಗಿತ್ತು. ಆ ಪರೀಕ್ಷೆಯಲ್ಲಿ ನಾನು ಪಾಸಾದೆ. ಇಲ್ಲದಿದ್ದರೆ ಈ ದಿನ ನಾನು ಬದುಕುತ್ತಿರಲಿಲ್ಲ."

ಅದೇನೆಂದು ಮಾಲಾ ಕೇಳಲಿಲ್ಲ. ಅವಳೂ ಹೇಳಲಿಲ್ಲ. "ನಾನು ಸ್ವಲ್ಪ ಹೀಗೇ ಸುತ್ತಾಡಿ ಬರುತ್ತೇನೆ" ಎಂದು ಭಾರ್ಗವ ಹೊರಟಾಗ, ಮಾಲಾಳೂ ಅವನ ಹಿಂದೆ ಹೊರಟಳು.

ಸ್ವಲ್ಪ ಹೊತ್ತಿನಲ್ಲೇ ಮಧು ಮಾತನಾಡಿದ್ದ... ಧ್ರುವನ ತಾಯಿಗೆ ಸೀರಿಯಸ್ ಆಗಿರುವುದರಿಂದ ಪ್ರತಾಪ ಹಾಗೂ ರಘು ಬರಲಿದ್ದಾರೆಂದು ತಿಳಿಸಿದ. ಆನಂತರ ಪ್ರತಾಪ ಮಾತನಾಡಿ, ಆದಷ್ಟೂ ಬೇಗ ತಾವಿಬ್ಬರೂ ಬರುತ್ತಿರುವುದಾಗಿಯೂ, ಮಾಲಾಳನ್ನು ಚೆನ್ನಾಗಿ ನೋಡಿಕೊಳ್ಳಬೇಕೆಂದು ಹೇಳಿದ್ದ. ಅವಳು ಹೇಗೆ ಅಲ್ಲಿಗೆ ಬಂದಳು ? ಯಾರು ಅವಳನ್ನು ಕರೆತಂದು ಬಿಟ್ಟಳು, ಅವಳು ಏನು ಹೇಳಿದಳು ? ಇತ್ಯಾದಿ ಪ್ರಶ್ನಿಸಿದ.

"ಅವಳು ನಮಗೆ ಏನನ್ನೂ ಹೇಳಿಲ್ಲ. ಅವಳಿಗೆ ಏನೂ ನೆನಪಿಲ್ಲ. ಅದನ್ನೆಲ್ಲಾ ನೀವೇ ಬಂದು ವಿಚಾರಿಸಿ. ನಿಮ್ಮಗಳನ್ನು ನೋಡಿದರೆ ಅವಳ ನೆನಪು ಮರುಕಳಿಸಬಹುದು. ಪ್ಲೀಸ್ ಮತ್ತೆ ಮತ್ತೆ ಫೋನ್ ಮಾಡಬೇಡಿ. ಡಿಸ್ಟರ್ಬ್ ಆಗುತ್ತೆ" ಅಂತ ಒರಟಾಗಿ ಹೇಳಿ ಲೈನ್ ಕಟ್ ಮಾಡಿದಳು. ಆ ರಾತ್ರಿ ಕಳೆದು ಬೆಳಗಾಯಿತು.

○ ○ ○

ಭಾರ್ಗವ ಭಾಸ್ಕರನಿಗೆ ಫೋನು ಮಾಡಿ ಪ್ರತಾಪ ಹಾಗೂ ರಘು ಬರುತ್ತಿರುವ ವಿಚಾರವನ್ನು ತಿಳಿಸಿ, ಧ್ರುವನ ತಾಯಿ ಹೇಗಿದ್ದಾರೆಂದು ವಿಚಾರಿಸಿದ. ಮಾಲಾಗೆ ಈ ವಿಚಾರ ತಿಳಿಯುವುದು ಬೇಡ ಎಂದು ಭಾರ್ಗವ ಅಂದುಕೊಂಡ. ಆ ರಾತ್ರಿ ಬಹಳ ಹೊತ್ತಿನ ತನಕ ವತ್ಸಲ ಹಾಗೂ ಭಾರ್ಗವ ಮಾತನಾಡುತ್ತಿದ್ದುದನ್ನು ಮಾಲಾ ಗಮನಿಸಿದರೂ, ಅವಳಿಗೆ ಕೇಳಿಸಿಕೊಳ್ಳುವ ಕುತೂಹಲವಿರಲಿಲ್ಲ.

"ಪ್ರತಾಪ. ರಘುವನ್ನು ತಾನು ಗುರುತಿಸಬಾರದು. ಎಲ್ಲಾ ಮರೆತಿರುವಂತೆ ನಟಿಸಬೇಕು" ಎಂದು ಭಾರ್ಗವ ಹೇಳಿದ್ದ. ಆದರೆ ಅವಳಿಗೆ ಅವಳ ಮೇಲೆ ನಂಬಿಕೆ ಇರಲಿಲ್ಲ. ಪ್ರತಾಪ ಚತುರ. ತಾನು ನಟಿಸುತ್ತಿದ್ದೇನೆಂದು ತಿಳಿದರೆ... ಆ ಕ್ಷಣದಲ್ಲಿ ಅವಳಿಗೆ ತನ್ನ ಹತ್ತಿರ ಒಂದು ಗನ್ ಅಥವಾ ರಿವಾಲ್ವರ್ ಇದ್ದಿದ್ದರೆ ಚೆನ್ನಾಗಿತ್ತೆನಿಸಿತ್ತು.

ಅದೇ ಮಾತನ್ನು ಭಾರ್ಗವನಿಗೆ ಹೇಳಿದಳು. "ನೀನು ಒಂದು ದಿನ ಒಂದು ಹುಲ್ಲು ಕಡ್ಡಿಯನ್ನೆತ್ತಿ ನಾಯಿಗೆ ಹೊಡೆದಿಲ್ಲ. ರಿವಾಲ್ವಾರ್ನೆತ್ತಿ ಶೂಟ್ ಮಾಡೋದು ಸುಲಭ ಅಂತ ಅಂದ್ಕೊಂಡ್ಯಾ?" ಎಂದು ನಕ್ಕ. ಅವಳು ಸುಮ್ಮನಾದಳು.

ಮಾರನೆಯ ದಿನ ರಾತ್ರಿಯ ವೇಳೆಗೆ ಟ್ಯಾಕ್ಸಿ ಬಂದು ನಿಂತ ಸದ್ದು ಕೇಳಿದಾಗ, ನಾಯಿಗಳು ಬೊಗಳಲಾರಂಭಿಸಿತು. ಮಧು ಹಾಗೂ ವಸುಧಾ ಬಂದಿಳಿದರು. ಮಾಲಾಳಿಗೆ ಜೀವ ಬಂದಂತಾಗಿತ್ತು. ಓಡಿ ಹೋಗಿ ಅವಳನ್ನು ತಬ್ಬಿಕೊಂಡು, ಅತ್ತಳು. "ಮತ್ತೆ ನಿನ್ನನ್ನು ನೋಡ್ತೀನೋ ಇಲ್ಲವೋ ಅಂತ ಅಂದುಕೊಂಡಿದ್ದೆ... ಮಕ್ಕಳನ್ನು ಕರೆದುಕೊಂಡು ಬರಲಿಲ್ವಾ?"

"ಇಲ್ಲ. ನಮ್ಮ ಅಮ್ಮನ ಮನೆಯಲ್ಲಿ ಬಿಟ್ಟು ಬಂದಿದೀನಿ."

"ನಾವು ಇದೇ ಟ್ಯಾಕ್ಸಿಯಲ್ಲಿ ವಾಪಸ್ಸು ಹೋಗೋಣ..." ಎಂದಳು.

"ಭಾರ್ಗವ ಎಲ್ಲಿ?" ಮಧು ಕೇಳಿದ.

"ಇಲ್ಲೇ ಇದ್ದ. ಈಗ ಎಲ್ಲಿ ಹೋದನೋ...." ಮಾಲಾ ಅತ್ತಿತ್ತ ನೋಡಿದಳು. ಭಾರ್ಗವ ಕಾಣಲಿಲ್ಲ. ವತ್ಸಲಳಿಗೆ ತನ್ನ ಅಣ್ಣ ಅತ್ತಿಗೆಯರನ್ನು ಪರಿಚಯಿಸಿದಳು. ಒಳಗಿನ ರೂಮಿಂದ ಭಾರ್ಗವ ಹೊರಬಂದ. ಇಬ್ಬರೂ ಒಬ್ಬರನ್ನೊಬ್ಬರು ನೋಡಿದರು. ಇಬ್ಬರಿಗೂ ತಾವೇ ಮೊದಲು ಮಾತನಾಡಲು ಏನೋ ಅಡ್ಡಿ. ಅದನ್ನು ವಸುಧಾ ಗಮನಿಸಿದಳು. "ಹೇಗಿದೀರಿ ಭಾರ್ಗವ್... ಪ್ರಯಾಣದಲ್ಲಿ ನಿಮಗೇನೂ ತೊಂದರೆಯಾಗಲಿಲ್ಲವಲ್ಲ."

"ನನಗಂತೂ ಆಯಿತು. ಆ ರಾತ್ರಿ ಶಿವರಾತ್ರಿ... ಬರೀ ಬಿಸ್ಕತ್ತನ್ನು ತಿಂದು ಕಾಲ ಕಳೆದಿದೀನಿ. ನೀರು ಕೂಡಾ ಇರಲಿಲ್ಲ." ವಸುಧ ನಕ್ಕಳು.

"ನೀನು ನಗಬೇಡ. ಎಲ್ಲರಿಗೂ ನನ್ನ ಮಾತು ಚೈಲ್ಡಿಷ್ ಅನ್ನಿಸುತ್ತೆ."

"ನೀನು ಬಿಹೇವ್ ಮಾಡೋದೇ ಹಾಗೆ..." ಭಾರ್ಗವ, ಮಧುಕರ ಇಬ್ಬರೂ ಏಕಕಾಲದಲ್ಲಿ ನುಡಿದರು. ಒಂದು ಗಳಿಗೆ ಇಬ್ಬರೂ ತಡೆದು ಪರಸ್ಪರ ನೋಡಿ ನಕ್ಕರು.

"ಅಡಿಗೆ ಸಿದ್ಧವಾಗಿದೆ. ಎಲ್ಲರೂ ಊಟಕ್ಕೆ ಏಳಿ" ವತ್ಸಲ ಅವಸರಿಸಿದಳು. ಎಲ್ಲರೂ ನಿಧಾನವಾಗಿ ಮಾತನಾಡುತ್ತಾ ಊಟ ಮಾಡಿದರು. ನಂತರ ಗೆಳತಿಯರಿಬ್ಬರೂ ಒಂದು ರೂಮಿನಲ್ಲಿ ಮಲಗಿದರು. ಮಧು ಇನ್ನೊಂದು ರೂಮಿನಲ್ಲಿ ಮಲಗಿದ. ಭಾರ್ಗವ ಹಾಲಿನಲ್ಲಿದ್ದ ಸೋಫಾದ ಮೇಲೆ

ಮಲಗಿದ್ದ...

ಗೆಳತಿಯರಿಬ್ಬರೂ ಬಹಳ ಹೊತ್ತಿನ ತನಕ ಹರಟುತ್ತಿದ್ದರು. ಮಧುಗೆ ಹೊಸ ಜಾಗವಾದುದರಿಂದ ನಿದ್ದೆ ಬಂದಿರಲಿಲ್ಲ. ಭಾರ್ಗವ ಹಿಂದಿನ ದಿನಗಳನ್ನು ನೆನಪಿಸಿಕೊಳ್ಳುತ್ತಿದ್ದ. ತನಗೆಂದೂ ಮಧುಕರನೊಂದಿಗೆ ಸಲುಗೆ ಇರಲಿಲ್ಲ. ಒಂದೇ ಮನೆಯಲ್ಲಿದ್ದರೂ ಅಪರಿಚಿತರಂತೆ ಇದ್ದೆವು. ಈಗ ಇಷ್ಟು ವರ್ಷಗಳ ನಂತರವೂ ಅಪರಿಚಿತರೇ... ನನಗೂ ಯಾವ ಮಾತಿಲ್ಲ. ಅವನಿಗೂ ಯಾವ ಮಾತೂ ಬೇಕಿಲ್ಲ. ಅವನಾಗಿಯೇ ಒಂದು ಮಾತು "ಹೇಗಿದೀಯ ? ಅಂತ ಕೇಳಿದ್ದರೆ...?" ತಾನು ಎಲ್ಲವನ್ನೂ ಮರೆಯಲು ಸಿದ್ಧನಾಗಿದ್ದ.

ಇದೇ ರೀತಿ ಮಧು ಚಿಂತಿಸುತ್ತಿದ್ದ. ಮೊದಲಿನಿಂದಲೂ ತನಗೆ ಭಾರ್ಗವನನ್ನು ಕಂಡರೆ ಅಷ್ಟಕ್ಕಷ್ಟೇ. ಈಗ ಇದ್ದಕ್ಕಿದ್ದಂತೆ ಹೇಗೆ ಮಾತ ನಾಡಿಸೋಕೆ ಸಾಧ್ಯ ? ನನಗೂ ಮುಜುಗರವಾಗುತ್ತೆ. ಮೊದಲಿನಂತೆ ಅವನೇ ತಾನಾಗಿಯೇ ಮಾತನಾಡಿಸಿದ್ದರೆ, ತಾನು ಮಾತನಾಡಿಸಲು ಸಿದ್ಧ ನಾಗಿದ್ದ. ಆ ರಾತ್ರಿ ಬಹಳ ದೀರ್ಘವಾಗಿದೆಯೆಂದೆನಿಸಿತ್ತು. ಸುತ್ತಮುತ್ತಲೂ ಕಾಡು ಪ್ರದೇಶ. ಎಂತೆಂತಹ ಕಾಡುಪ್ರಾಣಿಗಳಿವೆಯೋ ? ಕ್ರಿಮಿ ಕೀಟಗಳ ಸದ್ದು ಜುಂಯ್ ಅಂತ ಕೇಳಿಸುತ್ತಲೇ ಇದೆ. ನಿದ್ದೆ ಹೇಗೆ ಬರುತ್ತದೆ ಎಂದು ಕೊಂಡು ಹೊರಗೆ ಬಂದ. ಭಾರ್ಗವ ಸೋಫಾದ ಮೇಲೆ ಮಲಗಿದ್ದವನು ನಿದ್ದೆ ಹೋಗಿದ್ದ. ಒಂದು ಗಳಿಗೆ ಅಲ್ಲಿಯೇ ಅವನೆದುರು ನಿಂತಿದ್ದು ಮತ್ತೆ ತನ್ನ ರೂಮಿಗೆ ಬಂದ.

o o o

ಬೆಳಿಗ್ಗೆ ಉಪಹಾರದ ನಂತರ ಭಾರ್ಗವ ಮಾಲಾಳಿಗೆ, ವಸುಧಾ ಹೇಳಿದಂತೆ ಕೇಳಬೇಕೆಂದು ಹೇಳಿ, "ನಾನು ಯಾರಿಗೂ ಕಾಣದಂತೆ ಮರೆಯಾಗಿರುತ್ತೇನೆ. ಅವರುಗಳು ಯಾವಾಗಲಾದರೂ ಬಂದು ಬಿಡಬಹುದು. ನಾನು ಅವರುಗಳ ಕಣ್ಣಿಗೆ ಬಿದ್ದರೆ ಕೆಲಸ ಕೆಡುತ್ತದೆ. ನನ್ನ ಅಗತ್ಯಬಿದ್ದಾಗ ಫೋನು ಮಾಡಿದರೆ, ನಾನು ತಕ್ಷಣವೇ ಬರುತ್ತೇನೆ" ಎಂದು ಹೇಳಿ ಹೊರಬಿದ್ದ. ಅವನ ಹಿಂದೆ ಹೊರಡಲು ಅನುವಾದ ಮಾಲಾಳನ್ನು ವಸುಧಾ ತಡೆದಳು. "ಅವರು ಹೇಳುವುದು ಸರಿ. ಮೊದಲೇ ಅವರ ಮೇಲೆ ನಾನಾ ವಿಧವಾದ ಅಪವಾದಗಳಿವೆ. ಈಗ ಅವರೇ ನಿನ್ನನ್ನು ಕಿಡ್ನಾಪ್ ಮಾಡಿರಬಹುದು ಅಂತ ಎಲ್ಲರಿಗೂ ಅನುಮಾನ ಬರುತ್ತದೆ."

ಮಧು ಸಹ ಹೌದು ಎಂದು ತಲೆಯಾಡಿಸಿದ. "ಈಗಲಾದರೂ ನೀನು ನಾವುಗಳು ಹೇಳಿದ ಹಾಗೆ ಕೇಳು" ಎಂದು ನಯವಾಗಿ ಗದರಿದ.

ಗಿಡಗೆಂಟೆಗಳ ನಡುವೆ ಭಾರ್ಗವ ಮರೆಯಾದ ಸ್ವಲ್ಪ ಹೊತ್ತಿನ ನಂತರ ಮನೆಯ ಮುಂದೆ ಒಂದು ಕಾರು ಬಂದು ನಿಂತಿತು. ಆಗಂತುಕರನ್ನು ಕಂಡು ನಾಯಿಗಳು ಬೊಗಳಲು ಪ್ರಾರಂಭಿಸಿದವು. ಮಧು ಹೊರಬಾಗಿಲಿಗೆ ಬಂದ. ಪ್ರತಾಪ ಹಾಗೂ ರಘು ಇಬ್ಬರೂ ಕಾರಿನಿಂದ ಇಳಿದಿದ್ದರು. ಪ್ರತಾಪ ಮಧುವನ್ನು ಕಂಡಕೂಡಲೇ ಕಣ್ಣು ಬಿಟ್ಟ.

"ನಿನ್ನ ತಂಗಿಗೆ ನಾವು ಏನೋ ಮಾಡಿಬಿಟ್ಟಿದೀವಿ ಅಂತ ಎಗರಾಡಿದೆ. ಅವಳು ಇಲ್ಲಿಗೆ ಯಾವೋನ ಜೊತೆಯೋ ಓಡಿ ಬಂದಿದಾಳೆ."

"ನಾಲಿಗೆ ಬಿಗಿ ಹಿಡಿದು ಮಾತನಾಡು ಪ್ರತಾಪ. ನೀನೇ ಯಾಕೆ ಇವಳನ್ನು ಇಲ್ಲಿಗೆ ಯಾವೋನ ಜೊತೆಯೋ ಕಳಿಸಿರಬಾರದು ?"

"ಕರಿ ಅವಳನ್ನ... ನಿಜ ಏನೂಂತ ಅವಳೇ ಬಾಯಿಬಿಡಲಿ" ಅಷ್ಟರಲ್ಲಿ ವತ್ಸಲ ಒಳಗಿನಿಂದ ಬಂದಳು.

"ಯಾರು ನೀವು ? ಯಾಕೆ ಹೀಗೆ ಮುಂಬಾಗಿಲಿನಲ್ಲಿ ನಿಂತು ಕಿರುಚಾಡುತ್ತಿದ್ದೀರಲ್ಲ. ಒಳಗೆ ಬಂದು ಹೇಳಿ."

"ನಾನು ಪ್ರತಾಪ, ಇವನು ನನ್ನ ತಮ್ಮ ರಘು, ನಾವಿಬ್ಬರೂ ಬಾಂಬೆಯಿಂದ, ಮಾಲಾಳನ್ನು ಕರೆದೊಯ್ಯಲು ಬಂದಿದ್ದೇವೆ... ಬೇಕಾದ್ರೆ ಇವನನ್ನೇ ಕೇಳಿ..."

"ಪರವಾಗಿಲ್ಲ ನೀವು ಮಾಲಾಳಿಗೆ ಏನಾಗಬೇಕು ?" ಪ್ರತಾಪ ತಬ್ಬಿಬ್ಬಾದ.

"ಇವನು ಧ್ರುವನ ಸ್ನೇಹಿತ... ಧ್ರುವ ಯಾಕೆ ಬರಲಿಲ್ಲ ?" ಮಧು ಕೇಳಿದ.

"ಆಂಟಿಗೆ ಹುಷಾರಿಲ್ಲ. ನನಗೆ ಈಗ ಸಮಯವಿಲ್ಲ. ಆದಷ್ಟೂ ಬೇಗ ನಾವು ವಾಪಸ್ಸಾಗಬೇಕು. ಮಾಲಾ ಎಲ್ಲಿ ? ಅವಳ ಹತ್ತಿರ ನಾವು ಮಾತನಾಡಬೇಕು."

"ಅವಳೀಗ ಮಲಗಿದಾಳೆ. ನಿಧಾನವಾಗಿ ಮಾತನಾಡೋಣ. ಮೊದಲು ಕೈ ಕಾಲು ತೊಳೆದುಕೊಳ್ಳಿ. ತಿಂಡಿ ತಿಂತೀರೋ, ಊಟ ಮಾಡ್ತೀರೋ ?"

"ನಮಗೆ ಏನೂ ಬೇಡ. ಅವಳನ್ನು ಕಳಿಸಿಕೊಡಿ."

"ಅವಳು ನಿಮ್ಮ ಜೊತೆ ಬರಲು ಒಪ್ಪಿದರೆ, ಧಾರಾಳವಾಗಿ ಕರೆದುಕೊಂಡು ಹೋಗಿ. ನನ್ನ ಅಭ್ಯಂತರವೇನಿಲ್ಲ. ಆದರೆ ಮೊದಲು ಅವಳು ನಿಮ್ಮನ್ನು

ಗುರುತಿಸಬೇಕು..."

"ಅದರ ಅಗತ್ಯವಿಲ್ಲ. ನಾವು ಯಾರೂಂತ ಮಧುಕರನಿಗೆ ಗೊತ್ತು. ಹೇಳೋ ಮಧುಕರ..."

"ನೀನು ಧ್ರುವನ ಸ್ನೇಹಿತ. ಇವನು ಧ್ರುವನ ತಮ್ಮ. ಆದರೆ ನನಗೆ ನಿಮ್ಮಿಬ್ಬರ ಮೇಲೂ ನಂಬಿಕೆ ಇಲ್ಲ. ಮಾಲಾ ಒಪ್ಪಿದರೂ ನಾನು ಒಪ್ಪಲ್ಲ."

"ಸರಿ. ಹಾಗಾದ್ರೆ, ಅವಳನ್ನೇ ಕೇಳ್ತೀವಿ. ಅವಳೆಲ್ಲಿ ?" ವಸುಧಾ, ಮಾಲಾಳನ್ನು ನಿಧಾನವಾಗಿ ನಡೆಸಿಕೊಂಡು ಬಂದಳು.

"ಏನಾಗಿದೆ ಇವಳಿಗೆ ಯಾಕೆ ಹೀಗಾಗಿದಾಳೆ ?"

"ಅದನ್ನೇ ನಾನು ನಿನ್ನನ್ನು ಕೇಳಬೇಕು. ಏನು ಮಾಡಿದೀಯ ಇವಳಿಗೆ ? ಮರೆವು ಬರುವ ಹಾಗೆ ಔಷಧಿ ಕೊಡಿಸಿರಬೇಕು. ನೀವುಗಳೆಲ್ಲ ಸೇರಿ."

"ನಾನ್ಯಾಕೆ ಹಾಗೆ ಮಾಡಲಿ ! ಇದರಿಂದ ನನಗೇನು ಲಾಭ ? ಮಾಲಾ– ಮಾಲಾ ನಾನ್ಯಾರು ಗೊತ್ತಾಯ್ತಾ ?" ಮುಂದೆ ಬಂದು ಕೇಳಿದ. ಮಾಲಾ ಇಲ್ಲ ಎನ್ನುವಂತೆ ತಲೆಯಾಡಿಸಿದಳು. ನಾಲ್ಕು ಹೆಜ್ಜೆ ಹಿಂದೆ ಸರಿದಳು. ಭಯವನ್ನು ನಟಿಸುತ್ತಾ.

"ನಾನ್ಯಾರು ಅಂತ ಗೊತ್ತಾಯ್ತಾ ?" ರಘು ಕೇಳಿದ. ಮತ್ತೆ ತಲೆಯಾಡಿಸಿ ಇಲ್ಲ ಎಂದು ಸಂಜ್ಞೆ ಮಾಡಿದಳು. ಅಸಹ್ಯವಾಗಿ ಅವನ ಕಡೆ ನೋಡುತ್ತಾ.

"ಇದರಿಂದ ನಮಗೇನೂ ತೊಂದರೆ ಇಲ್ಲ. ನಾವು ಕರೆದುಕೊಂಡು ಹೋಗಿ ಒಳ್ಳೆಯ ಡಾಕ್ಟರಿಗೆ ತೋರಿಸುತ್ತೀವಿ. ಜೇಗ ಸರಿ ಹೋಗ್ತಾಳೆ" ಇಬ್ಬರೂ ಒಟ್ಟಿಗೇ ನುಡಿದರು.

"ಇಲ್ಲ. ಮಾಲಾ ನಿನ್ನ ಜೊತೆಯಲ್ಲಿ ಬರುಲ್ಲ. ನಾವು ಅವಳನ್ನು ಕರೆದು ಕೊಂಡು ಹೋಗ್ತೀವಿ" ಮಧು ನುಡಿದ.

"ಅವಳು ನಿನ್ನನ್ನು ಗುರುತಿಸಿದಳಾ ?"

"ಇಲ್ಲ. ಆದರೇನಂತೆ ! ಅವಳು ನನ್ನ ತಂಗಿ. ಅವಳ ಮೇಲೆ ನನ್ನ ಹಕ್ಕಿದೆ."

"ಧ್ರುವನಿಗೂ ಹಕ್ಕಿದೆ. ಅವನು ಬಂದರೆ, ಅವನ ಜೊತೆ ಕಳಿಸ್ತೀಯಾ ?"

"ಈಗ ಸಧ್ಯಕ್ಕೆ ಮಾಲಾ ನಿಮ್ಮಗಳಲ್ಲಿ ಯಾರ ಸಂಗಡವೂ ಬರುಲ್ಲ. ಅವಳು ನಿಮ್ಮಗಳನ್ನು ಯಾರನ್ನೂ ಗುರುತಿಸಿಲ್ಲ. ನಾನು ಯಾವ ಧೈರ್ಯದ ಮೇಲೆ ನಿಮ್ಮ ಜೊತೆಯಲ್ಲಿ ಕಳಿಸಲಿ ? ವತ್ಸಲಾ ಹೇಳಿದಳು.

"ವಸುಧಾ. ನೀವಾರೂ ಹೇಳಿ. ಯಾಕೆ ಸುಮ್ಮನಿದೀರಿ?" ಪ್ರತಾಪ ಅಬ್ಬರಿಸಿದ.

"ಅವಳ ಮೇಲೆ ಅಬ್ಬರಿಸುಕ್ಕೆ ನೀನ್ಯಾರು?" ಮಧು ಗುಡುಗಿದ.

"ನಾನ್ಯಾರು ಅಂತ ನಿನಗೆ ಚೆನ್ನಾಗಿ ಗೊತ್ತು. ಚಿಟಿಕೆ ಹೊಡಯುವಷ್ಟರಲ್ಲಿ ನಾನು ನಿಮ್ಮಗಳನ್ನೆಲ್ಲಾ ಲಾಕಪ್‌ಗೆ ಕಳಿಸಬಲ್ಲೆ..." ಚಿಟಿಕೆ ಹೊಡೆಯುತ್ತಾ ನುಡಿದ.

"ಸರಿ ಹಾಗೇ ಮಾಡು. ಈಗಲೇ ಪೊಲೀಸರಿಗೆ ಫೋನು ಮಾಡ್ತೀನಿ" ಎನ್ನುತ್ತಾ ಮಧು ಫೋನಿನ ಬಳಿಗೆ ನಡೆದ. ವತ್ಸಲಾ ತಡೆದಳು.

"ಪ್ಲೀಸ್, ಇಲ್ಲಿ ನಮ್ಮ ಮನೆಯಲ್ಲಿ ನಿಮ್ಮ ಜಗಳ ಬೇಡ. ಮಾಲಾ, ನಿಮ್ಮಬ್ಬರಲ್ಲಿ ಯಾರ ಜೊತೆಗೆ ಹೋಗಬೇಕು ಅನ್ನೋದನ್ನು ಕೋರ್ಟು ನಿರ್ಧರಿಸಬೇಕಾಗುತ್ತದೆ. ನೀವುಗಳು ಸಬೂತನ್ನು ತರಬೇಕಾಗುತ್ತದೆ. ಮಧುವೆ ಫೋಟೋ, ವಿಡಿಯೋ ಕ್ಯಾಸೆಟ್... ಅಥವಾ ಮ್ಯಾರೇಜ್ ಸರ್ಟಿಫಿಕೇಟ್ ಎಲ್ಲಾ ಬೇಕಾಗುತ್ತದೆ."

"ನೀವು ಅಪರಿಚಿತರು. ನೀವು ಹೀಗೆಲ್ಲಾ ಮಾತನಾಡಿದರೆ ಪೊಲೀಸ್ ಕಂಪ್ಲೆಂಟ್ ಕೊಡ್ತೀವಿ. ಆಗ ಮಾಲಾಳನ್ನು ಯಾವುದಾದರೂ ಆಶ್ರಮಕ್ಕೆ ಸೇರಿಸಬೇಕಾಗುತ್ತದೆ. ಇಲ್ಲಿಗೆ ಅವಳು ಅನಿರೀಕ್ಷಿತವಾಗಿ ಬಂದು ಸೇರಿದಳು. ಹೆಂಗಸು ಅನ್ನೋ ಸಹಾನುಭೂತಿಯಿಂದ ನಾನು ಅವಳಿಗೆ ಆಶ್ರಯಕೊಟ್ಟೆ, ಅವಳಿಗೆ ಇಷ್ಟವಿದರೆ ಅವಳು ಇಲ್ಲೇ ಇರಬಹುದು."

"ಮಾಲಾ... ಇಲ್ಲೇ ಇರ್ತೀಯಾ?" ವಸುಧಾ ಕೇಳಿದಾಗ, ಹೂಂ ಎನ್ನುವಂತೆ ತಲೆಯಾಡಿಸಿದಳು.

"ಅದ್ಹೇಗೆ ಇರುತ್ತಾಳೆ? ನಾವು ಇಲ್ಲಿ ಇರಗೊಡುವುದಿಲ್ಲ ನಾವು ಎಳೆದು ಕೊಂಡು ಹೋಗ್ತೀವಿ" ಪ್ರತಾಪ, ಪ್ರತಾಪದಿಂದ ಹೇಳಿದ. ರಘು ಹೂಂಕರಿಸಿದ.

"ಹಾಗೆಲ್ಲ ಮಾಡಿದರೆ ಪರಿಣಾಮ ನೆಟ್ಟಗಾಗುಲ್ಲ. ನಮ್ಮ ನಾಯಿಗಳು ಭಯಂಕರ ರಾಕ್ಷಸ ಜಾತಿಯವು. ಕ್ಷಣ ಮಾತ್ರದಲ್ಲಿ ಸೀಳಿ ರಕ್ತ ಕಡಿಯುತ್ತವೆ." ರಘು ಭಯದಿಂದ ನಾಯಿಗಳನ್ನು ನೋಡಿದ. ವತ್ಸಲಾ ನಕ್ಕಳು.

"ನಾನು ಈ ಮನೆಯ ಒಡತಿ. ಈ ಮನೆಯ ಒಂದು ಹುಲ್ಲು ಕಡ್ಡಿ ಸಹ ನನ್ನ ಅನುಮತಿ ಇಲ್ಲದೆ ಚಲಿಸುವುದಿಲ್ಲ. ಈ ರಾತ್ರಿ ಕಳೆಯಲಿ. ನಾಳೆ ಬೆಳಿಗ್ಗೆ

ಮಾಲಾಳನ್ನು ಯಾರ ಜೊತೆ ಕಳಿಸಬಹುದು ಅಂತ ನಾನು ಡಿಸೈಡ್ ಮಾಡ್ತೀನಿ."

"ಅದು ಹೇಗೆ ಮಾಡ್ತೀರಿ ? ಅವಳು ಒಪ್ಪದಿದ್ದರೆ ?"

"ನಿಮಗೆ ದೇವರ ಮೇಲೆ ನಂಬಿಕೆ ಇದೆಯೇ ?"

'ಹೂಂ. ಸ್ವಲ್ಪ ಸ್ವಲ್ಪ."

"ಸರಿ. ನಿಮ್ಮ ದೇವರ ಮೇಲೆ ಭಾರ ಹಾಕಿ. ಇಲ್ಲೇ ಸಮೀಪದಲ್ಲಿ ನಮ್ಮದೇ ಆಶ್ರಮವಿದೆ. ಭಜನಾ ಮಂದಿರವಿದೆ. ಅಲ್ಲಿ ಭಕ್ತಾಧಿಗಳು ಬಂದು ಭಜನೆಯನ್ನು ಮಾಡಿ, ತಾವುಗಳು ಮಾಡಿದ ತಪ್ಪುಗಳನ್ನು ನಿವೇದಿಸಿಕೊಂಡು ಪ್ರಾರ್ಥನೆಯನ್ನು ಸಲ್ಲಿಸುತ್ತಾರೆ. ಅವರು ಅಂದುಕೊಂಡಿದ್ದೆಲ್ಲ ನಡೆಯುತ್ತದೆ."

"ನಮಗೆ ಇದರಲ್ಲೆಲ್ಲ ನಂಬಿಕೆ ಇಲ್ಲ."

"ನಂಬಿಕೆ ಇರದಿದ್ದರೆ ಬೇಡ..."

"ನನಗೆ ನಂಬಿಕೆ ಇದೆ. ನಾನು ಮೊದಲು ನಾನು ಮಾಡಿರುವ ತಪ್ಪುಗಳನ್ನು ನಿವೇದಿಸಿಕೊಂಡು ಪ್ರಾರ್ಥನೆ ಸಲ್ಲಿಸುತ್ತೇನೆ. ಮಾಲಾ ನನ್ನ ಜೊತೆಯಲ್ಲಿ ಬರುವಂತಾದರೆ ಸಾಕು" ಮಧು ನುಡಿದಾಗ ವಸುಧಾ ಅನುಮೋದಿಸಿದಳು. ಪ್ರತಾಪ ಹಾಗೂ ರಘು ಮುಖ ಮುಖ ನೋಡಿಕೊಂಡರು.

"ನೀವು ಭಯ ಪಡಬೇಡಿ... ಅಲ್ಲಿ ಏಕಾಂತದಲ್ಲಿ ಕುಳಿತು, ಅರಿಕೆಯನ್ನು ಮಾಡಿಕೊಂಡು ಪ್ರಾರ್ಥಿಸಬಹುದು. ಯಾರೂ ನಿಮಗೆ ಭಂಗ ತರುವುದಿಲ್ಲ."

"ಯಾವಾಗ ಹೋಗೋಣ ?" ಮಧು ಕೇಳಿದ.

"ಸಾಯಂಕಾಲ ಆರು ಗಂಟೆಯ ಹೊತ್ತಿಗೆ. ಹೊರಗಿನಿಂದ ಬಂಧ ಭಕ್ತಾಧಿಗಳು ಬಂದು ಹೋಗುತ್ತಾರೆ. ನಂತರ ಅಲ್ಲಿ ಜನರು ಯಾರೂ ಇರುವುದಿಲ್ಲ... ಆಗ ಹೋಗಬಹುದು."

"ನಾನು ಒಬ್ಬನೇ ಹೋಗ್ತೀನಿ... ವಸುಧಾ ಕೂಡಾ ಬರುವುದು ಬೇಡ. ಬೇಕಾದರೆ ಮಾಲಾ ಬರಲಿ. ಅವಳಿಗೆ ಏನಾದರೂ ನೆನಪಿಗೆ ಬಂದರೂ ಬರಬಹುದು."

"ಮಾಲಾ... ಬರ್ತೀಯಾ ?" ಮಧು ಕೇಳಿದಾಗ, ಅವಳು ಇಲ್ಲ ಎನ್ನುವಂತೆ ತಲೆಯಾಡಿಸಿದಳು. ಪ್ರತಾಪ ಗಹಗಹಿಸಿ ನಕ್ಕ.

"ಅದಕ್ಕೆ ನಗೋದು ಯಾಕೆ ? ಅವಳಿಗೆ ನೆನಪಿನ ಶಕ್ತಿ ಇಲ್ಲ. ಅದರಿಂದ

ನೀನೂ ಬದುಕಿದೀಯ... ಈಗ ಚರ್ಚೆ ಸಾಕು." ಮಧು ರೇಗಿದ.

ವತ್ಸಲ ಮತ್ತೆ ಮತ್ತೆ ಬಲವಂತ ಮಾಡಿದಾಗ, ಪ್ರತಾಪ, ರಘು ಊಟಕ್ಕೆ ಎದ್ದರು. ಮಧು ತುತ್ತು ಕಲೆಸಿ ತಿಂದ ಮೇಲೇ ಇಬ್ಬರೂ ತಿಂದರು. ಮಧುಗೆ ಗೊತ್ತಾಗಿತ್ತು. ವಸುಧಾಳ ಕಡೆ ನೋಡಿದ. ಊಟವಾದ ಮೇಲೆ ಪ್ರತಾಪ ಒಬ್ಬನೇ ಹೊರಟ. ಕಾಲುದಾರಿಯಲ್ಲಿ ನಡೆಯುತ್ತಾ ನಡೆಯುತ್ತಾ ಮಂದಿರದ ಬಳಿಗೆ ಬಂದ. ಮಂದಿರದ ಒಳಗೆ ಹೊರಗೆ ಮತ್ತೆ ಮತ್ತೆ ನೋಡಿದ. ಆಶ್ರಮದ ಬಾಗಿಲನ್ನು ಹಾಕಿತ್ತು. ಬಾಗಿಲನ್ನು ತಳ್ಳಿದ. ಒಳಗೆ ಬೆಳಕು ಸಾಲದಾಗಿತ್ತು. ಒಂದು ಕಂಭದ ಕೆಳಗೆ ಯಾರೋ ಕೂತಂತೆ ಅನ್ನಿಸಿತು. ಜೀವ ನಡುಗಿತು. ಮೆಲ್ಲನೆ ಒಳಗೆ ಅಡಿ ಇಟ್ಟ. ಬಾವುಲಿಗಳೂ, ಪಾರಿವಾಳಗಳೂ ಪುರ್ರನೆ ಹಾರಿದವು. ಅಲುಗಾಡದೇ ಕೂತಿದ್ದ ವ್ಯಕ್ತಿಯ ಬಳಿಗೆ ಬಂದ. ಗಡ್ಡ ಮೀಸೆಯನ್ನು ಬಿಟ್ಟುಕೊಂಡು ಬಿಳಿಯ ವಸ್ತ್ರವನ್ನು ಧರಿಸಿದ್ದ ವ್ಯಕ್ತಿ ಧ್ಯಾನ ಮಾಡುತ್ತಿದ್ದಂತೆ ಅನ್ನಿಸಿತು. ಪ್ರತಾಪ ಬಾಗಿ ಕೈ ಮುಗಿದ. "ಸ್ವಾಮೀಜೀ..." ಎಂದು ಕರೆದ. ಆ ವ್ಯಕ್ತಿ ಉತ್ತರಿಸಲಿಲ್ಲ. ಮೆಲ್ಲನೆ ಅಲ್ಲಿಂದ ಹಾಗೆ ಹಿಂದೆ ಹಿಂದಕ್ಕೆ ಬಂದು, ಮತ್ತೆ ಬಾಗಿಲನ್ನು ಭದ್ರಪಡಿಸಿದ. ಮತ್ತೆ ಮಂದಿರಕ್ಕೆ ಬಂದ. ಬಾಗಿಲ ಎದುರಿಗೆ ಗೋಡೆಗಳ ಮೇಲಿದ್ದ ಪಟಗಳು ಇವನನ್ನೇ ನೋಡುತ್ತಿವೆ ಎಂದೆನಿಸಿತ್ತು. ತನ್ನ ಮನದಲ್ಲಿ ಇರುವುದೆಲ್ಲಾ ಇವರುಗಳಿಗೆ ತಿಳಿದೇ ತಿಳಿಯುತ್ತದೆ. ನಾನಾಗಿಯೇ ನಿವೇದನೆ ಮಾಡಿಕೊಂಡರೆ ತಪ್ಪೇನಿದೆ. ಅಂತೆನಿಸಿತು. ಅಲ್ಲಿದ್ದ ಮಣೆಯ ಮೇಲೆ ಕುಳಿತ. ಎದುರಿಗಿದ್ದ ಓಂಕಾರ ಪಟದ ಮೇಲೆ ಅವನ ಗಮನ ಹರಿಯಿತು. ಅವನಿಗೇ ಅರಿವಿಲ್ಲದೇ ಅವನ ಬಾಯಿಂದ 'ಓಂ' ಎಂಬ ನಾಮ ಹೊರಟಿತು.

"ನಾನು ಪ್ರತಾಪ. ನಾನು ಧ್ರುವನ ಸ್ನೇಹಿತ. ನನ್ನ ಅವನ ಸ್ನೇಹ ಒಂದು ತರಹ ವಿಚಿತ್ರವಾದುದು. ಅದನ್ನು ಯಾರಿಗೂ ಹೇಳುವುದಕ್ಕೆ ಇಷ್ಟವಾಗು ವುದಿಲ್ಲ. ಮಾಲಾ ಮಧುಕರನ ತಂಗಿ. ಮಧುಕರ ಧ್ರುವನ ಗೆಳೆಯ. ನಾನೇ ಉಪಾಯ ಮಾಡಿ, ಮಾಲಾಳ ಮದುವೆ ಧ್ರುವನೊಂದಿಗೆ ನಡೆಯುವಂತೆ ಮಾಡಿದೆ. ಮಾಲಾಳಿಗೆ ಈ ಮದುವೆ ಇಷ್ಟವಿರಲಿಲ್ಲ. ಅವಳು ಭಾರ್ಗವನನ್ನು ಪ್ರೀತಿಸುತ್ತಿದ್ದಳು. ಅವಳು ಧ್ರುವನೊಂದಿಗೆ ಇರಲು ಒಪ್ಪಲೇ ಇಲ್ಲ. ಹೇಗಾದರೂ ಮಾಡಿ, ಅವಳು ಗಂಡನ ಮನೆಯಲ್ಲಿ ಇರುವಂತೆ ಮಾಡಬೇಕು ಎಂದು ನನಗೆ ಅನ್ನಿಸಿತು. ಆದರೆ ಧ್ರುವ ಏಡ್ಸ್ ರೋಗಿ ಎಂದುನನಗೆ

ತಿಳಿದಾಗ, ನನಗೆ ಆದ ಆಘಾತ ಅಷ್ಟಿಷ್ಟಲ್ಲ. ಇನ್ನು ಧ್ರುವ ಮತ್ತೆ ಮದುವೆಯಾದರೂ, ಅವನ ಮಕ್ಕಳಿಗೆ ಏಡ್ಸ್ ರೋಗದ ಭಯವಿದ್ದೇ ಇರುತ್ತದೆ ಎಂಬ ಸತ್ಯ ತಿಳಿದಿತ್ತು. ನಾನು ಮದುವೆಯಾಗಿರಲಿಲ್ಲ. ಧ್ರುವ ಮತ್ತೆ ಮದುವೆಯಾಗುವಂತಿಲ್ಲ. ರಘು ಬೆಂಗಳೂರಿನ ಜೈಲಿನಲ್ಲಿದ್ದು ಅದೇ ತಾನೇ ಹೊರಬಂದಿದ್ದ. ಆಗ ನನಗೆ ಹೊಳೆದ ಪ್ಲಾನ್... ಹೇಗಾದರೂ ಸರಿ. ಮಾಲಾಳನ್ನು ಕೆಡಿಸಿ, ಅವಳು ಇದೇ ಮನೆಯಲ್ಲಿ ಇರುವಂತೆ ಮಾಡುವುದು. ಮಾಲಾಳನ್ನು ಹುಡುಕಿಸುವುದು ಕಷ್ಟವಾಗಲಿಲ್ಲ. ಆ ಊರಿನಿಂದ ರಘು ಮುಖಾಂತರ ಕಿಡ್ನಾಪ್ ಮಾಡಿಸಿದೆ. ನನ್ನ ಹೇಳಿಕೆಯ ಮೇಲೆ ರಘು ಅವಳ ಮೇಲೆ ಅತ್ಯಾಚಾರ ನಡೆಸಿದ. ಇದನ್ನೆಲ್ಲಾ ನಾನು ಧ್ರುವನಿಗೋಸ್ಕರ ಮಾಡಿದೆ. ಯಾಕೆಂದರೆ, ನನಗೆ ಅವನ ಮೇಲೆ ಪ್ರೀತಿ ಹೆಚ್ಚು. ಆ ನಂತರ ಮಾಲಾ ಗರ್ಭಿಣಿಯೆಂದು ತಿಳಿದಾಗ, ಎಲ್ಲರಿಗಂತ ಹೆಚ್ಚಿನ ಖುಷಿಯಾದದ್ದು ನನಗೇ. ನನ್ನ ಧ್ರುವನ ಹೆಂಡತಿ, ಗರ್ಭಿಣಿ! ಅವಳ ಹೊಟ್ಟೆಯಲ್ಲಿ ಬೆಳೆಯುತ್ತಿರುವುದು ಇದೇ ವಂಶದ ಕುಡಿ. ಅದನ್ನು ಉಳಿಸಿಕೊಳ್ಳಬೇಕೆಂದು ಬಹಳ ಪ್ರಯತ್ನ ಪಟ್ಟೆ. ಮಾಲಾ ಬಹಳ ವಿಚಿತ್ರವಾದ ಹುಡುಗಿ. ಅವಳನ್ನು ಒಪ್ಪಿಸುವುದೇ ಕಷ್ಟವಾಯಿತು. ಅವಳು ಅವಳಿ ಮಕ್ಕಳನ್ನು ಹೆತ್ತಳು. ನಮಗೆ ಡಬ್ಬಲ್ ಖುಷಿ. ಪಾರ್ಟಿಯ ರಾತ್ರಿ, ಅವಳು ನಾಪತ್ತೆಯಾಳು. ನನಗೆ ಈಗಲೂ ರಘು ಮೇಲೇ ಅನುಮಾನ. ಅವನು ಅವಳ ಮೈಯ ರುಚಿಯನು ಕಂಡವನು. ಅವಳನ್ನು ಪಾರ್ಟಿಯಿಂದ ಹೊರಕ್ಕೆ ಕರೆದುಕೊಂಡು ಹೋಗಿ, ಎರಡು ದಿನ ಅವಳನ್ನು ಅನುಭವಿಸಿ ಬಿಟ್ಟುಬಿಟ್ಟಿದಾನೆ. ಅವನೇ ಅವಳನ್ನು ಇಲ್ಲಿಗೆ ಕರೆತಂದಿರಬಹುದು. ಮತ್ತೆ ಆದ ಆಘಾತದಿಂದ ಮಾಲಾಳಿಗೆ ಮರೆವು ಉಂಟಾಗಿದೆ. ಈಗ ನಾನು ಹೇಳಿರುವುದೆಲ್ಲಾ ಸತ್ಯ. ನಾನು ಬಹಳ ತಪ್ಪು ಮಾಡಿದ್ದೇನೆ. ಅದರ ಅರಿವು ನನಗಿದೆ. ಆದರೆ ನಾನು ಇದನ್ನೆಲ್ಲ ಮಾಡಿದ್ದು ನನ್ನ ಧ್ರುವನಿಗಾಗಿ. ನನಗೆ ಏನು ಶಿಕ್ಷೆಯನ್ನಾದರೂ ಕೊಡು. ಆದರೆ ಧ್ರುವನನ್ನು ಸುಖವಾಗಿರುವಂತೆ ಮಾಡು. ಮಾಲಾ ಮತ್ತು ಧ್ರುವ ಒಂದಾಗುವಂತೆ ಮಾಡು. ಅವನು ಮಾಲಾಳನ್ನು ಪ್ರೀತಿಸುತ್ತಾನೆ. ಅವಳ ಮಕ್ಕಳನ್ನು ಪ್ರೀತಿಸುತ್ತಾನೆ. ಅವನ ಪ್ರೀತಿಯನ್ನು ಅವನಿಗೆ ಕೊಡು."

ಪ್ರತಾಪನ ಪ್ರಾರ್ಥನೆ ಮುಗಿದಿತ್ತು. ತನ್ನ ಹಿಂದೆ ಖಟ್... ಖಟ್. ಸದ್ದು ಕೇಳಿದಾಗ ಪ್ರತಾಪ ಬೆಚ್ಚಿ ಬಿದ್ದು ತಿರುಗಿ ನೋಡಿದ. ಹಿಂದೆ ರಘು ನಿಂತಿದ್ದ.

ಇವನು ಪೆದ್ದು ನಗೆ ನಕ್ಕ. "ನನಗೆ ಗೊತ್ತಿತ್ತು. ನೀನು ಇಲ್ಲಿಗೆ ಬಂದಿದೀಯ ಅಂತ. ನಿನ್ನ ಪ್ರಾರ್ಥನೆ ಮುಗೀತಾ ?"

"ನನ್ನ ಹಿಂದೆ ಬರುವ ಅವಶ್ಯಕತೆ ಏನಿತ್ತು? ಹೋಗಲಿ ಬಿಡು.ನಾನು ಮಧುಗಿಂತ ಮೊದಲೇ ಪ್ರಾರ್ಥನೆ ಸಲ್ಲಿಸಿದ್ದಾಯಿತು. ಈಗ ನಾನು ಹೋಗ್ತೀನಿ. ಇಲ್ಲದಿದ್ದರೆ ಅವರುಗಳಿಗೆ ಅನುಮಾನ ಬರುತ್ತೆ. ನೀನೂ ನಿನ್ನ ತಪ್ಪನ್ನು ಒಪ್ಪಿಕೊಂಡು, ಪ್ರಾರ್ಥನೆಯನ್ನು ಮಾಡು. ಮಾಲಾ ನಮ್ಮ ಮನೆಗೆ ವಾಪಸ್ಸು ಬರುವಂತೆ ಪ್ರಾರ್ಥಿಸು."

"ನನಗೆ ಇದರಲ್ಲೆಲ್ಲಾ ನಂಬಿಕೆ ಇಲ್ಲ. ನಿನಗೂ ನಂಬಿಕೆ ಇರಲಿಲ್ಲ. ಆದರೆ ಧ್ರುವನಿಗಾಗಿ ನೀನು ಈ ಪ್ರಾರ್ಥನೆ ಮಾಡಿದೆ ಎಂದ ಮೇಲೆ, ನಾನು ಮಾಲಾಳಿಗಾಗಿ ಪ್ರಾರ್ಥನೆಯನ್ನು ಮಾಡ್ತೀನಿ" ಎಂದು ಹೇಳಿ ಅಲ್ಲಿದ್ದ ಕುರ್ಚಿಯ ಮೇಲೆ ಕುಳಿತ. ಅವನನ್ನು ಒಬ್ಬನನ್ನೇ ಬಿಟ್ಟು ಪ್ರತಾಪ ಮತ್ತೆ ಬಂಗಲೆಯ ಕಡೆ ಹೊರಟು ಹೋದ. ರಘು ಕಣ್ಣು ಮುಚ್ಚಿ ಕುಳಿತ.

"ನನ್ನ ಹೆಸರು ರಘು. ನಾನು ಧ್ರುವನ ತಮ್ಮ. ನನಗೂ ಪ್ರತಾಪನಿಗೂ ಅಷ್ಟಕ್ಕಷ್ಟೇ. ಪ್ರತಾಪ ಹಾಗೂ ಧ್ರುವನ ಸ್ನೇಹ ಅಸಹ್ಯಕರವಾದದ್ದು. ಆ ವಿಷಯ ನನಗೆ ಗೊತ್ತಿರುವುದರಿಂದಲೇ ಪ್ರತಾಪ ನನಗೆ ಕೇಳಿದಾಗಲೆಲ್ಲಾ ಹಣ ಕೊಡುತ್ತಾನೆ. ಮಾಲಾ, ಧ್ರುವರ ಮದುವೆ ನಡೆದಾಗ ನಾನು ಜೈಲಿನಲ್ಲಿದ್ದೆ. ಯಾರೋ ಮಾಡಿದ ರೇಪ್ ಕೇಸಿನಲ್ಲಿ ಸಿಕ್ಕಿಬಿದ್ದು ಮೂರು ವರ್ಷ ಜೈಲಿನಲ್ಲಿದ್ದೆ. ಕೇಳಿದವರಿಗೆ ಲಂಡನ್‌ನಲ್ಲಿದ್ದೆ ಅಂತ ಹೇಳ್ತಿದ್ದರು. ಮಾಲಾ, 'ಜ್ವಾಲಾ' ಅಂತ ಹೆಸರನ್ನು ಬದಲಾಯಿಸಿಕೊಂಡು ಯಾವುದೋ ಆಫೀಸಿನಲ್ಲಿ ಕೆಲಸದಲ್ಲಿ ರುವುದನ್ನು ಪ್ರತಾಪ ಪತ್ತೆ ಹಚ್ಚಿದ್ದ. ಆ ಊರಿಗೆ ನನ್ನನ್ನು ಕಳಿಸಿ, ಮಾಲಾಳೊಡನೆ ಸ್ನೇಹವನ್ನು ಬೆಳೆಸಿ, ಹೇಗಾದರೂ ಅವಳನ್ನು ಬಾಂಬೆಗೆ ಬರುವಂತೆ ಮಾಡಬೇಕು ಎಂದು ಹೇಳಿದ್ದ. ಆದರೆ ಮಾಲಾ ಅಲ್ಲ ಜ್ವಾಲಾ... ನನ್ನ ಸ್ನೇಹಕ್ಕೆ ಮಣಿಯಲಿಲ್ಲ. ಆಗ ಪ್ರತಾಪನ ಮಾತಿನಂತೆ ಅವಳನ್ನು ಕಿಡ್ನಾಪ್ ಮಾಡಿದೆ. ಕಾರಿನಲ್ಲಿ ಅವಳ ಪಕ್ಕ ಕುಳಿತಿದ್ದಾಗ, ನನಗೆ ಅವಳನ್ನು ಅನುಭವಿಸಬೇಕೆಂಬ ಆಸೆ ಹೆಚ್ಚಿತು. ಅವಳ ದೇಹ ಸೌಂದರ್ಯ ನನ್ನನ್ನು ಹುಚ್ಚನನ್ನಾಗಿ ಮಾಡಿತು. ಹೋಟೆಲ್ಲೊಂದರಲ್ಲಿ ಅವಳನ್ನು ಎರಡು ದಿನ ನನ್ನೊಡನೆ ಇಟ್ಟುಕೊಂಡು ಮನಸಾರೆ ಅನುಭವಿಸಿದೆ. ಎರಡು ದಿನಗಳ ನಂತರ ಅವಳನ್ನು ನಮ್ಮ ಮನೆಯ ಫ್ಲಾಟ್‌ನಲ್ಲಿ ಬಿಟ್ಟು, ಮಹಿಳಾ ಸಂಘದ

ಕಾರ್ಯದರ್ಶಿಗೆ ಫೋನು ಮಾಡಿದೆ, ಅಲ್ಲಿನ ಅಧ್ಯಕ್ಷೆ ನನ್ನ ತಾಯಿ ಸುಮಿತ್ರಾ ದೇವಿ. ಆಕೆ ದೊಡ್ಡ ಮನಸ್ಸಿನಿಂದ ಸೊಸೆಯನ್ನು ಒಪ್ಪಿಕೊಂಡಳು. ನಂತರ ಮಾಲಾ ಗರ್ಭಿಣಿಯೆಂದು ತಿಳಿದಾಗ ನನಗಾದ ಸಂತೋಷ ಅಷ್ಟಿಷ್ಟಲ್ಲ. ಏಕೆಂದರೆ ಮಾಲಾ ಗರ್ಭಿಣಿಯಾಗಿರುವುದು ಹೆಮ್ಮೆಯ ವಿಷಯವಾಗಿತ್ತು. ನನ್ನ ಅಣ್ಣ ಧ್ರುವ ಏಡ್ಸ್ ರೋಗಿ ಎನ್ನುವುದು ನನಗೆ ತಿಳಿದಿತ್ತು... ಈಗ ನಾನು ತಂದೆಯಾಗಲಿರುವ ವಿಷಯ ತಿಳಿದು ಉತ್ತೇಜಿತನಾಗಿದ್ದೆ. ಮಾಲಾಳನ್ನು ಮದುವೆಯಾಗುವ ವಿಷಯವನ್ನು ಅದುಮಿಟ್ಟಿದ್ದೆ. ಯಾಕೆಂದರೆ ನಾನು ರೇಪಿಸ್ಟ್, ಕಾನೂನಿನ ಪ್ರಕಾರ ನನಗೆ ಜೈಲು ಶಿಕ್ಷೆ ಗ್ಯಾರಂಟಿ... ಇದೇ ಸಮಯದಲ್ಲಿ ನಾನು ಆಕ್ಸಿಡೆಂಟ್‌ನಲ್ಲಿ ಒಂದುಕಾಲನ್ನು ಕಳೆದುಕೊಂಡೆ. ನನ್ನ ತಪ್ಪಿಗೆ ಶಿಕ್ಷೆಯಾಯಿತು ಎಂದುಕೊಂಡೆ. ಈಗ ನನಗೆ ಹಣವಿದೆ, ಶ್ರೀಮಂತಿಕೆಯಿದೆ. ಆದರೆ ನನ್ನನ್ನು ಮದುವೆಯಾಗಲು ಯಾವ ಹೆಣ್ಣು ಒಪ್ಪದಿರಬಹುದು. ಮಾಲಾ ನನ್ನನ್ನು ಮದುವೆಯಾದರೆ ಚೆನ್ನ ಅನ್ನಿಸಿತು. ಮಾಲಾ ನಮ್ಮ ಮನೆಗೆ ಹೇಗಾದರೂ ಸರಿ, ಬಂದರೆ ಸರಿ. ಒಂದಲ್ಲ ಒಂದು ದಿನ ಅವಳು ಮತ್ತೆ ನನ್ನವಳಾಗುವಳೆಂಬ ಭರವಸೆ ನನಗಿದೆ. ಹೀಗೆಲ್ಲಾ ಯೋಚಿಸುವುದು ತಪ್ಪು ಎಂದು ನನಗೂ ಗೊತ್ತು. ಆದರೆ ಏನು ಮಾಡಲಿ ? ನಾನೂ ಮನುಷ್ಯನೇ ತಾನೇ ? ಕ್ಷಮಿಸೋಕೆ ನೀವು ಇದೀರಲ್ಲ... ಆದರೆ ಮಾಲಾ ಇಲ್ಲಿಗೆ ಹೇಗೆ ಬಂದಳು ? ಯಾರ ಜೊತೆ ಬಂದಳು ? ಅನ್ನೋದು ನನಗೆ ತಿಳಿಯದು. ಪ್ರತಾಪನಿಗೆ ನನ್ನ ಮೇಲೆ ಅನುಮಾನ. ನನ್ನ ತಾಯಿಯ ಮೇಲೂ ಹೌದೆ... ಮಾಲಾ ನಾಪತ್ತೆಯಾಗಿರುವುದರಲ್ಲಿ ನನ್ನ ಕೈವಾಡ ಏನೂ ಇಲ್ಲ. ಆದರೆ ನನ್ನ ಒಂದು ಆಸೆಯನ್ನು ಪೂರೈಸುವಂತೆ ಮಾಡು. ಮಾಲಾ ನನ್ನ ಪತ್ನಿಯಾಗಬೇಕು. ನನ್ನ ಮಕ್ಕಳನ್ನು ನಾನೇ ಸಾಕುವಂತೆ ಆಗಬೇಕು. ಇಷ್ಟು ಸಾಕು. ಹೇಗೂ ಮುಂದೆ ಎಲ್ಲಾ ಆಸ್ತಿಯೂ ನನಗೇ. ನನ್ನ ಮಕ್ಕಳೇ ವಾರಸುದಾರರು. ನನ್ನ ಮನಸ್ಸಿನಲ್ಲಿ ಏನಿದೆ ಅಂತ ಪ್ರತಾಪನಿಗೆ ಈಗಲೇ ತಿಳಿಯುವುದು ಬೇಡ. ತಿಳಿದರೆ, ಮಾಲಾ ನನಗೆ ದಕ್ಕದಂತೆ ಮಾಡುತ್ತಾನೆ. ಧ್ರುವನಿಗಾಗಿ ಅವನು ನನ್ನನು ಕೊಲ್ಲಿಸಲೂ ಹಿಂಜರಿಯುವುದಿಲ್ಲ. ಒಂದು ವಿಷಯ ಗೊತ್ತಾ? ಪ್ರತಾಪ ಮಾಲಾಳನ್ನು ಕೊಲ್ಲಿಸಿ ಈ ನಾಟಕವನ್ನಾಡು ತ್ತಿದ್ದಾನೆ ಅಂತ ಅಂದುಕೊಂಡಿದ್ದೆ. ಥ್ಯಾಂಕ್ ಗಾಡ್. ನನ್ನ ಮಾಲಾ ಬದುಕಿದ್ದಾಳೆ. ನನ್ನ ಮಕ್ಕಳ ತಾಯಿ ಬದುಕಿದ್ದಾಳೆ."

ರಘು ತನ್ನ ಪ್ರಾರ್ಥನೆಯನ್ನು ಅರಿಕೆಯನ್ನು ಮುಗಿಸಿ, ಅಲ್ಲಿಂದ ಮನೆಗೆ ನಿಧಾನವಾಗ ನಡೆದು ಬಂದ. ಅವನ ಹಿಂದೆ ಯಾರೋ ನಡೆದು ಬರುವಂತೆ ಅನ್ನಿಸಿತ್ತು. ತಿರುಗಿ ನೋಡಿದ. ಬಿಳಿಯ ಬಟ್ಟೆಯನ್ನು ಧರಿಸಿದ್ದ ಗಡ್ಡಧಾರಿ ವ್ಯಕ್ತಿಯೊಬ್ಬರು ಅವನಿಗೆ ಬೆನ್ನು ಮಾಡಿ ನಿಂತರು. ಹತ್ತಿರ ಹೋಗಿ ನೋಡಲು ಭಯವೆನಿಸಿತ್ತು. ವೇಗವಾಗಿ ನಡೆದು ಮನೆಯನ್ನು ಸೇರಿ ಉಸಿರುಬಿಟ್ಟ."

"ಕುಂಟ್ಕೊಂಡು ಎಲ್ಲಿಗೆ ಹೋಗಿದ್ದೆ? ಜಾಗ ಎಲ್ಲಾ ಬರೀ ಉಬ್ಬು ದಿಣ್ಣೆ, ತಗ್ಗು ಅಲ್ಲದೇ ಗೊತ್ತಿಲ್ಲದ ಜಾಗ. ಮತ್ತೆ ಬಿದ್ದು ಗಿದ್ದು ಪೆಟ್ಟು ಮಾಡಿಕೊಂಡ್ರೆ?"

"ನಾನು ನಿನ್ನನ್ನು ಹುಡುಕಿಕೊಂಡು ಬಂದೆ. ಧ್ರುವ ಫೋನು ಮಾಡಿದ್ದ" ಸುಳ್ಳು ಹೇಳಿದ.

"ಏನಂತೆ? ನಾಳೆ ನಾಡಿದ್ದರಲ್ಲಿ ಬರ್ತೀವಿ ಅಂತ ಹೇಳಬೇಕಾಗಿತ್ತು."

"ಹಾಗೇ ಹೇಳಿದೆ. ಅಮ್ಮನ ಕಂಡೀಷನ್ ಹಾಗೇ ಇದೆಯಂತೆ..." ಅಷ್ಟರಲ್ಲಿ ವತ್ಸಲಾ ಒಳಗಿನ ರೂಮಿನಿಂದ ಬಂದಳು. ಅವಳ ಹಿಂದೆಯೇ ಅವಳ ಗಂಡು ಮಕ್ಕಳೂ ಬಂದರು. ಒಂದೇ ತರಹ ಇರುವ ಜೋಡಿ ಮಕ್ಕಳನ್ನು ಪ್ರತಾಪ ಬೆರಗಿನಿಂದ

"ನಮ್ಮ ಎಸ್ಟೇಟ್ ಹೇಗೆ ಅನ್ನಿಸ್ತು?" ಎಷ್ಟು ದೂರ ಹೋಗಿದ್ರಿ?"

"ತುಂಬಾ ದೂರ ಓಡಾಡಲು ಆಗಲಿಲ್ಲ. ಅಭ್ಯಾಸವಿಲ್ಲ ನೋಡಿ. ಚೆನ್ನಾಗಿದೆ. ಆದರೆ ಯಾರೂ ಕೆಲಸಗಾರರೇ ಇಲ್ಲ..." ಸಂಶಯವನ್ನು ಹೊರಗೆಡವಿದ.

"ಈಗ ಸೀಸನ್ ಅಲ್ಲ. ವಾರದಲ್ಲಿ ಎರಡು ಸಾರಿ ಮಾತ್ರ ಬರುತ್ತಾರೆ. ಹೇಳಿ ಕಳಿಸಿದರೆ ಬರ್ತಾರೆ. ಇಲ್ಲೇ ಹತ್ತಿರದಲ್ಲಿ ಇದಾರೆ."

"ಮಂದಿರ ತುಂಬಾ ಚೆನ್ನಾಗಿದೆ.. ಆಶ್ರಮದಲ್ಲಿ ಯಾರೋ ಇದ್ದ ಹಾಗಿತ್ತು."

"ಅವನು ಒಬ್ಬ ತಲೆ ತಿರುಕ ಸ್ವಾಮಿ. ಮನಸ್ಸು ಬಂದಾಗ ಬರ್ತಾನೆ. ಹೋಗ್ತಾನೆ. ತನ್ನ ಪಾಡಿಗೆ ತಾನು ಇರ್ತಾನೆ. ಯಾರಿಗೂ ತೊಂದರೆ ಮಾಡುಲ್ಲ."

"ಈ ಹುಡುಗರು ಯಾರೋ ತಿಳಿಯಲಿಲ್ಲ."

"ಇವರಿಬ್ಬರೂ ನನ್ನ ಮಕ್ಕಳು..." ಸುಮ್ಮನೆ ನಿಂತಿರುವುದನ್ನು ಗಮನಿಸಿದ.

"ಓ... ಏನು ಮಾಡ್ತಿದ್ದಾರೆ?"

"ಏನೂ ಇಲ್ಲ." ಏನೂ ಇಲ್ಲ. ಈ ಮಾತು ಅವನಿಗೆ ಆಶ್ಚರ್ಯವನ್ನುಂಟು ಮಾಡಿತ್ತು. ಈ ಕಾಲದಲ್ಲಿ ವಿದ್ಯಾಭ್ಯಾಸ, ಉದ್ಯೋಗಕ್ಕೆ ಹೆಚ್ಚು ಪ್ರಾಧಾನ್ಯತೆ ಇರುವಾಗ ಈ ಆರೋಗ್ಯವಂತ ಮಕ್ಕಳು ಹಾಯಾಗಿ ತಿಂದುಂಡುಕೊಂಡು

ಕಾಲ ಕಳೆಯುವುದೆಂದರೆ... ಅವನ ಮುಖದ ನೆರಿಗೆಗಳನ್ನು ವತ್ಸಲ ಗಮನಿಸಿದಳು. ಅಡಿಗೆಯವಳು ಎಲ್ಲರಿಗೂ ಕಾಫಿಯನ್ನು ತಂದಿತ್ತಳು. ಎಲ್ಲರೂ ಮೌನವಾಗಿ ಕಾಫಿಯನ್ನು ಕುಡಿದರು. ಮಾಲಾ ಮಾತ್ರ ರೂಮಿನಿಂದ ಹೊರಕ್ಕೆ ಬರಲಿಲ್ಲ. ರಘು ಆಗಾಗ್ಗೆ ರೂಮಿನ ಕಡೆ ನೋಡುತ್ತಿದ್ದ.

ಮಧು, ವಸುಧಾ ಇಬ್ಬರೂ ಮಂದಿರದ ಕಡೆ ಹೋಗಿಬರುತ್ತೇವೆಂದ ಹೊರಟರು. ಬಲವಂತವಾಗಿ ಮಾಲಾಳನ್ನು ಹೊರಡಿಸಿದರು. ಅವರು ಗಳಿಗಿಂತ ಮುಂಚೆ ನಾಗೇಶ ಯೋಗೀಶ ಕುಣಿಯುತ್ತಾ ಹೊರಟರು.

"ನೀವು ಹೋಗೊಲ್ವಾ?" ವತ್ಸಲ ಕೇಳಿದಳು.

"ಇಲ್ಲ. ಈಗ ತಾನೇ ಬಂದಿದ್ದೀವಿ. ಸುಸ್ತಾಗಿದೆ..."

"ಹಾಗಾದ್ರೆ ಸ್ವಲ್ಪ ಹೊತ್ತು ರೆಸ್ಟ್ ತಗೊಳ್ಳಿ... ಇಲ್ಲಿ ಗೆಸ್ಟ್ ರೂಂ ಇದೆ ಎಂದು ಬಲಗಡೆ ಇದ್ದ ರೂಮಿನ ಕಡೆ ಮಾಡಿದಳು. ಇಬ್ಬರೂ ಅನುಮಾನಿಸುತ್ತಾ ಗೆಸ್ಟ್ ರೂಂನೊಳಕ್ಕೆ ಹೋಗಿ ಬಾಗಿಲು ಹಾಕಿಕೊಂಡರು. ಒಳಗೆ ಹೆಚ್ಚು ಬೆಳಕಿರಲಿಲ್ಲ. ಅಲ್ಲಿದ್ದ ಮಂಚದ ಮೇಲೆ ಉರುಳಿಕೊಂಡರು. ಆಯಾಸಕ್ಕೆ ನಿದ್ದೆ ಬಂದ ಹಾಗಿತ್ತು. ಅಷ್ಟರಲ್ಲಿ ಯಾರೋ ಒಳಕ್ಕೆ ಮತ್ತೊಂದು ವ್ಯಕ್ತಿ ಬಂದರೆಂದೆನಿಸುತ್ತಿತ್ತು. ಕನಸೋ ಭ್ರಮೆಯೋ ಎಂದು ತಿಳಿಯುವಷ್ಟರಲ್ಲಿ ಆ ವ್ಯಕ್ತಿ ಪ್ರತಾಪನ ಮೂಗಿಗೆ ಏನೋ ಘಾಟು ವಾಸನೆಯ ವಸ್ತುವೊಂದನ್ನು ಹಿಡಿಯಿತು. ಅವನು ರಘು ರಘು ಎಂದು ಕರೆಯುವಷ್ಟರಲ್ಲಿ ಅವನಿಗೆ ಜ್ಞಾನ ಹೋಗಿತ್ತು. ಮಬ್ಬು ಬೆಳಕಿನಲ್ಲಿ ರಘು ಆ ವ್ಯಕ್ತಿಯನ್ನು ನೋಡಿದ. ಅದೇ ಗಡ್ಡಧಾರಿ... ಗಾಬರಿಯಾಯಿತು. ಕಷ್ಟ ಪಟ್ಟು ಏಳುವಷ್ಟರಲ್ಲಿ ಅ ವ್ಯಕ್ತಿ ಅವನನ್ನು ಹಿಡಿದು ಅವನಿಗೂ ಪ್ರಜ್ಞೆ ತಪ್ಪಿಸಿತ್ತು.

ಮತ್ತೆ ಇಬ್ಬರಿಗೂ ಪ್ರಜ್ಞೆ ಬಂದಾಗ, ಒಂದು ದೊಡ್ಡ ಕೊಟ್ಟಿಗೆಯ ಕಂಬಕ್ಕೆ ಇಬ್ಬರನ್ನೂ ಕಟ್ಟಿಹಾಕಿರುವುದು ತಿಳಿಯಿತು. ಬಾಯಿಗೆ ಬಟ್ಟೆಯನ್ನು ತುರುಕ ಲಾಗಿತ್ತು. ಎದುರಿಗೆ ವತ್ಸಲಾ ನಿಂತಿದ್ದಳು. ಪ್ರತಾಪ ಕೆಟ್ಟ ದೃಷ್ಟಿಯಿಂದ ನೋಡಿದ. ರಘು ಹೆದರಿದ್ದ.

ಇವಳೇಕೆ ಹೀಗೆ ಮಾಡಿದಳೆಂದು ಇಬ್ಬರಿಗೂ ತಿಳಿಯಲಿಲ್ಲ. ಯೆ... ಯೆ... ಎಂದು ಸದ್ದು ಮಾಡಿದರು. ಬಿಡಿಸಿಕೊಳ್ಳಲು ಹೆಣಗಾಡಿದರು. ಎರಡೂ ಕೈಗಳನ್ನು ಹಿಂದಕ್ಕೆ ಸೇರಿಸಿ ಕಟ್ಟಲಾಗಿತ್ತು. ಕಾಲುಗಳನ್ನು ಕಂಭಕ್ಕೆ ಬಿಗಿದಿದ್ದರು. ಮಾಲಾ... ಅಂತ ಕರೆದೊಡನೆ ಅಲ್ಲೆಲ್ಲೋ ಇದ್ದ ಮಾಲಾ ಅಲ್ಲಿಗೆ ಬಂದು ನಿಂತಳು.

"ನಿನ್ನ ಅಪರಾಧಿಗಳನ್ನು ನಿನ್ನ ಎದುರಿಗೆ ನಿಲ್ಲಿಸಿದ್ದೀನಿ. ಅದೇನು ಶಿಕ್ಷೆ ಕೊಡ್ತೀಯೋ ಕೊಡು" ಮೊದಲು ಅವಳು ಪ್ರತಾಪನ ಬಳಿಗೆ ಬಂದಳು. ಅವನು ರೋಷದಿಂದ ಕಣ್ಣುಗಳನ್ನು ಅರಳಿಸಿದ. ಎರಡೂ ಕೆನ್ನೆಗಳಿಗೂ ಪಟಪಟನೆ ಬಾರಿಸಿದಳು. "ನಿನಗೆ ನಾನೆಂದೂ ಹೆದರಿರಲಿಲ್ಲ ಪ್ರತಾಪ, ಸಮಯಕ್ಕಾಗಿ ಕಾಯುತ್ತಿದ್ದೆ. ನನ್ನನ್ನು ಅಸಹಾಯಕಳನ್ನಾಗಿ ಮಾಡಿ ಗೆದ್ದೆ ಅಂತ ಅಂದುಕೊಂಡಿದ್ದೆ ಅಲ್ವಾ? ಈಗ ನನ್ನ ಎದುರಿಗೆ ಅಸಹಾಯಕತೆಯಿಂದ ನಿಂತಿರುವವನು ನೀನು..." ಮತ್ತೆ ವಾಪಸ್ ಹೊಡೆದಳು. ಅವನು ತಪ್ಪಿಸಿಕೊಳ್ಳಲಾಗದೇ ಹೆಣಗಾಡಿದ. ಕಟ್ಟುಗಳನ್ನು ಬಿಚ್ಚಿಕೊಳ್ಳುವಂತೆ ಒದರಾಡಿದವನನ್ನು ಮತ್ತೆ ಮತ್ತೆ ಹೊಡೆದಳು. "ನಿನ್ನ ರಹಸ್ಯವೆಲ್ಲಾ ನನಗೆ ತಿಳಿದಿದೆ. ನಿನ್ನ ಧ್ರುವನ ಸ್ನೇಹ ಎಂಥದೂ ಅಂತ ಸಹ ಗೊತ್ತಿದೆ. ಈಗ ನೀವಿಬ್ರೂ ಏಡ್ಸ್ ರೋಗಿಗಳು. ನಿಮ್ಮಿಂದ ಯಾರಿಗೂ ಪ್ರಯೋಜನವಿಲ್ಲ. ಈ ದಿನ ಇಲ್ಲಿ ಧ್ರುವನೂ ಇರಬೇಕಾಗಿತ್ತು. ಏನೋ ಬಚಾವಾಗಿದ್ದಾನೆ" ಎನ್ನುತ್ತಾ ಅವನ ಬಾಯಿಗೆ ತುರುಕಿದ್ದ ಬಟ್ಟೆಯನ್ನು ತೆಗೆದಳು.

"ಏನಾದ್ರೂ ಬೊಗಳೋದು ಇದ್ದರೆ ಬೊಗಳಿ ಬಿಡು" ಎಂದಳು.

"ಇದೆಲ್ಲಾ ಏನು? ಮೋಸದಿಂದ ಕರೆಸಿ, ಈ ಹೆಂಗಸಿನೊಂದಿಗೆ ಸೇರಿ, ನನಗ್ಯಾಕೆ ಹೊಡೀತೀಯ. ನನ್ನ ತಪ್ಪೇನು?" ಆರ್ಭಟಿಸಿದ.

"ನಿನ್ನ ತಪ್ಪು ಏನು ಅಂತ ಸಧ್ಯದಲ್ಲೇ ಗೊತ್ತಾಗುತ್ತೆ" ಎನ್ನುತ್ತಾ ರಘುವಿನ ಎದುರಿಗೆ ಬಂದು ಅವನ ಮುಖಕ್ಕೆ ಉಗುಳಿದಳು.

"ನಿನ್ನ ಮೈ ಮುಟ್ಟೋಕೂ ನನಗೆ ಅಸಹ್ಯ" ಎನ್ನುತ್ತಾ ಬಾರು ಕೋಲಿನಿಂದ ಅವನನ್ನು ಥಳಿಸಿದಳು. ಅವನು ವಿಲವಿಲನೆ ಒದ್ದಾಡಿದ. ಸುಸ್ತಾಗುವಷ್ಟು ಹೊಡೆದು ಕೋಲನ್ನು ಬಿಸಾಡಿದಳು. ಅಷ್ಟರಲ್ಲಿ ಪಕ್ಕದಲ್ಲಿದ್ದಂತೆ ಯಾರೋ ಮಾತನಾಡುವ ಧ್ವನಿ ಕೇಳಿಸಿತು. ಕೆಲವೇ ಕ್ಷಣಗಳಲ್ಲಿ ಅದು ತನ್ನದೇ ಧ್ವನಿ ಎಂದು ಪ್ರತಾಪನಿಗೆ ಅರ್ಥವಾಗಿತ್ತು. ಮಂದಿರದಲ್ಲಿ ಪ್ರತಾಪ ಹೇಳಿದ ಮಾತು ಗಳನ್ನೆಲ್ಲಾ ರೆಕಾರ್ಡ್ ಮಾಡಲಾಗಿತ್ತು. ಅವನ ಹೇಳಿಕೆಯನ್ನು ಬಯಲು ಮಾಡಿದಳು.

"ಏನು ಈ ಮೋಸ? ನಾನು ನಿಮ್ಮಿಬ್ಬರನ್ನೂ ಸುಮ್ಮನೆ ಬಿಡುವುದಿಲ್ಲ" ರೇಗಿದ.

"ನೀನೇ ಕನ್‌ಫೆಷನ್ ಮಾಡಿಕೊಂಡಿದ್ದೀಯ... ನಿನಗೇ ಗೊತ್ತು" ನಕ್ಕಳು.

"ಮಾಲಾ... ಇದು ವಂಚನೆ... ಪ್ಲೀಸ್ ನನ್ನನ್ನು ಬಿಟ್ಟು ಬಿಡು. ನಿನಗೆ ಏನು ಬೇಕೋ ಹೇಳು... ನನ್ನ ಆಸ್ತಿಯನ್ನೆಲ್ಲಾ ನಿನ್ನ ಹೆಸರಿಗೆ ಬರೆದುಕೊಡ್ತೀನಿ" ಕೇಳಿಕೊಂಡ.

"ನಿನ್ನ ಆಸ್ತಿಯಲ್ಲಿ ಒಂದು ಕವಡೆ ಕೂಡಾ ನನಗೆ ಬೇಡ. ನಿನ್ನ ದೃಷ್ಟಿ ಬಿದ್ದು ನಾನು ಸಾಕಷ್ಟು ಅನುಭವಿಸಿದ್ದೇನೆ.... ಅದನ್ನೆಲ್ಲ ತೀರಿಸಲೇಬೇಕು."

"ನಾನೇನು ಮಾಡಿದೆ. ಇದಕ್ಕೆಲ್ಲ ಕಾರಣ ನಿನ್ನ ಅಣ್ಣ... ಮಧು."

"ಮಧು ಸಹ ನಿನ್ನ ಬಲೆಯಲ್ಲಿ ಬಿದ್ದಿದ್ದ. ಅವನನ್ನು ಎತ್ತಿದವಳೂ ನಾನೇ..."

"ಅಂದ್ರೆ ನೀವುಗಳೆಲ್ಲ ಸೇರಿ... ಈ ಪ್ಲಾನ್ ಮಾಡಿದ್ರಾ? ವಂಚಕರು ನೀವು..."

"ಮುಳ್ಳನ್ನು ಮುಳ್ಳಿನಿಂದಲೇ ತೆಗೆಯಬೇಕು. ವಂಚಕರನ್ನು ವಂಚನೆಯಿಂದಲೇ ಹಿಡಿಯಬೇಕು..." ತೋರು ಬೆರಳನ್ನು ಅವನ ಮುಖದ ಮುಂದೆ ತೋರಿಸಿದಳು.

"ಪ್ಲೀಸ್ ಬಿಟ್ಟುಬಿಡು ಮಾಲಾ. ತಪ್ಪಾಯಿತು. ಧ್ರುವ ನನಗಾಗಿ ಕಾಯ್ತಾ ಇರ್ತಾನೆ. ಆಂಟಿಗೆ ಹುಷಾರಿಲ್ಲ. ಇನ್ನು ಮುಂದೆ ನಾವೆಂದೂ ನಿನ್ನ ತಂಟೆಗೆ ಬರೋಲ್ಲ."

"ಈಗ ನನಗಾಗಿರುವ ಅನ್ಯಾಯವನ್ನು ನೀವು ಯಾವ ರೀತಿಯಿಂದಲೂ ತುಂಬಿ ಕೊಡಲು ಸಾಧ್ಯವಿಲ್ಲ..." ಎನ್ನುತ್ತಾ ಹರಿತವಾದ ಚಾಕುವೊಂದನ್ನು ಎತ್ತಿಕೊಂಡು, ಪ್ರತಾಪನ ಮೈಮೇಲೆ ಊರಿ ಗೀರಿದಳು. ಗಾಯಗಳಿಂದ ರಕ್ತ ಒಸರಲು ಪ್ರಾರಂಭವಾಗಿತ್ತು... ಅವನು ಕಿರುಚಾಡಲು ಪ್ರಾರಂಭಿಸಿದ. ಅವನ ಬಾಯಿಗೆ ಬಟ್ಟೆಯನ್ನು ತುರುಕಿದಳು.

ರಘು ಪ್ರತಾಪನಿಗಾದ ಅವಸ್ಥೆಯನ್ನು ಕಂಡು ಹೆದರಿಕೆಯಿಂದ ಮೂರ್ಛೆ ಹೋಗಿದ್ದ. ಮಾಲಾ ನಕ್ಕಳು. ಮತ್ತೆ ಅವನಿಗೆ ಎಚ್ಚರವಾದಾಗ ಅದೇ ಗಡ್ಡಧಾರಿ ವ್ಯಕ್ತಿ ಅವನ ಮುಖಕ್ಕೆ ನೀರನ್ನೆರಚುತ್ತಿದ್ದ. ರಘು ಕಣ್ಣು ಬಿಟ್ಟ. ತಂಗಾಳಿ ಬೀಸಿ ಚಳಿಯಾಗುತ್ತಿದೆ ಎಂದೆನಿಸಿತು. ತನ್ನ ಮೈಮೇಲೆ ದೃಷ್ಟಿ ಹಾಯಿಸಿದ. ತನ್ನ ತೊಡೆಗಳ ಮಧ್ಯೆ ವಿಪರೀತ ನೋವಾಗುತ್ತಿದೆ ಎಂದೆನಿಸಿತ್ತು. ಮತ್ತೊಮ್ಮೆ ಕಷ್ಟಪಟ್ಟು ನೋಡಿಕೊಂಡ. ಸೊಂಟದ ಕೆಳಗೆ ಅವನು ಪೂರ್ಣ ನಗ್ನನಾಗಿದ್ದ. ಅವನ ಜನನಾಂಗವನ್ನು ಯಾರೋ ಕತ್ತರಿಸಿ ಹಾಕಿದ್ದರು. ಅಲ್ಲಿಂದ ರಕ್ತ

ಒಸರುತ್ತಿತ್ತು. ಆ ಗಡ್ಡಧಾರಿ ವ್ಯಕ್ತಿ ಅವನ ಬಾಯಿಗೆ ತುರುಕಿದ್ದ ಬಟ್ಟೆಯನ್ನು ತೆಗೆದ...

"ಪ್ಲೀಸ್ ಹೆಲ್ಪ್ ಮೀ... ಹೆಲ್ಪ್ ಮೀ..." ರಘು ಒದರಾಡಿದ.

"ನಾನು ಏನೂ ಸಹಾಯ ಮಾಡಲಾರೆ. ನಿಮ್ಮ ಅಪರಾಧಕ್ಕೆ ಇದೇ ತಕ್ಕ ಶಿಕ್ಷೆ... ಮಂದಿರದಲ್ಲಿ ನೀವು ಹೇಳಿದುದೆಲ್ಲ ರೆಕಾರ್ಡ್ ಆಗಿದೆ. ಇನ್ನು ಮುಂದೆ ನೀನು ಯಾವ ಹೆಂಗಸನ್ನೂ ರೇಪ್ ಮಾಡಲಾರೆ" ಪಟಪಟನೆ ಕೆನ್ನೆಗೆ ಬಾರಿಸಿದ.

"ನನ್ನದು ತಪ್ಪಾಯಿತು. ಪ್ಲೀಸ್ ನನ್ನನ್ನು ಡಾಕ್ಟರ ಬಳಿಗೆ ಕರೆದುಕೊಂಡು ಹೋಗಿ. ನಿಮಗೆ ಎಷ್ಟು ಹಣ ಬೇಕೋ ಅಷ್ಟನ್ನು ಕೊಡ್ತೀನಿ."

"ನಿಮ್ಮ ಹಣದಿಂದ ಈಗ ನೀವು ಯಾರನ್ನೂ ಕೊಳ್ಳಲಾರಿರಿ. ನಿಮ್ಮ ಅಂತ್ಯದ ಕಾಲ ಬಂದಿದೆ."

"ಮಾಲಾ ಎಲ್ಲಿ ? ಅವಳನ್ನು ಕರೆಯಿರಿ...."

"ಈ ವೇಶದಲ್ಲಿ ಅವಳ ಎದುರಿಗೆ ನಿಂತ್ಕೊಳ್ಳೋಕೆ ನಾಚಿಕೆ ಆಗೊಲ್ವಾ ?" ಎನ್ನುತ್ತ ಅವನ ಸೊಂಟಕ್ಕೆ ಬಟ್ಟೆಯನ್ನು ಕಟ್ಟಲು ಹೋದ. ರಘು ಬಲಗಾಲನ್ನು ಸ್ವಲ್ಪ ಎತ್ತಿದ. ಆ ವ್ಯಕ್ತಿ ಅವನ ಕಾಲನ್ನು ತಿರುಚಿದ. ರಘು ನೋವಿನಿಂದ ಅರಚಿದ. ಮಾಲಾ ಒಳಗೆ ಬಂದಿದ್ದಳು. ಅವನ ರಕ್ತ ಸಿಕ್ತವಾದ ಬಟ್ಟೆಯನ್ನು ನೋಡಿ ಕಣ್ಣು ಮುಚ್ಚಿದಳು.

"ಮಾಲಾ.... ನನ್ನನು ಕ್ಷಮಿಸು. ಇದಕ್ಕೆಲ್ಲಾ ಕಾರಣ ಈ ಪ್ರತಾಪ..." ಎನ್ನುತ್ತ ಅವನ ಕಡೆ ನೋಡಿದ. ಅವನು ನಿತ್ರಾಣಗೊಂಡಿದ್ದ. ನಾನು ಧ್ರುವನ ಹತ್ತಿರ ಮಾತನಾಡಬೇಕು. ನಾನಿಲ್ಲದೆ ಅವನು ಬದುಕಲಾರ..."

"ಈಗ ಧ್ರುವ ಬದುಕಿದ್ದಾನೆ. ನಿನ್ನ ಜೊತೆ ಬಂದಿದ್ದರೆ, ಅವನ ಗತಿಯೂ ಇದೇ ಆಗುತ್ತಿತ್ತು. ನಿಮಗಾದ ಶಿಕ್ಷೆಯ ಅರಿವು ಅವನಿಗಾದರ, ಅವನು ಬದುಕಿದ್ದರೂ ಸತ್ತಂತೆ. ಇನ್ನು ಮುಂದೆ ಅವನು ಒಂಟಿಯಾಗಿ, ಅನಾಥನಾಗಿ ಕಾಲ ಕಳೆಯಲಿ. ಇದಕ್ಕಿಂತ ಬೇರೆ ಶಿಕ್ಷೆ ಯಾವುದಿದೆ ?"

"ಹೀಗೆ ಮಾಡಬೇಡ ಮಾಲಾ.... ದೇವರು ನಿನಗೆ ಒಳ್ಳೆಯದನ್ನು ಮಾಡುವುದಿಲ್ಲ. ಆದಷ್ಟು ಬೇಗ ಡಾಕ್ಟರನ್ನು ಕರೆಸು. ಇಲ್ಲದಿದ್ದರೆ ನಾವಿಬ್ರೂ ಸತ್ತು ಹೋಗ್ತೀವಿ."

"ನೀವಿಬ್ಬರೂ ನನ್ನ ಕಣ್ಣೆದುರಿಗೆ ಹೀಗೆ ಒದ್ದಾಡುತ್ತಾ ಸಾಯಬೇಕು ಅಂತ

ನನ್ನ ಆಸೆ ಇತ್ತು..." ಅವಳು ಕಟುವಾಗಿ ನುಡಿದಾಗ ಅವನು ಹೆದರಿದ.

"ನೀನು ತಪ್ಪು ಮಾಡ್ತಾ ಇದ್ದೀಯ. ಕಾನೂನು ನಿಮ್ಮೆಲ್ಲರಿಗೂ ಶಿಕ್ಷೆಯನ್ನು ಕೊಡುತ್ತೆ."

"ಆ ಚಿಂತೆ ನಿನಗ್ಯಾಕೆ? ನಿನ್ನ ಕಡೆಗಾಲ ಸಮೀಪಿಸಿದೆ. ಈಗ ನೀನು ಏನೂ ಮಾಡಲಾರೆ." ಅವಳು ಅಲ್ಲಿಂದ ನಡೆದಳು.

"ಮಾಲಾ... ಮಾಲಾ..." ಇಬ್ಬರೂ ಕರೆಯುತ್ತಲೇ ಇದ್ದರು.

"ಪ್ಲೀಸ್... ನೀವಾದ್ರೂ ಹೆಲ್ಪ್ ಮಾಡಿ" ಪ್ರತಾಪ ಗೋಗರೆದ.

"ಸಾರಿ ಪ್ರತಾಪ್... ನಾನು ಏನೂ ಮಾಡಲಾರೆ... ನಾನ್ಯಾರು ಅಂತ ಗೊತ್ತಾಯ್ತಾ?"

"ಇಲ್ಲ" ಎನ್ನುವಂತೆ ತಲೆಯಾಡಿಸಿದ.

"ನಾನು ಭಾರ್ಗವ... ನಿನ್ನ ಸಂಚಿನಿಂದ ಮಾಲಾ ನನ್ನಿಂದ ದೂರವಾಗಿದ್ದಳು. ಆದರೆ ಈಗ ನಿನಗೆ ತಿಳಿಯದೇನೇ ನಮ್ಮಿಬ್ಬರನ್ನು ಒಂದು ಮಾಡಿದೀಯ."

"ಭಾರ್ಗವ ನೀನು ಹೀಗೆ ಮಾಡ್ತೀಯ ಅಂತ ಗೊತ್ತಿದ್ದಿದ್ರೆ, ನಿನ್ನನ್ನು ಕೊಲ್ಲಿಸಿರುತ್ತಿದ್ದೆ."

"ಈಗ ನಿನ್ನನ್ನು ನೀನೇ ಹತ್ಯೆ ಮಾಡಿಕೊಂಡಿದೀಯ. ಈ ಗಾಯಗಳಿಂದ ಒಸರುತ್ತಿರುವ ರಕ್ತ ಒಣಗುವುದಿಲ್ಲ... ಈಗಾಗಲೇ ನಿತ್ರಾಣನಾಗಿದೀಯ ನೀನು... ಮಧ್ಯರಾತ್ರಿಯ ಹೊತ್ತಿಗೆ ಕಾಡು ಪ್ರಾಣಿಗಳು ಬರುತ್ತವೆ. ಅವು ನಿಮ್ಮಿಬ್ಬರನ್ನು ಎಳೆದುಕೊಂಡು ಹೋಗುತ್ತವೆ ಎಂದು ಹೇಳಿ ಅಲ್ಲಿ ನಿಲ್ಲದೆ ಎಲ್ಲೋ ಮರೆಯಾದ. ಪ್ರತಾಪ ಅಳುತ್ತಲೇ ಇದ್ದ. ಆಗಾಗ "ರಘು, ರಘು" ಎಂದು ಕೂಗುತ್ತಿದ್ದ. ರಘುವಿನ ಉಸಿರಾಟ ನಿಂತುಹೋಗಿತ್ತು.

ನಿಧಾನವಾಗಿ ಕತ್ತಲೆ ಆವರಿಸತೊಡಗಿತ್ತು. ಪ್ರತಾಪನು ಅರೆಜ್ಞಾನದಲ್ಲಿದ್ದ. ಭಾರ್ಗವ ಬಂದು ಕಟ್ಟುಗಳನ್ನು ಬಿಚ್ಚಿ, ಕೊಟ್ಟಿಗೆಯ ಹಿಂಬಾಗಿಲನ್ನು ತೆಗೆದು ಒಳಕ್ಕೆ ಬಂದು. ಇನ್ನು ಅವರುಗಳು ಏನೂ ಮಾಡಲಾರರು ಎಂಬ ಧೈರ್ಯದಿಂದ ಮನೆಯೊಳಕ್ಕೆ ಬಂದ.

ಮನೆಯೊಳಗೆ ಸ್ಮಶಾನ ಮೌನ ಆವರಿಸಿತ್ತು. ಮಾಲಾ ಭಯದಿಂದ ಅಳುತ್ತಿದ್ದಳು. ವಸುಧಾ ಸಮಾಧಾನ ಹೇಳುತ್ತಿದ್ದಳು. ಮಧು ಶತಪಥ ತಿರುಗುತ್ತಿದ್ದ. ವತ್ಸಲಾ ಸಹ ಗಂಭೀರವಾಗಿದ್ದಳು.

"ನಾವು ಮಾಡಿದ್ದು ತಪ್ಪು. ನಾವು ಪೋಲೀಸರಿಗೆ ತಿಳಿಸಬೇಕಾಗಿತ್ತು" ಮಧು ಎಂದ.

"ಪೋಲೀಸ್ನೋರ ತನಿಖೆ, ವಿಚಾರಣೆ ಈ ಜನ್ಮದಲ್ಲಿ ಮುಗಿಯುತ್ತಿರಲಿಲ್ಲ. ಮಾಲಾ ಕೈಯಾರೆ ಅವರಿಬ್ಬರಿಗೂ ಶಿಕ್ಷೆ ಕೊಡಬೇಕೆಂದು ಬಯಸಿದ್ದಳು."

"ನೀನು ಸುಮ್ಮನಿರು ಭಾರ್ಗವ. ಎಲ್ಲಾ ನಿನ್ನಿಂದಲೇ... ಇವಳ ಕೈಯಲ್ಲಿ ಯಾಕೆ ಇಂತಹ ಘೋರ ಶಿಕ್ಷೆಯನ್ನು ಮಾಡಿಸಿದೆ! ರೇಪಿಸ್ಟ್‌ಗೆ ಕಾನೂನು ಮರಣದಂಡನೆಯನ್ನು ವಿಧಿಸುತ್ತಿತ್ತು."

"ಮಧು ನಿನಗ್ಯಾಕೆ ಅರ್ಥವಾಗುಲ್ಲವೋ ತಿಳಿಯದು. ರಘು ಕಾಮುಕ. ಅವನು ವಸುಧಾಳ ಮೇಲೂ ಕಣ್ಣು ಹಾಕಿದ್ದ. ಅವನಿಗೆ ತಾನು ಗಂಡಸು ಎಂಬ ದುರಹಂಕಾರವಿತ್ತು. ಅವನ ಗಂಡಸತ್ವವೇ ಇಲ್ಲದಿದ್ದರೆ...?"

"ಮಾಲಾ ಅವನ ಮೈ ಮುಟ್ಟಿಲ್ಲ. ಇದನ್ನು ಮಾಡಿದವಳು ನಾನು. ಸುಮಾರು ಇಪ್ಪತ್ತೆರಡು ವರ್ಷಗಳ ಕೆಳಗೆ, ನನ್ನ ಮೇಲೆ ಅತ್ಯಾಚಾರವೆಸಗಿದ್ದ ನನ್ನ ಗಂಡನ ತಮ್ಮಂದಿರನ್ನೂ ಇದೇ ರೀತಿಯಲ್ಲಿ ಕೊಂದು, ಕಾಡು ಪ್ರಾಣಿಗಳಿಗೆ ಆಹಾರ ಮಾಡಿದ್ದೆ. ನನ್ನ ಅಭಿಪ್ರಾಯದಲ್ಲಿ ಅತ್ಯಾಚಾರಿಗಳಿಗೆ ಈ ಶಿಕ್ಷೆಯೇ ಸರಿ" ವತ್ಸಲಾ ಹೇಳಿದಾಗ ಎಲ್ಲರೂ ಅವಳನ್ನೇ ಬೆರಗಾಗಿ ನೋಡಿದರು. ಮಾಲಾ ಕಣ್ಣುಗಳನ್ನು ಮುಚ್ಚಿಕೊಂಡಳು.

"ನೀನು ಹೀಗೆ ಅಧೀರಳಾಗಬೇಡ. ನಿನ್ನ ಮನಸ್ಸು ಗಟ್ಟಿಯಿಲ್ಲ. ಅದಕ್ಕೇ ಹೀಗೆ ಅನ್ನಿಸುತ್ತೆ. ರಘೂನೇ ರೇಪಿಸ್ಟ್ ಅಂತ ನಿನಗೆ ತಿಳಿದಿರಲಿಲ್ಲ ಅಲ್ವಾ? ಅವನು ನಿನ್ನ ಗಂಡನ ತಮ್ಮನಾಗಿ ನಿನ್ನೊಡನೆ ನಡೆದುಕೊಂಡಿದ್ದು ಸರಿಯಿಲ್ಲ. ನಿನಗೆ ಧೈರ್ಯ ಕಡಿಮೆ ಎಂದು ನನಗೆ ಗೊತ್ತು. ಅದಕ್ಕೇ ನಾನೇ ಅವನಿಗೆ ತಕ್ಕ ಶಿಕ್ಷೆ ಕೊಟ್ಟೆ. ಭಯದಿಂದ ಈಗಾಗಲೇ ಪ್ರಾಣ ಹೋಗಿದೆ. ರಕ್ತದ ವಾಸನೆ ಮೂಗಿಗೆ ಬಡಿಯುತ್ತಲೇ ಕಾಡು ಪ್ರಾಣಿಗಳು ಬರುತ್ತವೆ. ಅದಕ್ಕೆ ಮುಂಚೆ ನಾವೇ ಆ ಶವಗಳನ್ನು ಎಸೆಯಬೇಕು. ನಾಳೆ ದಿನ ತೋಟಕ್ಕೆ ಕೆಲಸಗಾರರು ಬರುತ್ತಾರೆ. ಅದಕ್ಕೆ ಮುಂಚೆ ಕೊಟ್ಟಿಗೆಯನ್ನು ತೊಳೆಸಬೇಕು."

"ಆದರೆ ಅದಕ್ಕೆ ಭಾರ್ಗವನಾಗಲೀ, ಮಧುವಾಗಲೀ ಉತ್ತರಿಸದೇ ಇದ್ದಾಗ ಅವಳಿಗೆ ಆಶ್ಚರ್ಯವಾಯಿತು."

"ನೀನು ಕೇಳಿಕೊಂಡೆ ಅಂತ ನಿನಗೆ ಸಹಾಯ ಮಾಡಿದೆ. ಈಗ ಆ ಬಾಡಿಗಳನ್ನು ತೆಗೆಯಲು ಯಾಕೆ ಹಿಂಜರಿಕೆ?"

"ಪ್ರತಾಪ ಏಡ್ಸ್ ರೋಗಿಯಾಗಿದ್ದ..." ವತ್ಸಲಾ ಬೆಚ್ಚಿದಳು.

"ಈ ವಿಷಯಾನ ಯಾಕೆ ಮುಂಚೇನೇ ಹೇಳಲಿಲ್ಲ. ಕೊಟ್ಟಿಗೆಗೆ ಬೆಂಕಿ ಹಚ್ಚಿ ಬಿಡೋಣ. ಕಾರನ್ನು ಕಂದರಕ್ಕೆ ತಳ್ಳಿ ಬಿಟ್ಟರಾಯ್ತು."

"ವತ್ಸಲಾಳ ಹೊರತು ಉಳಿದವರಿಗೆಲ್ಲಾ ತಾವು ಮಾಡಿರುವುದು ಅಪರಾಧ ಎಂದು ಮನವರಿಕೆಯಾಗಿತ್ತು. ಅವಳು ಎಲ್ಲರಿಗೂ ತಿಳುವಳಿಕೆ ಹೇಳಿದಳು. ಅವರುಗಳು ಮಾಡಿದ್ದು ಹೆಚ್ಚಿನ ಅಪರಾಧ. ಆ ಅಪರಾಧಕ್ಕೆ ನಾವು ಶಿಕ್ಷೆಯನ್ನು ಕೊಟ್ಟೆವು. ಎಷ್ಟೋ ಸಾರಿ ಕಾನೂನು ನಮಗೆ ನ್ಯಾಯವನ್ನು ಕೊಡಿಸುವುದಿಲ್ಲ. ಈಗ ನಾವುಗಳೆಲ್ಲರೂ ಕುಳಿತು ನಾವು ಮಾಡಿದ ತಪ್ಪುಗಳನ್ನೆಲ್ಲ ನಿವೇದಿಸಿಕೊಳ್ಳೋಣ. ನಮ್ಮ ಮನಸ್ಸಿಗೆ ನೆಮ್ಮದಿ ಸಿಗುತ್ತದೆ."

ಯಾರೂ ಉತ್ತರಿಸಲಿಲ್ಲ. "ನೀವುಗಳು ಇಷ್ಟು ಹೇಡಿಗಳು ಅಂತ ನಾನಂದುಕೊಂಡಿರಲಿಲ್ಲ. ಬಹುಶಃ ನನ್ನದೇ ತಪ್ಪು. ಭಾರ್ಗವನ ಪ್ಲಾನಿಗೆ ನಾನು ಒಪ್ಪಬಾರದಾಗಿತ್ತು. ನಾನೇ ಪೋಲೀಸರಿಗೆ ಸರಂಡರ್ ಆಗುತ್ತೇನೆ" ಎನ್ನುತ್ತಾ ಫೋನಿನ ಬಳಿಗೆ ಅವಳು ಬಂದಳು. ಮಾಲಾ ಓಡಿ ಬಂದು ರಿಸೀವರನ್ನು ಕೈಗೆತ್ತಿಕೊಂಡಳು.

"ಇಷ್ಟಕ್ಕೆಲ್ಲಾ ನಾನೇ ಕಾರಣ. ನನಗೆ ಶಿಕ್ಷೆಯಾಗಬೇಕು."

"ಸುಮ್ಮನಿರು ಮಾಲಾ. ಇದು ಮಹಾತ್ಮಾ ಗಾಂಧಿಯ ಕಾಲವಲ್ಲ. ನಮಗಾದ ಅನ್ಯಾಯಕ್ಕೆ ನಾವೆ ನ್ಯಾಯವನ್ನು ಹುಡುಕಿಕೊಳ್ಳಬೇಕು. ಹಾಗೆ ನೋಡ್ತಾ ಹೋದರೆ, ಈ ಎಲ್ಲಾ ಪ್ಲಾನ್ ನನ್ನದು. ನಾನು ಅಪರಾಧಿ."

"ಹಾಗಾದರೆ, ನಾವುಗಳೆಲ್ಲರೂ ಅಪರಾಧಿಗಳೇ. ಪೋಲೀಸರಿಗೆ ತಿಳಿದರೆ, ನಮಗೆ ಶಿಕ್ಷೆಯಾಗುವುದು ಖಂಡಿತಾ. ಮುಂದೆ ನಮ್ಮ ಮಕ್ಕಳ ಗತಿಯೇನು ? ಎಲ್ಲರೂ ಅನಾಥರಾಗಿಬಿಡ್ತಾರೆ" ಮಧು ಹಾಗೆಂದಾಗ ವಸುಧಾ ಹೌದು ಎಂದಳು.

"ಅದು ಅವರವರ ಅನಿಸಿಕೆ. ನನಗೆ ಹಾಗೇನೂ ಅಪರಾಧ ಭಾವನೆಯಿಲ್ಲ ಭಾರ್ಗವ, ಆದರೂ ನಾನು ನಿನಗೆ ಸಹಾಯ ಮಾಡಿ ತಪ್ಪು ಮಾಡಿದೆ ಅಂತ ಅನ್ನಿಸ್ತಿದೆ.

"ಹಾಗೇನಿಲ್ಲ ವತ್ಸಲಾ. ಒಂದೆರಡು ದಿನಗಳು ಕಳೆದರೆ, ಈ ಗಾಬರಿ ಎಲ್ಲಾ ಕಡಿಮೆಯಾಗುತ್ತದೆ ಎಲ್ಲಾ ತಾನಾಗಿಯೇ ಸರಿ ಹೋಗುತ್ತದೆ" ಭಾರ್ಗವ ನುಡಿದಾಗ, ವತ್ಸಲಾ ಮಾತನಾಡಲಿಲ್ಲ. ಸೀದಾ ಆಶ್ರಮಕ್ಕೆ ಬಂದಳು. ತನ

ಗಂಡ ಕೊನೆಯುಸಿರನ್ನೆಳೆದು ಬಿದ್ದಿದ್ದ ಜಾಗದಲ್ಲಿ ಕುಳಿತಳು. ಮೌನವಾಗಿ ಕಣ್ಣೀರು ಸುರಿಸಿದಳು. "ನಾನು ಮಾಡಿದ್ದು ತಪ್ಪಾ?... ನೀವೇ ಹೇಳಿ?" ತನ್ನಲ್ಲೇ ಹೇಳಿಕೊಂಡಳು. ಇದುವರೆಗೂ ಒಂದು ದಿನವೂ ತಾನು ಮಾಡಿದ್ದು ತಪ್ಪು ಎಂದು ಅವಳಿಗನ್ನಿಸಿರಲಿಲ್ಲ. ತಾನೇ ಕೈಯಾರೆ, ಆ ಪಾಪಿಗಳಿಗೆ ಕೊಟ್ಟ ಶಿಕ್ಷೆ, ಅವಳ ಮನಸ್ಸಿಗೆ ಸಮಾಧಾನವನ್ನು ನೀಡಿತ್ತು.

ಈ ದಿನ ಮತ್ತೆ ತಾನು ಅ ದಿನ ಎಸಗಿದ್ದ ಕಾರ್ಯವನ್ನು ನೆನಪಿಸಿಕೊಂಡಳು. ಅವಳ ಅತ್ತೆ ಮಾವ ಎರಡು ದಿನಗಳ ಮಟ್ಟಿಗೆ ಗೋಕರ್ಣಕ್ಕೆ ಹೊರಟಿದ್ದರು. ಇವಳು, ತಾನೂ ಬರುವುದಾಗಿ ಹೇಳಿದಾಗ ಬೇಡವೆಂದಿದ್ದರು. ಬಸಿರಿ ಹುಡುಗಿ ಪ್ರಯಾಣ ಮಾಡುವುದು ಬೇಡವೆಂದು ಅವರ ಮತ. ಎರಡೇ ರಾತ್ರಿ ಅಷ್ಟೇ... ನಿನ್ನ ಮೈದುನಂದಿರು ಇರುತ್ತಾರೆ. ಯಾವ ಭಯವೂ ಬೇಡ ಎಂದು ತಲೆಯನ್ನು ಸವರಿದ್ದರು.

"ನನಗೆ ಅವರದ್ದೇ ಭಯ" ಎಂದು ಹೇಳಲು ಹಿಂಜರಿದಳು. ಈ ಮೊದಲೇ ಅವರು ಬೆದರಿಕೆ ಹಾಕಿದ್ದರು. ಯಾರಿಗಾದರೂ ತಿಳಿಸಿದರೆ, ಗೊತ್ತಾದರೆ, ನಿನಗೆ ಹುಟ್ಟುವ ಮಗುವನ್ನು ಕೊಂದು ಹಾಕುತ್ತೇವೆಂದು ಹೆದರಿಸಿದ್ದರು. ಗಂಡನಂತೂ ಇಲ್ಲ, ಹುಟ್ಟುವ ಮಗುವನ್ನಾದರೂ ಸಂರಕ್ಷಿಸಬೇಕೆಂದುಕೊಂಡಿದ್ದಳು. ಇವಳು ಮನೆಯಲ್ಲೇ ಇರುತ್ತಿದ್ದುದರಿಂದ ಅವರೂ ಅವಳ ತಂಟೆಗೆ ಬಂದಿರಲಿಲ್ಲ. ಭಾರ್ಗವನಿನ್ನೂ ಸ್ಕೂಲಿಗೆ ಸೇರಿರಲಿಲ್ಲವಾದುದರಿಂದ ಅವನು ಇವಳ ಜೊತೆಗೆ ಇರಲೆಂದು ಬಂದಿದ್ದ.

ಬೆಳಿಗ್ಗೆ ಅವರುಗಳನ್ನು ಬಸ್ಸು ಹತ್ತಿಸಿ ಬಂದ ಮೇಲೆ, ಅಣ್ಣ ತಮ್ಮಂದಿರಿಬ್ಬರೂ ಕೆಲಸದ ಆಳುಗಳನ್ನು ಕಳುಹಿಸಿಬಿಟ್ಟಿದ್ದರು. ಹಾಗಾಗಿ ಎಸ್ಟೇಟ್‌ನಲ್ಲಿ ಹೊರಗಿನವರು ಯಾರೂ ಇರಲಿಲ್ಲ. ಭಾರ್ಗವನ ಜೊತೆ ಚೌಕಾಬಾರ ಆಡುತ್ತಾ ಕುಳಿತಿದ್ದಳು ವತ್ಸಲಾ. ಅವರಿಬ್ಬರಲ್ಲಿ ಚಿಕ್ಕವನು, ತಾನು ತೋಟದ ಬಾವಿಯಲ್ಲಿ ಈಜಾಡಿ ಬರಲು ಹೋಗಿ ಬರುತ್ತೇನೆಂದು ಹೇಳಿ ಹೊರಟ. "ನೀನೂ ಬಾರೋ ಭಾರ್ಗವ... ನಾನು ನಿನಗೆ ಈಜನ್ನು ಕಲಿಸಿಕೊಡ್ತೀನಿ" ಎಂದು ಕರೆದ. ಭಾರ್ಗವ ಚಿಕ್ಕಮ್ಮನ ಕಡೆ ಆಸೆಯಿಂದ ನೋಡಿದ. ಅವಳು ಬೇಡ ಎನ್ನುವಂತೆ ತಲೆಯಾಡಿಸಿದಳು. ಅಣ್ಣನಾದವನು ಮನೆಯೊಳಗೆ ಇರುವನೆಂದು ಅವಳಿಗೆ ತಿಳಿದಿತ್ತು. ಅಡಿಗೆಯವರು ಇನ್ನೂ ಏನೋ ಕೆಲಸ ಮಾಡುತ್ತಿದ್ದುದರಿಂದ ಇವಳು ಒಳಗೆ ಬಂದಳು. ಅವರು ಆ

ರಾತ್ರಿ ಅಲ್ಲೇ ಇವರ ಮನೆಯಲ್ಲಿರಬೇಕೆಂದು ಹೇಳಿದ್ದರು. ಆದರೂ ಅವಳಿಗೆ ಭಯ. ಆಕೆಯೂ ಹೆಂಗಸು. ಭಾರ್ಗವ ಇನ್ನೂ ಚಿಕ್ಕವನು. ಅವರಿಬ್ಬರ ಹೊರತು ಬೇರೆ ಯಾರೂ ಇಲ್ಲ. ಅವರಿಂದ ಏನಾದರೂ ಅಪಾಯ ಒದಗುತ್ತದೆಂದು ಅನುಮಾನವಿದ್ದೇ ಇತ್ತು.

ಅಡಿಗೆ ಮನೆಯಲ್ಲಿ ಆಕೆ ಕಾಣಲಿಲ್ಲ. ಬಾವಿಯ ಬಳಿಗೆ ಬಚ್ಚಲು ಮನೆಗೋ ಹೋಗಿರಬೇಕೆಂದು ಊಹಿಸಿದಳು. ತರಕಾರಿ ಹೆಚ್ಚುವ ಕತ್ತಿ ಕಣ್ಣಿಗೆ ಬಿತ್ತು. ಇಂಥ ಒಂದು ಆಯುಧ ತನ್ನ ಬಳಿ ಇದ್ದರೆ ತನ್ನನ್ನು ತಾನು ರಕ್ಷಿಸಿ ಕೊಳ್ಳಬಹುದು ಎಂದುಕೊಂಡು. ಅದನ್ನು ತನ್ನ ಸೊಂಟಕ್ಕೆ ಸಿಕ್ಕಿಸಿಕೊಂಡಳು. ಮತ್ತೆ ಆಚೆ ಬಂದಳು. ಭಾರ್ಗವ ಅಲ್ಲಿರಲಿಲ್ಲ. "ಬೇಡ ಎಂದರೂ ಬಾವಿಯ ಬಳಿಗೆ ಹೋಗಿರಬಹುದೆಂದುಕೊಂಡು ಅವನನ್ನು ಕರೆಯುತ್ತಾ ಬಾವಿಯ ಬಳಿಗೆ ಬಂದಳು. ಮೆಟ್ಟಿಲ ಬಳಿ ಭಾರ್ಗವ... ಎನ್ನುತ್ತಾ ಅವನ ಹೆಸರನ್ನು ಕರೆದಾಗ, ಈಜುತ್ತಿದ್ದ ತಮ್ಮ ಅವಳನ್ನು ನೋಡಿದ. ಹಾಗೇ ಈಜುವುದನ್ನು ನಿಲ್ಲಿಸಿ, ಮೆಟ್ಟಿಲುಗಳನ್ನು ಹತ್ತಿ ಅವಳ ಬಳಿಗೆ ಬಂದ. 'ವತ್ಸಲಾ' ಎಂದ. ಬಾಯಲ್ಲಿ ಜೊಲ್ಲನ್ನು ಸುರಿಸುತ್ತಾ. ಹಿಂತಿರುಗಿ ನೋಡಿದ. ವತ್ಸಲಾ ನಗ್ನವಾಗಿ ನಿಂತಿದ್ದವನನ್ನು ಕಂಡು ಕಿಟ್ಟನೆ ಚೀರಿದಳು. ಅವನು ಅವಳನ್ನು ಬಲವಾಗಿ ತನ್ನೆಡೆಗೆ ಎಳೆದುಕೊಂಡು ಅಪ್ಪಿಕೊಂಡ. ಕೊಸರಾಡುತ್ತಿದ್ದವಳಿಗೆ ತಾನು ಸೊಂಟದಲ್ಲಿ ಸಿಕ್ಕಿಸಿಕೊಂಡಿದ್ದ ಕತ್ತಿ ನೆನಪಿಗೆ ಬಂತು. ಅದ್ಯಾವ ಶಕ್ತಿ ಅವಳ ಮೈಯಲ್ಲಿ ತುಂಬಿತೋ, ಕತ್ತಿಯನ್ನೆಳೆದು ನಗ್ನವಾಗಿದ್ದ ಅವನ ದೇಹದ ಮೇಲೆ ಮತ್ತೆ ಮತ್ತೆ ಇರಿದಳು. ಕಾಮಾಂಧನಾಗಿದ್ದವನಿಗೆ ಏನಾಯ್ತು ಎಂದು ತಿಳಿಯುವ ವೇಳೆಗೆ ಅವನ ಮೈ ಮೇಲೆ ಆದ ಗಾಯಗಳಿಂದ ರಕ್ತ ಒಸರಲಾರಂಭಿಸಿತ್ತು. "ಅಯ್ಯೋ, ಅಯ್ಯೋ" ಎಂದು ಕಿರುಚುತ್ತಾ ಅವಳ ಕೈಯನ್ನು ಬಲವಾಗಿ ಹಿಡಿದುಕೊಂಡ. ಅವಳು ಅವನ ಕೈಯನ್ನು ಕಚ್ಚಿದಳು. ಅವನು ಕೈ ಬಿಟ್ಟ ಕೂಡಲೇ, ವತ್ಸಲಾ ತನ್ನ ಎಲ್ಲಾ ಬಲವನ್ನು ಪ್ರಯೋಗಿಸಿ, ಅವನ ಕಿಬ್ಬೊಟ್ಟೆಯ ಕೆಳಗೆ ಕತ್ತಿಯನ್ನು ಆಡಿಸಿದಳು. ಅವನು ತನ್ನ ಎರಡೂ ಕೈಗಳಿಂದ ಗಾಯವಾದ ಜಾಗದಿಂದ ರಕ್ತ ಒಸರದಂತೆ ಹಿಡಿದುಕೊಂಡು ಅಡ್ಡಾದಿಡ್ಡಿ ಓಡಾಡಿ, ಕಡೆಗೆ ನೋವನ್ನು ತಾಳಲಾರದೆ ಬಾವಿಗೆ ಧುಮುಕಿದ. ರಕ್ತಸಿಕ್ತವಾದ ಕತ್ತಿಯನ್ನು ಬಾವಿ ನೀರಿನಿಂದ ತೊಳೆದು ಮತ್ತೆ ತನ್ನ ಸೊಂಟಕ್ಕೆ ಸಿಕ್ಕಿಸಿಕೊಂಡು, ಏನೂ ಆಗಿಲ್ಲವೆನ್ನುವಂತೆ ನಿಧಾನವಾಗಿ ಮನೆಯ ಕಡೆಗೆ

ಬಂದಳು. ಆಗ ಭಾರ್ಗವನ ನೆನಪು ಬಂದಿತು...

"ಭಾರ್ಗವ... ಭಾರ್ಗವ" ಎಂದು ಕರೆಯುತ್ತಾ ಒಳಗೆ ಬಂದಳು. ಎಲ್ಲಿ ಹೋದ ಇವನು ಎಂದು ಹುಡುಕುತ್ತ ತನ್ನ ರೂಮಿಗೆ ಬಂದಳು. ಅಷ್ಟು ಹೊತ್ತಿಗಾಗಲೇ ಸಂಜೆಯಾಗುತ್ತಾ ಬಂದಿತ್ತು. ಅರೆ ಬೆಳಕಿನಲ್ಲಿ ಮಲಗಿರುವವನು ಭಾರ್ಗವನೇ ಎಂದುಕೊಂಡು, ಏಳಪ್ಪಾ... ಎನ್ನುತ್ತಾ ಹೊದ್ದುಕೊಂಡಿದ್ದ ಮುಸುಕನ್ನು ತೆಗೆದಳು. ಹೊದ್ದಿಕೆಯೊಳಗಿನಿಂದ ಎದ್ದ ವ್ಯಕ್ತಿ ಅವಳನ್ನು ಗಕ್ಕನೆ ಹಿಡಿದುಕೊಂಡಿತು... "ಏಯ್... ಯಾರು ಯಾರು" ಎನ್ನುತ್ತಾ ಹಿಡಿತವನ್ನು ಬಿಡಿಸಿಕೊಳ್ಳಲು ನೋಡಿದಳು. ಬೆತ್ತಲೆ ಮೈ ಅವಳನ್ನು ಅಪ್ಪಿಕೊಂಡಿತ್ತು. ಅವಳನ್ನು ತನ್ನ ಮೇಲೆ ಕೆಡವಿಕೊಂಡ.

"ನಾನು... ನಿನ್ನ ಗಂಡನ ತಮ್ಮ. ಮರೆತು ಬಿಟ್ಯಾ ಆ ದಿನವನ್ನು? ನೀನಾಗಿಯೇ ಒಪ್ಪಿಕೊಂಡರೆ ಸರಿ. ಇಲ್ಲದಿದ್ದರೆ ನನಗೆ ಏನೂ ಭಯವಿಲ್ಲ. ನೀನು ಕಿರುಚಿಕೊಂಡರೂ ಕೇಳಿಸಿಕೊಳ್ಳುವವರ್‍ಯಾರಿಲ್ಲ. ಅಡಿಗೆಯವರನ್ನು ನಾನೇ ಸಿನಿಮಾ ನೋಡಲು ಕಳಿಸಿದ್ದೇನೆ." ಎನ್ನುತ್ತಾ ಅವಳನ್ನು ತನ್ನ ಮೇಲಕ್ಕೆ ಎಳೆದುಕೊಂಡು ಅವಳ ಸೀರೆಯ ಸೆರಗಿಗೆ ಕೈ ಹಾಕಿದ. ತಡೆಯಲು ಹೊರಟವಳ ಕೈಗೆ ಕತ್ತಿ ತಾಗಿತು. ಮತ್ತೆ ರುದ್ರ ಶಕ್ತಿ ಅವಳಲ್ಲಿ ಹೊಕ್ಕಿತು. ಅವನು ನಗ್ನನಾಗಿ ತನ್ನ ಮಂಚದ ಮೇಲೆ ಮಲಗಿದ್ದ ಎನ್ನುವುದು ಅರಿವಾದ ಕೂಡಲೇ ಕತ್ತಿಯನ್ನು ಹೊರಕ್ಕೆ ಸೆಳೆದು, ಅವನ ಕೈಗಳ ಮೇಲೆ, ಕಾಲುಗಳ ಮೇಲೆ ಸರಸರನೆ ಗೀರಿದಳು. ಈ ಆಕ್ರಮಣವನ್ನು ಅವನು ನಿರೀಕ್ಷಿಸಿರಲಿಲ್ಲ ವಾದುದರಿಂದ, ಅವಳಿಂದ ತಪ್ಪಿಸಿಕೊಳ್ಳಲು ಮಂಚದಿಂದ ಧುಮುಕಿ ರೂಮಿನಿಂದ ಹೊರಬಂದು ಮುಂಬಾಗಿಲನ್ನು ದಾಟಿ "ಕಾಪಾಡಿ... ರಾಕ್ಷಸೀ... ಅಯ್ಯೋ" ಎಂದು ಕಿರುಚುತ್ತಾ ದಿಕ್ಕುಗೆಟ್ಟವನಂತೆ ಅಡ್ಡಾದಿಡ್ಡಿ ಓಡಿದ. ಇಳಿಜಾರಿನಲ್ಲಿ ಮುಗ್ಗರಿಸಿ ಬಿದ್ದ. ವತ್ಸಲಾ ನಿಧಾನವಾಗಿ ಅವನ ಬಳಿಗೆ ನಡೆದು ಬಂದಳು. ಬೆಳದಿಂಗಳು ನಿಧಾನವಾಗಿ ಹರಿದುಬರುತ್ತಿತ್ತು. ಕತ್ತಿಯನ್ನು ಹಿಡಿದು ನಿಂತಿದ್ದವಳನ್ನು ಕಂಡು ಬೆದರಿ, ಸಾವರಿಸಿಕೊಂಡು ಏಳಲು ನೋಡಿದ. ಮೈಗೆ ಅಂಟಿದ್ದ ಮಣ್ಣು, ಧೂಳಿನಿಂದ ಇಗಿತವಾದ ಕಡೆಯೆಲ್ಲಾ ಉರಿಯುತ್ತಿತ್ತು... ಅವಳು ಕಾಲಿನಿಂದ ಒದ್ದು ಜೀಳಿಸಿದಳು. ಅವನು ಅವಳ ಕಾಲನ್ನು ಹಿಡಿದು ಎಳಿಸಿದ. ತಕ್ಷಣವೇ ಮಿಂಚಿನಂತೆ ಅವಳು ತನ್ನ ಕತ್ತಿಯಿಂದ ಅವನ ಕೈ ಕತ್ತರಿಸಿ ಹೋಗುವಂತೆ ಹೊಡೆದಳು. ಅವನು ಬೊಬ್ಬೆ ಹಾಕಿದ. ರಕ್ತ

ಸುರಿಯುತ್ತಿದ್ದ ಕೈಯನ್ನು ಇನ್ನೊಂದು ಕೈಯಿಂದ ಹಿಡಿದು, ಕಾಲುಗಳನ್ನು ಒದರಲಾರಂಬಿಸಿದ. ಅವಾಚ್ಯ ಶಬ್ದಗಳಿಂದ ಅವಳನ್ನು ಬೈಯ್ಯಲು ಪ್ರಾರಂಭಿಸಿದ. ಅವನ ಬಾಯ ಮೇಲೆ ಒಂದು ಕಾಲನ್ನು ಊರಿದಳು. ಕತ್ತಿಯನ್ನು ಝುಳಪಿಸಿ, ಅವನ ಹೊಟ್ಟೆಯ ಕೆಳಭಾಗಕ್ಕೆ ಸರಿಯಾಗಿ ಬೀಳುವಂತೆ ಎಸೆದಳು. ಕತ್ತಿಯ ಏಟು ಬಿದ್ದ ಸ್ಥಳದಿಂದ ರಕ್ತ ಚಿಮ್ಮಿತು.

"ಇದೇ ಗತಿಯನ್ನು ನಿನ್ನ ತಮ್ಮನಿಗೂ ಕಾಣಿಸಿಗ್ದೀನಿ. ಅವನೀಗ ಬಾವಿಯಲ್ಲಿನ ಮೀನುಗಳಿಗೆ ಕ್ರಿಮಿಕೀಟಗಳಿಗೆ ಆಹಾರವಾಗಿದ್ದಾನೆ. ನೀನು ಇಲ್ಲಿಯ ಮಿಗಗಳಿಗೆ ಆಹಾರವಾಗ್ತಿದೀಯ... ಹೆಂಗಸು ಅಂತಂದ್ರೆ ಕಾಮದ ತೃಷೆಯನ್ನು ನಿವಾರಿಸಿಕೊಳ್ಳುವ ವಸ್ತು ಎಂದು ತಿಳಿದಿರುವ ನಿಮ್ಮಿಬ್ಬರ ಆಯಸ್ಸು ಇಂದಿಗೆ ಮುಗಿಯಿತು. ನನಗೀಗ ಸಂತೃಪ್ತಿಯಾಗಿದೆ. ನಿಸ್ಸಹಾಯಕನಾಗಿ ಬಿದ್ದಿದ್ದ ನನ್ನ ಗಂಡನ ದೇಹದ ಎದುರಿಗೇ ನನ್ನ ಮಾನಭಂಗ ಮಾಡಿ, ನಿಮ್ಮ ಸಾವಿಗೆ ನೀವೇ ಕಾರಣರಾಗಿದ್ದೀರಿ... ಇನ್ನು ನನ್ನ ಗಂಡನ ಆತ್ಮಕ್ಕೆ ಶಾಂತಿ ಸಿಗುತ್ತದೆ." ಎನ್ನುತ್ತಾ ಆ ಸ್ಥಳದಿಂದ ದೂರ ಸರಿದಳು. ಕತ್ತಿಯ ನೆನಪಾಯಿತು. ಮತ್ತೆ ಹಿಂದಕ್ಕೆ ಬಂದಳು. ಚಂದ್ರನ ಬೆಳಕಿನಲ್ಲಿ ಕತ್ತಿಯನ್ನು ಹುಡುಕಿದಳು. ನೀರಿಗೆ ಎಸೆದು ಬಿಡೋಣವೆಂದುಕೊಂಡಳು. ಆದರೆ ಏನೋ ನೆನಪಾಗಿ, ಕತ್ತಿಗೆ ಅಂಟಿಕೊಂಡಿದ್ದ ರಕ್ತವನ್ನೂ ಮಣ್ಣಿಗೆ ಒರೆಸಿ, ಮಣ್ಣಿನಿಂದಲೇ ಕತ್ತಿಯನ್ನು ಶುಚಿಗೊಳಿಸಿ, ಅದನ್ನು ಆಶ್ರಮದ ಒಂದು ಜಂತಿಗೆ ಸಿಕ್ಕಿಸಿದಳು.

"ಚಿಕ್ಕಮ್ಮಾ... ಚಿಕ್ಕಮ್ಮಾ... ಎಂದು ಭಾರ್ಗವ ಕರೆದ ಧ್ವನಿ ಕೇಳಿ ಆಶ್ರಮದಿಂದ ಹೊರಬಂದಳು."

"ಎಲ್ಲಿಗೆ ಹೋಗಿದ್ಯೋ... ನನ್ನನ್ನು ಒಬ್ಬಳನ್ನೇ ಬಿಟ್ಟು? ರೇಗಿದಳು.

"ಲಂಗಡಿಗೆ ಹೋಗಿ ಬಿಸ್ಕತ್ತು ತಗೊಂಡು ಬಾ ಅಂತ ದುಡ್ಡು ಕೊಟ್ಟು ಕಳಿಸಿದರು... ನಾನು ಬರುವಷ್ಟರಲ್ಲಿ ಮನೆಯಲ್ಲಿ ಯಾರೂ ಇರಲಿಲ್ಲ ಭಯವಾಯ್ತು. ಹುಡುಕ್ತಾ ಬಂದೆ ಅಲ್ಲಿ ಯಾರು ಬಿದ್ದಿರೋರು..." ಅತ್ತ ಕಡೆ ಕೈ ಮಾಡಿ ತೋರಿದ.

"ಏನೋ ನಂಗೊತ್ತಿಲ್ಲ. ನಾವು ಇಲ್ಲಿಂದ ಹೋಗೋಣ. ಕತ್ತಲಾಗಿದೆ ಕಾಡು ಪ್ರಾಣಿಗಳು ಬರುವ ಹೊತ್ತಾಯ್ತು..." ಎನ್ನುತ್ತ ಅವನ ಕೈ ಹಿಡಿದೆಳೆದು ದರದರ ಮನೆಗೆ ಕರೆತಂದು ಮುಂಬಾಗಿಲನ್ನು ಭದ್ರಪಡಿಸಿದಳು. ದೀಪ

ಹಚ್ಚಿದೊಡನೆ ದೀಪದ ಬೆಳಕಿನಲ್ಲಿ ತನ್ನ ಸೀರೆಯ ಮೇಲೆ ರಕ್ತದ ಕಲೆಗಳಿರುವುದನ್ನು ಗಮನಿಸಿದಳು.

ಭಾರ್ಗವ ಬಿಸ್ಕತ್ತನ್ನು ತಿನ್ನುವುದರಲ್ಲಿ ಮಗ್ನನಾಗಿದ್ದ. ಒಳ್ಳೆಯದೇ ಆಯ್ತು ಎಂದುಕೊಂಡು ಬಚ್ಚಲು ಮನೆಗೆ ಹೋಗಿ, ತಣ್ಣೀರಲ್ಲೇ ಸ್ನಾನ ಮಾಡಿದಳು. ರಕ್ತದ ಕಲೆಯಾಗಿದ್ದ ಸೀರೆ ಬಟ್ಟೆಗಳನ್ನು ಉರಿಯುತ್ತಿದ್ದ ಒಲೆಗೆ ಹಾಕಿದಳು. ಒಣ ಬಟ್ಟೆಗಳನ್ನು ಧರಿಸಿ ಹೊರಬಂದಳು. ಭಾರ್ಗವ ಇನ್ನೂ ಬಿಸ್ಕತ್ತು ತಿನ್ನುತ್ತಲೇ ಇದ್ದ. ಅವನ ಕೈಯಿಂದ ಪೊಟ್ಟಣವನ್ನು ಕಿತ್ತುಕೊಂಡು ಎಸೆದಳು. ಅವನು ಬೆಚ್ಚಿ ನಿಂತ.

"ಬರೀ ಬಿಸ್ಕತ್ತನ್ನು ತಿಂದರೆ ಹೊಟ್ಟೆ ಕೆಡುತ್ತೆ. ನಡೀ ಊಟ ಮಾಡೋಣ" ಎನ್ನುತ್ತಾ ಅವನನ್ನು ಅಡಿಗೆ ಮನೆಗೆ ಕರೆತಂದಳು. ಆ ರಾತ್ರಿ ಅಡಿಗೆಯಾಕೆ ಮನೆಗೆ ಬಂದಾಗ ಮಧ್ಯೆ ರಾತ್ರಿ ಮೀರಿತ್ತು.

"ಇದೇನು ಸೀತಮ್ಮ ಇಷ್ಟು ತಡ ಮಾಡಿಬಿಟ್ರೀ..." ಅವಳು ಅತ್ತಿತ್ತ ನೋಡಿದಳು.

"ನಿಮ್ಮ ಮೈದುನಂದಿರು ಬಹಳ ಒಳ್ಳೆಯವರು. ದಿನಾ ಅಡಿಗೆ ಮಾಡಿ ಬೇಸರವಾಗಿರುತ್ತೆ. ಅಪ್ಪ ಅಮ್ಮನೂ ಮನೇಲಿಲ್ಲ. ನೀನು ಸಿನಿಮಾಕ್ಕೆ ಹೋಗಿಬಾ ಅಂತ ಕಳಿಸಿದ್ರು. ಅವರಿಬ್ಬರದೂ ಊಟ ಆಯ್ತಾ?"

"ಹೂಂ. ಎಲ್ಲರ ಊಟವೂ ಆಯ್ತು ಮಲಗಿಕೊಳ್ಳಿ" ಎಂದು ಹೇಳಿ ಮನೆಯ ದೀಪಗಳನ್ನೆಲ್ಲಾ ಒಂದೊಂದಾಗಿ ಆರಿಸಿ ತನ್ನ ರೂಮಿಗೆ ಬಂದಳು. ಭಾರ್ಗವನಾಗಲೇ ನಿದ್ದೆ ಹೋಗಿದ್ದ. ಅವಳಿಗೆ ನಿದ್ದೆ ಹತ್ತಲಿಲ್ಲ. ದೂರದಲ್ಲಿ ನಾಯಿಗಳು ಬೊಗಳಿದ ಸದ್ದು ಕೇಳಿ ಬರುತ್ತಿತ್ತು. ಕಿರುಬಗಳು ಮಾಂಸವನ್ನು ತಿನ್ನಲು ಬಂದಿರಬಹುದು ಎಂದು ಬಗೆದಳು. "ನಿರ್ನಾಮವಾದರು ನಿನ್ನ ವೈರಿಗಳು" ಎಂದು ತನಗೆ ತಾನೇ ಹೇಳಿಕೊಂಡು, ಭಾರ್ಗವನನ್ನು ತನ್ನ ಹತ್ತಿರಕ್ಕೆ ಎಳೆದುಕೊಂಡಳು. "ಬಿಡು ಚಿಕ್ಕಮ್ಮ ನೋಯುತ್ತೆ" ಅಂತ ಅವನು ನುಡಿದ. ಅವನು ಕನವರಿಸಿದನೋ ಎಚ್ಚರವಾಗಿದ್ದಾನೋ ಎಂದು ಅನುಮಾನ ಬಂದರೂ ಮತ್ತೆ ಅವನನ್ನು ಮಾತನಾಡಿಸಲಿಲ್ಲ.

ಮಾರನೆ ದಿನ ಬೆಳಿಗ್ಗೆ ಅಡಿಕೆಯಾಕೆ, ಇವಳ ಬಳಿಗೆ ಬಂದು, ಅಣ್ಣ ತಮ್ಮಂದಿರಿಬ್ಬರೂ ರೂಮಿನಲ್ಲಿ ಇಲ್ಲವೆನ್ನುವುದನ್ನು ಹೇಳಿದಾಗ, ಇವಳು ಆಶ್ಚರ್ಯವನ್ನು ನಟಿಸಿದಳು.

"ಬೆಳಿಗ್ಗೆ ಎಲ್ಲೋ ಎದ್ದು ಹೋಗಿರಬೇಕು ಬರ್ತಾರೆ ಬಿಡು" ಎಂದಳು.

"ಇಲ್ಲ. ಹಾಕಿದ್ದ ಮುಂಬಾಗಿಲನ್ನು ನಾನೇ ಈಗ ತೆಗೆದೆ... ಹೊರಗಿನಿಂದ ಚಿಲಕ ಹಾಕಿರಲಿಲ್ಲ" ಎಂದಳು ವತ್ಸಲಾ ಎಚ್ಚೆತ್ತಳು.

"ನಮ್ಮಿಬ್ಬರಿಗೂ ತಿಳಿಯದಿರಲಿ ಅಂತ ಹಿಂಬಾಗಿಲಿನಿಂದ ಹೋಗಿರಬೇಕು. ನಾನು ಬಾಗಿಲನ್ನು ಮಲಗೋಕೆ ಮುಂಚೆ ಹಾಕಿದೆ" ಎಂದು ಸುಳ್ಳು ಹೇಳಿದಳು.

ಎರಡು ದಿನಗಳ ನಂತರ ಅತ್ತೆ ಮಾವ ವಾಪಸ್ಸು ಬಂದರು. ಬಸಿರಿ ಹೆಂಗಸನ್ನು ಬಿಟ್ಟು ಹೋಗಿದಾರಲ್ಲ. ಅಷ್ಟು ಜವಾಬ್ದಾರಿಯೂ ಬೇಡವಾ! ನಾಳೆ ಅವರುಗಳಿಗೆ ಮದುವೆಯಾಗಿ ಹೆಂಡತಿಯರು ಬಂದರೆ, ಆಗಲೂ ಹೀಗೇ ಬೇಜವಾಬ್ದಾರಿಯಿಂದ ಇರೋಕೆ ಆಗುತ್ತಾ?" ಅತ್ತೆ ಮಕ್ಕಳನ್ನೇ ದೂಷಿಸಿದಳು. ಎರಡು ದಿನಗಳ ನಂತರ ಬಾವಿಯಲ್ಲಿ ಬಿದ್ದ ಹೆಣ ಮೇಲಕ್ಕೆ ತೇಲಿತ್ತು. ಕಣ್ಣು ಮೂಗುಗಳನ್ನು ಜಲಚರ ಕ್ರಿಮಿಗಳು ತಿಂದುಹಾಕಿದ್ದವು. ಆಗ ಮನೆಯವರಿಗೆಲ್ಲಾ ಭಯ ಆವರಿಸಿಕೊಂಡಿತು

ಪೊಲೀಸರು ಬಂದರು. ದೇಹವನ್ನು ತೆಗೆಸಿ, ಮಹಜರು ಮಾಡಿದರು ನಗ್ನವಾಗಿದ್ದ ದೇಹ ಯಾರದ್ದು ಎಂದು ತಿಳಿಯುವಂತಿರಲಿಲ್ಲ. ಅಷ್ಟರಲ್ಲಿ ಕೆಲಸದ ಆಳುಗಳು ಅರೆಬರೆ ತಿಂದ ಬೆತ್ತಲೆ ದೇಹವೊಂದು, ಪೊದೆಯೊಳಗೆ ಇರುವುದನ್ನು ಕೊಳೆತ ವಾಸನೆಯಿಂದ ಪತ್ತೆ ಹಚ್ಚಿದರು. ಆಕಸ್ಮಿಕವೇ. ಪ್ರಾಣಿಗಳು ಆಕ್ರಮಣ ಮಾಡಿರಬಹುದೇ ಎಂದು ವಿಚಾರಣೆ ನಡೆಸಿ ಈಜಲು ಹೋಗಿದ್ದವರನ್ನು ಪ್ರಾಣಿಗಳು ಅಟ್ಟಿಸಿಕೊಂಡು ಬಂದಿವೆ. ಒಬ್ಬ ಬಾವಿಗೆ ಬಿದ್ದಿದ್ದಾನೆ. ಇನ್ನೊಬ್ಬ ಮೃಗಗಳ ಕೈಗೆ ಸಿಕ್ಕಿಬಿದ್ದಿದಾನೆ ಎಂಬ ಅಭಿಪ್ರಾಯಕ್ಕೆ ಬಂದರು. ಅತ್ತೆ ಮಾವನವರ ರೋಧನವನ್ನು ನೋಡಿದಾಗ, ತಾನು ಮಾಡಿದ್ದು ಸರಿಯಲ್ಲ ಎಂದೆನಿಸುತ್ತಿತ್ತು. ಆದರೆ ತನಗೆ ಆದ ಅನ್ಯಾಯಕ್ಕೆ ಅತ್ತೆ ಮಾವ ನ್ಯಾಯ ಕೊಡಿಸುತ್ತಿದ್ದರೇ... ಎಂಬ ಪ್ರಶ್ನೆಗೆ ಅವಳಲ್ಲಿ ಉತ್ತರವಿರಲಿಲ್ಲ.

ಭಾರ್ಗವನಿಗೆ ಏನು ನಡೆಯಿತು ಎಂದು ಸರಿಯಾಗಿ ತಿಳಿಯದ ವಯಸ್ಸು. ವತ್ಸಲಾ ತನ್ನ ಅತ್ತೆ ಮಾವನ ನಿಧನದ ನಂತರ, ತನ್ನ ಬಾಣಂತನದ ಸಮಯದಲ್ಲಿ ಕಾವೇರಮ್ಮನಿಗೆ ನಡೆದ ವಿಷಯವನ್ನು ಅರೆ ಬರೆ ಹೇಳಿದ್ದಳು. ತಾನು ಅವರಿಬ್ಬರನ್ನು ಹೇಗೆ ಕೊಂದೆ ಎಂದು ಹೇಳಿರಲಿಲ್ಲ. ಅವಳಿ ಮಕ್ಕಳಿಗೆ ಜನ್ಮವಿತ್ತಿದ್ದರೂ ಅವಳಿಗೆ ಏನೋ ಕಳೆದು ಹೋದ ಅನುಭವ. ಏನೋ

ಗೊಂದಲ. ಮಕ್ಕಳಿಬ್ಬರಿಗೂ ಕಿವುಡು ಎಂದು ತಿಳಿದ ದಿನ ಅವಳು ಮೂರ್ಛೆ ತಪ್ಪಿ ಬಿದ್ದಿದ್ದಳು. ಬೆಂಗಳೂರಿಗೋ, ಮೈಸೂರಿಗೋ ಕರೆದುಕೊಂಡು ಹೋದರೆ ಸ್ವಲ್ಪ ಸುಧಾರಣೆ ಕಂಡುಬರಬಹುದೆಂದು ಡಾಕ್ಟರು ಅಭಿಪ್ರಾಯ ಪಟ್ಟಿದ್ದರು.

ಈಗ ಎಸ್ಟೇಟಿನ ಜವಾಬ್ದಾರಿ ಎಲ್ಲಾ ಇವಳ ಕೈಯಲ್ಲಿತ್ತು. ಸ್ವಲ್ಪ ದೊಡ್ಡಸ್ಥಿಕೆ ಬಂದಿತ್ತು. ಮನೆಯಲ್ಲಿ ವಿರೋಧಿಸುವವರು ಯಾರೂ ಇರಲಿಲ್ಲ. ಈ ಸಮಯದಲ್ಲಿ ಅವಳಿಗೆ ಬಾಲಚಂದ್ರನ ಪರಿಚಯವಾಯಿತು. ಸ್ನೇಹ ಬೆಳೆಯಿತು. ಅವನು ಒಮ್ಮೊಮ್ಮೆ ವಾರಗಟ್ಟಲೆ ಇವರ ಮನೆಯಲ್ಲೇ ಇರುತ್ತಿದ್ದ. ಈ ಕಾರಣದಿಂದ ಭಟ್ಟರೂ ಹಾಗೂ ಕಾವೇರಮ್ಮ ತಂಗಿಯೊಡನೆ ಮನಸ್ತಾಪ ಮಾಡಿಕೊಂಡರು. ವತ್ಸಲಾ ಒಂಟಿಯಾದಳು. ಬಾಲಚಂದ್ರನ ಸನಿಹ ಹಿತವಾಯ್ತು.

ಬಾಲಚಂದ್ರ ಆಂಧ್ರಪ್ರದೇಶದವನು. ಕಾಫಿ ಎಸ್ಟೇಟು ಮಾಲಿಕರು ಅನೇಕ ರೊಂದಿಗೆ ಅವನ ಸಂಪರ್ಕವಿತ್ತು. ಆ ಕಾರಣದಿಂದ ಅವನು ವತ್ಸಲಾಳಿಗೆ ಪರಿಚಯವಾಗಿದ್ದ. ಅನೇಕರಿಗೆ ಈ ಎಸ್ಟೇಟ್ ಮೇಲೆ ಕಣ್ಣಿದ್ದು ಹೇಗಾದರೂ ಮಾಡಿ, ಇದನ್ನು ಲಪಟಾಯಿಸಬೇಕೆಂದುಕೊಂಡಿದ್ದರು. ಆ ಸಮಯದಲ್ಲಿ ಅವಳಿಗೆ ಬಾಲಚಂದ್ರನ ಅಗತ್ಯವಿತ್ತು. ಜನರ ಬಾಯಿ ಮುಚ್ಚಿಸಲು ಅವನನ್ನು ದೇವಸ್ಥಾನದಲ್ಲಿ ಮದುವೆಯಾದಳು. ಉಳಿದವರ ಉಪಟಳ ಕಡಿಮೆ ಯಾಯಿತು. ಆಮೇಲೆ ಕೆಲವು ತಿಂಗಳ ನಂತರ, ಬಾಲಚಂದ್ರ, ತಾನು ವತ್ಸಲಳನ್ನು ಮದುವೆಯಾದದ್ದು, ಈ ಆಸ್ತಿಯ ಆಸೆಗಾಗಿ ಎಂದೂ, ಈ ಮೂಕ ಮಕ್ಕಳ ಜವಾಬ್ದಾರಿ ತನಗೆ ಬೇಡವೆಂದ. ಜೊತೆಗೆ ತನಗೀಗಾಗಲೇ ಮದುವೆಯಾಗಿದೆಯೆಂದೂ, ತನಗೆ ಇಬ್ಬರು ಮಕ್ಕಳು ಇದ್ದಾರೆಂದು ಹೇಳಿದಾಗ, ಅವಳು ಅವನನ್ನು ಮನೆಯಿಂದಾಚೆ ಹೋಗುವಂತೆ ಹೇಳಿ ಬಿಟ್ಟಳು. ಮತ್ತೆಂದಾದರೂ ತನ್ನ ಬಳಿಗೆ ಬರುವ ಪ್ರಯತ್ನ ಪಟ್ಟರೆ ಪೊಲೀಸ್ ಕಂಪ್ಲೇಂಟ್ ಕೊಡುವುದಾಗಿ ಹೆದರಿಸಿ, ಅವನನ್ನು ಮನೆಯಿಂದ ಹೊರ ಹಾಕಿದಳು. ನಂತರ ಕೆಲವಾರು ತಿಂಗಳುಗಳು ಕಳೆದವು. ಧ್ಯಾನ ಮಂದಿರವನ್ನು ಕಟ್ಟಿಸಿದಳು. ಅಲ್ಲಿ ಸ್ವಲ್ಪ ಹೊತ್ತು ಕುಳಿತು ಧ್ಯಾನ ಮಾಡಿ ಮನಸ್ಸಿಗೆ ನೆಮ್ಮದಿಯನ್ನು ತಂದುಕೊಳ್ಳುತ್ತಿದ್ದಳು. ತಾನು ಒಂಟಿ ತನಗೆ [illegible] ಇಲ್ಲ ಎಂಬ ವ್ಯಥೆಯಿದ್ದರೂ, ತನ್ನ ಧೈರ್ಯವನ್ನು ಕಳೆದು

ಕೊಂಡಿರಲಿಲ್ಲ. ಭಟ್ಟರು, ಕಾವೇರಮ್ಮ ಭಾರ್ಗವನೊಂದಿಗೆ ಬೆಂಗಳೂರನ್ನು ಸೇರಿಕೊಂಡಿದ್ದರು. ಎರಡು ಆಲ್ಸೇಷಿಯನ್ ನಾಯಿಗಳನ್ನು ಸಾಕಿ, ತನ್ನ ಕಾವಲಿಗೆ ಇಟ್ಟುಕೊಂಡಿದ್ದಳು. ಲೈಸೆನ್ಸ್ ಹೊಂದಿ ಗನ್ ಇರಿಸಿಕೊಂಡಿದ್ದಳೂ. ಕೆಲಸಗಾರರಿಗೆ ಹೆಚ್ಚು ಸಂಬಳಗಳನ್ನು ಕೊಟ್ಟು ತನ್ನವರನ್ನಾಗಿ ಮಾಡಿಕೊಂಡಿದ್ದಳು. ಈ ಮಧ್ಯೆ ಅವಳೇ ಮೈದುನರನ್ನು ಕೊಲ್ಲಿಸಿ ಬಾವಿಗೆ ಎಸೆದು, ಮೃಗಗಳಿಗೆ ತಿನ್ನಿಸಿದ್ದಾಳೆಂಬ ಸಂಶಯವೂ, ಭೀತಿಯೂ ಜನರಲ್ಲಿ ಹುಟ್ಟಿಕೊಂಡಿತ್ತು ಹಿಂದೆ ಹಿಂದೆ ಆಡುತ್ತಿದ್ರೇ ಹೊರತು, ಅವಳ ಮುಂದೆ ಕೇಳುವ ಧೈರ್ಯ ಯಾರಲ್ಲೂ ಇರಲಿಲ್ಲ.

ಭಾರ್ಗವನಿಗೆ ಮಧುಕರನಿಂದ ಅನ್ಯಾಯವಾದ ಮೇಲೆ, ಅವನು ಕೆಲವು ದಿನಗಳು ವತ್ಸಲಾಳ ಮನೆಗೇ ಬಂದು ಇದ್ದ. ತನ್ನ ವಿಷಯಗಳನ್ನೆಲ್ಲಾ ಅವನು ಹೇಳಿಕೊಂಡಿದ್ದಾಗ, ಹಗುರವಾಗಿ ಹಂಗಿಸಿದ್ದಳು.

"ನಿನಗೆ ಧೈರ್ಯ ಸಾಲದು ಭಾರ್ಗವ, ನೀನು ಅವಳನ್ನು ಪ್ರೀತಿಸುವುದೇ ಆದರೆ, ಅವಳ ಕ್ಷೇಮವನ್ನು ಅಪೇಕ್ಷಿಸುವುದಾದರೆ ನೀನು ಅವಳನ್ನು ಕರೆದುಕೊಂಡು ಇಲ್ಲಿಗೆ ಬಂದುಬಿಡು. ನಾನು ನಿಂತು ನಿಮ್ಮಿಬ್ಬರಿಗೂ ಮದುವೆ ಮಾಡಿಸುತ್ತೇನೆ" ಎಂದಿದ್ದಳು.

ಆದರೆ ಈ ಮಾತು ಭಾರ್ಗವನಿಗೆ ಒಪ್ಪಿಗೆಯಾಗಲಿಲ್ಲ. ಮಾಲಾ ಈಗ ಧ್ರುವನ ಹೆಂಡತಿ. ಅವಳನ್ನು ಹಾರಿಸಿಕೊಂಡು ಬಂದು, ಮದುವೆಯಾಗಿ ಹಾಯಾಗಿರುವೆನೆಂಬ ನಂಬಿಕೆ ಅವನಿಗಿರಲಿಲ್ಲ. ಮಾಲಾಳ ಸ್ವಭಾವವೂ ದಿಟ್ಟತನದ್ದೇ ಆದುದರಿಂದ, ಅದನ್ನು ಅರಿತ ವತ್ಸಲಾ ಆ ಸಲಹೆಯನ್ನು ಕೊಟ್ಟಿದ್ದಳು. ತನ್ನನ್ನು ಸಾಕಿ ಬೆಳೆಸಿದವರ ಮನೆಗೆ ಅವಮಾನ ಮಾಡುವುದಕ್ಕೆ ಭಾರ್ಗವ ಒಪ್ಪಿರಲಿಲ್ಲ. ಅಲ್ಲದೇ ತಾನು ಇಲ್ಲಿಯೇ ಇರುವ ಮನಸ್ಸೂ ಇರಲಿಲ್ಲ. ಆದಷ್ಟೂ ಬೇಗ ಬೇರೊಂದು ಕೆಲಸವನ್ನು ಹುಡುಕಿಕೊಂಡ.

ಎರಡು ವರ್ಷಗಳ ನಂತರ ಮತ್ತೆ ಮಾಲಾಳ ಭೇಟಿಯಾದಾಗ, ಅವಳ ವಿಷಯಗಳನ್ನೆಲ್ಲ ತಿಳಿದಾಗ, ಅವನಿಗೆ ಬೇಸರವಾಗಿತ್ತು. ಇದಕ್ಕೆಲ್ಲ ತಾನೇ ಕಾರಣ ಇದ್ದರೂ ಇರಬಹುದು ಎಂಬ ಸಂಶಯವೂ ಇದ್ದರೂ, ಮನಸ್ಸಿನಲ್ಲಿ ದ್ವಂದ್ವವಿದ್ದೇ ಇತ್ತು. ತನಗೆ ಏನೂ ಉಪಾಯ ಹೊಳೆಯದೇ ಇದ್ದಾಗ, ವತ್ಸಲಳಿಗೆ ಅಷ್ಟನ್ನೂ ಹೇಳಿದ್ದ.

"ಅವಳ ದುರಂತಕ್ಕೆ ನೀನೇ ಕಾರಣ ಭಾರ್ಗವ. ಧೈರ್ಯವಿಲ್ಲದಿದ್ದ ಮೇಲೆ

ಪ್ರೀತಿಸಬಾರದಿತ್ತು. ಈಗಲೂ ಕಾಲ ಮಿಂಚಿಲ್ಲ. ಅವಳು ಪೂರ್ತಿಯಾಗಿ ಅವರ ಕಪಿಮುಷ್ಟಿಗೆ ಸಿಗುವ ಮೊದಲು, ನಿನ್ನಿಂದ ಏನು ಸಾಧ್ಯ ಅಂತ ಯೋಚಿಸು" ಎಂದು ಆಗಾಗ್ಗೆ ಹೇಳುತ್ತಿದ್ದಳು. ನಂತರ ಈ ಉಪಾಯವನ್ನು ಸೂಚಿಸಿದವಳೂ ಅವಳೇ. ಮುಳ್ಳನ್ನು ಮುಳ್ಳಿನಿಂದಲೇ ತೆಗೆಯಬೇಕು ಅಂತ ಗಾದೆ ಇದೆ ಎನ್ನುತ್ತಾ, ತಾನು ತನ್ನ ಗಂಡನ ತಮ್ಮಂದಿರಿಗೆ ಕೊಟ್ಟ ಶಿಕ್ಷೆಯನ್ನು ವಿವರಿಸಿದಳು.

"ನಾನಾದರೆ, ಇದೇ ಮನೆಯಲ್ಲೇ ಇದ್ದೆ. ಇಲ್ಲಿ ಬಾವಿ, ತೋಟ, ಮೃಗಗಳು ಹೀಗೆ ಅನುಕೂಲವಿತ್ತು. ಅಲ್ಲಿ ಮಾಲಾ ಒಬ್ಬಳೇ ಮೂರು ಜನ ಗಂಡಸರು... ಅತ್ತೆ ಕೂಡಾ ಅವಳಿಗೆ ಬೇಕಿಲ್ಲ . ಹೀಗಿರುವಾಗ, ಅವಳು ಇಲ್ಲಿಗೆ ಬರುವುದೇ ಸರಿ" ಎಂದಿದ್ದಳು.

"ಈಗ ತಾನು ಹೇಳಿದ್ದಂತೆ ಮಾಡಿದ್ದೇನೋ ಆಯಿತು. ಆದರೆ ಮಧು ತಕರಾರು ಮಾಡುತ್ತಿದ್ದಾನೆ. ಅವನ ಮನಸ್ಸಿನಲ್ಲಿ ಪೊಲೀಸರ ಭಯವಿರಬಹುದು. ಅದನ್ನೂ ನಿವಾರಿಸಬೇಕೆಂದುಕೊಂಡು ಮನೆಗೆ ಬಂದಿದ್ದಳು. ಎಲ್ಲರನ್ನೂ ಕುರಿತು ಹೇಳಿದಳು.

"ನೀವುಗಳೆಲ್ಲರೂ ಈಗಲೇ ವಾಪಸ್ಸು ಹೊರಟುಬಿಡಿ. ಮುಂದೆ ಏನೇ ತೊಂದರೆ ಬಂದರೂ ನಾನು ಅದನ್ನು ಅನುಭವಿಸಲು ಸಿದ್ಧಳಾಗಿದ್ದೇನೆ" ಎಂದಳು.

"ನಾವೂ ಇದರಲ್ಲಿ ಭಾಗಿಗಳು. ನಿಮ್ಮನ್ನು ಒಬ್ಬರನ್ನೇ ಒಂಟಿಯಾಗಿ ಬಿಟ್ಟು ಹೋಗಲು ನಮಗೆ ಇಷ್ಟವಿಲ್ಲ" ಮಧು ಎಂದ.

"ನಾನು ಒಂಟಿಯಲ್ಲ. ನನಗೆ ಯಾವ ಭಯವೂ ಇಲ್ಲ. ಸುಮಾರು ಇಪ್ಪತ್ತೈದು ವರ್ಷಗಳಿಂದ, ನನ್ನನ್ನು ನಾನು ರಕ್ಷಿಸಿಕೊಂಡಿದ್ದೇನೆ. ನೀವು ಪಟ್ಟಣದವರು, ನಿಮಗೆ ಭಯ ಜಾಸ್ತಿ. ನಿಮ್ಮನ್ನು ನೀವು ರಕ್ಷಿಸಿಕೊಳ್ಳುವಾಗ ಎಂಥ ಪರಿಸ್ಥಿತಿಗಳನ್ನು ಎದುರಿಸಬೇಕಾಗುತ್ತದೆ. ನೀವುಗಳು ಕಾನೂನಿಗೆ ಹೆದರುತ್ತೀರಿ. ಸ್ವಂತ ನಿರ್ಧಾರ ತೆಗೆದುಕೊಳ್ಳುವ ಧೈರ್ಯವಿಲ್ಲ. ಭೀತರಾಗಿಯೇ ಕಾಲ ತಳ್ಳುವ ನೀವು, ನಿರ್ಭೀತರಾಗಿ ಬದುಕುವುದು ಯಾವಾಗ ?"

"ಹೌದು ಮಧು. ವತ್ಸಲಾಹೇಳುವುದು ಒಂದು ತರಹ ಸರಿ. ಪ್ರತಾಪ, ರಘು ಅಪರಾಧಿಗಳು ಎಂದು ತಿಳಿದೂ, ನೀನು ಕೈ ಕಟ್ಟಿ ಕುಳಿತಿದ್ದೆ. ಈಗ ್ ನರಿಂದ ಇನ್ನು ಮುಂದೆ ನಿನಗೆ ಯಾವ ಭಯವೂ ಇಲ್ಲ."

"ಹಾಗಲ್ಲ. ಪೊಲೀಸರಿಗೆ ತಿಳಿದರೆ... ನಮ್ಮ ಪಾಡು ನಾಯಿಪಾಡು ಆಗುತ್ತೆ."

"ತಿಳಿದಾಗ ನೋಡಿಕೊಳ್ಳೋಣ" ವತ್ಸಲಾ ನುಡಿದಳು.

"ಹಾಗಲ್ಲ. ಅಪರಾಧಿ ಮನೋಭಾವ ಕಾಡುತ್ತಲ್ಲ..."

"ಯಾಕೆ? ನಿನಗೆ ಇದುವರೆಗೆ ಆ ಭಾವನೆ ಇರಲಿಲ್ಲಾ? ನನ್ನನ್ನು ಮನೆಯಿಂದ ಆಚೆ ಹಾಕಿದೆ. ಮಾಲಾಳಿಗೆ ದ್ರೋಹ ಮಾಡಿದೆ.. ಆಗ ತಪ್ಪು ಅನ್ನೋ ಭಾವನೆ ನಿನಗೆ ಬರಲಿಲ್ವಾ?" ಮಧು ತಲೆ ತಗ್ಗಿಸಿದ.

"ಹೋಗಲಿ ಬಿಡು. ಈಗ ಆ ಹಳೆಯ ವಿಷಯವನ್ನು ಕೆದಕಿ ಪ್ರಯೋಜನವಿಲ್ಲ. ನಮಗಿಂತ ಹೆಚ್ಚಿನ ಅಪರಾಧ ಮಾಡಿದವರಿಗೆ ನಾವು ಶಿಕ್ಷೆ ಕೊಟ್ಟಿದ್ದೇವೆ. ಖಂಡಿತಾ ತಪ್ಪಲ್ಲ."

"ಎವಿಡೆನ್ಸ್ ಇತ್ತಲ್ಲ. ಪ್ರತಾಪನ್ನ, ರಘೂನ ಪೊಲೀಸರ ವಶಕ್ಕೆ ಒಪ್ಪಿಸಬಹುದಾಗಿತ್ತು."

"ಮತ್ತೆ ಮತ್ತೆ ಅದೇ ಮಾತು ಆಡ್ತೀಯಲ್ಲ... ನೀನೇ ಕೈಯಾರೆ ನಿನ್ನ ಜೀವನಕ್ಕೆ ತೊಂದರೆಯನ್ನು ತಂದುಕೊಳ್ತಿದೀಯ.. ಮುಂದೆ ವಸುಧಾಳ ಗತಿ ಏನು? ಆಕಾಶನ ಭವಿಷ್ಯ ಏನು ಅಂತ ಯೋಚಿಸಬೇಡವಾ ನೀನು?" ಮಧು ವಸುಧಾಳ ಕಡೆ ನೋಡಿದ. ತನ್ನಿಂದ ಅವಳಿಗಾದ ಅನ್ಯಾಯ ನೆನಪಿಗೆ ಬಂತು ಸುಮ್ಮನಾದ.

"ಆದರೆ ಈಗ ಧ್ರುವನಿಗೆ ಏನು ಹೇಳುವುದು?" ವಸುಧಾ ಪ್ರಶ್ನಿಸಿದಳು.

"ಹೌದು. ಈಗ ಧ್ರುವ ಖಂಡಿತಾ ಸುಮ್ಮನಿರುವುದಿಲ್ಲ" ಮಧು ನುಡಿದ.

"ಧ್ರುವನ ಕತೆಯನ್ನು ಮುಗಿಸುವುದು ಕಷ್ಟವೇನಲ್ಲ" ಮಾಲಾ ಹೇಳಿದಳು. ವತ್ಸಲಾ ಮಾಲಾಳ ಬೆನ್ನು ತಟ್ಟಿದಳು.

"ಈಗ ನಿನ್ನನ್ನುಮೆಚ್ಚಿದೆ ಮಾಲಾ... ಧ್ರುವನನ್ನು ಇಲ್ಲಿಗೆ ಕರೆಸೋಣ. ಅವನ ಮನಃಸಾಕ್ಷಿ ಏನು ಹೇಳುತ್ತೆ ಅಂತ ವಿಚಾರಿಸೋಣ" ಎನ್ನುತ್ತಾ ಅವನಿಗೆ ಫೋನು ಮಾಡಿದಳು.

"ಇಲ್ಲಿ ಎರಡು ಕೊಲೆ ನಡೆದಿದೆ. ಆದಷ್ಟೂ ಬೇಗ ಬರಬೇಕು" ಎಂದು ಹೇಳಿದಳು. ಯಾರ ಕೊಲೆ ಎಂದು ಅವನು ಕೇಳುವಷ್ಟರಲ್ಲಿ ಇವಳು ಲೈನ್ ಕಟ್ ಮಾಡಿದಳು. ಅಲ್ಲಿ ಎಲ್ಲರ ಎದುರಿಗೆ ನಿಲ್ಲುವ ಇಚ್ಛೆಯಾಗದೆ ತನ್ನ ರೂಮಿಗೆ ಹೊರಟು ಹೋದಳು. ಎಲ್ಲರೂ ಸ್ವಲ್ಪ ಹೊತ್ತು ಸುಮ್ಮನೇ

ಕುಳಿತಿದ್ದರು. ಇದ್ದಕ್ಕಿದ್ದಂತೆ ಮಧು ವಸುಧಾಳನ್ನು ಎಬ್ಬಿಸಿದ.

"ನಾವು ಊರಿಗೆ ವಾಪಸ್ಸು ಹೋಗೋಣ. ಧ್ರುವ ಬೇಕಾದರೆ ಅಲ್ಲಿಗೆ ಬರಲಿ. ನಾನು ಅಲ್ಲಿ ಮಾತನಾಡ್ತೀನಿ."

"ಹೌದು ವಸುಧಾ... ನೀನು ಹೋಗು. ಮಕ್ಕಳು ಹೇಗಿವೆಯೋ ಏನೋ ?" ಮಾಲಾ ನುಡಿದಾಗ ಮಧು ಅವಳನ್ನೇ ತೀಕ್ಷ್ಣವಾಗಿ ನೋಡಿದ.

"ನೀನು ನಮ್ಮ ಜೊತೆಯಲ್ಲಿ ಬರುಲ್ವಾ? ಇಲ್ಲಿ ಇದ್ದು ಏನು ಮಾಡ್ತೀಯಾ ?"

"ನಾನು ಧ್ರುವನ ಹತ್ತಿರ ಕಡೆಯ ಬಾರಿ ಮಾತನಾಡಬೇಕು..."

"ಅಂದ್ರೆ... ಧ್ರುವನನ್ನು ... ಬೇಡ ಮಾಲಾ.... ಇನ್ನು ಸಾಕು..."

"ನೀನು ನನ್ನ [illegible]ಾಗಿಲ್ಲದೇ ಇದ್ದಿದ್ದರೆ... ನೀನೂ ಈ ಲಿಸ್ಟ್‌ನಲ್ಲಿರುತ್ತಿದ್ದೆ. ಮಾಲಾ ಕಪಾಳಕ್ಕೆ ಹೊಡೆದಂತೆ ನುಡಿದಾಗ, ಮಧು ಭಾರ್ಗವನ ಕಡೆ ತಿರುಗಿದ.

"ನೋಡು ಹೇಗೆ ಮಾತನಾಡ್ತಾಳೆ ? ಇದೆಲ್ಲಾ ನಿನ್ನ ಟ್ರೈನಿಂಗ್..."

"ನಿನಗೆ ಹಾಗೆನ್ನಿಸಿದರೆ ನಾನು ಏನನ್ನೂ ಹೇಳುಲ್ಲ. ಇದುವರೆಗೂ ಏನೇನು ನಡೆದಿದೆಯೋ ಅದೆಲ್ಲಾ ನಿನಗೇ ಗೊತ್ತು. ಮಾಲಾಳಿಗೆ ಯಾರ ಟ್ರೈನಿಂಗೂ ಬೇಕಿಲ್ಲ..." ನಿನ್ನೊಬ್ಬನ ಹೊರತು ನಾನೂ, ವಸುಧಾ ಮಾಲಾಳ ಪರವಾಗಿದ್ದುದು ನಿಜ.... ಅದರೆ ನಿನ್ನ ಮೇಲೆ ಅವಳನ್ನು ಎತ್ತಿ ಕಟ್ಟಿಲ್ಲ."

"ನೀನು ನನ್ನ ಮಗುವಿನ, ನನ್ನ ಆಕಾಶನ ತಾಯಿ, ವಸುಧಾ.... ನಿನಗೋಸ್ಕರ ನಾನು ಮಧುವನ್ನು ಕ್ಷಮಿಸಿದ್ದೇನೆ. ಅಲ್ಲದೆ ನಿನ್ನ ತಪ್ಪು ಯಾವುದೂ ಇಲ್ಲದಿರುವಾಗ, ನಿನಗೆ ಅನ್ಯಾಯ ಮಾಡಲು ನನ್ನ ಮನಸ್ಸು ಒಪ್ಪುತ್ತಿಲ್ಲ. ತಪ್ಪೆಲ್ಲಾ ನನ್ನದೇ... ಧ್ರುವ ಬರಲಿ, ಆಮೇಲೆ ನಾನೇ ಪೋಲೀಸರಿಗೆ ಶರಣಾಗತಳಾಗುತ್ತೀನಿ. ಇದಕ್ಕೆಲ್ಲಾ ನಾನೇ ಕಾರಣ. ನ್ಯಾಯವಾಗಿ ನನಗೆ ಶಿಕ್ಷೆ ಆಗಬೇಕು."

ಭಾರ್ಗವ ನಕ್ಕ. "ಸರಿ ಎಲ್ಲರೂ ಸಂಭಾವಿತರೇ... ನನ್ನನ್ನು ಒಂದು ಸಲ ಜೈಲಿನಿಂದ ಬಿಡುಗಡೆ ಮಾಡಿಸಿದ್ದೆ. ಈಗ ಮತ್ತೆ ನನ್ನನ್ನು ಜೈಲಿಗೆ ಎಳೆದುಕೊಂಡು ಹೋಗುವ ಪ್ಲಾನ್ ಮಾಡ್ತಿದೀಯಲ್ಲ. ಹಾಗಾದರೆ ನನ್ನ ವಾಸ ಜೈಲಿನಲ್ಲೇ ಅಂತಾಯ್ತು."

"ಇಲ್ಲ ಭಾರ್ಗವ... ಈಗ ನಿಮ್ಮೆಲ್ಲರನ್ನು ನಾನುಉಳಿಸಬೇಕಾದರೆ, ನಾನು

ಜೈಲಿಗೆ ಹೋಗಲೇಬೇಕು" ಇದೇ ಚರ್ಚೆಯಲ್ಲಿ ಸಮಯ ಕಳೆಯಿತು. ಕೊಟ್ಟಿಗೆಯಲ್ಲಿ ಬಿದ್ದಿದ್ದ ಶವಗಳ ಗತಿ ಏನಾಯ್ತು ಅಂತ ಯಾರೂ ಚಿಂತಿಸಲಿಲ್ಲ. ಮಧ್ಯರಾತ್ರಿಯಲ್ಲಿ ದನಗಳು ಕೆಟ್ಟದಾಗಿ ಕೂಗಿಕೊಳ್ಳಲು ಆರಂಭಿಸಿದಾಗ ವತ್ಸಲಾಗೆ ಎಚ್ಚರವಾಯಿತು. ಬಹುಶಃ ಕಾಡು ಪ್ರಾಣಿಳು ಕೊಟ್ಟಿಗೆಯೊಳಗೆ ಬಂದಿರಬೇಕೆಂದುಕೊಂಡಳು. ಬೆಳಗಾಗುವುದನ್ನೇ ಕಾದಳು. ಅರ್ಧಂಬರ್ಧ ಶರೀರದ ಮಾಂಸವನ್ನು ತಿಂದು ಮೃಗಗಳು ಹೊರಟು ಹೋಗಿದ್ದವು. ವತ್ಸಲಾ ಬಂದು. ಭಾರ್ಗವನನ್ನು ಎಬ್ಬಿಸಿದಳು. ಭಾರ್ಗವನಿಗೂ ಪರಿಸ್ಥಿತಿಯ ಅರ್ಥವಾಗಿತ್ತು. ಭಾಸ್ಕರನಿಗೆ ಫೋನು ಮಾಡಿ ನಡೆದದ್ದೆಲ್ಲಾ ತಿಳಿಸಿದ.

ಸ್ವಲ್ಪ ಹೊತ್ತಿನಲ್ಲೇ ಧ್ರುವ ಫೋನು ಮಾಡಿದ್ದ. ಮಾಲಾಳೊಂದಿಗೆ ಮಾತನಾಡಬೇಕು ಎಂದಿದ್ದ. ಅವಳಿಗೆ ಇಷ್ಟವಿಲ್ಲದಿದ್ದರೂ ರಿಸೀವರ್ ಅನ್ನು ಎತ್ತಿಕೊಂಡಳು. ಮಾಲಾ ಎಲ್ಲಾ ವಿಷಯುವನ್ನು ತಿಳಿಸಿದಳು.

"ಅಂತೂ, ನಿನ್ನ ಸೇಡನ್ನು ನೀನು ತೀರಿಸಿಕೊಂಡುಬಿಟ್ಟೆ, ನಿನ್ನ ವೈರಿಗಳನ್ನೆಲ್ಲ ಮುಗಿಸಿಬಿಟ್ಟೆ, ಈಗ ನಾನು ಬದುಕಿಯೂ ಸತ್ತಂತೆ. ನಿನ್ನ ಮೇಲೆ ನನಗೆ ಕೋಪವೂ ಇಲ್ಲ. ಬೇಸರವೂ ಇಲ್ಲ. ಇನ್ನು ನನ್ನಿಂದ ನಿನಗೆ ಯಾವ ತೊಂದರೆಯೂ ಇಲ್ಲ. ಹಾಯಾಗಿರಬಹುದು" ಅವನು ಅಳುತ್ತಿರಬಹುದು ಅಂತೆನಿಸಿತ್ತು. ಪಕ್ಕದಲ್ಲಿದ್ದ ಮಧು ರಿಸೀವರನ್ನು ಕಿತ್ತುಕೊಂಡ.

"ಆದಷ್ಟು ಬೇಗ ಬಂದು, ಅವರಿಬ್ಬರ ಶವಕ್ಕೆ ಏನಾದರೂ ಮಾಡು... ಪೊಲೀಸರಿಗೆ ತಿಳಿದರೆ ಕಷ್ಟವಾಗುತ್ತೆ" ಎಂದ.

"ಈಗ ಪೊಲೀಸರಿಗೆ ಹೆದರುತ್ತೀಯಾ ಮಧು ? ಇನ್ನೇನಾಗುತ್ತೆ ?"

"ಈಗ ಮಾತನಾಡಿ ಪ್ರಯೋಜನವಿಲ್ಲ. ರಘೂನೇ ರೇಪಿಸ್ಟ್ ಅನ್ನೋದಕ್ಕೆ ನಮ್ಮ ಹತ್ತಿರ ಎವಿಡೆನ್ಸ್ ಇದೆ. ಎಲ್ಲಾ ರೆಕಾರ್ಡ್ ಮಾಡಿಟ್ಟಿದ್ದೇವೆ."

"ಅಂತೂ ಬಹಳ ಒಳ್ಳೆಯ ಪ್ಲಾನ್ ಮಾಡಿ, ಎಲ್ಲ ಮುಗಿಸಿದಿರಿ... ಈಗ ನನ್ನನ್ನು ಮುಗಿಸುವ ಆಸೆನಾ ? ನಾನು ಬಂದರೂ ಒಂದೇ ಬರದಿದ್ದರೂ ಒಂದೇ... ಆ ಬಾಡಿಗಳನ್ನು ನೀನೇ ಡಿಸ್ಪೋಸ್ ಆಫ್ ಮಾಡಿಬಿಡು..."

"ಅಂದ್ರೆ... ನೀನು ಬರೋಲ್ವಾ ?"

"ಕಾಡು ಪ್ರಾಣಿಗಳು ತಿಂದು ಮಿಕ್ಕ ದೇಹವನ್ನು ಅವರದ್ದೇ ಅಂತ ನಾನು ಗುರುತಿಸುವುದಾದರೂ ಹೇಗೆ ? ಅಶ್ಲಾಗೆ ಸುಟ್ಟು ಹಾಕಿಬಿಡು" ಅವನು ಬಿಕ್ಕಿದ.

"ನಿನ್ನಿಂದ ಹೇಳಿಕೆ ಬೇಕಾಗುತ್ತದೆ ಧ್ರುವ... ನಾವು ಹಾಗೆ ಮಾಡುವಂತಿಲ್ಲ."

"ನಾನು ಹೇಳಿಕೆಯನ್ನು ಕೊಡುತ್ತೇನೆ. ಮತ್ತೆ ನನ್ನಿಂದ ನಿಮಗೆ ಯಾವ ತೊಂದರೆಯೂ ಇಲ್ಲ. ಬರೆದುಕೊಡುತ್ತೇನೆ... ನಾನಂತೂ ಅಲ್ಲಿಗೆ ಬರುಲ್ಲ" ಎಂದುಬಿಟ್ಟ.

o o o

ಇಲ್ಲಿ ಆ ಶವಗಳು ಕೊಳೆತರೆ, ವಾಸನೆ ಬರುತ್ತದೆ. ಆದಷ್ಟು ಬೇಗ ಕ್ಲೀನ್ ಮಾಡಿಸಬೇಕು ಎಂದುಕೊಂಡು, ವತ್ಸಲಾ ತನ್ನ ಮಕ್ಕಳನ್ನು ಎಬ್ಬಿಸಿ ಕೈ ಸಂಜ್ಞೆಯಲ್ಲಿ ಏನೋ ಹೇಳಿದಳು, ಆ ಹುಡುಗರಿಬ್ಬರೂ ಯಾವ ಅಂಜಿಕೆ ಅಸಹ್ಯಗಳಿಲ್ಲದೆ ಆ ಶವಗಳನ್ನು ಒಟ್ಟುಗೂಡಿಸಿ ಗೋಣಿ ಚೀಲದಲ್ಲಿ ತುಂಬಿ, ಸಮೀಪದಲ್ಲಿದ್ದ ಒಂದು ಕಂದರದ ಬಳಿಗೆ ಎಳೆದು ತಂದರು. ಆ ಶವಗಳ ಮೇಲೆ ಪೆಟ್ರೋಲ್ ಸುರಿದು ಬೆಂಕಿ ಹೊತ್ತಿಸಿದರು. ಮನೆಯ ಮುಂದೆ ನಿಂತಿದ್ದ ಕಾರನ್ನು ಪ್ರಪಾತಕ್ಕೆ ತಳ್ಳಿ ಬಿಟ್ಟರು.

ಭಾರ್ಗವನಿಗೆ ವತ್ಸಲಳ ಮೇಲೆ ಕೋಪ ಬಂದಿತ್ತು.

"ಹೀಗೇಕೆ ಮಾಡಿದೆ ವತ್ಸಲಾ... ನಾಳೆ ಪೊಲೀಸರಿಗೆ ತಿಳಿದರೆ ?"

"ಈ ಕಾಡಿನಲ್ಲಿ ಎಷ್ಟೋ ಜನ ಕಳ್ಳರು, ದರೋಡೆಕೋರರು ಬರುತ್ತಲೇ ಇರುತ್ತಾರೆ. ಆಕ್ಸಿಡೆಂಟ್ ನಡೆದು ಹೋಗಿದೆ ಅಂತ ಅಂದಕೊಳ್ಳುತ್ತಾರೆ. ಈಗ ನಾವುಗಳೆಲ್ಲರೂ ಪೊಲೀಸರಿಗೆ ಶರಣಾಗತರಾಲು ಆಗುತ್ತಾ ?"

"ಆ ಹುಡುಗರು ಮೂಕರು. ನನ್ನ ಜೊತೆ ಜೊತೆ ಬೆಳೆದು, ಅವರ ಭಾವನೆಗಳೂ ಮೃದುವಾಗಿಲ್ಲ... ಕಾಡು ಪ್ರಾಣಿಗಳಂತೆ ಜೀವನ ನಡೆಸುವವರಿಗೆ, ಇವೆಲ್ಲಾ ಮಾಮೂಲು. ನೀವುಗಳು ಚಿಂತಿಸಬೇಡಿ. ಯಾರಿಗೂ ತಿಳಿಯುವುದಿಲ್ಲ. ಕೆಲಸದ ಆಳುಗಳಿಂದ ಮಾಡಿಸುವಂತಿಲ್ಲ. ನೀನಾಗಲೀ, ಮಧುವಾಗಲೀ ಮಾಡುತ್ತಿರಲಿಲ್ಲ. ಒಂದು ವೇಳೆ ನಮ್ಮ ಮೇಲೆ ಪೊಲೀಸರಿಗೆ ಅನುಮಾನ ಬಂದರೂ, ನಮ್ಮ ವಿರುದ್ಧ ಯಾವ ಸಾಕ್ಷಿ ಇದೆ ? ಮುಂಚಿನ ಧೈರ್ಯ ಕಾರ್ಯಟ [illegible] ಇಲ್ಲವಲ್ಲ ಯಾಕೆ ?"

"ಯಾಕೋ ಗೊತ್ತಿಲ್ಲ ವತ್ಸಲಾ.. ಮನಸ್ಸಲ್ಲಿ ಕಲಕಿ ಹೋಗಿದೆ."

"ಮುಳ್ಳನ್ನು ಮುಳ್ಳಿನಿಂದಲೇ ತೆಗೆಯಬೇಕು. ಚುಚ್ಚಿದಾಗ ಆಗುವ ನೋವಿಗಿಂತ ತೆಗೆಯುವಾಗ ಹೆಚ್ಚು ನೋವಾಗುತ್ತದೆ. ಹಾಗಂತ ಮುಳ್ಳನ್ನು ಹಾಗೇ ಬಿಡಲು ಆಗುವುದಿಲ್ಲ. ಅದರಿಂದ ಬಿಡುಗಡೆಯೇ ಬೇಡವೇ ?"

ಆ ಹುಡುಗರಿಬ್ಬರೂ ಬಾವಿಯಲ್ಲಿ ಇಳಿದು ಸ್ನಾನ ಮಾಡಿ, ಮಂದಿರದೊಳಗೆ ಹೋಗಿ ಕುಳಿತರು. ನಂತರ ಎಲ್ಲರೂ ಒಬ್ಬೊಬ್ಬರಾಗಿ ಸ್ನಾನ ಮಾಡಿ ಬಂದು ತಾವು ಮಾಡಿದ ಅಪರಾಧಗಳನ್ನು ದೇವರ ಮುಂದೆ ನಿವೇದಿಸಿಕೊಂಡರು.

"ನಾನು ಮಾಲಾಳಿಗೆ, ಭಾರ್ಗವನಿಗೆ ದ್ರೋಹ ಮಾಡಲು ನೋಡಿದೆ. ಬಹುಶಃ ಆ ಕಾರಣದಿಂದಲೇ ಈ ಘೋರ ಹತ್ಯೆಯನ್ನು ಕಣ್ಣಾರೆ ನೋಡುವಂತಾಯಿತು. ಪರೋಕ್ಷವಾಗಿ ನಾನೂ ಈ ಹತ್ಯೆಯಲ್ಲಿ ಪಾಲು ಇದ್ದೇನೆ. ಅವರು ಪಾಪಿಗಳು ಅವರ ವಿನಾಶವಾಗಲೇಬೇಕಾಗಿತ್ತು. ಆದರೆ ನಾವು ತೆಗೆದುಕೊಂಡ ಮಾರ್ಗ ಸರಿ ಹೌದೋ ಅಲ್ಲವೋ ನನಗೆ ಗೊತ್ತಿಲ್ಲ. ನನ್ನಿಂದ ಇನ್ನು ಮುಂದೆ ಮಾಲಾಳಿಗೆ ಯಾವ ತೊಂದರೆಯೂ ಆಗುವುದಿಲ್ಲ. ನಾನು ಪ್ರಮಾಣ ಮಾಡುತ್ತೇನೆ. ಹಾಗೆ ವಸುಧಾಳಿಗೆ ನನ್ನಿಂದ ಯಾವ ಅನ್ಯಾಯವೂ ಆಗದಂತೆ, ನನ್ನನ್ನು ರಕ್ಷಿಸಬೇಕು" ಕೈ ಮುಗಿದು ಪ್ರಾರ್ಥಿಸಿದ. ಮಧು.

"ತಿಳಿದೂ ತಿಳಿದೂ ನಾನು ಮಾಲಾಳಿಗಾಗಿ, ಈ ಹತ್ಯೆಯಲ್ಲಿ ಪಾಲುದಾರಳಾಗಿದ್ದೀನಿ. ಆದರೆ ಮಾಲಾಳ ಮೇಲೆ ನಡೆದ ಅತ್ಯಾಚಾರವನ್ನು ಸಹಿಸಿಕೊಂಡು ಸುಮ್ಮನೆ ಇದ್ದಿದ್ದರೆ ಅದು ಇನ್ನೂ ಅಪರಾಧವಾಗಿರುತ್ತಿತ್ತು. ಇದು ಬರೀ ಮಾಲಾಳಿಗೋಸ್ಕರ ಮಾತ್ರವಲ್ಲ. ಯಾವುದೇ ಹೆಂಗಸಿನ ಮೇಲೆ ಅತ್ಯಾಚಾರ ಮಾಡಿದವನಿಗೆ ಆಗಬೇಕಾದ ಶಿಕ್ಷೆ... ವತ್ಸಲಳಿಗಿರುವ ಧೈರ್ಯ ಎಲ್ಲಾ ಹೆಂಗಸರಿಗೂ ಬರಲಿ ಎಂದು ಪ್ರಾರ್ಥಿಸುತ್ತೇನೆ. ಆಕೆಯ ಮೇಲೆ ನನಗೆ ಗೌರವವಿದೆ ಇನ್ನಾದರೂ ಮಾಲಾಳಿಗೆ ಸುಖ ಸಿಗಲಿ ಎಂದು ಹಾರೈಸುತ್ತೇನೆ; ವಸುಧ ಮನದಲ್ಲೇ ಪ್ರಾರ್ಥಿಸಿದಳು.

"ನಾನು ಮಾಡಿದ್ದು ಎಲ್ಲಾ ಮಾಲಾಳಿಗಾಗಿ. ಅವಳನ್ನು ಮತ್ತೆ ಪಡೆಯಬೇಕು ಅನ್ನೋ ಆಸೆಗಿಂತ, ಅವಳಿಗೆ ಅನ್ಯಾಯ ಮಾಡಿದ ದ್ರೋಹಿಗಳಿಗೆ ತಕ್ಕ ಪಾಠ ಕಲಿಸಬೇಕು ಅನ್ನೋ ಛಲದಿಂದ ಈ ಮಾರ್ಗವನ್ನು ಅನುಸರಿಸಿದೆ. ನಾನು ಮಾಡಿದ್ದು ಸರಿಯೋ ತಪ್ಪೋ ನನಗೆ ತಿಳಿಯದು. ಆದರೆ ಅಪರಾಧಿಗಳ ಮೇಲೆ ಮುಯ್ಯಿ ತೀರಿಸಿಕೊಂಡು ಮಾಲಾಳನ್ನು ರಕ್ಷಿಸಿದೀನಿ ಅನ್ನೋ ತೃಪ್ತಿ ನನಗಿದೆ. ಮಾಲಾ ನನ್ನ ಪತ್ನಿಯಾಗಲು ಒಪ್ಪಿಕೊಂಡರೆ, ಕಾಯಾ ವಾಚಾ ಮನಸಾ ಅವಳನ್ನು ನಾನು ಸ್ವೀಕರಿಸುತ್ತೇನೆ. ನಮ್ಮಿಬ್ಬರ

ಬಾಳಿನಲ್ಲಿ ಕಲ್ಲು ಮುಳ್ಳು ಯಾವುದೂ ಅಡ್ಡಬರದೆ ನಮ್ಮ ಜೀವನದ ಹಾದಿ ಸುಗಮವಾಗಿರಲಿ ಎಂದು ಆಶೀರ್ವಾದ ಮಾಡಿ" ಎನ್ನುತ್ತಾ ನಮಸ್ಕರಿಸಿದ.

"ನನಗೆ ದೇವರ ಮೇಲೆ ನಂಬಿಕೆ ಇಲ್ಲ. ಎಷ್ಟೋ ಸಾರಿ, ನನ್ನ ಮೇಲೇ ನನಗೆ ನಂಬಿಕೆ ಇಲ್ಲ. ನನ್ನ ಮನಸ್ಸು ಚಂಚಲ. ನಾನು ಏನು ನಿರ್ಧಾರ ತಗೋತೀನಿ ಅಂತ ನನಗೇ ತಿಳಿಯದು. ದುಡುಕಿ ಮಾತನಾಡಿ ಎಲ್ಲರ ಮನಸ್ಸನ್ನು ನೋಯಿಸಿದ್ದೇನೆ. ಅನೈತಿಕ ಸಂಬಂಧದಿಂದ ಒಂದು ಮಗುವಿಗೆ ಜನ್ಮ ಕೊಟ್ಟೆ. ಅದು ಸಮಾಜದ ಕಣ್ಣಿನಲ್ಲಿ ತಪ್ಪು. ಆದರೆ ಅದೇ ಮಗುವನ್ನು ವಸುಧಾಳಿಗೆ ಕೊಟ್ಟು, ಅವಳು ಬಂಜೆಯಲ್ಲ ಎಂದು ಅದೇ ಸಮಾಜಕ್ಕೆ ತಿಳಿಯುವಂತೆ ಮಾಡಿದೆ. ಇದು ನನ್ನ ಪ್ರಕಾರ ಸರಿ. ಈಗ ಮುಂದೆ ಈ ಎರಡು ಮಕ್ಕಳ ಗತಿಯೇನು? ಧ್ರುವನಿಗೆ ಕೊಡಲಾರೆ. ಭಾರ್ಗವನನ್ನು ಬೇಡಲಾರೆ. ಭಾಸ್ಕರನನ್ನು ಕೇಳಲಾರೆ... ಅನಾಥಾಶ್ರಮಕ್ಕೆ ಸೇರಿಸೋಣ ಎಂದರೆ, ನನ್ನ ಮನಸ್ಸೇ ಒಡಂಬಡುತ್ತಿಲ್ಲ. ನನ್ನ ರಕ್ತವನ್ನು ಹಂಚಿಕೊಂಡು, ನನ್ನ ಒಡಲೊಳಗೆ ಬೆಳೆದ ಮಕ್ಕಳನ್ನು ನಾನೇ ಹೇಗೆ ಅನಾಥರನ್ನಾಗಿ ಮಾಡಲಿ! ದೇವಾ ನನಗೊಂದು ದಾರಿಯನ್ನು ತೋರಿಸು. ನನ್ನ ಮಕ್ಕಳು ಸುಖ ವಾಗಿರಬೇಕು. ಹಾಗೇ ಮಾಡು..." ಮಾಲಾ ಕಣ್ಣು ಮುಚ್ಚಿ ಬೇಡಿಕೊಂಡಳು.

ಎಲ್ಲರ ಮನಸ್ಸಿನಲ್ಲೂ ಏನೋ ಆತಂಕ. ಅಧೈರ್ಯವಿದ್ದೇ ಇದೆ. ಆದರೆ ನಾನು ಮಾಡಿದ್ದು ತಪ್ಪು ಎಂದು ನನಗೆ ಅನ್ನಿಸುತ್ತಿಲ್ಲ. ಅತ್ಯಾಚಾರ ಮಾಡಿದವರಿಗೆ ತಕ್ಕ ಶಿಕ್ಷೆಯನ್ನು ಆಗಲೂ ವಿಧಿಸಿದ್ದೆ. ಈಗಲೂ ವಿಧಿಸಿದ್ದೇನೆ. ನನಗೆ ಯಾರ ಭಯವೂ ಇಲ್ಲ. ಇಲ್ಲಿ ನನ್ನ ಗಂಡನ ಆತ್ಮ ಮೂಕಸಾಕ್ಷಿಯಾಗಿ ತಿರುಗಾಡುತ್ತಿದೆ. ಅದೇ ನನಗೆ ಪ್ರೇರಣೆ. ಎಲ್ಲರೂ ಅವರವರ ತಪ್ಪನ್ನು ನಿವೇದಿಸಿಕೊಂಡಿದ್ದಾರೆ. ನಾನು ತಪ್ಪು ಮಾಡಿದೀನಿ ಅಂತ ನನಗನ್ನಿಸುತ್ತಿಲ್ಲ. ನನ್ನ ಮಕ್ಕಳು ನನ್ನನ್ನು ರಕ್ಷಿಸುತ್ತಾರೋ, ನಾನು ಅವರನ್ನು ರಕ್ಷಿಸುತ್ತಿದ್ದೇನೋ ಅದು ನಿನಗೇ ತಿಳಿದದ್ದು. ನಾನು ಬದುಕಿರುವವರೆಗೂ ನನ್ನ ಮಕ್ಕಳಿಗೆ ಯಾರಿಂದಲೂ ತೊಂದರೆ ಇಲ್ಲ... ಆದರೆ ನನ್ನ ನಂತರ! ಭಾರ್ಗವನನ್ನು ಇಲ್ಲೇ ಇರುವುದಕ್ಕೆ ಒಪ್ಪಿಸಿದರೆ...? ನಾನು ಸ್ವಾರ್ಥಿಯಾಗಿಬಿಡುತ್ತೇನೆ. ಅದೂ ನನಗೆ ಇಷ್ಟವಿಲ್ಲ. ಇದ್ದಕ್ಕಿದ್ದಂತೆ ಅವಳ ಮನಸ್ಸಿನಲ್ಲಿ ಒಂದು ಆಲೋಚನೆ ಹೊಳೆಯಿತು. ಸ್ವಲ್ಪ ದೂರದಲ್ಲಿ ಕುಳಿತಿದ್ದ ಮಾಲಾಳನ್ನೇ ನೋಡಿದವಳು.

ಎಲ್ಲರೂ ಏಳುವವರೆಗೂ ಕಾದಿದ್ದು, ಮಾಲಾಳ ಹಿಂದೆ ಬಂದಳು.

"ನಾನು ನಿನ್ನ ಹತ್ತಿರ ಸ್ವಲ್ಪ ಮಾತನಾಡಬೇಕು" ಎಂದಳು. ಮಾಲಾ ನಿಂತಳು.

"ಮುಂದೆ ನೀನು ಏನು ಮಾಡಬೇಕು ಅಂತಿದೀಯ... ನಿನ್ನ ಅಣ್ಣನ ಜೊತೆ ಬಿಸಿನೆಸ್ ಪಾರ್ಟನರ್ ಆಗಿ ಇರ್ತೀಯೋ...? ಹೇಗೆ ?"

"ನಾನು ಇನ್ನೂ ಏನನ್ನೂ ಯೋಚಿಸಿಲ್ಲ. ಭಾರ್ಗವ ಹೇಗೆ ಹೇಳ್ತಾನೋ ಹಾಗೆ."

"ಅವನನ್ನು ಈಗಲೂ ಮೊದಲಿನಂತೆ ಪ್ರೀತಿಸ್ತೀಯಾ ? ಹಾಗಾದರೆ ಆದಷ್ಟು ಬೇಗ ಮದುವೆಯಾಗಿಬಿಡಿ. ಇನ್ನು ತಡ ಮಾಡಬೇಡಿ... ನಾನೇ ನಿಂತು ನಿಮ್ಮಿಬ್ಬರ ಮದುವೆಯನ್ನು ನೆರವೇರಿಸುತ್ತೇನೆ."

"ಅವನ ಮನಸ್ನಲ್ಲಿ ಏನಿದೆಯೋ ? ಅಲ್ಲದೆ ಎರಡು ಮಕ್ಕಳಿವೆ ನನಗೆ..."

"ನಿನ್ನನ್ನು ಪತ್ನಿ ಅಂತ ಒಪ್ಪಿಕೊಂಡ ಮೇಲೆ, ಈ ಮಕ್ಕಳಿಗೆ ಅವನೇ ತಂದೆಯಾಗಬೇಕು.. ಅದೇ ನ್ಯಾಯ."

"ನನಗೆ ಅದು ಇಷ್ಟವಿಲ್ಲ. ಭಾರ್ಗವನಿಗೆ ಈ ಜವಾಬ್ದಾರಿಯನ್ನು ಕೊಡಲು ನನಗೆ ಕಷ್ಟವಾಗುತ್ತದೆ."

"ಹಾಗಾದರೆ, ನನ್ನದೊಂದು ಸಲಹೆ... ನೀನು ಇಲ್ಲ ಅನ್ನಬಾರದು."

"ಅನಾಥಾಶ್ರಮಕ್ಕೆ ಸೇರಿಸಲು ನಾನು ಒಪ್ಪುವುದಿಲ್ಲ" ಅವಳು ಉದ್ವೇಗಗೊಂಡು ಹೇಳಿದಾಗ ವತ್ಸಲಾ ಅವಳ ಕೈ ಹಿಡಿದು ನಕ್ಕಳು.

"ಅಂಥಾ ಸಲಹೆಯನ್ನು ನಾನು ಕನಸಿನಲ್ಲೂ ಊಹಿಸುವುದಿಲ್ಲ. ನನಗೆ ಮಕ್ಕಳು ಅಂದ್ರೆ ಬಹಳ ಇಷ್ಟ. ನನ್ನ ಮಕ್ಕಳು 'ಅಮ್ಮಾ' ಎಂದು ಬಾಯಿ ತುಂಬಾ ಕರೆಯಲಿ ಎಂದು ಹಂಬಲಿಸಿದೆ. ಆ ಹಂಬಲ ಹಂಬಲವಾಗಿಯೇ ಉಳಿದಿದೆ. ಈಗ ನಾನು ನಿನ್ನಲ್ಲಿ ಒಂದು ಭಿಕ್ಷೆಯನ್ನು ಕೇಳುತ್ತೇನೆ. ಆ ಎರಡೂ ಮಕ್ಕಳನ್ನು ನನಗೆ ದಾನವಾಗಿ ಕೊಟ್ಟುಬಿಡು. ನಾನು ತಾಯಿಯಾಗಿ ಸಾಕಿ ಬೆಳೆಸುತ್ತೇನೆ." ವತ್ಸಲಳ ಕಣ್ಣುಗಳಲ್ಲಿ ನೀರು ತುಂಬಿಕೊಂಡಿತ್ತು. ಮಾಲಾ ದಿಗ್ಮೂಢಳಾದಳು.

"ನಿನಗೆ ಯೌವನವಿದೆ. ಭಾರ್ಗವನಿಂದ ಇನ್ನೂ ಎರಡು ಮಕ್ಕಳು ಹುಟ್ಟಬಹುದು. ನಾನು ಎಂದೂ ಯಾರನ್ನೂ ಏನನ್ನೂ ಕೇಳಿದವಳಲ್ಲ. ನಿಮ್ಮಿಬ್ಬರ ಸುಖಕ್ಕೆ ಈ ಮಕ್ಕಳು ಅಡ್ಡಿಯಾಗಬಹುದು. ನಿಮ್ಮಿಬ್ಬರಲ್ಲಿ ಭಿನ್ನಾಭಿಪ್ರಾಯ ಮೂಡಬಹುದು... ಅದೆಲ್ಲಾ ನಿವಾರಣೆಯಾಗಬೇಕಾದರೆ, ನನ್ನ ಈ ಮಾತನ್ನು ನಡೆಸಿಕೊಡು. ಭಾರ್ಗವ ಏನಂತಾನೋ ಅನ್ನುವ

ಸಂಶಯ ನಿನಗೆ ಬೇಡ. ಅವನು ನಿನ್ನ ಮಾತಿಗೆ ಬೇಡ ಅನ್ನಲಾರ..."

"ನನಗೆ ಯೋಚಿಸುಕ್ಕೆ ಸಮಯಬೇಕು."

"ತಟ್ಟನೆ ತೆಗೆದುಕೊಳ್ಳುವ ನಿರ್ಧಾರವಲ್ಲ. ಯೋಚಿಸು... ನಿಮ್ಮವರೊಡನೆ ಸಮಾಲೋಚನೆ ನಡೆಸು... ಇಲ್ಲದಿದ್ದರೆ ಇನ್ನೊಂದು ಮಾರ್ಗವಿದೆ. ನೀವಿಬ್ಬರೂ ಇಲ್ಲೇ ನನ್ನ ಜೊತೆಯಲ್ಲೇ ಇದ್ದುಬಿಡಿ. ಭಾರ್ಗವನೂ ನನ್ನ ಮಗನೇ..."

ಮಾಲಾ ಹಿಂದೆಯೇ ಉಳಿದುದನ್ನು ಕಂಡು, ಭಾರ್ಗವ ಮತ್ತೆ ಬಂದ. ವತ್ಸಲಾ ಅವರಿಬ್ಬರನ್ನೂ ಅಲ್ಲಿಯೇ ಬಿಟ್ಟು ತಾನು ಸರಿದು ಹೋದಳು. ಮಾಲಾ ವತ್ಸಲಾ ಹೇಳಿದುದನ್ನು ವರದಿ ಒಪ್ಪಿಸಿದಳು. ಭಾರ್ಗವ ಮಾತನಾಡಲಿಲ್ಲ.

"ನಿನ್ನ ಮನಸ್ಸಲ್ಲಿ ಏನಿದೆ ಅಂತ ಹೇಳು" ಒರಟಾಗಿ ಅವನ ಭುಜವನ್ನು ಅಲುಗಾಡಿಸಿದಳು.

"ನನ್ನನ್ನು ಮದುವೆಯಾಗೋಕ್ಕೆ ಒಪ್ಪಿಗೇನಾ ?" ಅವನು ಕೇಳಿದ.

"ಮದುವೆ ಮೇಲಿನ ಆಸಕ್ತಿಯೇ ಹೊರಟುಹೋಗಿದೆ. ಒಬ್ಬ ಸಂಗಾತಿಯ ಆಸೆಗಾಗಿ ನಿನ್ನನ್ನು ಮದುವೆ ಮಾಡಿಕೊಂಡ್ರೆ, ನಿನಗೆ ದ್ರೋಹ ಮಾಡಿದ ಹಾಗಾಗುಲ್ವಾ ?"

"ದ್ರೋಹ, ವಂಚನೆ, ಮೋಸ ಎಲ್ಲಾ ಈ ಮುಂಚೆ ನಡೆದು ಹೋಗಿದೆ. ಈಗ ನಡೆಸಬೇಕಾಗಿರುವುದು ಬಾಳನ್ನು... ನಾನು ನಿನ್ನನ್ನು ಚೆನ್ನಾಗಿ ನೋಡಿಕೊಳ್ಳಬಲ್ಲೆ ಎಂಬ ಭರವಸೆ ನನಗಿದೆ..."

"ನಿನ್ನ ಮೇಲೆ ಅಪನಂಬಿಕೆ ಎಂದೂ ಇರಲಿಲ್ಲ. ಆದರೆ ನನ್ನ ಮೇಲೆ ನನಗೆ ನಂಬಿಕೆ ಇಲ್ಲ."

"ಇನ್ನು ಮುಂದೆ ನಿನ್ನ ಜೀವನ ನನ್ನದು. ನನ್ನ ಮೇಲೆ ಭಾರ ಹಾಕಿಬಿಡು" ಅವನು ನಗುತ್ತಾ ನುಡಿದಾಗ, ಅವಳು ಅವನ ಭುಜಕ್ಕೊರಗಿದಳು. "ಈಗಲೇ ಭುಜದ ಮೇಲೆ ಭಾರ ಹಾಕಿಬಿಟ್ಟೆಯಲ್ಲಾ" ಎನ್ನುತ್ತ ಅವನೂ ಅವಳ ತಲೆಗೆ ತನ್ನ ತಲೆಯನ್ನು ತಾಗಿಸಿದ. ನಾಗೇಶ, ಯೋಗೇಶ ಇಬ್ಬರೂ ಸ್ವಲ್ಪ ದೂರದಲ್ಲಿ ನಿಂತು ಇವರಿಬ್ಬರನ್ನೇ ಗಮನಿಸುತ್ತಿದ್ದರು.

"ಈ ಮಕ್ಕಳಿಗೆ ಸಂಕೋಚವೇ ಇಲ್ಲ. ಹೇಗೆ ನಮ್ಮನ್ನೇ ನೋಡುತ್ತಿವೆ" ಮಾಲಾ ದೂಷಿಸಿದಳು.

"ನೋಡಿದರೆ ನೋಡಲಿ ಬಿಡು. ಅವರಿಬ್ಬರಿಗೂ ಮನರಂಜನೆಯಾಗುತ್ತದೆ" ಅವಳನ್ನು ಬಳಸಿದ.

ಕೆಲವೇ ದಿನಗಳಲ್ಲಿ ಭಾರ್ಗವ-ಮಾಲಾ ಸರಳವಾಗಿ ಮದುವೆಯಾದರು. ಮದುವೆಗೆ ಭಾಸ್ಕರ ತನ್ನ ಕುಟುಂಬದೊಂದಿಗೆ ಬಂದಿದ್ದ. "ನಿಮ್ಮ ಪ್ರೀತಿ ನಿಮಗೆ ಸಿಕ್ಕಿತು. ಆದರೆ ಈ ಬಡ ಪ್ರೇಮಿಯನ್ನು ಮರೆಯಬೇಡಿ" ಎಂದ.

"ನಾನು ನಿಮ್ಮನ್ನು ಮರೆಯೋಕೆ ಸಾಧ್ಯಾನಾ ?" ಎನ್ನುತ್ತಾ ಆಕಾಶದ ಕಡೆ ನೋಡಿದಳು. ಧ್ರುವ ಅವನ ಆಸ್ತಿಯನ್ನೆಲ್ಲಾ ಮಾಲಾಳ ಹೆಸರಿಗೆ ವರ್ಗಾಯಿಸಿದ್ದ. ಪತ್ರಗಳನ್ನು ಅವನೊಡನೆ ಕಳಿಸಿದ್ದ. "ನೀನು ಇನ್ನಾದರೂ ನನ್ನನ್ನು ಕ್ಷಮಿಸಿ ಎಂದು ತಿಳಿದಿದ್ದೇನೆ. ಹೊಸ ಜೀವನಕ್ಕೆ ಶುಭ ಹಾರೈಕೆಗಳು" ಎಂದು ಬರೆದು ತಿಳಿಸಿದ್ದ.

ಮಧು ಮಾಲಾಳ ಹೆಸರಿಗೆ ಆ ಮನೆಯನ್ನು ಮತ್ತೆ ವರ್ಗಾಯಿಸಿದ ಪತ್ರವನ್ನು ಅವಳ ಕೈಗಿತ್ತ. "ನಾನು ನಿನ್ನ ಬಾಳಿಗೆ ಕೃಷ್ಣನಾಗಲಿಲ್ಲ, ಕಂಸನಾಗಿಬಿಟ್ಟೆ... ಕ್ಷಮಿಸು" ಎಂದಿದ್ದ. ಮಾಲಾ ಮಾತನಾಡಲಿಲ್ಲ.

ಮದುವೆ ಕಲಾಪಗಳು ಮುಗಿದವು. ಬಂದಿದ್ದ ಅತಿಥಿಗಳೆಲ್ಲ ಹೊರಟು ಹೋಗಿದ್ದರು. ಈಗ ಅಲ್ಲಿ ಉಳಿದವರು ಕೆಲವರೇಮಾತ್ರ. ಆ ರಾತ್ರಿ ನವ ದಂಪತಿಗಳಿಗೆಂದು ವತ್ಸಲಾ ಕೋಣೆಯನ್ನು ವಿಶೇಷವಾಗಿ ಅಲಂಕರಿಸಿದ್ದಳು. ಇಬ್ಬರೇ ಏಕಾಂತದಲ್ಲಿದ್ದರೂ, ಇಬ್ಬರಿಗೂ ಮೌನ ಅಪ್ರಿಯವಾಗಿತ್ತು. ಮಾಲಾ ಮಾತಿಗೆ ಅವಕಾಶವನ್ನು ಹುಡುಕುತ್ತಿದ್ದಳು. ಭಾರ್ಗವ ಮಾತನ್ನು ಹೇಗೆ ಪ್ರಾರಂಭಿಸಬೇಕೆಂದು ತಿಳಿಯದೇ ಚಡಪಡಿಸುತ್ತಿದ್ದವನು ಮೆಲ್ಲನೆ ಅವಳ ಕೈ ಹಿಡಿದ.

"ಏನು ಯೋಚಿಸ್ತಿದೀಯಾ ಮಾಲಾ...?"

"ನಾನು ನಿನ್ನನ್ನು ಮದುವೆಯಾಗಬಾರದಿತ್ತು... ನಾನು ನಿನಗೆ ಯಾವ ಸುಖವನ್ನೂ ಕೊಡಲಾರೆ. ಈ ದೇಹವನ್ನು ನಾನು ನಿನಗಾಗಿ ಮೀಸಲಿಡಲು ಆಗಲೇ ಇಲ್ಲ. ಮೊದಲ ಬಾರಿ ನಿನ್ನ ಮೇಲಿನ, ಧ್ರುವನ ಮೇಲಿನ ಕೋಪಕ್ಕೆ, ನಾನೇ ನನ್ನ ದೇಹವನ್ನು ಭಾಸ್ಕರನಿಗೆ ಒಪ್ಪಿಸಿದೆ. ಆಮೇಲೆ ರಘು ನಡೆಸಿದ ಅತ್ಯಾಚಾರದಿಂದ ಅಪವಿತ್ರವಾಗಿದೆ. ಈ ದೇಹವನ್ನು ನಿನಗೆ ಹೇಗೆ ಒಪ್ಪಿಸಲಿ ?"

"ಹೀಗೇ..." ಎನ್ನುತ್ತಾ ಅವನು ಅವಳನ್ನು ಪೂರ್ಣವಾಗಿ ಅಪ್ಪಿಕೊಂಡ. ಅವಳು ಕೊಸರಿಕೊಂಡಳು. "ನನಗೆ ಸ್ವಲ್ಪ ಸಮಯ ಬೇಕು ಭಾರ್ಗವ" ಎಂದು ಹೇಳಿದಾಗ, ಅವನು ಹಿಡಿತವನ್ನು ಸಡಿಲಗೊಳಿಸಿದ. "ನಾನು ಆ ಸಮಯಕ್ಕಾಗಿ ಕಾಯ್ತೀನಿ" ಅವಳ ಕೆನ್ನೆಯನ್ನು ಸವರಿದ.

"ವತ್ಸಲಳಿಗೆ ನಿನ್ನ ಮಕ್ಕಳನು ಕೊಡುವ ಬಗ್ಗೆ ಏನು ಯೋಚಿಸಿದೆ ?"

"ನಿನಗೆ ಏನನ್ನಿಸುತ್ತೆ ? ನಿಜ ಹೇಳಬೇಕು."

"ಅವಳು ಜೀವನದಲ್ಲಿ ನೊಂದವಳು. ಯಾರಿಂದ ಏನನ್ನೂ ಅಪೇಕ್ಷಿಸಿಲ್ಲ. ಈಗ ಅವಳು ನಿನ್ನ ಮಕ್ಕಳನ್ನು ಸಾಕಿಕೊಳ್ಳುವ ಆಸೆಯನ್ನು ತೋರುತ್ತಿದ್ದಾಳೆ. ನನಗೆ ಅವಳ ಮೇಲೆ ನಂಬಿಕೆ ಇದೆ. ನಿನಗೂ ನಂಬಿಕೆ ಇದ್ದರೆ ಕೊಟ್ಟು ಬಿಡೋಣ."

"ನನ್ನ ಮಡಿಲು ಖಾಲಿಯಾಗಿಬಿಡುತ್ತಲ್ಲಾ ಭಾರ್ಗವ... ನನಗೆ ಮಕ್ಕಳು ಬೇಡವಾ ?"

"ಅದಕ್ಕೆ ಯಾಕೆ ಚಿಂತೆ ? ನಿನ್ನ ಚಿಂತೆಯನ್ನು ದೂರ ಮಾಡಲು ನಾನಿದೀನಲ್ಲ. ನಾನೂ ನೀನೂ ಮನಸ್ಸು ಮಾಡಿದರೆ ನಮಗೇ ಹತ್ತು ಮಕ್ಕಳಾಗುತ್ತವೆ..."

"ನಾನೀಗಾಗಲೇ ಮೂರು ಮಕ್ಕಳ ತಾಯಿ... ಗೊತ್ತಾ ?"

"ಹೌದಾ ! ನಿನ್ನನ್ನು ನೋಡಿದರೆ ಹಾಗೆನ್ನಿಸುವುದೇ ಇಲ್ಲ... ಒಂದು ಮಗುವನ್ನು ಪಸಾಥಂಗೆ ಕೊಟ್ಟು ಬಿಟ್ಟೆ. ಈ ಎರಡು ಮಕ್ಕಳನ್ನು ವತ್ಸಲಂಗೆ ಕೊಟ್ಟುಬಿಡು. ನಿನಗೆ ಅಂತ ಈ ವರ್ಷದೊಳಗೆ ನಾನು ಒಂದು ಮಗುವನ್ನು ಕೊಡ್ತೀನಿ" ಎನ್ನುತ್ತಾ ಅವಳನ್ನು ಬರಸೆಳೆದು ಅಪ್ಪಿಕೊಂಡು ಚುಂಬಿಸಿದ. ಅವನ ಅಪ್ಪುಗೆಯ ಬಿಸಿಯಲ್ಲಿ ಮಾಲಾ ಕರಗಿಹೋದಳು.

(ಮುಗಿಯಿತು)

‘ಒಲವಿನ ಹಾದಿಯಲ್ಲಿ’
ಒಂದು ಸಾಮಾಜಿಕ ಕಾದಂಬರಿ.
ಒಂದು ಕುಟುಂಬದ ದಿಟ್ಟ ಹೆಣ್ಣಿನ
ಸುತ್ತ ಹೆಣೆದಿರುವ ಕತೆ.
ಹೆಣ್ಣು ಎಂದೊಡನೆ, ತನ್ನ
ಆಸೆಗಳನ್ನೆಲ್ಲಾ ಅದುಮಿಟ್ಟುಕೊಂಡು
ನರಳುವವಳಲ್ಲ ಅಥವಾ ಬಣ್ಣದ
ಚಿಟ್ಟೆಯಂತೆ ಹೂವಿನಿಂದ ಹೂವಿಗೆ
ಹಾರುವವಳೂ ಅಲ್ಲ. ತನಗೆ ಸರಿ
ಎನಿಸಿದ್ದನ್ನು ಮಾಡುವವಳು,
ನೋವಿನಲ್ಲೂ ನಲಿವನ್ನು
ಹುಡುಕುವವಳು. ಅಂತಹ
ಒಬ್ಬ ಯುವತಿಯ
ನೋವು-ನಲಿವೇ
ಈ ಕಾದಂಬರಿಯ ಕಥಾವಸ್ತು.